"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

22ನೇ ನವೆಂಬರ್ 2017
ಬುಧವಾರ

## ವಿಷಯಾನುಕ್ರಮಣಿಕೆ

1. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

4481- ಅತಿವೃಷ್ಟಿ,ಅನಾವೃಷ್ಟಿ ಬೆಳೆ ಹಾನಿ ಮತ್ತು ಪರಿಹಾರ ಕುರಿತು -ಶ್ರೀ ವಿ.ಸೋಮಣ್ಣ
4612- ರಾಜಕಾಲುವೆ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ-ಶ್ರೀ ಎಂ.ನಾರಾಯಣಸ್ವಾಮಿ
4572- ಗೃಹ ಮಂಡಳಿಯ ಮನೆ ಹಂಚಿಕೆಯಲ್ಲಿ ಭಾರಿ ಅವ್ಯವಹಾರ ನಡೆದಿರುವ ಬಗ್ಗೆ -ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)
4552- ರಾಜ್ಯದಲ್ಲಿರುವ ಮೂಲ ಗೇಣಿದಾರರ ಹಿತರಕ್ಷಣೆಯ ಬಗ್ಗೆ -ಶ್ರೀ ಐವನ್ ಡಿಸೋಜಾ
4427- ರಾಜ್ಯದ ಅನುದಾನಿತ ಐಟಿಐ ಸಂಸ್ಥೆಗಳಲ್ಲಿ ಪ್ರವೇಶಾತಿ ಸಂಬಂಧದಲ್ಲಿ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕದ ಬಗ್ಗೆ -ಕ್ಯಾಪ್ಟನ್ ಗಣೇಶ್ ಕಾರ್ಣಿಕ್
4586- ದಮನಿತ ಮಹಿಳೆಯರು ಹಾಗೂ ಅಂಗತ್ವ ಅಲ್ಪ ಸಂಖ್ಯಾತರಿಗೆ ವಸತಿ ಕಲ್ಪಿಸುವ ಬಗ್ಗೆ -ಡಾಃಜಯಮಾಲ ರಾಮಚಂದ್ರ
4581- ಕೃಷ್ಣ ಮೇಲ್ದಂಡೆ 3ನೇ ಹಂತದ ಕಾಮಗಾರಿ ಬಗ್ಗೆ -ಶ್ರೀ ರಾಮಚಂದ್ರಗೌಡ
4485- ನಾಲೆಗಳಿಗೆ ಸಿ.ಟಿ.ಸಿ. ನಿರ್ಮಾಣದ ಬಗ್ಗೆ -ಶ್ರೀ ಬಸವರಾಜ್ ಪಾಟೀಲ್ ಇಟಗಿ
4600- **Concent for Establishment** ಬಗ್ಗೆ -ಶ್ರೀ ಪಿ.ಆರ್. ರಮೇಶ್
4599- ಉಪವಲಯ ಅರಣ್ಯಾಧಿಕಾರಿಗಳ ಕುರಿತು -ಶ್ರೀಮತಿ ತಾರಾಅನೂರಾಧ
4441- ಕಾವೇರಿ ನೀರಾವರಿ ನಿಗಮದಲ್ಲಿ ಪ್ರತ್ಯೇಕ ಸರ್ವೆ (ಭೂಮಾಪನ) ವಿಭಾಗ ಇಲ್ಲದೆ ಇರುವ ಬಗ್ಗೆ -ಶ್ರೀ ಕೆ.ಟಿ. ಶ್ರೀಕಂಠೇಗೌಡ
4564- ಸಂವಿಧಾನ 371ಜೆ ಅಡಿಯಲ್ಲಿ ಪ್ರಮಾಣ ಪತ್ರ ಪಡೆಯುವ ಬಗ್ಗೆ -ಶ್ರೀ ವಿಜಯ ಸಿಂಗ್
4607- ವಸತಿ ಯೋಜನೆ ಅನುಷ್ಠಾನ'ದಲ್ಲಿನ ವಿಳಂಬದ ಬಗ್ಗೆ -ಶ್ರೀ ಕೋಟ ಶ್ರೀನಿವಾಸ ಪೂಜಾರಿ
4484- ತುಮಕೂರು ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ -ಶ್ರೀ ಕಾಂತರಾಜು (ಬಿಎಂಎಲ್)
4446- ಕೌಶಲ್ಯ ಕರ್ನಾಟಕ ಯೋಜನೆ -ಶ್ರೀ ಕೆ.ಸಿ. ಕೊಂಡಯ್ಯ
3747- 94ಸಿ ಮತ್ತು 94ಸಿಸಿ ಯೋಜನೆಯ ಅನುಷ್ಠಾನ'ದಲ್ಲಿನ ವಿಳಂಬದ ಕುರಿತು -ಶ್ರೀ ಕೋಟ ಶ್ರೀನಿವಾಸ ಪೂಜಾರಿ
3711- ಕೌಶಲ್ಯ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ -ಶ್ರೀಮತಿ ತಾರಾಅನೂರಾಧ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ರೈತರ ಆತ್ಮಹತ್ಯೆ ಬಗ್ಗೆ.**

ಶ್ರೀ ಚೌಡರೆಡ್ಡಿ ತೂಪಲ್ಲಿ
ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ಬೆಳಗಾವಿ ವಿಭಾಗದ ಕೆಲವು ಜಿಲ್ಲೆಗಳಲ್ಲಿ ಹಿಂದು ಲಿಂಗಾಯಿತರಿಂದ ಕೆಲವು ಹಿಂದುಳಿದ ಜಾತಿಗಳು 2ಎ ವರ್ಗಕ್ಕೆ ಸೇರಿಸುವ ಕುರಿತು.**

ಶ್ರೀ ಪಿ.ಆರ್.ರಮೇಶ್
ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)

**ಇ) ಹೊಸಪೇಟೆ ತಾಲ್ಲೂಕಿನ ಹಂಪಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಒಕ್ಕಲೆಬ್ಬಿಸುತ್ತಿರುವ ಕುರಿತು.**

ಶ್ರೀ ಕೆ.ಸಿ.ಕೊಂಡಯ್ಯ
ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)

**ಈ) ಕರ್ನಾಟಕ ರಾಜ್ಯ ತ್ಯಾಜ್ಯದಿಂದ ಎಲೆಕ್ಟ್ರಾನಿಕ್ ಉತ್ಪಾದನೆಯಲ್ಲಿ ಇ-ವೇಸ್ಟ್ ನಿರ್ವಹಣೆ ಸಮಿತಿ ನಿರ್ಣಯ ಅನುಷ್ಠಾನಗೊಳಿಸುವ ಕುರಿತು.**

ಶ್ರೀ ಟಿ.ಎ. ಶರವಣ
ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಉ) ಸಾಗರ ತಾಲ್ಲೂಕು ಕೊಪ್ಪ ನಾರಗೊಂಡ ಹೂವುಹರನಕೊಪ್ಪ ಬಳಿ ಅರಣ್ಯದಲ್ಲಿ ಮರ-ಗಿಡಗಳನ್ನು ನಾಶ ಮಾಡಿರುವ ಕುರಿತು.**

ಶ್ರೀ ಭಾನುಪ್ರಕಾಶ್
ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**3. ಸಚಿವರ ಹೇಳಿಕೆಗಳು**

**ಅ) ರಾಜ್ಯದ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳನ್ನು ನೇಮಕ ಮಾಡುವ ಬಗ್ಗೆ.**

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ರಾಷ್ಟ್ರೀಯ ಹೆದ್ದಾರಿ 169, ಮಂಗಳೂರು-ಮೂಡಬಿದ್ರೆ ರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಮಾಡುವ ಬಗ್ಗೆ.**

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಇ) ಅನುಕೂಲತೆಯ ದೃಷ್ಟಿಯಿಂದ ಹೊಸದಾಗಿ ರಚಿಸಲಾಗಿರುವ ತಾಲ್ಲೂಕುಗಳಿಗೆ ಯಾವ ಹಳ್ಳಿಗಳನ್ನು ಮತ್ತು ಯಾವ ತಾಲ್ಲೂಕುಗಳನ್ನು ಯಾವ ಜಿಲ್ಲೆಗಳಿಗೆ ಸೇರಿಸಬೇಕು ಎನ್ನುವುದರ ಬಗ್ಗೆ.**

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಈ) **ವಿಷಯ: ರಾಷ್ಟ್ರೀಯ ಹೆದ್ದಾರಿ 73, ಮೂಡಿಗೆರೆ ವ್ಯಾಪ್ತಿಯಲ್ಲಿನ ಹೆದ್ದಾರಿಯನ್ನು ಕೂಡಲೇ ದುರಸ್ತಿ ಮಾಡುವ ಬಗ್ಗೆ.**

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**4. ಗಮನ ಸೆಳೆಯುವ ಸೂಚನೆಗಳು**

**ಮೂಡಿಗೆರೆ ಕೇಂದ್ರದಿಂದ ಕಳಸಾ 100 ಕಿ.ಮೀ. ದೂರದಲ್ಲಿದ್ದು, ಜನಸಾಮಾನ್ಯರಿಗೆ ಮೂಡಿಗೆರೆ ಕೇಂದ್ರಕ್ಕೆ ಹೋಗಿ ಬರಲು ತೊಂದರೆಯಾಗುತ್ತಿರುವುದರಿಂದ, ಕಳಸಾ ಗ್ರಾಮವನ್ನು ತಾಲ್ಲೂಕೆಂದು ಘೋಷಿಸುವ ಬಗ್ಗೆ.**

ಶ್ರೀಮತಿ ಮೋಟಮ್ಮ
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ಎಂ.ಕೆ.ಪ್ರಾಣೇಶ್

5. <u>ನಿಯಮ 330 ರ ಮೇರೆಗೆ</u>

**ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರಿಗೆ ಪ್ರವರ್ಗ-1ರ ಪ್ರಮಾಣ ಪತ್ರ ನೀಡುವಾಗ ಜನಾಂಗವನ್ನು ನಮೂದಿಸಿ ಕೊಡುವ ಬಗ್ಗೆ.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಹೆಚ್. ಆಂಜನೇಯ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

<u>6. ಶಾಸನ ರಚನೆ</u>

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

ಅ) **ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017**

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೆ.ಬಿ.ಶಾಣಪ್ಪ
ಶ್ರೀ ಎಸ್.ರವಿ
ಶ್ರೀ ಪುಟ್ಟಣ್ಣ
ಶ್ರೀ ವಿ.ಸೋಮಣ್ಣ
ಶ್ರೀ ಐವನ್ ಡಿ'ಸೋಜಾ
ಶ್ರೀ ರಾಮಚಂದ್ರಗೌಡ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀಮತಿ ಮೋಟಮ್ಮ
ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಡಾ॥ ಜಯಮಾಲ ರಾಮಚಂದ್ರ
ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಡಿ.ಎಸ್.ವೀರಯ್ಯ
ಶ್ರೀ ಟಿ.ಎ.ಶರವಣ
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಭಾನುಪ್ರಕಾಶ
ಶ್ರೀ ಪ್ರಾಣೇಶ್ ಎಂ.ಕೆ.

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**7. ಪ್ರಕಟಣೆಗಳು**

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕ, 2017.**

ಶ್ರೀ ಮಂಜು.ಎ(ರೇಷ್ಮೆ ಮತ್ತು ಪಶುಸಂಗೋಪನಾ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)
ಶ್ರೀ ರಮೇಶ್ ಬಾಬು
ಶ್ರೀ ಕೋಟ ಶ್ರೀನಿವಾಸ ಪೂಜಾರಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**9. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮುಂದುವರೆದ ಚರ್ಚೆ**

ಶ್ರೀ ಮಾನೆ ಶ್ರೀನಿವಾಸ್
ಶ್ರೀ ಅಮರನಾಥ್ ಪಾಟೀಲ್
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ವಿ.ಸೋಮಣ್ಣ
ಶ್ರೀ ಶರಣಪ್ಪ ಮಟ್ಟೂರ
ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಸೋಮಣ್ಣ ಮ. ಬೇವಿನಮರದ
ಶ್ರೀ ವಿ.ಎಸ್.ಉಗ್ರಪ್ಪ

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1155) 22.11.2017/11.00.ಕೆಜಿ-ಆರ್‌ಎನ್

***ಕರ್ನಾಟಕ ವಿಧಾನ ಪರಿಷತ್ತು***

***ಬುಧವಾರ, 22ನೇ ನವೆಂಬರ್ 2017***

***ಸದನವು ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ***

***ಬೆಳಗ್ಗೆ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.***

***ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು***

***ಪೀಠದಲ್ಲಿ ಉಪಸ್ಥಿತರಿದ್ದರು.***

**01. ಪ್ರಶ್ನೋತ್ತರಗಳು**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 4481**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ಕೆಲವು ಜಿಲ್ಲೆಗಳಲ್ಲಿ ತೇವಾಂಶದ ಕೊರತೆಯಿಂದ ಹಾಗೂ ಹೆಚ್ಚು ಮಳೆಯಿಂದ ಬೆಳೆ ಹಾನಿಯಾಗಿರುವ ಬಗ್ಗೆ ವರದಿ ಬಂದಿದೆ ಹಾಗೂ ಹಿಂಗಾರು ಮಳೆಯಿಂದ ತೀವ್ರತರವಾದ ಬೆಳೆ ಹಾನಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಸಚಿವರು ಅಂಕಿ-ಅಂಶಗಳ ಪಟ್ಟಿಯಲ್ಲಿ ದಿನಾಂಕ 05.10.2017 ಈ ಬಾರಿ ರಾಜ್ಯದಲ್ಲಿ ಭಾರಿ ಮಳೆಗೆ 96 ಜನ ಬಲಿಯಾಗಿದ್ದಾರೆಂದು ತಿಳಿಸಿರುತ್ತಾರೆ, ಮತ್ತೆ, ಮೈಸೂರು, ಕೋಲಾರ, ತುಮಕೂರು, ಶಿವಮೊಗ್ಗ, ಚಾಮರಾಜನಗರ, ಬೆಳಗಾವಿ, ಕುಲಬರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಈ ಜಿಲ್ಲೆಗಳಲ್ಲಿ ಎಷ್ಟು ಹಾನಿಯಾಗಿದೆ ಎಂಬುದನ್ನು ಸಹ ಹೆಕ್ಟೇರ್ ಪ್ರಕಾರ ಮಾಹಿತಿ ಕೊಟ್ಟಿದ್ದಾರೆ. ನಾನು ರೈತರಿಗೆ ಬಿತ್ತಿದ ಬೀಜದ ಬೆಲೆಯು ಸಿಗದೆ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಕೇಂದ್ರ ಸರ್ಕಾರದ ಒಂದು norms ಹಾಕಿದ್ದಾರೆ. ಅದು ಏನು ಎನ್ನುವುದನ್ನು ಸಹ ಹೇಳದೆ, ಮಾನ್ಯ ಸಚಿವರು ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದು, ಅವರೇ ಈ ರೀತಿಯಾಗಿ ಉತ್ತರ ಕೊಟ್ಟರೆ, ಇನ್ನೂ ಬೇರೆಯವರ ಗತಿ ಏನಾಗಬೇಕು? ಇದಕ್ಕೆ ಎಷ್ಟು ಹಣ ಕೊಟ್ಟಿದೆ, ಇದು ಏನಾಗಿದೆ ಎಂಬುದರ ಬಗ್ಗೆ ಸಹಾ ಹೇಳಿರುವುದಿಲ್ಲ. ಮಾನ್ಯ ಸಚಿವರು ಉತ್ತರವನ್ನು ನೋಡಿಯೇ ಇಲ್ಲವೆಂದು ಅನಿಸುತ್ತಿದೆ. ನಾನು ಪ್ರಕೃತಿ ವಿಕೋಪದಿಂದ ಶೇ.33ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಬೆಳೆ ಹಾನಿಯಾಗಿದ್ದಲ್ಲಿ, ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ಕೆಳಕಂಡ ಪರಿಹಾರ ನೀಡಲಾಗುತ್ತದೆಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ನಾನು ರೈತರಿಗೆ ಬಿತ್ತಿದ ಬೀಜದ ಬೆಲೆಯೂ ಸಿಗದೆ ಕಂಗಾಲಾಗಿರುವುದು ಸರ್ಕಾರಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಯಾವ ರೀತಿಯ ಪರಿಹಾರಗಳನ್ನು ಸರ್ಕಾರ ನೀಡಿದೆ; ಪರಿಹಾರ ಮೊತ್ತ ನೀಡಲು ಅನುಸರಿಸಲಾಗುವ ಮಾನದಂಡಗಳೇನು; ಪರಿಹಾರದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು) ಎಂದು ಪ್ರಶ್ನೆ ಕೇಳಿದ್ದೇನೆ. ಹಿರಿಯ ಸಚಿವರೇ ಈ ರೀತಿಯ ಉತ್ತರ ಕೊಟ್ಟರೆ, ಇದು ಯಾವ ರೀತಿಯಲ್ಲಿ ಉತ್ತರವಾಗುತ್ತದೆ? ಅಧಿಕಾರಿಗಳು ಮಾನ್ಯ ಸಚಿವರಿಗೆ ಹೆದರದೆ ಹೋದರೆ, ಒಬ್ಬ ಸಾಮಾನ್ಯ ರೈತನಿಗೆ ಯಾವ ರೀತಿ ಆಗಬಹುದ?. At least

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಎಷ್ಟು ಹಣ ಕೊಟ್ಟಿದೆ. ಮಾನ್ಯ ಸಚಿವರು ಸಂದೇಶ ಕೊಟ್ಟಿದ್ದಾರೆ. ಸಾಕಷ್ಟು ಕ್ರಾಂತಿಕಾರಿ ತೀರ್ಮಾನಗಳನ್ನು ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲೂ ಪ್ರಕೃತಿ ವಿಕೋಪದಿಂದ ಎಷ್ಟು ಜನ ಸತ್ತಿದ್ದಾರೆ, ಎಷ್ಟು ಪರಿಹಾರವನ್ನು ಕೊಡಲಾಗಿದೆ? ಬೆಳೆ ಹಾನಿ ಎಷ್ಟಾಗಿದೆ, ಎಷ್ಟು ಪರಿಹಾರವನ್ನು ನೀಡಲಾಗಿದೆ? ಜಾನುವಾರುಗಳು ಎಷ್ಟು ಸತ್ತಿವೆ, ಎಷ್ಟು ಪರಿಹಾರವುನ್ನು ನೀಡಲಾಗಿದೆ? at least ಇದಕ್ಕೆ ಒಂದು ಸಮರ್ಪಕವಾದ ರೀತಿಯಲ್ಲಿ ಒಂದು ಸಂದೇಶವನ್ನು ಕೊಡದೆ ಹೋದರೆ ಹೇಗೆ? ನಾನು ಒಂದು ಸತ್ಯವನ್ನು ಹೇಳುತ್ತೇನೆ. ಇದು ಹೀಗೆ ಮುಂದುವರಿದರೆ, ಅಧಿಕಾರಿಗಳಿಗೆ ಇನ್ನೂ ಜಡತ್ವವಾಗಿ ಈ ಇಲಾಖೆಗೆ ಎಲ್ಲೂ ಒಂದು ಕಡೆ ಶಕ್ತಿಹೀನವಾಗುತ್ತದೆ. ದಯವಿಟ್ಟು ಇದಕ್ಕೆ ಒಂದು ಸ್ಪಷ್ಟತೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಒಂದು norms ಅನ್ನು ಮಾಡಿದೆ. ಅದರ ಪ್ರಕಾರವೇ, ನಾವು ಪರಿಹಾರವನ್ನು ಕೊಡಬೇಕು. ಆ norms 2015 ರಲ್ಲಿ ಪ್ರಕಟ ಆಗಿದೆ. ಅದನ್ನು ಬೇಕು ಅಂದರೆ ಕಳುಹಿಸಿ ಕೊಡುತ್ತೇನೆ.

(ಮುಂದು...)

(1156)22.11.2017-11.10-ಎಂವಿ-ಆರ್‌ಎನ್

**ಶ್ರೀ ಕಾಗೋಡು ತಿಮ್ಮಪ್ಪ (ಮುಂದು...):-**

ಅದಕ್ಕೋಸ್ಕರ ಆ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಅದರ ಪ್ರಕಾರವೆ ಎಲ್ಲವೂ ಸಹ ಇದೆ. Details of compensation has been given in the reply. ಈ ರೀತಿ ಎಲ್ಲಾ ಇದೆ. ಆದುದರಿಂದ ಆ norms ಪ್ರಕಾರವೇ ನಾವು ಕೊಡುತ್ತೇವೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನೀವು norms ಪ್ರಕಾರವೇ ನೀಡಿ, ನಮ್ಮದೇನೂ ಅಭ್ಯಂತರವಿಲ್ಲ. ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ನೀಡಿದ್ದೀರಿ ಮತ್ತು ಪರಿಹಾರ ವಿತರಣೆ ಆಗಿರುವಂಥದ್ದು ಎಷ್ಟು. ಎಷ್ಟು ರೈತರಿಗೆ ಈ ಪರಿಹಾರ ತಲುಪಿದೆ ಎನ್ನುವಂತಹ ಸ್ಪಷ್ಟತೆ ಬೇಕಲ್ಲವೆ? ಅದನ್ನು ತಾವು ಹೇಳಿ. ಇದು ಒಂದು ತರಹ ಮೌಖಿಕವಾಗಿದೆ ಇದೆ. ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹೆಕ್ಟೇರ್‌ಗೆ ತೊಂದರೆಯಾಗಿದೆ ಎಂಬುದರ ಬಗ್ಗೆ ಉತ್ತರವನ್ನು ನೀಡಿದ್ದಾರೆ. ಕೇಂದ್ರ ಸರ್ಕಾರ ಏನು norms ಮಾಡಿದೆ. ಆ norms ನ guidelines ಪ್ರಕಾರವೇ, ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ರೈತರಿಗೆ ಇದರಿಂದ ಹಣ ಬಿಡುಗಡೆಯಾಗಿದೆ. ಬಿಡುಗಡೆಯಾಗಿರುವಂತಹ ಹಣ ಆ ರೈತರಿಗೆ ತಲುಪಿದೆಯಾ, ತಾವು ದಯಮಾಡಿ ಈ ಅಂಕಿ ಅಂಶಗಳ ಬಗ್ಗೆ ಹೇಳಿದರೆ ಸಾಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನ ಮುಂಗಾರಿನಲ್ಲಿ ಒಂದು ಅಂದಾಜು 23 ರಿಂದ 24 ಲಕ್ಷ ಜನರಿಗೆ, ಸುಮಾರು 1600 ಕೋಟಿ ರೂಪಾಯಿಗಳ ಹಣವನ್ನು ನೀಡಿದ್ದೇವೆ. ಹಿಂಗಾರಿಗೆ ಇನ್ನೂ ಹಣವನ್ನು ಕೊಟ್ಟಿಲ್ಲ. ಅದನ್ನು ಈಗ ಮಾಡುತ್ತೇವೆ. ಏಕೆಂದರೆ ಹಿಂಗಾರಿಗೆ ಕೊಡಬೇಕಾದರೆ, ಶೇಕಡ 33ಕ್ಕಿಂತ ಜಾಸ್ತಿ ಬೆಳೆ ಹಾನಿ ಆದಾಗ, ಈ norms ಇಟ್ಟುಕೊಂಡು ಕೊಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆಗೆ ಹೋಗುವುದಕ್ಕಿಂತ ಮೊದಲು ಒಂದು ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಇದನ್ನು ಮಾನ್ಯ ಸಭಾನಾಯಕರು ಮತ್ತು ಗೌರವಾನ್ವಿತ ಸದಸ್ಯರೆಲ್ಲೂ ಗಮನಿಸಬೇಕು. ಬಹಳಷ್ಟು ಬಾರಿ ನಮ್ಮ ಸದನದ ರೀತಿ-ನೀತಿಗಳು, privileges ಬಹಳಷ್ಟು ಜನರಿಗೆ ಅರ್ಥವಾಗದೆ ಗೊತ್ತಾಗುವುದಿಲ್ಲ. ನಿನ್ನೆಯ ದಿವಸ ಒಂದು ವಿಷಯ ಚರ್ಚೆಯಾದಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು, ಇಡೀ ಸದನ ಒಕ್ಕೊರಲಿನಿಂದ ಹೇಳಿದಾಗ. ಅದನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆಂದು ಹೇಳಿದ್ದೆ. ಸಭಾನಾಯಕರು ಮಾಧ್ಯಮ ಮಿತ್ರರಿಗೆ ಮನವಿ ಮಾಡಿದರು, ಕಡತದಿಂದ ತೆಗೆದು ಹಾಕಿರುವುದನ್ನು ನೆನಪಿಟ್ಟುಕೊಂಡು ಮಾಡಿ ಎಂದು. ಅಷ್ಟು ಹೊತ್ತಿಗಾಗಲೇ live telecast ಇರುವುದರಿಂದ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಇವತ್ತಿನ ದಿವಸ ಬೆಳಗಿನ ಹೆಚ್ಚಿನ ಪತ್ರಿಕೆಗಳಲ್ಲಿ ಆ ವಿಷಯವನ್ನು ಬಹಳ ಪ್ರಮುಖವಾಗಿ ಮುದ್ರಣ ಮಾಡಿದ್ದಾರೆ. ಈ ವಿಷಯವನ್ನು privilege ಎಂದು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅವರು ಗೊತ್ತಿಲ್ಲದೆ ಮಾಡಿದ್ದಾರೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, there is a matter of privilege. ಇಲ್ಲಿ ಯಾವ ವಿಚಾರ ಚರ್ಚೆಯಾಗಬಾರದಾಗಿತ್ತೋ ಮತ್ತು ಅದನ್ನು ಕಡತದಿಂದ ತೆಗೆಯಬೇಕೆಂದು ಹೇಳಿದಾಗ ಮತ್ತು ಮಾನ್ಯ ಸಭಾನಾಯಕರು ನಿರ್ದಿಷ್ಟವಾಗಿ ಇದನ್ನು ಪತ್ರಿಕೆಗಳಲ್ಲಿ ಹಾಕಬಾರದೆಂದು ಹೇಳಿದರು. ಈಗ ನಮಗೆ ಬೆಂಗಳೂರಿನಿಂದ ದೂರವಾಣಿ ಕರೆ ಮಾಡಿ ಕೇಳುತ್ತಿದ್ದಾರೆ, ನೀವು ಹೇಗಿದ್ದೀರಾ ಎಂದು.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ನಮ್ಮ ಕಷ್ಟವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಇಲ್ಲವೆ? ನಮಗೆ ಆಗಿರುವಂತಹ ನೋವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಇದೆಯೋ ಅಥವ ಇಲ್ಲವೋ ಎಂದು ತಾವು ಹೇಳಿ. ನಿನ್ನೆಯ ದಿವಸ ಮಾನ್ಯ ಸಚಿವರುಗಳು ಹೇಳಬೇಕಾದರೆ, ನಾವು ಸುಮ್ಮನೆ ಇದ್ದೆವು. ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು ಹಿರಿಯ ಸದಸ್ಯರು, ಅವರಿಗೆ ಮುಜುಗರ ಆಗಬಾರದೆಂದು ನಮ್ಮ ಅನಿಸಿಕೆ. ಒಂದು ಸತ್ಯ ಇದಕ್ಕಿಂತ ವಿಭಿನ್ನವಾಗಿರತಕ್ಕಂಥ ಹೇಳಿಕೆಗಳೆಲ್ಲಾ ಚರ್ಚೆಯಾಗಿ ಅಂತಹ ವಿಷಯಗಳು ಪತ್ರಿಕೆಗಳಲ್ಲಿ ಯಾವುದೂ ಬಂದಿಲ್ಲವೆ? ಇದುವರೆವಿಗೂ ಆ ರೀತಿಯಾದ ಯಾವುದೇ ವಿಚಾರಗಳು ಸಹ ಮಾಧ್ಯಮಗಳಲ್ಲಿ ಬಂದಿಲ್ಲವೆಂದು ತಾವು ಹೇಳಿ.

**ಸಭಾಪತಿಯವರು**:- ಈಗ ಆ ವಿಷಯ ಬೇಡ. ಮಾನ್ಯ ಸದಸ್ಯರಾದ ಶ್ರೀ ವಿ.ಸೋಮಣ್ಣನವರೆ ತಾವು ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೆ ತಾವೂ ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, 13-14 ಬಾರಿ ನನಗೆ ಆದಂತಹ ವೇದನೆ ಮತ್ತು ತೊಂದರೆಯನ್ನು ನಾನು ಯಾರ ಬಳಿ ಹೇಳಬೇಕಾಗಿತ್ತು. ಆಕಸ್ಮಾತ್ ಏನಾದರೂ ಹೆಚ್ಚು-ಕಡಿಮೆ ಆಗಿದ್ದರೆ, ಏನು ಮಾಡಬೇಕಾಗಿತ್ತು. ದಯವಿಟ್ಟು ತಾವು ಕೆಲವಾರು ವಿಚಾರಗಳಲ್ಲಿ ರೂಲಿಂಗ್ ಕೊಟ್ಟಿದ್ದು, ಮತ್ತೊಂದು, ಮಗದೊಂದು. ಮಾಧ್ಯಮಕ್ಕೆ ಯಾವುದಾದರು ಕಡಿವಾಣ ಹಾಕುವುದಾದರೆ, ಎಲ್ಲದಕ್ಕೂ ಸಹ ಕಡಿವಾಣ ಹಾಕಿ. ಇನ್ನು ಮೇಲೆ ಯಾವುದೂ ಮಾಧ್ಯಮಗಳಲ್ಲಿ ಬರುವುದು ಬೇಡ. ಗೌರವಾನ್ವಿತ ಸದಸ್ಯರಾಗಿರುವ ನಾವು ನಮಗೆ ಆಗಿರುವಂತಹ ಅನಾನುಕೂಲವನ್ನು ಹೇಳುವುದಕ್ಕೆ ಅವಕಾಶವಿಲ್ಲ ಎನ್ನುವುದಾದರೆ ಇದರ ಅರ್ಥವೇನು? ಈ ಸದನದಲ್ಲಿ ಸದಸ್ಯರು ಮಾತನಾಡುವುದಕ್ಕೆ ಅಧಿಕಾರ ಇಲ್ಲವೆ? 'I am sorry Sir', ದಯವಿಟ್ಟು ಹಿರಿಯರಾದ ತಾವು ಅದು ಪತ್ರಿಕೆಗಳಲ್ಲಿ ಬಂದಿದೆ ಎಂದು ಹೇಳುವಂಥದ್ದು, ಇಂತಹವುಗಳು ಪತ್ರಿಕೆಗಳಲ್ಲಿ ಬರಬೇಕಾಗುತ್ತದೆ. ತಪ್ಪನ್ನು ಯಾರು ಮಾಡಿದರೂ ತಪ್ಪು. ಅವರು ಮಾಡಿರುವಂಥದ್ದು ಎಲ್ಲವೂ ಸರಿ ಎನ್ನುವುದಕ್ಕೆ, ಇವತ್ತಿನ ದಿವಸ ತಾವು ಹೋಗಿ ನೋಡಿ, ಎಷ್ಟೊಂದು ಜನರಿಗೆ ಅನಾನುಕೂಲವಾಗಿದೆ ಎಂದು. ಆದುದರಿಂದ ತಾವು ದಯಮಾಡಿ, ನಾನು ಒಬ್ಬ ಅನುಭವಸ್ಥ ಸದಸ್ಯನಾಗಿದ್ದೇನೆ, ನಾನೇನು ಎರಡನೆ ತರಗತಿಯಿಂದ ಬಂದಿಲ್ಲ. ನಾವು ಎಲ್ಲ ನೋವನ್ನು ಅನುಭವಿಸಿ, ಇರುವಂತಹ ವಾಸ್ತವಾಂಶವನ್ನು ಹೇಳುತ್ತಿರುವುದು. ದಯವಿಟ್ಟು ಇಂತಹ ವಿಚಾರಗಳನ್ನು ಮಾಡುವಾಗ, ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ರೀತಿ ನಡೆದಿದೆಯೋ, ಅದನ್ನು ತಾವು ಸ್ವಲ್ಪ ಪುನರಾವರ್ತನೆ ಮಾಡುವುದು ಸೂಕ್ತ ಎನ್ನುವುದು ನನ್ನ ಭಾವನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ವಿ.ಸೋಮಣ್ಣನವರೆ ತಾವು ಒಂದು ನಿಮಿಷ ಕುಳಿತುಕೊಳ್ಳಿ. ನಾನು ಸಭೆಯ ಗಮನಕ್ಕೆ ತರುವುದಕ್ಕೆ ಹೊರಟಿರುವುದು ಏನೆಂದರೆ, ತೀರ್ಮಾನ ಆಗುವವರೆಗೆ ಒಂದು ರೀತಿ, ತೀರ್ಮಾನ ಆದಮೇಲೆ ಯಾರ್ಯಾರು ಹೇಗೆ-ಹೇಗೆ ಅದನ್ನು ಅನುಸರಿಸಬೇಕು ಎಂಬುದು ಬಹಳ ಪ್ರಮುಖವಾಗಿರುವಂಥದ್ದು. ತೀರ್ಮಾನ ಆಗುವುದಕ್ಕೆ ಮುಂಚೆ ಅದರ ಚರ್ಚೆ ಆಗುತ್ತದೆ, ಮತ್ತೆ ಏನೇನೂ ಆಗುತ್ತದೆ, ಕೆಲವರು ಅವರವರ ಅಭಿಪ್ರಾಯಗಳನ್ನು ಹೇಳುತ್ತಾರೆ. ಅದೆಲ್ಲವನ್ನು ನಾನು ಗೌರವಿಸುತ್ತೇನೆ. ಒಮ್ಮೆ ಈ ಸದನದಲ್ಲಿ ತೀರ್ಮಾನವಾಗಿ, ಸಭಾಪತಿಯವರ ಪೀಠದಿಂದ ಒಂದು ತೀರ್ಪು ಬಂದ ಮೇಲೆ ಅದನ್ನು ಗೌರವಿಸಬೇಕಾಗಿರುವುದು ಎಲ್ಲರ ಜವಾಬ್ದಾರಿ. ಅಲ್ಲದೇ ಸಭಾನಾಯಕರು ನಿರ್ಧಿಷ್ಟವಾಗಿ ಹೇಳಿದರು. ಹಾಗಾಗಿ ನಾನು ಮಾಧ್ಯಮ ಮಿತ್ರರಿಗೆ ಮತ್ತೊಮ್ಮೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ತರಹದ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಒಮ್ಮೆ ಕಡತದಿಂದ ತೆಗೆದುಹಾಕಬೇಕೆಂದು ತೀರ್ಮಾನ ಮಾಡಿ, ಅದನ್ನು ಉಚ್ಚರಿಸದ ಮೇಲೆ, ಅದಕ್ಕೆ ಸಾಧ್ಯವಾದಷ್ಟು ಪ್ರಚಾರ ಕೊಡಬಾರದು. ಆದರೆ, ಪ್ರಚಾರ ಕೊಟ್ಟಿದ್ದಾರೆ. ಅದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ, ಇದು ಸರಿಯಲ್ಲ. ಅದನ್ನು ಮಾಧ್ಯಮದವರು ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. ಈ ಸದನದ ಮುಖಾಂತರವೆ ಅವರಿಗೆ ಹೇಳಬೇಕಾಗುತ್ತದೆ. ಅವರಿಗೆ 'Press Conference' ತೆಗೆದುಕೊಂಡು ಹೇಳಬೇಕೆಂದಾಗ, ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಸಭಾಪತಿಯವರು ಆ ರೀತಿ 'Press Conference' ನಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಹಾಗಾಗಿ ನಾನು ಮಾಧ್ಯಮದ ಮಿತ್ರರಲ್ಲಿ ಮತ್ತೊಮ್ಮೆ ಈ ವಿಷಯವನ್ನು ತಿಳಿಸುತ್ತಿದ್ದೇನೆ. ಮುಂದಿನ ಪ್ರಶ್ನೆಗೆ ಹೋಗೋಣ.

**ಚುಕ್ಕೆ ಪ್ರಶ್ನೆ ಸಂಖ್ಯೆ: 4612**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮ ಮತ್ತು ಇತರೆ ಗ್ರಾಮಗಳಿಗೆ ಇರುವ ಸಂಪರ್ಕಿತ ಕಾಲುದಾರಿಗಳು ಮತ್ತು ಮಳೆ ನೀರು ಹರಿದು ಹೋಗಲು ಇರುವ ರಾಜ ಕಾಲುವೆಗಳ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರ್‌ರವರಿಗೆ ದೂರು ಸಲ್ಲಿಸಲಾಗಿದ್ದು ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು? ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರನ್ನು ಕೊಟ್ಟಿದ್ದಾರೆ. ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮದ ಒಬ್ಬ ನಿವಾಸಿ ಆರ್.ಟಿ.ಐ. ಕಾರ್ಯಕರ್ತರಾದ ಸನ್ಮಾನ್ಯ ಹನುಮೇಗೌಡ ಎನ್ನುವವರು, ಜಿಲ್ಲಾಧಿಕಾರಿಗಳಿಗೆ, ಸಹಾಯಕ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರರಿಗೆ ಆಗಿಂದ್ದಾಗೆ ಪತ್ರಗಳನ್ನು ಬರೆಯುತ್ತಾರೆ. ನಮ್ಮ ಗ್ರಾಮದಲ್ಲಿ ಒತ್ತುವರಿಯಾಗಿದೆ, ದಯಮಾಡಿ ಇದನ್ನು ಬಿಟ್ಟುಕೊಡಿ ಎಂದು. ಜಿಲ್ಲಾಧಿಕಾರಿಗಳು ಸಂಬಂಧಪಟ್ಟಂತಹ ತಹಶೀಲ್ದಾರವರಿಗೆ ಪತ್ರವನ್ನು ಬರೆದಿದ್ದಾರೆ. ಆದಷ್ಟು ಕೂಡಲೆ ಅದನ್ನು ಸರ್ವೆ ಮಾಡಿ, ತೆರವು ಮಾಡಿಕೊಡಬೇಕೆಂದು ಪತ್ರವನ್ನು ಬರೆದರೂ ಕೂಡ, ತಹಶೀಲ್ದಾರರು ಈ ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಈ ಆರ್.ಟಿ.ಐ. ಕಾರ್ಯಕರ್ತ ಈ ರೀತಿ ಕೇಳಿರುವುದಕ್ಕೋಸ್ಕರ ಆತನ ಮೇಲೆ ಅಲ್ಲಿನ ಪ್ರಭಾವಿ ರಾಜಕಾರಣಿಗಳು ಮತ್ತು ಪ್ರಭಾವಿ ವ್ಯಕ್ತಿಗಳು, ಅವರ ಮನೆಗೆ ನುಗ್ಗಿ ಆತನಿಗೆ ಹೊಡೆಸುತ್ತಾರೆ ಮತ್ತು ಅವನ ಮೇಲೆ ಹಲ್ಲೆ ಮಾಡುತ್ತಾರೆ. ಮಾನ್ಯ ಸಚಿವರೆ, ಈ ವಿಷಯ ಸ್ವಲ್ಪ ಗಂಭೀರವಾಗಿರುವುದಕ್ಕೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು**:- ಮಾನ್ಯ ಸದಸ್ಯರೇ ಈ ಕುರಿತು ವಿಶ್ಲೇಷಣೆ ಮಾಡುವುದು ಬೇಡ, ಸದಸ್ಯರು ಪ್ರಶ್ನೆ ಕೇಳಲಿ, ನಾನು ಅದಕ್ಕೆ ಉತ್ತರ ಹೇಳುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಒಂದೇ ಒಂದು ಮಾತಿನಲ್ಲಿ ಹೇಳುತ್ತೇನೆ. ಅವನ ಮೇಲೆ ಹಲ್ಲೆಯಾದಾಗ, ಅವರ ವಿರುದ್ಧ ಪೋಲೀಸ್‌ನವರಿಗೆ ದೂರು ಕೊಡುವುದಕ್ಕೆ ಹೋಗುತ್ತಾನೆ. ಅವರು ದೂರನ್ನು ಸ್ವೀಕರಿಸುತ್ತಾರೆ, ಆದರೆ ಪೋಲೀಸ್ ರಕ್ಷಣೆ ಬೇಕೆಂದಾಗ, ಅವರು ರಕ್ಷಣೆಯನ್ನು ಕೊಡುವುದಿಲ್ಲ. ಕೋರ್ಟ್ ಆದೇಶ ಮಾಡಿದಾಗ, ಅವನಿಗೆ ಪೋಲೀಸ್ ರಕ್ಷಣೆ ಕೊಡುತ್ತಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ದ್ವಿಚಕ್ರ ವಾಹನದಲ್ಲಿ ಒಬ್ಬ ಗನ್‌ಮ್ಯಾನ್ ಅನ್ನು ಕರೆದುಕೊಂಡು ಓಡಾಡುತ್ತಾನೆ ಎಂದರೆ, ಅವನೇ ಮೊದಲನೆ ವ್ಯಕ್ತಿ ಎಂದು ನಾವು ತಿಳಿದುಕೊಳ್ಳಬೇಕು. ಅಂದರೆ ಅವನು ಅಷ್ಟೊಂದು ಪ್ರಾಮಾಣಿಕವಾಗಿ ಅವನು ತನ್ನ ಕೆಲಸವನ್ನು ಮಾಡುತ್ತಾನೆ. ಅದೇ ರೀತಿಯಾಗಿ ನನಗೆ ಬಲ್ಲ ಮೂಲಗಳಿಂದ ಒಂದು ಉತ್ತರ ಸಿಕ್ಕಿದೆ. ನಾನು ಪ್ರಶ್ನೆ ಕೇಳಿದಾಗ, ಇದು ಯಾವ ರೀತಿ ಆಗಿದೆ ಎಂದು ನಾನು ಹೇಳುತ್ತಿರುವುದು. ತಹಶೀಲ್ದಾರರು ಸರ್ಕಾರಕ್ಕೆ ಈ ರೀತಿಯಾಗಿ ಉತ್ತರವನ್ನು ಬರೆಯುತ್ತಾರೆ, ಸದರಿ ಶ್ರೀ ಹನುಮೇಗೌಡರು ಸಲ್ಲಿಸಿದ ದೂರು ಅರ್ಜಿಗೆ ಸಂಬಂಧಿಸಿದಂತೆ ಆವಲಹಳ್ಳಿ ಗ್ರಾಮದಿಂದ ಇತರೆ ಗ್ರಾಮಗಳಿಗೆ ನಕಾಶೆಯಂತೆ ಇರುವ ಕಾಲುದಾರಿ ಹಾಗೂ ರಾಜಕಾಲುವೆಗಳು ಒತ್ತುವರಿಯಾಗಿರುವ ಬಗ್ಗೆ ಅಳತೆ ಕಾರ್ಯ ಪ್ರಗತಿಯಲ್ಲಿದ್ದು, ಕೂಡಲೇ ಪೂರ್ಣ ಪ್ರಮಾಣದ ಅಳತೆ ಮಾಡಿಸಿ, ಒತ್ತುವರಿಯಾಗಿರುವ ಪ್ರದೇಶವನ್ನು ಗುರುತಿಸಿ, ಹದಿನೈದು ದಿನಗಳ ಒಳಗಾಗಿ ತೆರವು ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಹಶೀಲ್ದಾರರು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಆದರೆ, ಅಧಿಕಾರಿಗಳು ಮಾನ್ಯ ಸಚಿವರಿಗೆ ಬೇರೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರವನ್ನು ನನಗೆ ನೀಡಿದ್ದಾರೆ. ಮಾನ್ಯ ಸಚಿವರು ಬಹಳಷ್ಟು ಪ್ರಾಮಾಣಿಕವಾಗಿದ್ದಾರೆ ಮತ್ತು ಕಟ್ಟುನಿಟ್ಟಿನ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಹೆಸರುವಾಸಿಯಾಗಿದ್ದಾರೆ. ಕಳೆದ ಬಾರಿ ಸದನದಲ್ಲಿ ಇದೇ ಯಲಹಂಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆಯನ್ನು ಕೇಳಿದಾಗ, ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ನನ್ನನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡೋಣವೆಂದು ಹೇಳಿದರು. ಕಾರಣಾಂತರಗಳಿಂದ ಮಾನ್ಯ ಸಚಿವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದುದರಿಂದ, ನಾನು ಕೂಡ ಸುಮ್ಮನಾದೆ. ಈಗ ಮಾನ್ಯ ಸಚಿವರು ಈ ವಿಚಾರಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು**:- ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ನಾನು ಆ ಸ್ಥಳಕ್ಕೆ ಹೋಗುವುದಕ್ಕೆ ತಯಾರಿದ್ದೇನೆ.

**(ಮುಂದು...)**

(1157)22.11.2017-11.20-ಎಲ್‌ಎಲ್-ವಿಕೆ

**ಪ್ರಶ್ನೆ ಸಂಖ್ಯೆ: 4572**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ಕರ್ನಾಟಕ ಗೃಹ ಮಂಡಳಿಯಲ್ಲಿ ಒಂದು ದೊಡ್ಡ ಹಗರಣ ಆಗಿದೆ. ಈ ವಿಷಯವನ್ನು ಕಳೆದ ಬೆಂಗಳೂರಿನ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಆದಷ್ಟು ಬೇಗ ಉತ್ತರ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಆದರೆ, ಇದುವರೆವಿಗೂ ಆ ವಿಷಯಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸಂಬಂಧಪಟ್ಟಂತೆ ನನಗೆ ಉತ್ತರ ಬಂದಿರುವುದಿಲ್ಲ. ಕರ್ನಾಟಕ ಗೃಹ ಮಂಡಳಿಯಿಂದ ಮಧ್ಯಮ ವರ್ಗ, ಬಡ ವರ್ಗ ಕುಟುಂಬಗಳ ಸಲುವಾಗಿ ಏನು ಮನೆಗಳನ್ನು ಕಟ್ಟುತ್ತಿದ್ದಾರೆ, ಇದರಲ್ಲಿ ಎಂತಹ ದೊಡ್ಡ ಒಂದು ಅನಾಹುತವಾಗಿದೆಯೆಂದರೆ, ಯಾರೂ ಈ ಮನೆಗಳಿಗಾಗಿ ಹಣ ತುಂಬಿದ್ದಾರೆ, ಅವರ ಬ್ಯಾಂಕ್ ಖಾತೆಗೆ ಹಣ ಜಮಾ ಆಗಲಾರದೇ, ಬೇರೆಯವರ ಬ್ಯಾಂಕ್ ಖಾತೆಗೆ ಹಣ ಜಮಾ ಆಗುವಂತಹದ್ದು, ಅದರ ಜೊತೆಗೆ ಯಾರಿಗೆ ಈಗಾಗಲೇ ನಿವೇಶನ ಖರೀದಿಯಾಗಿ ಮನೆಗಳನ್ನು ಕೊಟ್ಟಿದ್ದಾರೆ, ಅವರುಗಳಿಗೆ ಮನೆ ಖರೀದಿ ಹಾಕಿದ್ದನ್ನು ರದ್ದುಪಡಿಸುತ್ತಿದ್ದಾರೆ. ಉದಾಹರಣೆಗೆ, ಶ್ರೀ ಬಿ.ಎಂ. ಪಾಟೀಲ ಎಂಬುವವರು ಒಂದು ನಿವೇಶನಕ್ಕಾಗಿ ಅರ್ಜಿ ಹಾಕಿದ್ದರು, ನಂತರ ಅವರಿಗೆ ನಿವೇಶನ ಮಂಜೂರಾಯಿತು. ಅವರು ಅದಕ್ಕಾಗಿ ಆಯುಕ್ತರು, ಕರ್ನಾಟಕ ಗೃಹ ಮಂಡಳಿಗೆ 2,05,000 ರೂಪಾಯಿಗಳ ಡಿ.ಡಿ. ಯನ್ನು ಖರೀದಿಸಿ ಕೊಟ್ಟರು. ಆಶ್ಚರ್ಯವೇನೆಂದರೆ, ಅವರು ಕೊಟ್ಟಂತಹ ಹಣ ಶ್ರೀ ಮುಕ್ತೇದಾರ್ ಎನ್ನುವಂತಹ ಮತ್ತೊಬ್ಬ ವ್ಯಕ್ತಿಯ ಹೆಸರಿನಲ್ಲಿ ಜಮಾ ಆಗಿರುತ್ತದೆ. ಮಾನ್ಯ ಸಚಿವರಿಗೆ ಮೇಲ್ನೋಟಕ್ಕೆ ಇದರಲ್ಲಿ ಅವ್ಯವಹಾರ ಆಗಿದೆಯೆಂದು ಕಂಡುಬಂದಿರುವುದರಿಂದ ಅವರು ಒಂದು ಆದೇಶ ಮಾಡಿದ್ದಾರೆ. ಆದರೆ, ಈ ಘಟನೆ ನಡೆದು 3-4 ವರ್ಷಗಳಾದರೂ ಸಹ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಇಡೀ ಪ್ರಕರಣದಲ್ಲಿ ಶ್ರೀ ಅತ್ತಾರ್ ಎನ್ನುವಂತಹ ಮೂಲ ವ್ಯಕ್ತಿಯನ್ನು ಸರ್ಕಾರದಿಂದ ಕೊಟ್ಟಿರುವ ಲಿಖಿತ ಉತ್ತರದಲ್ಲಿ ಸೇರಿಸಿರುವುದಿಲ್ಲ. ಅದರ ಹೊರತಾಗಿ, ಉಳಿದ ಎಲ್ಲಾ ಅಧಿಕಾರಿಗಳನ್ನು ಸೇರಿಸಿದ್ದಾರೆ. ಶ್ರೀ ಅತ್ತಾರ್ ರವರು ಅವ್ಯವಹಾರ ಮಾಡಿರುವ ಬಗ್ಗೆ, ವಿಜಯಕರ್ನಾಟಕ, ಪ್ರಜಾವಾಣಿ ಮತ್ತು ಇನ್ನಿತರ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಕರ್ನಾಟಕ ಗೃಹ ಮಂಡಳಿಯ ಹಗರಣದ ಬಗ್ಗೆ ಸಾಕಷ್ಟು ವರದಿಯಾಗಿದೆ. ಇದರಿಂದಾಗಿ, ನಮಗೆ ಬಹಳ ನೋವಾಗಿದೆ. ಒಂದು ಕಡೆ ಕರ್ನಾಟಕ ಗೃಹ ಮಂಡಳಿಯವರು sale deed ಮಾಡುತ್ತಾರೆ. ಆದರೆ, ಮುಂದೆ ಖರೀದಿ ಮಾಡಿ ವಿಕ್ರಯ ಮಾಡಿದ್ದನ್ನು ನಾವು ರದ್ದುಪಡಿಸಿದ್ದೇವೆಂದು ಸಂಬಂಧಪಟ್ಟವರಿಗೆ ಪತ್ರ ಹೋಗುತ್ತದೆ. ಈ ರೀತಿ ನಕಲಿ ಡಿ.ಡಿ. ಗಳನ್ನು ಮತ್ತು ಬ್ಯಾಂಕ್ ಖಾತೆಗೆ ತುಂಬಿದಂತಹ ಹಣದ ನಕಲು ವೋಚರ್‌ಗಳನ್ನು ತಯಾರು ಮಾಡಿರುವುದರಿಂದ ಇಡೀ ಹಗರಣ ಬಹಳ ದೊಡ್ಡ ಪ್ರಮಾಣದ್ದಾಗಿದೆ. ಇದರಲ್ಲಿ ಸಣ್ಣ ಕುಟುಂಬಗಳು, ಬಡವರು, ಮಧ್ಯಮ ವರ್ಗದವರು ವಂಚಿತರಾಗಿದ್ದಾರೆ. ಮತ್ತು ಶ್ರೀ ಬಿ.ಎಂ. ಪಾಟೀಲರು ನಿವೃತ್ತ ಶಿಕ್ಷಕರು ಅವರು ತಮ್ಮ ನಿವೃತ್ತಿ ಜೀವನದ ಕೊನೆಯ ಹಣದಲ್ಲಿ ಒಂದು ಮನೆಯನ್ನು ತೆಗೆದುಕೊಂಡಿದ್ದಾರೆ. ಇವತ್ತಿನ ದಿವಸ ಅಲ್ಲಿ ಹೋಗಿ ಕೇಳಿದರೆ, ಆಯುಕ್ತರು, ಕರ್ನಾಟಕ ಗೃಹ ಮಂಡಳಿಯವರು ತಮ್ಮ ಹಣ ಮುಟ್ಟಿದೆಯೆಂದು ಅವರಿಗೆ ಪತ್ರ ಕಳುಹಿಸಿ ಕೊಟ್ಟಿದ್ದಾರೆ. ಆದರೆ, 2-3 ತಿಂಗಳಿನ ನಂತರ ತಮ್ಮ ಹಣ ಜಮಾ ಆಗಿರುವುದಿಲ್ಲ, ಅದನ್ನು ತಕ್ಷಣ ತುಂಬದೇ ಹೋದರೆ ತಮ್ಮ ನಿವೇಶನವನ್ನು ರದ್ದು ಮಾಡುತ್ತೇವೆಂದು ಹೇಳುತ್ತಾರೆ. ಈ ರೀತಿ ಇದೊಂದೇ ಪ್ರಕರಣವಲ್ಲ, ಇದರಲ್ಲಿ ಬಹಳಷ್ಟು ಪ್ರಕರಣಗಳಿವೆ. ಇದರಲ್ಲಿ ಒಂದು ಕುತಂತ್ರ ಇರುವುದರಿಂದ...

**ಸಭಾಪತಿಯವರು**:- ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರೇ, ತಮ್ಮ ಪ್ರಶ್ನೆ ಕೇಳಿ. ಶ್ರೀ ಎಂ. ನಾರಾಯಣಸ್ವಾಮಿಯವರು ಮಾತನಾಡುವಾಗ ಮಾನ್ಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮಧ್ಯೆ ಮಾತನಾಡಲು ಹೋದರು, ಆಗ ನಾನೇ ಮಾತನಾಡಬಾರದೆಂದು ಹೇಳಿದೆನು. ತಾವು ತಮ್ಮ ವಿಷಯದ ಬಗ್ಗೆ ವಿಶ್ಲೇಷಣೆ ಮಾಡಿದರೆ ಹೇಗೆ? ಇದರ ಬಗ್ಗೆ ನಾನು ಹೇಳಿದರೆ ತಮಗೆ ಕೋಪ ಬರುತ್ತದೆ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ಯಾವುದೇ ಪ್ರಶ್ನೆಗೆ ನಾವು ಮೊದಲು ಪೀಠಿಕೆಯನ್ನು ಹಾಕಬೇಕಾಗುತ್ತದೆ. ಈಗ ಯಾವುದೇ ಕಾರ್ಯಕ್ರಮ ಮಾಡಿದರೆ ಅದರಲ್ಲಿ ಸ್ವಾಗತ ಭಾಷಣ ಮಾಡದೇ ಕಾರ್ಯಕ್ರಮ ಮಾಡುತ್ತಾರೆಯೇ?

**ಸಭಾಪತಿಯವರು**:- ಆಯಿತು, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನಾನೂ ಕೂಡ ಅದೇ ರೀತಿ ವಿಷಯದ ಗಂಭೀರತೆ ಬಗ್ಗೆಯೇ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸನಗೌಡ ಆರ್. ಪಾಟೀಲ್(ಯತ್ನಾಳ್) ರವರು ಹಿರಿಯ ಸದಸ್ಯರಿದ್ದಾರೆ. ಅವರು ಕೇಂದ್ರದಲ್ಲಿ ಕೆಲಸ ಮಾಡಿ ಬಂದಂತಹವರು. ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಪೂರಕವಾಗಿ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿದೆ. ಅವರ ಪ್ರಶ್ನೆಗೆ ಪೀಠಿಕೆ ಹಾಕುವುದಾದರೆ, ಆ ವಿಷಯವನ್ನು ಪ್ರತ್ಯೇಕವಾಗಿ ತರಬಹುದಾಗಿರುತ್ತದೆ. ದಯಮಾಡಿ, ಮಾನ್ಯ ಸದಸ್ಯರು ವ್ಯವಸ್ಥೆ ಹೇಗಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಇದೊಂದು ದೊಡ್ಡ ಹಗರಣವಾಗಿದೆ. ಈ ಹಗರಣದಲ್ಲಿ ಯಾರು ಕಳ್ಳರಿದ್ದಾರೆ, ಅವರನ್ನು ಹಿಡಿಯದೇ ಬೇರೆಯವರನ್ನು ಹಿಡಿಯುತ್ತಿದ್ದಾರೆ.

**ಸಭಾಪತಿಯವರು:-** ತಾವು ಆ ವಿಚಾರವನ್ನು ಹೇಳಿ. ಕಳ್ಳರನ್ನು ಹಿಡಿಯುವುದನ್ನು ಬಿಟ್ಟು ಬೇರೆಯವರನ್ನು ಹಿಡಿದಿದ್ದಾರೆ, ಅವರು ಒಳ್ಳೆಯವರು, ಆದರೆ, ಇಂತಿಂತಹವರು ಕಳ್ಳರು ಎಂಬುದನ್ನು ನಿರ್ದಿಷ್ಟವಾಗಿ ಹೇಳಿ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಈ ಹಗರಣ ಬಹಳ ಗಂಭೀರವಾಗಿದ್ದು, ಇದನ್ನು ಸಿ.ಬಿ.ಐ., ಗೆ ಕೊಟ್ಟು ಈ ಹಗರಣದ ಸಂಪೂರ್ಣ ತನಿಖೆಯನ್ನು ಮಾಡಿಸುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತಿದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀ ಎಂ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೆ ಲಿಖಿತ ಉತ್ತರದಲ್ಲಿ ಮಾಹಿತಿಯನ್ನು ನೀಡಿದ್ದೇವೆ. ಒಂದೇ ಚಲನ್ ಅನ್ನು 4 ಜನರ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಿರುವುದು, ದುಡ್ಡು ತುಂಬದೇ ಇರುವಂತಹವರಿಗೆ ನಿವೇಶನ ಕೊಟ್ಟಿರುವುದು, ಇದಕ್ಕೆಲ್ಲಾ ಸೂಕ್ತವಾಗಿ ಜಿಲ್ಲಾ ನೊಂದಣಾಧಿಕಾರಿಯವರಿಗೆ ಕೇಂದ್ರ ನೋಂದಣಾಧಿಕಾರಿಯವರ ಅನುಮತಿ ಇಲ್ಲದೇ ಯಾವುದೇ ನಿವೇಶನ ನೊಂದಣಿ ಮಾಡಬಾರದೆಂದು ಸೂಚನೆ ನೀಡಿದ್ದೇವೆ. ಅದೇ ರೀತಿ ಹಣ ತುಂಬಿರುವುದನ್ನು ಪರಿಶೀಲಿಸುವುದಕ್ಕೂ ಮೊದಲೇ ಯಾರಿಗೂ ಕೂಡ ನಿವೇಶನ ನೊಂದಣಿ ಮಾಡಬಾರದೆಂದು ಮತ್ತೊಂದು ಸೂಚನಾ ಪತ್ರ ನೀಡಿದ್ದೇವೆ. ಈ ಹಗರಣದಲ್ಲಿ 3 ಜನ ಸಿಬ್ಬಂದಿಯನ್ನು ಅಮಾನತ್ತು ಮಾಡಿದ್ದೇವೆ. ಜೊತೆಗೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಮರಗೂರು ಎಂಬುವವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ್ದೇವೆ. ಅವರು ವರದಿ ನೀಡಿದ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಈ ಹಗರಣದ ಮೂಲ ವ್ಯಕ್ತಿ ಶ್ರೀ ಅತ್ತಾರ್‌ರವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ಸದರಿ ಕ್ರಮಕ್ಕೆ ನಿಗದಿಗೊಳಿಸಿರುವ ಸಮಯದ ಮಿತಿಯನ್ನು ಕೇಳುತ್ತಿದ್ದಾರೆ.

**ಶ್ರೀ ಎಂ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀ ಮರಗೂರು, ನ್ಯಾಯಾಧೀಶರು ಇವರಿಗೆ ಆದಷ್ಟು ಬೇಗ ವಿಚಾರಣಾ ವರದಿ ಕೊಡುವುದಕ್ಕೆ ತಿಳಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 4552**

**(ಉತ್ತರವನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ 1,24,760 ಕುಟುಂಬಗಳ ಪರವಾಗಿ ಪ್ರಶ್ನೆ ಕೇಳಿದ್ದೇನೆ. ಇದು ಸಾಮಾಜಿಕ ಬದ್ಧತೆಯ ಒಂದು ಪ್ರಶ್ನೆಯಾಗಿದೆ. 2011 ರಲ್ಲಿ ಮೂಲಗೇಣಿ ಮತ್ತು ಒಳಮೂಲಗೇಣಿದಾರರಿಗೆ ಮಾಲೀಕತ್ವ ನೀಡುವಂತಹ ಒಂದು ಕಾನೂನನ್ನು ಜಾರಿಗೆ ತರಲಾಯಿತು. ಅದು 2012 ರಲ್ಲಿ ರಾಷ್ಟ್ರಪತಿಗಳ ಬಳಿಗೆ ಹೋಗಿ ಅವರು ಅಂಕಿತ ಹಾಕಿದ ನಂತರ ಅದು ಜಾರಿಗೆ ಬಂದಿದೆ. ಆದಾದ ನಂತರ, ಸರ್ಕಾರ ಆ ಕಾನೂನಿಗೆ rules ಅನ್ನು frame ಮಾಡಬೇಕಾಗಿತ್ತು. 2012 ರಿಂದ 2016 ರವರೆಗೆ rules ಅನ್ನು frame ಮಾಡಲಿಕ್ಕೆ ಸರ್ಕಾರ ಮೀನಾ ಮೇಷ ಮಾಡುತ್ತಿದೆ. ಕೊನೆಗೂ rules ಅನ್ನು frame ಮಾಡಿ, ಸದರಿ ನಿಯಮವನ್ನು ಯಾರ್ಯಾರು ಅನುಷ್ಠಾನಗೊಳಿಸಬೇಕು ಆ ಪ್ರಾಧಿಕಾರಿಗಳಿಗೆ ಕಳುಹಿಸಿಕೊಟ್ಟಿತ್ತು. ಇದನ್ನು ಕಳುಹಿಸಿಕೊಟ್ಟ 3 ದಿನಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ತಹಸೀಲ್ದಾರ್ ಕಛೇರಿಯಲ್ಲಿ 900 ಅರ್ಜಿಗಳು ಬಂದಿದ್ದವು. ಆದಾದ 3 ದಿನಗಳಲ್ಲಿ ಯಾರು ಬಲಿಷ್ಠವಾದಿಗಳಿದ್ದಾರೆ, ಮೂಲಗೇಣಿದಾರ ಇದ್ದಾನೆ, ಯಾರು ಒಡೆತನದ ಹಕ್ಕು ತೋರಿಸುತ್ತಾನೆ ಅವರು ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದರು. ಅದು ಯಾವ ತಡೆಯಾಜ್ಞೆ ಎಂದರೆ, status quo order ತಂದರು. ಇದನ್ನು ತಂದು ಇವತ್ತಿಗೆ ಒಂದು ವರ್ಷವಾಯಿತು...

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ...

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, No, I want to clarify. ಒಂದು ನಿಮಿಷ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಏನು ಹೇಳುತ್ತಾರೆ ಅದನ್ನು ಕೇಳೋಣ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಹೇಳುತ್ತಾರೆ. ಅವರು ತಮ್ಮ ಮಾತನ್ನು ಹೇಳುವುದಕ್ಕೆ ಬಿಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ಘಟನೆ ನಡೆದು 1 ವರ್ಷವಾಯಿತು. ಅರ್ಜಿಯನ್ನು ತೆಗೆದುಕೊಂಡ 3 ದಿನಗಳಲ್ಲಿಯೇ ಬಲಾಢ್ಯರು, ಭೂಮಿಯ ಮಾಲೀಕರು ಈ ಹಕ್ಕನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೈಕೋರ್ಟ್ ಹೋಗಿ status quo order ತಂದರು. ಇದನ್ನು ತಂದ ನಂತರ 3 ದಿನಗಳಲ್ಲಿಯೇ ಅರ್ಜಿಯನ್ನು ತೆಗೆದುಕೊಳ್ಳುವುದು ಸ್ಥಗಿತವಾಯಿತು. ಇವತ್ತಿಗೆ ಒಂದು ವರ್ಷವಾಗುತ್ತಿದೆ, ಆದರೆ, ನಮ್ಮ ಸರ್ಕಾರ ಹೈಕೋರ್ಟ್‌ನಲ್ಲಿ ಯಾವುದೇ ಕೆಲಸ ಮಾಡಿರುವುದಿಲ್ಲ. ಆದಾದ ನಂತರ, ನಾನು ಮಾನ್ಯ ಕಂದಾಯ ಸಚಿವರ ಬಳಿ ಹೋಗಿ, "ಸರ್, ಈ ರೀತಿ ಪರಿಸ್ಥಿತಿಯಾಗಿದೆ. 1,24,760 ಕುಟುಂಬಗಳು ಇದರಲ್ಲಿ ಭಾಗಿಯಾಗಿದ್ದಾರೆ. ಇದರಲ್ಲಿ ತಾವು ಏನಾದರೂ ಮಾಡಬೇಕೆಂದು" ಹೇಳಿದಾಗ, ಸಚಿವರು ತಕ್ಷಣವೇ Sri B.V. Acharya, ರವರನ್ನು Special Public Prosecutor ರನ್ನಾಗಿ ನೇಮಕ ಮಾಡಿದ್ದಾರೆ. ಇದು ಒಳ್ಳೆಯ ಕೆಲಸ. ಆದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾರು ಭೂಮಿಯ ಹಕ್ಕನ್ನು ಕೊಡಬೇಕಾಗಿತ್ತು, ಆತ ಮೂಲಗೇಣಿದಾರರ ಮೇಲೆ ಗಧಾಪ್ರಹಾರ ಮಾಡಿ, ಅವರನ್ನು ಬಲವಂತದಿಂದ ಹೊರಗಡೆ ಕಳುಹಿಸಿ, ಪೋಲೀಸ್ ಠಾಣೆಗಳಿಗೆ ಕರೆಯಿಸಿ ಬೆದರಿಸಿದ್ದಾರೆ. ಅಷ್ಟೇ ಅಲ್ಲದೇ, ಇದರಲ್ಲಿ ರಿಯಲ್ ಎಸ್ಟೇಟ್ ಮಾಫಿಯಾದವರು ಭಾಗಿಯಾಗಿ ಬಡ ಕುಟುಂಬಗಳ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವಾಗುತ್ತಿದೆ ಮತ್ತು ಒಂದು ವರ್ಷದಿಂದ ಹೈಕೋರ್ಟ್‌ನಲ್ಲಿ ಸರ್ಕಾರದಿಂದ ಯಾವುದೇ ಕೆಲಸವಾಗುತ್ತಿಲ್ಲವೆನ್ನುವುದು ನನ್ನ ನೋವು. ಅದಕ್ಕೆ ಮಾನ್ಯ ಕಂದಾಯ ಸಚಿವರು, ಕೋರ್ಟ್‌ನಲ್ಲಿರುವ ಪ್ರಕರಣದಲ್ಲಿ ನಾವು ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಬಹುದು. ಆದರೆ, you should give the documents before the court. ಹೈಕೋರ್ಟ್ ಜಡ್ಜ್ ಏನು ಮಾಡುತ್ತಾರೆಂದರೆ, ಕಡತವನ್ನು ಪರಿಶೀಲಿಸಿ ಮೂಲಗೇಣಿದಾರರಿಂದ ಕೊಡದೇ ಇದ್ದರೆ ನಾನು ಬೇರೆ ಪ್ರದೇಶದಿಂದ ಬಂದವನು, ನನಗೆ ಈ ಕಾನೂನು ಅರ್ಥವಾಗುವುದಿಲ್ಲ ಎಂದು ಕಡತವನ್ನು ಪಕ್ಕಕ್ಕೆ ಇಡುತ್ತಾನೆ. ಅದಕ್ಕೆ ಸರಿಯಾದಂತಹ ಮಾಹಿತಿಯನ್ನು ಒದಗಿಸುವಂತಹ ಕೆಲಸ ನಮ್ಮ ಕಂದಾಯ ಇಲಾಖೆಯಿಂದ ಆಗಲಿಲ್ಲ. ಆದುದರಿಂದ, ಎಲ್ಲಿಯೋ ಒಂದು ಕಡೆ ಸರ್ಕಾರ ಸಾಮಾಜಿಕ ಬದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಈ ವ್ಯವಸ್ಥೆಯನ್ನು ಮಾಡಬೇಕಾಗಿತ್ತು ಮತ್ತು ಇದರಿಂದ ವಂಚಿತರಾದವರಿಗೆ ಸರ್ಕಾರ ಎಲ್ಲಿಯೋ ಒಂದು ರಕ್ಷಣೆ ಕೊಡಬೇಕು. ಆದರೆ, ಸರ್ಕಾರ ಈ ಯಾವುದೇ ಕೆಲಸ ಮಾಡಿರುವುದಿಲ್ಲ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, “ಪಂಜಾಬ್ ಮತ್ತು ಹರಿಯಾಣ ನ್ಯಾಯಾಲಯಗಳಲ್ಲಿ ಒಂದು ತೀರ್ಮಾನ ಮಾಡಿ, ಕೇವಲ 7 ತಿಂಗಳಿನಲ್ಲಿ 62,000 ಪ್ರಕರಣಗಳು ಇತ್ಯರ್ಥ, ಪಾಟ್ನಾ ಹೈಕೋರ್ಟ್‌ನ ಪಟಾಪಟ್ ತೀರ್ಪು” ಎಂದು ಹೇಳುವಂತಹ ವಿಚಾರವಿರುತ್ತದೆ. ಸರ್ಕಾರ ಕಾನೂನು ಬದ್ಧವಾಗಿ ಕಾನೂನನ್ನು ರಚಿಸಿ, ಅದಕ್ಕೆ ಬೇಕಾದಂತಹ rules ಅನ್ನು frame ಮಾಡಿ, ಅದಕ್ಕೆ ಅನುಗುಣವಾಗಿ ನ್ಯಾಯಬದ್ಧವಾಗಿ ಎಲ್ಲಾ ಕೆಲಸಗಳನ್ನು ಮಾಡಿದ ನಂತರವೂ ಕೂಡ ಹೈಕೋರ್ಟ್ ತಡೆಯಾಜ್ಞೆ ಕೊಡುತ್ತದೆ ಎಂದಾದರೆ, ಆ status quo ಅನ್ನು ಒಂದು ವರ್ಷ ಉಳಿಸಲಿಕ್ಕೆ ಹೈಕೋರ್ಟ್‌ಗೆ ಸಾಧ್ಯವಾಗುತ್ತದೆ ಎಂದರೆ, ನಾವು ರಚನೆ ಮಾಡುವ ಶಾಸನಗಳಿಗೆ ಏನು ಅರ್ಥವಿದೆ? ಬೇರೆ ಯಾವುದೋ ಪ್ರಕರಣಗಳಲ್ಲಿ ಈ ರೀತಿಯಾಗಿದ್ದರೆ, ಸರ್ಕಾರ ಹೋರಾಡಿ ಅದನ್ನು ಉಳಿಸಿಕೊಳ್ಳುತ್ತಿರಲಿಲ್ಲವೇ? ಹಾಗಾಗಿ, ಮೂಲಗೇಣಿದಾರರು ಮತ್ತು ಬಡವರೇನಿದ್ದಾರೆ, ಅವರು ಸಾಮಾಜಿಕ ನ್ಯಾಯದಿಂದ ವಂಚಿತರಾಗುತ್ತಾರೆ, ಅವರು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಹೈಕೋರ್ಟ್‌ಗೆ ಹೋಗಿ ಅಲ್ಲಿ ಅರ್ಜಿ ಶುಲ್ಕ ಕಟ್ಟುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ಮಾನ್ಯ ಕಂದಾಯ ಸಚಿವರು ‘Special Public Prosecutor ಅನ್ನು ನೇಮಕ ಮಾಡಿದ್ದಾರೆ, ಅವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಇದುವರೆವಿಗೂ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ’ ಎನ್ನುವ ವಿಷಯವನ್ನು ತಿಳಿಸಿ, ಮೂಲ ಗೇಣಿದಾರರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಭಿನ್ನಹ ಮಾಡಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, 2012 ರಲ್ಲಿ ಕಾನೂನನ್ನು ಮಾಡಿದರೂ ಕೂಡ ನಿಯಮವನ್ನು ತಂದಿರಲಿಲ್ಲ. ನಾನು ಕಂದಾಯ ಸಚಿವನಾದ ನಂತರ ನಿಯಮವನ್ನು ಜಾರಿಗೆ ತಂದಿದ್ದೇನೆ. ಈ ನಿಯಮವನ್ನು ಕೆಲವರು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿ ತಡೆಯಾಜ್ಞೆ ತಂದಿದ್ದಾರೆ. ಅದಕ್ಕಾಗಿ ರಾಜ್ಯದ ಪರವಾಗಿ ಒಳ್ಳೆಯ ವಕೀಲರನ್ನು ನೇಮಕ ಮಾಡಿದ್ದೇನೆ. ಅವರು ತಮ್ಮ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಾರೆ. ನಮ್ಮ ವ್ಯಾಪ್ತಿಯಲ್ಲಿ ನಮ್ಮ ಕೆಲಸ ನಾವು ಮಾಡುತ್ತೇವೆ, ಅದರ ಹೊರತಾಗಿ ನಾವು ಹೈಕೋರ್ಟ್‌ಗೆ ಹೋಗಿ ಆ ಹಕ್ಕನ್ನು ಕಿತ್ತುಕೊಂಡು ಬರುವುದಕ್ಕೆ ಆಗುವುದಿಲ್ಲ. ಆದರೆ, ಮಾನ್ಯ ಸದಸ್ಯರ ಆತಂಕ ಏನಿದೆ, ಅದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ಭೂ ಸುಧಾರಣೆ ಕಾನೂನು ಜಾರಿಗೆ ಬಂದಂತಹ ಸಂದರ್ಭದಲ್ಲಿ ಇವತ್ತು ಯಾರ್‍ಯಾರು ಸಾಮಾಜಿಕ ನ್ಯಾಯದ ಮಾತನ್ನು ಹೇಳುತ್ತಿದ್ದಾರೆ, ಅವೊತ್ತಿನ ದಿವಸ ಅವರು ಸಾಮಾಜಿಕ ನ್ಯಾಯಕ್ಕಾಗಿ ಆ ಜನಗಳಿಂದ ಅರ್ಜಿಗಳನ್ನು ಕೊಡಿಸಿದ್ದರೆ ಅವೊತ್ತೇ ಭೂಮಿಯ ಹಕ್ಕನ್ನು ಕೊಡುವುದಕ್ಕೆ ಸಾಧ್ಯವಿತ್ತು. ಆದರೆ, ಅವರು ಆ ಕೆಲಸವನ್ನು ಮಾಡಲೇ

ಇಲ್ಲ. ಇದರಿಂದಾಗಿ, ನನಗೆ ತುಂಬಾ ದುಃಖವಾಗುತ್ತಿದೆ. ಇವೊತ್ತಿನ ದಿವಸ ಅವರ ಸಂಕಟ ಹೇಳಿಕೊಳ್ಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

(ಮುಂದುವರೆದಿದೆ...)

(1158)22.11.2017/11.30/ವೈಎಲ್-ವಿಕೆ

ನಾವು ವಕೀಲರಿಗೆ ಇದರ ಬಗ್ಗೆ ತಿಳಿಸಿ, ಬೇಗ ವೆಕೇಟ್ ಮಾಡಿಸುತ್ತೇನೆ. ಉದಾಹರಣೆಗೆ ಗೋಮಾಳಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ vacate ಮಾಡಿಸಬೇಕೆಂದು ತುಂಬಾ ಪ್ರಯತ್ನ ಮಾಡುತ್ತಿದ್ದೇನೆ. ಆದುದರಿಂದ ಇದರ ಬಗ್ಗೆಯೂ ಯಾವುದೇ ಸಂಶಯವನ್ನು ಇಟ್ಟುಕೊಳ್ಳಬೇಕಾದಂತಹ ಅಗತ್ಯವಿಲ್ಲ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4427**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, 2006-07ನೇ ಶೈಕ್ಷಣಿಕ ಸಾಲಿನಿಂದ ವಾರ್ಷಿಕವಾಗಿ ರೂ.2400/- fee fix ಮಾಡಲಾಗಿದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳು ಬಂದ ಮೇಲೆಯೂ ಕೂಡ ಅದನ್ನು ಇವತ್ತಿಗೂ ಏರಿಸಿರುವುದಿಲ್ಲ. ಐ.ಟಿ.ಐ. ಸಂಸ್ಥೆಗಳಲ್ಲಿ ಬರುವಂತಹ ವಿದ್ಯಾರ್ಥಿಗಳು ಗ್ರಾಮಾಂತರ ಬಡ ಪ್ರದೇಶದಿಂದ ಬರುತ್ತಿರುವುದರಿಂದ ಅವರಿಗೆ ರೂ.15,000/- ರೂ.16,000/- ಗಳಷ್ಟು ಶುಲ್ಕವನ್ನು ಭರಿಸುವುದಕ್ಕೆ ಖಂಡಿತವಾಗಿ ಸಮಸ್ಯೆ ಆಗುತ್ತದೆ. ಆದರೆ, ನನ್ನ ವಿನಂತಿಯೇನೆಂದರೆ, ಐ.ಟಿ.ಐ. ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಸರಿಯಾಗಿ ಉತ್ತರವನ್ನು ನೀಡಿರುವುದಿಲ್ಲ. ಏಕೆಂದರೆ ಐ.ಟಿ.ಐ. ಸಂಸ್ಥೆಗಳಲ್ಲಿ ತರಬೇತಿದಾರನಿಗೆ ನಿಖರವಾಗಿ ತಗಲುವ ವೆಚ್ಚದ ಲೆಕ್ಕಾಚಾರ ಇದುವರೆಗೆ ಮಾಡಿರುವುದಿಲ್ಲ ಎನ್ನುವ ಉತ್ತರವನ್ನು ನೀಡಿದ್ದಾರೆ. ಖಾಸಗಿ ಐ.ಟಿ.ಐ. ಸಂಸ್ಥೆಗಳೂ ಕೂಡ ಸರ್ಕಾರಿ ಐ.ಟಿ.ಐ. ಸಂಸ್ಥೆಗಳಷ್ಟೇ ಹಣವನ್ನು ಖರ್ಚು ಮಾಡಿ ಸಂಸ್ಥೆಯನ್ನು ನಡೆಸುತ್ತಿವೆ. ವಿದ್ಯಾರ್ಥಿಗಳು ಕೊಡುವ ಶುಲ್ಕ ಸಹ ರೂ.2400/-. ಆದರೆ, ಗಲಾಟೆ ಮಾಡುವವರಿಗೆ ರೂ.2400/- ಶುಲ್ಕವನ್ನು ವಾಪಸ್ಸು ಕೊಡುತ್ತಿದ್ದಿರಿ. ಕೊನೆಗೆ ಅದು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯವಾಗಿ ವಾಪಸ್ಸು ಕೊಡುವುದನ್ನು ನಿಲ್ಲಿಸಿದ್ದಾರೆ. ಸಂಸ್ಥೆಗಳನ್ನು ನಡೆಸುವುದಕ್ಕೆ ಒಳ್ಳೆಯ ಗುಣಮಟ್ಟದ ತರಬೇತಿಯನ್ನು ನೀಡುವುದಕ್ಕೆ ಸಂಸ್ಥೆಗಳಿಗೆ ಸಮಸ್ಯೆ ಇರುವುದರಿಂದ ವಿದ್ಯಾರ್ಥಿಗಳ ಶುಲ್ಕವನ್ನು ಕನಿಷ್ಠ ಕೇಂದ್ರ ಸರ್ಕಾರದ NCVT (National Council on Vocational Training) ಏನು ಶಿಫಾರಸ್ಸು ಮಾಡಿದೆ ಅಷ್ಟಕ್ಕಾದರೂ ಏರಿಸದೇ ಇದ್ದರೆ ಸಂಸ್ಥೆಗಳನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ದಯವಿಟ್ಟು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ ಅದನ್ನು ಶೀಘ್ರವಾಗಿ ಪರಿಶೀಲನೆಯನ್ನು ಮಾಡಿ, ಹೆಚ್ಚು ಮಾಡಬೇಕೆಂಬುದು ನನ್ನ ಮೊದಲನೆಯ ವಿನಂತಿಯಾಗಿದೆ. ಎರಡನೆಯದಾಗಿ ಕೌಶಲ್ಯ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬಹಳಷ್ಟು ಒತ್ತು ಕೊಡುತ್ತಿರುವುದರಿಂದ ಹಾಗೂ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಬರುತ್ತಿರುವುದರಿಂದ ಒಂದೇ ವೇಳೆ ಏರಿಸುವುದಕ್ಕೆ ಏನಾದರೂ ಕಷ್ಟವಾದರೆ, ಅದರ ಮೂಲಕವೇನಾದರೂ reimburse ಮಾಡುವುದಕ್ಕೆ ಸಾಧ್ಯವಿದೆಯೇ? ವಿದ್ಯಾರ್ಥಿಗಳಿಗೆ ಶುಲ್ಕವನ್ನು ಕೊಡಿ ಎಂದು ಹೇಳುವುದಕ್ಕಿಂತ ಅಷ್ಟು ತರಬೇತಿ ಹಣವನ್ನು ಸಂಸ್ಥೆಗಳಿಗೆ reimburse ಮಾಡುವ ಯೋಜನೆಯನ್ನು ಪರಿಗಣಿಸಲಾಗುತ್ತದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ ಸುಮಾರು 1789 ITI Institutes ನಮ್ಮ ರಾಜ್ಯದಲ್ಲಿದೆ; ಅದರಲ್ಲಿ 270 ಸರ್ಕಾರಿ ಐ.ಟಿ.ಐ. ಸಂಸ್ಥೆಗಳು, ಅದರ ಜೊತೆಯಲ್ಲಿ 196 grant-in-aid ಸಂಸ್ಥೆಗಳಿವೆ, 1323 ಖಾಸಗಿ ಐ.ಟಿ.ಐ. ಸಂಸ್ಥೆಗಳಿವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1493 ITI's ಅದು State ನಲ್ಲಿ ಇರುವಂತಹದ್ದು they are affiliated to NCVT. ಅದರಲ್ಲಿ 142 ಸರ್ಕಾರಿ ಐ.ಟಿ.ಐ. ಸಂಸ್ಥೆಗಳು, 196 grant-in-aid ಐ.ಟಿ.ಐ. ಸಂಸ್ಥೆಗಳು, 1155 ಖಾಸಗಿ ಐ.ಟಿ.ಐ. ಸಂಸ್ಥೆಗಳಿವೆ. 296 ITI's are affiliated to SCVT (State Council for Vocational Training). ಅದರಲ್ಲಿ 128 ಸರ್ಕಾರಿ ಐ.ಟಿ.ಐ. ಸಂಸ್ಥೆಗಳು ಮತ್ತು 168 ಖಾಸಗಿ ಐ.ಟಿ.ಐ. ಸಂಸ್ಥೆಗಳಿವೆ. ಮಾನ್ಯ ಸದಸ್ಯರು ಮೊದಲನೆಯ ಪ್ರಶ್ನೆಯಲ್ಲಿ ಕೇಳುತ್ತಿರುವುದೇನೆಂದರೆ, ಶುಲ್ಕವನ್ನು ಜಾಸ್ತಿ ಮಾಡಬೇಕೆಂದು ಏನು ಕೇಳಿದ್ದಾರೆ ಅದು ಸರ್ಕಾರದ ಮಟ್ಟದಲ್ಲಿ ಆಗುತ್ತಿದೆ. Fixation ಮಾಡಬೇಕಾದರೆ ಬಹಳಷ್ಟು consideration ಮಾಡಬೇಕಾಗುತ್ತದೆ. ಎರಡನೆಯದಾಗಿ skill ಮೂಲಕವೇನಾದರೂ ಹಣವನ್ನು ಕೊಡುವುದಕ್ಕೆ ಬರುತ್ತದೆಯೇ ಎಂದು ಕೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಇಲಾಖೆಯೂ ಬೇರೆಯಾಗಿರುವುದರಿಂದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಕೊಡುವುದಕ್ಕಾಗುತ್ತದೆಯೋ ಅಥವಾ ಆಗುವುದಿಲ್ಲವೋ ಎನ್ನತಕ್ಕಂಥ ಪ್ರಶ್ನೆ ಇದೆ. ITI ನ್ನು ಇದುವರೆಗೆ skilling ಆಗಿ ಉಪಯೋಗ ಮಾಡಿಲ್ಲ. ಮುಂದಿನ ದಿನಗಳಲ್ಲಿ ಅದನ್ನು skilling ಆಗಿ ಉಪಯೋಗ ಮಾಡಿಕೊಳ್ಳಬಹುದು. ಅದರ ಬಗ್ಗೆ ಒಂದು ಪ್ರಸ್ತಾವನೆಯು ಕೂಡ ಇದೆ. ಯಾವ ರೀತಿ adjust ಮಾಡುವುದಕ್ಕಾಗುತ್ತದೆ ಎಂಬ ಪ್ರಯತ್ನವನ್ನು ನೋಡಿ ಮಾಡುತ್ತೇವೆ. ಮೂರನೆಯದಾಗಿ ರೂ.15,000/- ರವರೆಗೂ ಕೇಂದ್ರ ಸರ್ಕಾರದ ಮಾರ್ಗಸೂಚಿ ಇದೆ. ಆ ಮಟ್ಟಕ್ಕೆ ಏರಿಸಬೇಕೆಂದು ಹೇಳಿದ್ದಾರೆ ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರೆಲ್ಲರನ್ನು ಕರೆಯಿಸಿ ಸಂಪೂರ್ಣವಾಗಿ ಚರ್ಚೆ ಮಾಡಿ, then we will come out with one consolidated fee structure. ನಿಮ್ಮೆಲ್ಲರ ಒಪ್ಪಿಗೆಯನ್ನು ತೆಗೆದುಕೊಂಡು ಮುಂಬರುವ ವರ್ಷದಲ್ಲಿ ಕಾರ್ಯಗತವಾಗುವ ಹಾಗೆ ಮಾಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4586**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ದಮನಿತ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದು, ಯಾರಿಗೂ ಕೂಡ ಒಂದು ಸೂರಿಲ್ಲ. ಒಂದು ಲಕ್ಷ ಜನರು ದಮನಿತರೆಂದು ನೋಂದಾಯಿಸಿಕೊಂಡಿದ್ದಾರೆ. ಅವರಿಗೆ ತಲಾ ಒಂದೊಂದು ಸಾವಿರ ಮನೆಗಳನ್ನು ನೀಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದೇನೆ. 575 ನಿವೇಶನಗಳನ್ನು ಇದುವರೆಗೂ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಇಲ್ಲಿಯವರೆಗೂ 1 ಲಕ್ಷ ಜನರಲ್ಲಿ ನೋಂದಾಯಿತ 575 ಜನರಿಗೆ ಮಾತ್ರ ನಿವೇಶನವನ್ನು ಕೊಟ್ಟಿದ್ದಾರೆ ಎಂಬುದಾದರೆ, ದಯವಿಟ್ಟು ಲಿಂಗತ್ವ ಅಲ್ಪಸಂಖ್ಯಾತರಿಗೆ 1 ಸಾವಿರ ಮತ್ತು ದಮನಿತ ಮಹಿಳೆಯರಿಗೆ 1 ಸಾವಿರ ನಿವೇಶನವನ್ನು ಮೀಸಲಿರಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ನೀವು ವಿನಂತಿ ಮಾಡಿಕೊಳ್ಳುತ್ತೇನೆಂದರೆ ನಿವೇಶನವನ್ನು ಕೊಟ್ಟೇ ಬಿಡುತ್ತಾರೆ. ಬೇಡುವ ರೀತಿಯಲ್ಲಿ ಪಾಪ ಮಾನ್ಯ ಸಚಿವರನ್ನು ಕೇಳಿದರೆ ಸಚಿವರ ಗತಿಯೇನು? ಅವರು ಈಗ ನಿವೇಶನವನ್ನು ಕೊಟ್ಟೇ ಬಿಡುತ್ತಾರೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ದೇವರಾಜ್ ಅರಸು ವಸತಿ ಯೋಜನೆಯಡಿಯಲ್ಲಿ 14 ವಿಶೇಷ ವರದಿಗಳು ಇದೆ. ಅದರಲ್ಲಿ HIV ಸೋಂಕಿತರು, ಮಂಗಳ ಮುಖಿಯರು, ಲೈಂಗಿಕ ಕಾರ್ಯಕರ್ತೆಯರು, ದೇವದಾಸಿಯರು, ವಿಧವೆಯರು ಬರುತ್ತಾರೆ. ಅವರೆಲ್ಲರಿಗೂ ನಮ್ಮ ಸರ್ಕಾರದ ವತಿಯಿಂದ 2014-2015ನೇ ಸಾಲಿನಿಂದ ಪ್ರತಿ ವರ್ಷ ಹತ್ತು ಸಾವಿರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆಗಳನ್ನು ಕೊಡುತ್ತಿದ್ದೇವೆ. ಹಾಗೆಯೇ 2016-2017ನೇ ಸಾಲಿನಲ್ಲಿ 20 ಸಾವಿರ ಮನೆಗಳನ್ನು ಒದಗಿಸಿದ್ದೇವೆ. 2017-18ನೇ ಸಾಲಿನಲ್ಲಿ 69 ಸಾವಿರ ಮನೆಗಳನ್ನು ಹಂಚಿಕೆ ಮಾಡುತ್ತಿದ್ದೇವೆ. ಒಂದೊಂದು ಸಾವಿರ ಜನರು ಮಾತ್ರವಲ್ಲ. ಎಷ್ಟೇ ಜನರು ಬಂದರೂ ಕೊಡುತ್ತೇವೆ. ಮೊದಲು ಅರ್ಜಿಯನ್ನು ಹಾಕಿಕೊಂಡು ಗುರುತಿಸಿಕೊಳ್ಳಬೇಕು. ಒಂದೊಂದು ಸಾವಿರ ಮನೆಗಳನ್ನು ಮಾತ್ರ ಅಲ್ಲ. ಇನ್ನು ಹೆಚ್ಚಾಗಿಯೇ ಮನೆಗಳನ್ನು ಕೊಡುತ್ತೇವೆ. ಅವರು ಬಂದು ಅರ್ಜಿಯನ್ನು ಹಾಕಿಕೊಳ್ಳಲಿ.

**ಸಭಾಪತಿಯವರು**:- ಮಾನ್ಯ ಸದಸ್ಯರಾದ ಡಾ|| ಜಯಮಾಲರವರೆ, ನೋಡಿ ನೀವು ಕೇಳಿದ್ದಕ್ಕಿಂತಲೂ ಹೆಚ್ಚಾಗಿಯೇ ನಿವೇಶನವನ್ನು ಕೊಡುತ್ತಾರೆ. ಮೊದಲು ಅರ್ಜಿಯನ್ನು ಹಾಕಿಸಿ ನಂತರ ನಿವೇಶನವನ್ನು ಕೊಡುತ್ತಾರೆ.

**ಡಾ|| ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, ಒಂದು technical word ಇದೆ. "ಲೈಂಗಿಕ ಕಾರ್ಯಕರ್ತರು" ಎನ್ನುವ ಪದವನ್ನು ದಯವಿಟ್ಟು ತೆಗೆದು, "ದಮನಿತರು" ಎನ್ನುವ ಪದವನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು**:- ಮಾನ್ಯ ಸಚಿವರೆ nomenclature ಬದಲಾವಣೆ ಮಾಡಿಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಡಾ|| ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ನಮ್ಮ ಕಾರ್ಮಿಕರು ಕನ್ನಡ ಚಿತ್ರರಂಗಕ್ಕೆ ದುಡಿಯಲು ಬಂದು 83 ವರ್ಷಗಳಾಗಿವೆ. ಆ ಕಾರ್ಮಿಕರಿಗೆ ಮನೆ ಇಲ್ಲ. ದಯವಿಟ್ಟು ಮಾನ್ಯ ಸಚಿವರು announce ಮಾಡಿರುವುದರಲ್ಲಿ 1000 ಮನೆಗಳನ್ನು ಅವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ**:- ಮಾನ್ಯ ಸಭಾಪತಿಯವರೇ, ತಮ್ಮಗೆಲ್ಲರಿಗೂ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಮೊದಲ ಬಾರಿಗೆ 1 ಲಕ್ಷ ಮನೆಗಳನ್ನು ಎಲ್ಲಾ ಬಡವರಿಗೂ ಕೊಡಬೇಕೆಂದು ತೀರ್ಮಾನ ಮಾಡಿ, ನಮ್ಮ ಸರ್ಕಾರ ಆ ಒಂದು ನಿಟ್ಟಿನಲ್ಲಿ 431 ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ. ಎಲ್ಲರಿಗೂ ಅರ್ಜಿಗಳನ್ನು ಕೊಡುವುದು ಪ್ರಕ್ರಿಯೆಯಲ್ಲಿದೆ ಕೊಡುತ್ತಿದ್ದೇವೆ. ಅದಕ್ಕಾಗಿ ಆ ಕಾರ್ಮಿಕರು ಅರ್ಜಿಯನ್ನು ಹಾಕಲಿ, ಖಂಡಿತವಾಗಿಯೂ ಕಾರ್ಮಿಕರಿಗೂ ನಿವೇಶನ ಸಿಗುತ್ತದೆ. ಇದರಲ್ಲಿ ಅವರಿಗೆ ಏನಾದರೂ special category ಮಾಡುವುದಕ್ಕೆ ಅವಕಾಶವಿದ್ದರೆ ಅದನ್ನು ಸಹ ಮಾಡೋಣ.

**ಸಭಾಪತಿಯವರು**:- ಮಾನ್ಯ ಸದಸ್ಯರಾದ ಡಾ|| ಜಯಮಾಲರವರೆ ನೋಡಿ, ನೀವು ಹಾಗೆ ಕೇಳಿದರೆ, ಮಾನ್ಯ ಸಚಿವರು ನಿವೇಶನವನ್ನು ಕೊಟ್ಟೇ ಬಿಡುತ್ತಾರೆಂದು ನಾನು ನಿಮಗೆ ಮೊದಲೇ ಹೇಳಲಿಲ್ಲವೇ?

**ಡಾ|| ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ವಿಶೇಷ ಮನೆಗಳಿಗೆ ತಗಲುವಂತಹ unit cost ಎಷ್ಟು?

**ಸಭಾಪತಿಯವರು**:- ಅದನ್ನು ಸರ್ಕಾರ ಮಾಡಿಕೊಳ್ಳುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4581**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ದಿನಾಂಕ: 24.01.2012 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅನುಷ್ಠಾನಕ್ಕಾಗಿ ಎಸ್ಟಿಮೇಟ್ ಇದ್ದದ್ದು ರೂ.17,207 ಕೋಟಿ ರೂಪಾಯಿ. ಈಗ ಪರಿಷ್ಕರಣೆಯಾಗಿರತಕ್ಕಂಥ ಬಜೆಟ್ ರೂ.51148.94 ಕೋಟಿ. 300% ಜಾಸ್ತಿ ಇದೆ. ನಿನ್ನೆ ತಾನೇ ನಾವು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಹಳ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಇಷ್ಟೊಂದು ಮೊತ್ತವನ್ನು ಕೊಟ್ಟರೂ ಕೂಡ ಇನ್ನು ಯೋಜನೆ ಕಾರ್ಯಗತವಾಗಿಲ್ಲ. ಇವತ್ತು ಯೋಗಾ-ಯೋಗವಾಗಿ ಅಥವಾ ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರ ಪ್ರತಿಭಟನೆ ಕುರಿತು ಇವತ್ತಿನ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಅವರಿಗೆ ಒಂದು ಎಕರೆಗೆ 30 ಲಕ್ಷ ದಿಂದ 40 ಲಕ್ಷ ಕೊಡಬೇಕೆನ್ನುವ ಬೇಡಿಕೆಯನ್ನಿಟ್ಟಿದ್ದಾರೆ. ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅದು ಯಾವಾಗ ತೀರ್ಮಾನವಾಗುತ್ತದೆಂದು ನನಗೆ ಗೊತ್ತಿಲ್ಲ. ಯಾವಾಗ ತೀರ್ಮಾನ ಮಾಡುತ್ತಾರೆ? ನನಗೆ ಬೇಕಾಗಿರತಕ್ಕಂಥದ್ದು ಇವತ್ತಿನ ದಿನ ಏನು ಬೇಡಿಕೆಯನ್ನಿಟ್ಟಿದ್ದಾರೆ ಒಂದು ಎಕರೆ 30 ಲಕ್ಷದಿಂದ 40 ಲಕ್ಷ ಕೊಡುತ್ತೀರೋ, ಇಲ್ಲವೋ ಎಂಬುದು. ಭೂಸ್ವಾಧೀನ ಪ್ರಕ್ರಿಯೆಗೆ ಸಮಯವನ್ನು ನಿಗದಿಪಡಿಸಲಾಗಿದೆಯೇ? ಅಗತ್ಯವಿರುವಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ? ಇಲ್ಲವಾದ್ದಲ್ಲಿ ಕಾರಣವೇನು? ಎಷ್ಟು ಅವಧಿಯೊಳಗೆ ಭೂಸ್ವಾಧೀನ ಪ್ರಕ್ರಿಯೆ ಮಾಡುತ್ತೀರಿ? ಭೂಸ್ವಾಧೀನ ಪ್ರಕ್ರಿಯೆಗೆ ಹಣದ ಕೊರತೆ ಇರುವುದು ನಿಜವೇ?

(ಮುಂದು) . . .

(1159)/20.11.2017/11.40/ಎಸ್‌ಕೆ-ಬಿಎನ್‌ಎಸ್

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) ಮುಂದು:-**

ಇದರ ಜೊತೆಗೆ ಆಲಮಟ್ಟಿ ರೈತರು ನೀರನ್ನು ಪೋಲು ಮಾಡುತ್ತಿದ್ದಾರೆಂದು ಕೋರ್ಟ್‌ಗೆ ಹೋಗಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಆಲಮಟ್ಟಿ ರೈತರೇ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿ, ‘ಶೇಕಡ 30 ರಷ್ಟು ನೀರು ಪೋಲಾಗುತ್ತಿದೆ. ಕೊಟ್ಟಿರುವ 160 TMC ನೀರಿನಲ್ಲಿ 130 TMC ಅಷ್ಟೇ ಉಪಯೋಗಿಸುತ್ತಿರುವುದು. ಇವತ್ತು ಆ 130 TMC ಯೊಳಗೆ ಕೂಡ ನೀರು ಪೋಲಾಗುತ್ತಿದೆ’ ಎಂದು ಚಾರ್ಜ್ ಮಾಡಿರುವುದರಿಂದ ‘ಆಲಮಟ್ಟಿ ನೀರಿನ ಸಂರಕ್ಷಣೆ; ಸರ್ಕಾರ ಕೃಷ್ಣಾ ಜಲ ನಿಗಮಕ್ಕೆ ನೋಟಿಸ್’ ಹೈಕೋರ್ಟ್‌ನವರು ನೋಟಿಸ್ ಕೊಟ್ಟಿದ್ದಾರೆ. ಈ ರೀತಿ ಏಕೆ ಆಗುತ್ತಿದೆಯೆಂದು ಜವಾಬ್ದಾರಿ ಇರುವಂತಹ ಮಾನ್ಯ ಸಚಿವರು ಇದನ್ನು ತಿಳಿದುಕೊಂಡಿದ್ದೇರೆಂದು ನಾನು ಭಾವಿಸಿ, ಇದಕ್ಕೆ ಸ್ಪಷ್ಟನೆ ಕೊಡಬೇಕೆಂದು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರು

**ಶ್ರೀ ಟಿ.ಬಿ. ಜಯಚಂದ್ರ ( ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರು ಒಂದು ಪ್ರಮುಖವಾದಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಮೊದಲು ಪ್ರಾರಂಭವಾಗಿರುವಂತಹ ಆ ಒಂಭತ್ತು ಯೋಜನೆಗಳನ್ನು ನಾವು ಅದನ್ನು ಪೂರೈಸಬೇಕಾದರೆ, 17,000 ಕೋಟಿ ರೂಪಾಯಿಗಳಾಗುತ್ತಿತ್ತು. ಈಗ ಅದರ ಪರಿಷ್ಕೃತ ಅಂದಾಜು 51,000 ಕೋಟಿ ರೂಪಾಯಿಗಳಿಗೆ ಹೆಚ್ಚಾಗಿದೆ. ಅದಕ್ಕೆ ಮೂಲಕಾರಣವೇನೆಂದರೆ, “ನ್ಯಾಯಬದ್ಧ ಮತ್ತು ಪಾರದರ್ಶಕ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013” ರನ್ವಯ ನಾವು ಅದಕ್ಕೆ ಹಣ ಪಾವತಿ ಮಾಡಬೇಕಾಗಿರುವುದರಿಂದ cost escalate ಆಗುತ್ತದೆ. Cost escalate ಆಗಿರುವಂತಹ ಹಿನ್ನೆಲೆಯಲ್ಲಿ, ಈಗಾಗಲೇ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿ ಸಭೆ ಕರೆದಿದ್ದರು. ನಾನೂ ಕೂಡ ಅದರಲ್ಲಿದ್ದೇನೆ. ಮೊನ್ನೆ ದಿವಸ ನಾವು ಕಾಲವನ್ನು ನಿಗದಿ ಮಾಡಿದ್ದೆವು. ಆ ದಿನ ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ನಾಲ್ಕು ಮತ್ತು ಐದನೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾರೀಖಿನಂದು ಎರಡು ದಿವಸಗಳಲ್ಲಿ ಮೂರು ಜಿಲ್ಲೆಗಳಿಗೆ ಭೇಟಿ ಕೊಡುತ್ತಿದ್ದೇವೆ. ಆಗ ಅವರ ಅಹವಾಲುಗಳನ್ನು ಕೇಳಿ, ಅದಕ್ಕೆ ಸೂಕ್ತವಾದಂತಹ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಅಲ್ಲಿ ಬಂದಂತಹ ಸಲಹೆಯ ಹಿನ್ನೆಲೆಯಲ್ಲಿ, ಎಷ್ಟು ಹಣ ಕೊಡಬೇಕೆಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ. ಆಲಮಟ್ಟಿ ಜಲಾಶಯದಡಿಯಲ್ಲಿ 75,563 ಎಕರೆ ಭೂಮಿ ನೀರಿನಲ್ಲಿ ಮುಳಗಡೆಯಾಗುತ್ತಿದೆ. ಪುನರ್ ವಸತಿ ಕೇಂದ್ರಗಳ ಸ್ಥಾಪನೆಗಾಗಿ (20 ಗ್ರಾಮಗಳಿಗಾಗಿ) ಹಾಗೂ ಬಾಗಲಕೋಟೆ ಪಟ್ಟಣ ಪುನರ್ ವಸತಿ ಒಳಗೊಂಡು 6,467 ಎಕರೆಗಳು ಮತ್ತು ಒಂಭತ್ತು ಉಪ ಯೋಜನೆಗಳ ಕಾಲುವೆ ಜಾಲದ ನಿರ್ಮಾಣಕ್ಕಾಗಿ 51,837 ಎಕರೆಗಳು ಒಟ್ಟು 1,33,867 ಎಕರೆ ಭೂಮಿ ಬೇಕಾಗಿದೆ. ಈಗಾಗಲೇ ಭೂಸ್ವಾಧೀನ ಕಾಯ್ದೆ ಪ್ರಾರಂಭಗೊಂಡಿದೆ. ಹಳೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ 4020 ಎಕರೆ ಜಮೀನಿಗೆ ಅಧಿಸೂಚನೆಯನ್ನು ಹೊರಡಿಸಿದ ನಂತರ 69,781 ಎಕರೆ ಭೂಸ್ವಾಧೀನಕ್ಕೆ Section 4(1) of the Land Acquisition Act ಪ್ರಕಾರ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸುಮಾರು 11,734 ಎಕರೆ ಜಮೀನನ್ನು ಭೂ ಸ್ವಾಧೀನಕ್ಕೆ ಐತೀರ್ಪನ್ನು ನೀಡಿದೆ. ಬಾಕಿ ಉಳಿದಂತಹ ಪ್ರಸ್ತಾವನೆಗಳು Joint Measurement Certificate (JMC) ಮತ್ತು ಐತೀರ್ಪಿನ ಹಂತದಲ್ಲಿದೆ. ಬಾಕಿ ಉಳಿದಂತಹ 61,789 ಎಕರೆ ಭೂಸ್ವಾಧೀನತೆ ಪ್ರಕ್ರಿಯೆ ಚಾಲನೆಯಲ್ಲಿದೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಸಲಹೆ ಏನೆಂದರೆ, ಅಣೆಕಟ್ಟುಗಳನ್ನು ಕಟ್ಟುವಾಗ, ನೀರಾವರಿ ಆಗುವಂತಹ ಜಾಗವಿದೆ. ಮುಳುಗಡೆಯಾಗುವಂತಹ ಜಾಗವಿದೆ. ನೀವು ಮುಳುಗಡೆಯಾಗುವಂತಹ ಜಾಗವನ್ನು ಸ್ವಾಧೀನ ಪಡಿಸಿಕೊಂಡು ಭೂ ಮಾಲೀಕರಿಗೆ ಪರಿಹಾರವನ್ನು ಹಣದ ರೂಪದಲ್ಲಿ ಕೊಡಲಾಗುತ್ತದೆಯೇ? ನನ್ನ ಸಲಹೆಯನ್ನು ಬಹಳ ವರ್ಷಗಳಿಂದ ಹೇಳುತ್ತಿದ್ದೇನೆ. ನೀರಾವರಿಯಾಗುವಂತಹ ಜಾಗದಲ್ಲಿಯೂ ಕೂಡ ಯಾರಿಗೆ ಜಮೀನು ಜಾಸ್ತಿ ಇರುತ್ತದೆ ಅಂತಹವರ ಹತ್ತಿರ 10 ಎಕರೆಗಳನ್ನು, 100 ಎಕರೆಗಳಿದ್ದರೆ 10 ಎಕರೆಯನ್ನು, ಇನ್ನೊಬ್ಬರಿಗೆ 200 ಎಕರೆಗಳಿದ್ದರೆ 20 ಎಕರೆಗಳನ್ನು ಈ ದರದಲ್ಲಿ ಶೇಕಡ 10 ರಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡು, ಇಲ್ಲಿ ಯಾರ ಜಮೀನು ಮುಳುಗಡೆಯಾಗಿರುತ್ತದೆ. ಅಂಥವರಿಗೆ ಅಲ್ಲಿ ಜಮೀನನ್ನು ಕೊಡಬಹುದೇ ಎನ್ನುವಂತಹದ್ದನ್ನು ನಾನು State Planning Board deputy chairman ಆಗಿದ್ದಾಗ ಸಲಹೆ ಮಾಡಿದ್ದೆನು. ಅದನ್ನು ಮಾಡುವುದಕ್ಕಾಗುತ್ತದೆಂದು ಯೋಚನೆ ಮಾಡಬಹುದೇ?

**ಸಭಾಪತಿಯವರು:-** ಇದೊಂದು ಸಲಹೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ತಾವು ಸಲಹೆಯನ್ನು ಕೊಟ್ಟಿದ್ದೀರಿ. ಅದು ಸಲಹೆ ಉತ್ತಮವಾಗಿದೆ. ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಹೆಚ್ಚು ಜಮೀನು ಹೊಂದಿರುವಂಥವರಿಂದ ಶೇಕಡಾ 10ರಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡು, ಭೂಮಿಯನ್ನು ಕಳೆದುಕೊಂಡಂಥವರಿಗೆ ಕೊಡುವಂತಹ ತತ್ವ ಒಳ್ಳೆಯದು. ಅದು ಕಾನೂನು ರೀತಿಯಲ್ಲಿ ನೋಡಿದಾಗ, ಅದು ಸಾಧ್ಯವಾಗುತ್ತದೆಯೋ ಎನ್ನುವಂಥದ್ದು ಮತ್ತು ಅವರಿಗೆ ಭೂಮಿಯನ್ನು ಕೊಡುವಂತಹ ಪ್ರಸಂಗ ಬಂದಾಗ, ನಮಗೆ ಏನು ವೆಚ್ಚ ಬರುತ್ತದೆ ಎನ್ನುವಂಥದ್ದನ್ನು ಸಹ ವಿಚಾರ ಮಾಡಬೇಕಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಭೂಸುಧಾರಣಾ ಕಾಯಿದೆಯಡಿಯಲ್ಲಿ 54 ಎಕರೆಗಳ ಮೇಲಿದ್ದರೆ land ceiling ನ ಅಡಿಯಲ್ಲಿ ಬಂದಿರುವ ಭೂಮಿಯನ್ನು ಎಷ್ಟು ಜನ ಬಡವರಿಗೆ ಹಂಚಿದ್ದೀರಿ ಎನ್ನುವಂತಹ ಮಾಹಿತಿ ಇದೆಯಲ್ಲವೇ?

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಭೂಸುಧಾರಣಾ ಕಾಯಿದೆ ಪ್ರಕಾರ 54 ಎಕರೆ ಮೇಲೆ ಈಗ ಯಾರ ಹತ್ತಿರವೂ ಭೂಮಿ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ):-** ಮಾನ್ಯ ಸಭಾಪತಿಯವರೆ, ಕೆಲವು ಕಡೆ Benami transactions ನಲ್ಲಿ ಇವೆ. (interruption) ಬೇನಾಮಿ ಹೆಸರಿನಲ್ಲಿವೆ. ಇಂತಹ ಆಸ್ತಿಗಳ ಬಗ್ಗೆ ಏನಾದರೂ ಒಂದು ತೀರ್ಮಾನವನ್ನು ಮಾಡುವುದು ಉತ್ತಮ. ಏಕೆಂದರೆ, ಸಾಂದರ್ಭಿಕವಾಗಿ ಈ ವಿಚಾರ ಬಂದಂತಹ ಹಿನ್ನೆಲೆಯಲ್ಲಿ ನಾನು ಈ ಸಲಹೆಯನ್ನು ನೀಡಿದ್ದೇನೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಪಾವಗಡದಲ್ಲಿ ಇರಬಹುದು, ಆದರೆ ಅಲ್ಲಿ ಸಿಗುವುದು ಕಷ್ಟವಾಗಬಹುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಬಹುಶಃ ಸಿರಾದಲ್ಲಿ ಇಂಥದ್ದು ಜಾಸ್ತಿ ಇರಬಹುದು. ಆದ್ದರಿಂದ ಆ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕಾಗುತ್ತದೆ.

**ಸಭಾಪತಿಯವರು:-** ತಾವು ಒಳ್ಳೆಯ ಸಕಾರಾತ್ಮಕ ಮನಸ್ಸಿನಿಂದ ಹೇಳಿದ್ದೀರಿ. ಕಾನೂನು ತೊಡಕು ಇದ್ದರೆ, ಕಾನೂನು ಬದಲಾವಣೆ ಮಾಡಲು ನಮ್ಮ ಸದನಕ್ಕೆ ತನ್ನಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರ ಸಲಹೆ ಉತ್ತಮವಾಗಿದೆ ಎಂದಷ್ಟೇ ನಾನು ಈ ಸಂದರ್ಭದಲ್ಲಿ. ಹೇಳಬಹುದಾಗಿದೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕೃಷ್ಣಾ ಮೇಲ್‌ದಂಡೆ ಯೋಜನೆಗಳ ಕಾಮಗಾರಿಗಳಿಗೆ 51148.94 ಕೋಟಿ ರೂಪಾಯಿಗಳನ್ನು ನೀಡುವುದಾಗಿ ತಿಳಿಸಲಾಗಿತ್ತು. ಆದರೆ, ಇದು ಬಜೆಟ್‌ನಲ್ಲಿ include ಆಗಲಿಲ್ಲ. ಇದನ್ನು ಬಜೆಟ್‌ನಲ್ಲಿ ಏಕೆ include ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈಗ ಬರುವಂತಹ ಬಜೆಟ್‌ನಲ್ಲಿಯಾದರೂ include ಮಾಡಲಾಗುತ್ತದೆಯೇ?

**ಸಭಾಪತಿಯವರು:-** ಇದು ನೋಡಿ ತಾಂತ್ರಿಕ ಸಮಸ್ಯೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಆಡಳಿತಾತ್ಮಕ ಅನುಮೋದನೆ. ಆದರೆ ಇದು ಬಜೆಟ್‌ನಲ್ಲಿ include ಆಗಲಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಬಜೆಟ್ ಎಂದು ಇರುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗಳ ಕಾಮಗಾರಿಗಳಿಗೆ lump sum amount grant ಮಾಡುತ್ತೇವೆ. ಪ್ರತಿ ವರ್ಷ 10,000 ಕೋಟಿ ರೂಪಾಯಿಗಳಿಂದ 12,000 ಕೋಟಿ ರೂಪಾಯಿಗಳವರೆಗೆ ಅನುದಾನವನ್ನು ಬಿಡುಗಡೆ ಮಾಡುತ್ತೇವೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 300% cost escalate ಆಗಿರುವುದರಿಂದ ಸರ್ಕಾರ ಇದಕ್ಕೆ ಇಟ್ಟಿರುವ ಹಣವೇ ಸಾಕಾಗುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು ಸಚಿವ ಸಂಪುಟ, ಉಪ ಸಮಿತಿ ಹೋಗಿ, ನಾವು ಸರ್ಕಾರಕ್ಕೆ ಶಿಫಾರಸ್ಸು ಮಾಡಿದಂತಹ ಸಂದರ್ಭದಲ್ಲಿ ಬಹಶಃ ಹೆಚ್ಚು ಹಣವನ್ನು ತೊಡಗಿಸಬೇಕಾಗುತ್ತದೆ. ಹಣವನ್ನು ಇದೆಯೋ, ಇಲ್ಲವೋ ಎನ್ನುವ ಪ್ರಶ್ನೆ ಬರುವುದಿಲ್ಲ. ಬಜೆಟ್‌ನಲ್ಲಿ ಕೊಟ್ಟಿರುವುದಕ್ಕಿಂತ ಹೆಚ್ಚಿನದಾಗಿ ನಾವು ಕೊಡಬೇಕಾಗುತ್ತದೆ. ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್‌ಗಳಿಗೆ ಎತ್ತರಿಸಬೇಕಾದಂತಹ ಸಂದರ್ಭದಲ್ಲಿ, ಇವತ್ತು ಐತೀರ್ಪು ಯಾವತ್ತಾದರೂ ಬರಬಹುದು. ನಾವು ಒಂದು ಬಾರಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದೇವೆ. ಆಂಧ್ರ ಪ್ರದೇಶದವರು ಹೋಗಿದ್ದಾರೆ ಮತ್ತು ಕರ್ನಾಟಕದವರು ಕೂಡ ಹೋಗಿದ್ದೇವೆ. ಅಲ್ಲಿ Gazette ಆದ ಮೇಲೆ ನಾವು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯತೆಯಿರುತ್ತದೆ. ಬಳಕೆ ಮಾಡುವುದಕ್ಕಿಂತ ಆರು ತಿಂಗಳ ಮುನ್ನವೇ, ನಾವು ಕಾಮಗಾರಿಗಳು, ಭೂಸ್ವಾಧೀನ, rehabilitation ಎಲ್ಲವನ್ನೂ ಮುಗಿಸಬೇಕಾಗಿದೆ. ಆದ್ದರಿಂದ ತ್ವರಿತವಾಗಿ ಇದನ್ನು ಮಾಡಬೇಕಾಗಿರುವ ಅನಿವಾರ್ಯತೆ ಇರುವುದರಿಂದ, ಯಾವುದೇ ರೀತಿಯ ಹಣಕಾಸು ತೊಂದರೆಯಾಗುವುದಿಲ್ಲ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದು ಕೇಂದ್ರ ಸರ್ಕಾರದ Gazette ನಲ್ಲಿ ಬಂದಿದೆಯೇ?

**ಸಭಾಪತಿಯವರು:-** ಅದಕ್ಕೆ ಏನು ಸಂಬಂಧವಿಲ್ಲ. ನೀವು ಕೇಳಿರುವ ಪ್ರಶ್ನೆಯೇ ಬೇರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಅದು Gazette ನಲ್ಲಿ ಬಂದಿಲ್ಲ.

**ಸಭಾಪತಿಯವರು:-**ಬಜೆಟ್‌ನೊಳಗೆ ಬಂದಿದೆಯಾ. ಬಜೆಟ್‌ನಲ್ಲಿ ಇಲ್ಲದಿದ್ದರೂ ಕೂಡ ಕೊಡುತ್ತೇವೆಂದು ತಾವು ಹೇಳುತ್ತೀರಾ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಏನು ತೊಂದರೆ ಇಲ್ಲ. ಅದಕ್ಕೆ ಕೊಡಲೇಬೇಕು. It is a priority.

**ಸಭಾಪತಿಯವರು:-**O.K., fine. ಮಾನ್ಯ ಇಟಗಿಯವರು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4485**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಯಲ್ಲಿ ನಿಗಮದ ಅನುದಾನದಡಿಯಲ್ಲಿ ಸುಮಾರು 10 ಕಾಮಗಾರಿಗಳು ಹಾಗೂ National Bank for Agriculture and Rural Development (NABARD) ನಿಂದ ಬಂದಂತಹ ಸಹಾಯಧನದ ಹಣದಿಂದ 12 ಕಾಮಗಾರಿಗಳನ್ನು ಕೈಗೊಂಡಿದ್ದೇವೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಈ ನದಿ ಪಾತ್ರದಲ್ಲಿ ಸುಮಾರು 70 ರಿಂದ 80 ಹಳ್ಳಿಗಳು ಇರುತ್ತದೆ. ಇವತ್ತು distributory offtake ನಿಂದ ನೀರು ಏನು ಉಪಯೋಗವಾಗುತ್ತಿದೆ. ಎಲ್ಲಾ ಹೊಲಗಳಿಂದ ನಾಲ್ಕು tail off ಮಾಡಿರುತ್ತಾರೆ. ಈ ನಾಲೆಗಳು ಏನಾಗುತ್ತವೆಂದರೆ, ಕೊನೆಗೆ ನದಿಗಳಿಗೆ tail off ಆಗುವಂತಹ ಸಂದರ್ಭದಲ್ಲಿ, ಅವು ಸಾಕಷ್ಟು ವ್ಯಾಪ್ತಿಯಲ್ಲಿ ನೀರು ಜಾಸ್ತಿಯಾಗಿ ಬಿಡುತ್ತದೆ. ಇವತ್ತು ಉದಾಹರಣೆಗೆ ನಮ್ಮ ಗ್ರಾಮದಿಂದ ಸಲಕ್ಯಾಪೂರ್ ಎಂಬ ಒಂದು ಗ್ರಾಮವಿದೆ. ಮಧ್ಯೆ ನಾಲಾ ದಾಟಿಕೊಂಡು ಹೋಗಬೇಕು. ಪ್ರತಿನಿತ್ಯ ಕೂಲಿಗೆ ಹೋಗುವಂತಹ ಹೆಣ್ಣು ಮಕ್ಕಳು, ಅವರು ಪಟ್ಟಂತಹ ಕಷ್ಟ ನಾವು ನೋಡುವುದಕ್ಕೆ ಸಹಿತ ಆಗುವುದಿಲ್ಲ ಪರಿಸ್ಥಿತಿಯಿದೆ. ಏಕೆಂದರೆ ಅಲ್ಲಿ ನೀರು ಹೆಚ್ಚು ಇರುತ್ತದೆ. ಅವರು ತಮ್ಮ ಉಡುಪನ್ನು ಮೇಲೇರಿಸಿಕೊಂಡು ಹೋಗುವಂತಹ ಸಂದರ್ಭವಾಗಿದೆ. ಅವರು ಹೋಗಲಿಲ್ಲವೆಂದರೆ ಅವರಿಗೆ ಕಷ್ಟ, ಏಕೆಂದರೆ ಅವರಿಗೆ ಕೂಲಿ ಮಾಡಲಿಲ್ಲವೆಂದರೆ, ದಿನ ಊಟ ಸಿಗುವುದಿಲ್ಲ.

**ಸಭಾಪತಿಯವರು:-** ಇದು ಬಹಳ ಒಳ್ಳೆಯ ಸಮಸ್ಯೆಯಾಗಿದೆ. ತಾವು ಇದಕ್ಕೆ ಏನು ಹೇಳುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇಟಗಿ ಯಿಂದ ಮಾಟಪಳ್ಳಿ, ಇಟಗಿ ಯಿಂದ ಸಲಕ್ಯಾಪೂರ್-ಯಿಂದ ಹೇರೂರ್ ಚಿಕ್ಕಬೂದೂರ್‌ನಿಂದ ಕಲ್ಲಾಹಳ್ಳಿ, ಕೊಪ್ಪರ-ಪರಾಪೂರ್, ಮೊಸರಕಲ್ಲು-ಚಿಕ್ಕಬೂದೂರ್ ಹಿರೇಬುದೂರ್-ಚಿಕ್ಕಬೂದೂರ್,

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರಷಣಗಿ-ಹೂನೂರ್, ಮಸಾಲ್-ಕೆಸರ್ನ್ಹಾಳ್, ಬೂದಿನಾಳ್-ಕೆಸರ್ನ್ಹಾಳ್ ಹಿರೋಬೂದೂರ್-ಸಾವಂತಗೇರೆ ಮಾಟಪಳ್ಳಿ- ಸಾವಂತಗೇರೆ ರಾಯಚೂರು ತಾಲ್ಲೂಕಿಗೆ ಮೀಯಾಪುರ ಏನಿದೆ 18 ನೇ distributory ನಲ್ಲಿ seepage water ಏನಿದೆ, ಅಲ್ಲಿ ಪ್ರತಿ ವರ್ಷ culvert ನ್ನು ಹೊಡೆದು ಸುಮಾರು 150 ಎಕರೆ ಭೂಮಿ ನಾಶವಾಗುತ್ತದೆ. ಗ್ರಾಮದಲ್ಲಿ ಅರ್ಧ ನೀರು ನಿಲ್ಲುತ್ತದೆ.

**ಸಭಾಪತಿಯವರು:-** ಇದಕ್ಕೆ ಏನು ಮಾಡಬೇಕೆಂದು ಹೇಳುತ್ತೀರಾ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಲ್ಲಿ ಸೇತುವೆಗಳನ್ನು ಮಾಡಬೇಕು.

**ಸಭಾಪತಿಯವರು:-**ಅದನ್ನು ಹೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, Box Culvert ಗಳನ್ನು ಮಾಡುವುದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಆ ಜಾಗಗಳಿಗೆ ಸೇತುವೆಗಳನ್ನು ಕೇಳುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗ ನದಿ ತೀರದ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ, ಈ ಸಮಸ್ಯೆಗಳು ಇದ್ದೇ ಇರುತ್ತದೆ. ಈಗಾಗಲೇ ನಾಲೆಗೆ ಅಡ್ಡಲಾಗಿ ಕಟ್ಟುವಂತಹ Box Culvert ಗಳು ಇರಬಹುದು. ಈ ಯೋಜನೆಗಳಿಂದ ಈಗಾಗಲೇ 22 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಇಷ್ಟಾದರೂ ಕೂಡ, ಇನ್ನು ಕೂಡ ಪ್ರಸ್ತಾವನೆಗಳಿವೆ ಎಂದು ಹೇಳಿದರೆ, specific ಆಗಿ ಇಂತಹದ್ದಕ್ಕೆ, ಇಂತಹದು ಮತ್ತು ಇಂತಹ ಕಡೆಯಾಗಬೇಕೆಂದು ಕೊಟ್ಟರೆ, ಅದನ್ನು consider ಮಾಡುತ್ತೇನೆ.

**ಸಭಾಪತಿಯವರು:-**ಅದನ್ನು ಬರೆದುಕೊಡಿ.

(ಮುಂದು...)

(1160)22.11.2017/11.50/ಟಿಸಿಹೆಚ್/ಬಿಎನ್‌ಎಸ್

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಇನ್ನೂ ಸುಮಾರು 30 ರಿಂದ 40 ಬ್ರಿಡ್ಜ್‌ಗಳ ಕಾಮಗಾರಿಗಳು ಬಾಕಿ ಇವೆ.

**ಸಭಾಪತಿಯವರು:-** ಸುಮಾರು 30 ರಿಂದ 40 ಬ್ರಿಡ್ಜ್‌ಗಳು ಬಾಕಿ ಇವೆ ಎಂದು ಹೇಳಬೇಡಿ.

**ಶ್ರೀ ಟಿ.ಬಿ.ಜಯಚಂದ್ರ (ಶ್ರೀ ಎಂ.ಬಿ.ಪಾಟೀಲ್, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, 22 ಕಾಮಗಾರಿಗಳನ್ನು ಮುಗಿಸಿದ್ದೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಈಗ ಈ Managing Director, Krishna Bhagya Jala Nigam Ltd. (KBJNL) ರವರಿಗೆ ಪತ್ರವನ್ನು ಕಳುಹಿಸಿಕೊಡತಕ್ಕಂತಹ ಕೆಲಸವನ್ನು ನಾನು ಮಾಡುತ್ತೇನೆ. ಆದರೆ ಮಂಜೂರು ಮಾಡಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಒಂದು ವರ್ಷವಾಗಿದೆ ಎಂದು ಹೇಳಿದರೆ, ಮತ್ತೆ ಇನ್ನೂ ಹೊಸ ಹೊಸ ಸಮಸ್ಯೆಗಳು ಹುಟ್ಟುತ್ತಲೇ ಇರುತ್ತವೆ. ಇದು ನಿರಂತರ ಪ್ರಕ್ರಿಯೆಯಾಗಿರುವುದರಿಂದ, ಮಾನ್ಯ ಸದಸ್ಯರು ಹೊಸದಾಗಿ ಯಾವ್ಯಾವುದಕ್ಕೆ ಪ್ರಸ್ತಾವನೆ ಕೊಡುತ್ತಾರೋ ಅದನ್ನು ಪರಿಗಣಿಸುತ್ತೇವೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ನಾನು ಹೇಳುವುದನ್ನು ಸ್ವಲ್ಪ ಗಮನಿಸಿ, ಈ ಪ್ರಶ್ನೆಗೆ ತಮಗೆ ಸಿಕ್ಕಿರುವ ಉತ್ತರದ ಲಾಭ ಪಡೆಯುವುದಕ್ಕೆ ನಾನೊಂದು ಸಣ್ಣ ಸಲಹೆಯನ್ನು ಕೊಡುತ್ತೇನೆ. ಮಾನ್ಯ ಸಚಿವರು ಹೇಳಿದಂತೆ, ಪ್ರತಿಯೊಂದನ್ನು ನೀವು generalize ಮಾಡಬೇಡಿ. ಬೇರೆ ಬೇರೆ ಅರ್ಜಿಗಳನ್ನು ತಯಾರಿಸಿ Managing Director, KBJNL ಅವರಿಗೆ ಕೊಡಿ, ನೋಡೋಣ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಖಾಂತರ ಈ ಪ್ರಾಜೆಕ್ಟ್ ಮಾಡತಕ್ಕಂತಹ ಎಲ್ಲರಿಗೂ ಏನು ಹೇಳಲು ಬಯಸುತ್ತೇನೆಂದರೆ, ಯಾವುದೇ ಒಂದು ಪ್ರಾಜೆಕ್ಟ್‌ನ್ನು ಮಾಡಬೇಕಾದರೆ, ಎಲ್ಲಾ ಅಂಶಗಳನ್ನು ಗಮನಿಸಬೇಕಾಗುತ್ತದೆ.

**ಸಭಾಪತಿಯರು**:- ಮಾನ್ಯ ಸದಸ್ಯರೇ, ಅವರು ಮಾಡಿಲ್ಲವಲ್ಲ, ಈಗ ಅವರ ಹತ್ತಿರ ಮಾಡಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ಆದರೆ ಇವರು ಕೇವಲ 10 ಬ್ಯಾರೇಜ್‌ಗಳನ್ನು ಕೊಟ್ಟು, ಕೊಟ್ಟಿದ್ದೇವೆಂದರೆ ಆಗುತ್ತದೆಯೇ? ಅಲ್ಲಿ ರೈತರು ಮತ್ತು ಹೆಣ್ಣುಮಕ್ಕಳು ಪ್ರತಿದಿನ ನಾಲಾಗಳನ್ನು ದಾಟಿಕೊಂಡು ತಮ್ಮ ತಮ್ಮ ಜಮೀನುಗಳಿಗೆ ಮತ್ತು ಅಕ್ಕಪಕ್ಕದ ಗ್ರಾಮಗಳಿಗೆ ಹೋಗಬೇಕಾಗುತ್ತದೆ, ಹೀಗಾದರೆ ಅವರು ಹೇಗೆ ಹೋಗಬೇಕು ಹೇಳಿ? ಆದರೆ ಮಳೆಗಾಲದಲ್ಲಿ ಅವರ ಹೊಲಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಅವರು ಹೋಗಲಿಲ್ಲವೆಂದರೆ ಊಟ ಸಿಗುವುದಿಲ್ಲ.

**ಸಭಾಪತಿಯವರು**:- ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ಬೇಗ ಒಂದು ಅರ್ಜಿಯನ್ನು ತಯಾರಿಸಿ KBJNLನ Managing Director ರವರಿಗೆ ಕೊಡಿ. ಮಾನ್ಯ ಸಚಿವರು ಅದನ್ನು ಮಾಡಿಸಿ ಕೊಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಒಂದು ಪಟ್ಟಿಯನ್ನು ತಯಾರು ಮಾಡಿ, KBJNL ನ Managing Director ರವರಿಗೆ ಒಂದು ಕಾಪಿಯನ್ನು ಮತ್ತು ಮಾನ್ಯ ಸಚಿವರಿಗೆ ಒಂದು ಕಾಪಿಯನ್ನು ಕಳುಹಿಸುತ್ತೇನೆ. ಅದನ್ನು ಮಂಜೂರು ಮಾಡಿಸುವಂತಹ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಖಂಡಿತ ಮಾಡುತ್ತೇವೆ.

**ಸಭಾಪತಿಯವರು**:- ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 4600**

**(ಉತ್ತರ ಲಗತ್ತಿಸಿದೆ)**

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ಕೇಳಿರುವಂತಹ ಪ್ರಶ್ನೆಯು The Air (Prevention and Control of Pollution) Act, 1981 ಮತ್ತು The Water (Prevention and Control of Pollution) Act, 1974 ಗೆ ಸಂಬಂಧಿಸಿದ್ದು. ಇವು ಪರಿಸರವನ್ನು ಸಂರಕ್ಷಿಸುವುದಕ್ಕೆ ಇರತಕ್ಕಂತಹ ಎರಡು ಪ್ರಮುಖವಾದಂತಹ ಕಾಯ್ದೆಗಳಾಗಿವೆ. ಭಾರತ ಸರ್ಕಾರ ಈ ಕಾಯ್ದೆಗಳನ್ನು ಮಾಡಿರುತ್ತದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಯ್ದೆಯನ್ವಯ ನಮ್ಮ ಇಡೀ ದೇಶದಲ್ಲಿ ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕೆನ್ನುವುದು ಬಹಳ ಪ್ರಮುಖವಾದಂಥದ್ದು. ಇದರಲ್ಲಿ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಇವೆರಡೂ ಬರುತ್ತದೆ. ಯಾವುದೇ ಒಂದು ಕೈಗಾರಿಕೆಯಾಗಿರಬಹುದು, ಇದನ್ನು establish ಮಾಡಬೇಕಾದರೆ, ಸಂಬಂಧಪಟ್ಟವರ ಬಳಿ consent ಅನ್ನು ತೆಗೆದುಕೊಳ್ಳಲೇಬೇಕು. ತದನಂತರ, operate ಮಾಡಬೇಕಾದರೆ, ಅವರ consent ತೆಗೆದುಕೊಳ್ಳಬೇಕು. ಈ ಎರಡನ್ನೂ ತೆಗೆದುಕೊಂಡಾಗ ಮಾತ್ರ ಅವನು ನಮ್ಮ ಕಾಯ್ದೆಯ ಪ್ರಕಾರ ಸಂಪೂರ್ಣವಾಗಿ ಒಂದು ಕೈಗಾರಿಕೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಆದರೆ ಇವರು ಹಲವಾರು ಪ್ರಕರಣಗಳಲ್ಲಿ ಅಂಕಿ-ಅಂಶ ಕೊಟ್ಟಿದ್ದಾರೆ. ಹಲವಾರು ಪ್ರಕರಣಗಳಲ್ಲಿ ಈ Acts ನ ಪ್ರಕಾರ ಯಾರು consent ನ್ನು ತೆಗೆದುಕೊಳ್ಳುವುದಿಲ್ಲ ಅಂತಹವರಿಗೆ Administrative Charges ನ್ನು ಹಾಕಿ regularise ಮಾಡುವುದಕ್ಕೆ 2007ನೇ ಸಾಲಿನಿಂದ ಒಂದು ಕ್ರಮ ತೆಗೆದುಕೊಂಡಿದೆ. ಹಾಗಾಗಿ, ನನ್ನ ಪ್ರಶ್ನೆ ಏನೆಂದರೆ, ಇವತ್ತಿನ ದಿವಸ ಆ ರೀತಿ ತೆಗೆದುಕೊಳ್ಳುವುದಕ್ಕೆ ಕಾಯ್ದೆಯಲ್ಲಿ ಅವಕಾಶವಿದೆಯೇ? ಒಂದು ವೇಳೆ ಕಾಯ್ದೆಯಲ್ಲಿ ಅವಕಾಶವಿದ್ದರೆ, ಯಾವ ಒಂದು ಅಂಶ ಇದೆಯೋ ಅದರ ಪ್ರಕಾರ ಕೊಡಬೇಕಾಗುತ್ತದೆ. ಏಕೆಂದರೆ, ಇದು ಒಂದು ಕೇಂದ್ರ ಸರ್ಕಾರದ ಕಾಯ್ದೆಯಾಗಿರುವುದರಿಂದ, ಅದನ್ನು ನಾವು ತಿದ್ದುಪಡಿ ಮಾಡುವುದಕ್ಕೆ ಅಥವಾ ಅದರ ವಿರುದ್ಧವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಆ ಕಾಯ್ದೆಯಲ್ಲಿ ಏನು ಹೇಳಲಾಗಿದೆಯೋ ಅದರಂತೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಸಾವಿರಾರು establishments ಬೆಂಗಳೂರಿನಲ್ಲಿ ಹೆಚ್ಚಾಗಿ ಇರಬಹುದು ಮತ್ತು ಕರ್ನಾಟಕದಾದ್ಯಂತ ಇರತಕ್ಕಂತಹದ್ದು ಎಲ್ಲವೂ ಸೇರಿದಂತೆ, Administrative Charges ನ್ನು ತೆಗೆದುಕೊಂಡಿದ್ದಾರೆ. ಈ ರೀತಿ Administrative Charges ನ್ನು ತೆಗೆದುಕೊಂಡಿರುವಂಥದ್ದು, ಇದು ಕ್ರಮಬದ್ಧವಾಗಿ ಇರತಕ್ಕಂಥದ್ದಾಗಿದೆಯೇ? ಇನ್ನೊಂದು ವಿಷಯ ಹೇಳುತ್ತೇನೆ, ಈ ಹಿಂದೆ ಸದಸ್ಯರಾದಂತಹ ಶ್ರೀ ಮೋಹನ್ ಕೊಂಡಜ್ಜಿಯವರು ಇದ್ದರು, ಅವರು ಆ ಮಂಡಳಿಯಲ್ಲಿ ತೆಗೆದುಕೊಂಡಿದ್ದ Administrative Charges ನ್ನು ವಾಪಸ್ಸು ಕೊಟ್ಟಿದ್ದಾರೆಂದು ಹೇಳುತ್ತಿದ್ದರು. ಅಂದರೆ, regularise ಮಾಡಿರುವುದು ತಪ್ಪಾಗಿದೆಯೆಂದು ವಾಪಸ್ಸು ಕೊಟ್ಟಿದ್ದಾರೆ. ಅಲ್ಲಿಗೆ ಈ Establishments ಆಗಿರುವುದು ಸುಮಾರು 2007ರಿಂದ ನಡೆದುಕೊಂಡು ಬಂದಿರತಕ್ಕಂತಹ ಕೈಗಾರಿಕೆಗಳು ಇರಬಹುದು ಅಥವಾ ಕಟ್ಟಡಗಳು ಹಾಗೂ ಇನ್ನಿತರೆ ಯಾವುದೇ ಇರಬಹುದು. ಅದು ಹಾಗೆಯೇ ಮುಂದುವರೆದಿದ್ದರೆ, ಕಾಯ್ದೆಯನ್ನು ಉಲ್ಲಂಘನೆ ಮಾಡಿದ್ದಾರೆಂದು ಈ Administrative Charges ಹಾಕಿದ್ದು, ಅದನ್ನು withdraw ಮಾಡಿ, Closure Order ಕೊಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಆ Closure Order ನ್ನು ಎಷ್ಟಕ್ಕೆ ಕೊಟ್ಟಿದ್ದಾರೆ ಎನ್ನುವುದು ಬಹಳ ಮುಖ್ಯ. ಇವತ್ತಿನ ದಿವಸ ಈ ಉಲ್ಲಂಘನೆ . . .

**ಸಭಾಪತಿಯವರು**:- ಮಾನ್ಯ ಪಿ.ಆರ್.ರಮೇಶ್‌ರವರೇ, ತಮ್ಮ ಪ್ರಶ್ನೆ ಏನು? What is your question?

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಆ Administrative Charges ತೆಗೆದುಕೊಳ್ಳುವುದಕ್ಕೆ ಕಾಯ್ದೆಯಲ್ಲಿ ಅವಕಾಶವಿದ್ದಲ್ಲಿ, ಆ ಕಾಯ್ದೆಯ ಯಾವ ಒಂದು ಸೆಕ್ಷನ್ ಹೇಳುತ್ತದೆ ಮತ್ತು ಈ Administrative Charges ತೆಗೆದುಕೊಳ್ಳುವುದಕ್ಕೆ ಬೋರ್ಡ್‌ಗೆ ಅಧಿಕಾರ ಯಾರು ಕೊಟ್ಟರು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಿ.ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎತ್ತಿರುವಂತಹ ಪ್ರಶ್ನೆ ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ. 2007ರಲ್ಲಿ ಬೋರ್ಡ್ ಒಂದು ತೀರ್ಮಾನ ತೆಗೆದುಕೊಳ್ಳುತ್ತದೆ. consent ತೆಗೆದುಕೊಳ್ಳದೇ ಪ್ರಾರಂಭ ಮಾಡಿರತಕ್ಕಂಥ ಉದ್ದಿಮೆ ಅಥವಾ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನಾವುದೇ ಇರಬಹುದು, ಅದಕ್ಕೆ ಐದು ಪಟ್ಟು ಮೌಲ್ಯ ವಿಧಿಸಿ, ಅದನ್ನು regularise ಮಾಡಬಹುದೆಂದು ಹೇಳುವಂತಹ ರೀತಿಯಲ್ಲಿ, ಒಂದು ಕ್ರಮವನ್ನು ಮಾಡಬೇಕೆಂದು ಮಾಡಿದ್ದಾರೆ, ಅದು ಮಾಡಿರುವುದು ತಪ್ಪಾಗಿದೆ. 2007ರಲ್ಲಿ ಐದು ಪಟ್ಟು ದುಡ್ಡನ್ನು ಪಡೆದುಕೊಂಡು ಸರಿಪಡಿಸಬೇಕು ಎಂದು ಮಾಡಿದ್ದಾರೆ. ಆ ರೀತಿ 10 ಕೋಟಿ ರೂಪಾಯಿಗಳ ಹಣ ಸಂಗ್ರಹ ಕೂಡ ಆಗಿದೆ. ಆನಂತರ ಒಬ್ಬರು ಕೋರ್ಟ್‌ಗೆ ಹೋಗಿದ್ದಾರೆ. ಬಹುಶಃ ತಾವೇ ಹೋಗಿದ್ದೀರೆಂದು ಇದರಲ್ಲಿ ನಮೂದಿಸಿದೆ. ತಾವು ಕೋರ್ಟ್‌ಗೆ ಹೋಗಿ ಅದರ ವಿರುದ್ಧ ಒಂದು ದಾವೆ ಹೂಡಿದ್ದೀರಿ. ಆ ನಂತರ ನಮ್ಮ ಮಂಡಳಿಗೆ ಈಗ ಏನು ಮಾಡಿರತಕ್ಕಂತಹ ತೀರ್ಮಾನಕ್ಕೆ ಪ್ರಮಾಣ ಪತ್ರವನ್ನು ಕೊಟ್ಟು, ನಾವು ಅದನ್ನು ವಾಪಸ್ಸು ಪಡೆದುಕೊಳ್ಳುತ್ತೇವೆಂದು ಪ್ರಮಾಣ ಪತ್ರವನ್ನು ಕೊಟ್ಟಿದೇವೆ. ಪ್ರಮಾಣ ಪತ್ರ ಕೊಟ್ಟ ನಂತರ, ಆ ಕಾರ್ಖಾನೆಗಳನ್ನು ಅಲ್ಲಿ ಮುಚ್ಚುವಂತಹ ದೃಷ್ಟಿಯಲ್ಲಿ ಯಾವುದು ಈ ರೀತಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981ರ ಪ್ರಕಾರ ಉಲ್ಲಂಘಿಸಿದ ಪ್ರಕರಣಗಳಲ್ಲಿ ಅವರಿಗೆ ನ್ಯಾಯಾಲಯದಲ್ಲಿ ದಾವೆ ಹೂಡಲು ಮಾತ್ರ ಅವಕಾಶವಿದೆ. ಕಾನೂನಾತ್ಮಕವಾಗಿ ಏನು ಮಾಡಬೇಕಾಗಿದೆಯೋ ಅದನ್ನು ಮಾಡಬೇಕು. ಅದನ್ನು ಮಾಡದೆಯೇ 5 ಪಟ್ಟು ಹೆಚ್ಚು ಆಡಳಿತಾತ್ಮಕ ಶುಲ್ಕವನ್ನು ವಿಧಿಸಿರುವುದು ಸರಿಯಾದ ಕ್ರಮವಲ್ಲ. ಅದಕ್ಕಾಗಿ ನಾವು ತೀರ್ಮಾನ ತೆಗೆದುಕೊಂಡು ಅದನ್ನು seize ಮಾಡುವುದು ಮತ್ತು ವಿದ್ಯುಚ್ಛಕ್ತಿ ಸಂಪರ್ಕವನ್ನು ರದ್ದುಪಡಿಸಿ, ಅದನ್ನು ಮುಚ್ಚುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಈಗ ಸಮಯವಿಲ್ಲ, ಇದು ಪ್ರಶ್ನೋತ್ತರ ಅವಧಿಯಾಗಿದೆ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಕೋರ್ಟ್‌ನಲ್ಲಿ ಅದರ ವಿರುದ್ಧ ದಾವೆ ಇದೆ. ನಾವು ಕೋರ್ಟ್‌ಗೆ ಪ್ರಮಾಣ ಪತ್ರ ಕೊಟ್ಟು, ನಾವು ಅದನ್ನು ಸರಿಪಡಿಸುತ್ತೇವೆಂದು ಅವರಿಗೆ ಪ್ರಮಾಣ ಪತ್ರ ಕೊಟ್ಟಿದ್ದೇವೆ. ಆ ಪ್ರಮಾಣ ಕೊಟ್ಟನಂತರ ಈಗ ಕೋರ್ಟ್‌ನಲ್ಲಿ ದಾವೆ ಇದೆ. ಈ ಪ್ರಮಾಣ ಪತ್ರವನ್ನು ಕೋರ್ಟ್‌ಗೆ ಕೊಟ್ಟ ನಂತರ ದಾವೆ ಇನ್ನೂ ಮುಂದೆ ನಡೆಯುತ್ತಿದೆ. ನಾವು ಅವರ ಮೇಲೆ ಅಗತ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರೇ, ಏನಾದರೂ ಉಪ ಪ್ರಶ್ನೆ ಕೇಳುವುದಾದರೆ ಕೇಳಿ. ಸರಿ ತಪ್ಪು ಎನ್ನುವುದು ಅಲ್ಲ, ಪ್ರಶ್ನೆ ಮಾತ್ರ ಕೇಳಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾನ್ಯ ಸಚಿವರು ಸದನದಲ್ಲಿ ಒಪ್ಪಿಕೊಂಡಂತಾಯಿತು. ಅಂದರೆ, ಅದು ಉಲ್ಲಂಘನೆ ಆಯಿತು. ಆ ಉಲ್ಲಂಘನೆಯಾದ ನಂತರ ಕ್ರಮ ತೆಗೆದುಕೊಳ್ಳಲೇಬೇಕು, ಅಂದರೆ, ಅದು Closing Order ಬೇರೆ ಇನ್ನೇನೂ ಇಲ್ಲ. ಎಷ್ಟು ಪ್ರಕರಣಗಳು ಈ ರೀತಿ ಉಲ್ಲಂಘನೆಯಾಗಿವೆ, ಅಷ್ಟು Establishments ಅಥವಾ ಯಾವ್ಯಾವುದು operate ಆಗುತ್ತಿವೆಯೋ ಅವೆಲ್ಲವೂ ಸ್ಥಗಿತ ಆಗಬೇಕು. 2007ರಲ್ಲಿ ಕೊಟ್ಟಿದು, ಇವತ್ತು ನಾವು 2017ರಲ್ಲಿ ಇದ್ದೇವೆ. ಅಂದರೆ 10 ವರ್ಷಗಳ ಕಾಲ unauthorized ಆಗಿ ಇಡೀ ನಮ್ಮ environmental problem ಬರುವುದಕ್ಕೆ ಕಾರಣವಾಗಿದೆ. ಇವತ್ತಿನ ದಿವಸ ನಮ್ಮ ಬೆಂಗಳೂರಿನಲ್ಲಿ ಕೆರೆಗಳು ತುಂಬಿರುವುದು ಇರಬಹುದು ಅಥವಾ ಆ ಕೆರೆಗಳಲ್ಲಿ industrial effluents ಅನ್ನು ಬಿಡುವುದು ಅಥವಾ ಕಲ್ಮಶಗಳು ತುಂಬಿಕೊಂಡಿರುವುದಿರಬಹುದು, ಇವೆಲ್ಲವೂ ಬರುವುದಕ್ಕೆ ಈ 10 ವರ್ಷಗಳ ಕಾಲ ಕೊಟ್ಟಿರತಕ್ಕಂತಹ consent ಏನಿದೆ, ಇದು ಬಹಳ ಪ್ರಮುಖವಾಗಿರುವಂಥದ್ದು. ಇದು ನಮ್ಮ ಇಡೀ ನಗರಗಳಿಗೆ ಮತ್ತು ನಮ್ಮ ರಾಜ್ಯಕ್ಕೆ ಬಹಳ ದೊಡ್ಡ ಸಮಸ್ಯೆಯನ್ನು ತಂದೊಡ್ಡಿದೆ. ಹಾಗಾಗಿ ಇದನ್ನು ನಾವು ತಡೆಗಟ್ಟತಕ್ಕಂಥದ್ದರಲ್ಲಿ ವಿಫಲವಾಗಿರುವುದು ಬಹಳ ಪ್ರಮುಖವಾಗಿರತಕ್ಕಂಥದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಪಿ.ಆರ್.ರಮೇಶ್‌ರವರೇ, ನಿಮ್ಮ ಪ್ರಶ್ನೆ ಏನು? What is your question?

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಇಡೀ ಕರ್ನಾಟಕದಲ್ಲಿರತಕ್ಕಂತಹ establishments ಗಳಲ್ಲಿ ಅರ್ಧಕ್ಕರ್ಧ establishments ಬೆಂಗಳೂರಿನಲ್ಲಿದೆ. ಆದ್ದರಿಂದ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬೆಂಗಳೂರಿಗೆ ಪ್ರತ್ಯೇಕವಾದಂತಹ ಒಂದು Pollution Control Board ನ್ನು ಮಾಡಬೇಕು. ಅದಕ್ಕೆ ಕಾರಣವೇನೆಂದರೆ, Pollution Control Board ಗೆ ಇರತಕ್ಕಂತಹ ಅಧಿಕಾರ ಸಂವಿಧಾನದ 74ನೇ ತಿದ್ದುಪಡಿಯಲ್ಲಿ Local BodiesUÉ Pollution Control Board ಕೊಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ. ಈಗ ಇರತಕ್ಕಂತಹ ಅವಕಾಶವನ್ನು ಬಳಸಿಕೊಂಡು ಬೆಂಗಳೂರಿಗೆ ಪ್ರತ್ಯೇಕವಾದಂತಹ ಒಂದು Pollution Control Board ನ್ನು ಮಾಡಿದರೆ, ತಾವು concentrate ಮಾಡುವುದಕ್ಕೆ ಹೆಚ್ಚಿಗೆ ಅವಕಾಶ ಸಿಗುತ್ತದೆ.

**ಸಭಾಪತಿಯವರು**:- ಮಾನ್ಯ ಸದಸ್ಯರು, ಅದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆಯೇ ಎಂದು ಕೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು**:- ಮಾನ್ಯ ಉಗ್ರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಮಾನ್ಯ ಪಿ.ಆರ್.ರಮೇಶ್‌ರವರ ಪ್ರಶ್ನೆಗೆ ಉತ್ತರ ಹೇಳಿ.

**(ಮುಂದು. . . )**

**(1161)/22.11.2017/12.00/ಎಂ.ಎಂ/ಕೆ.ಎಸ್**

**ಶ್ರೀ ಬಿ. ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ತಮಗೆ ಹೇಳಿದ ಪ್ರಕಾರ ಸದರಿ ಉದ್ದಿಮೆ ಕೈಗಾರಿಕೆಗಳನ್ನು ಜಪ್ತಿ ಮಾಡಲು ವಿದ್ಯುಚ್ಛಕ್ತಿಯನ್ನು ಸ್ಥಗಿತಗೊಳಿಸಲು ಕ್ರಮವನ್ನು ಕೈಗೊಂಡಿದ್ದೇವೆ. ಆ ಪ್ರಕರಣದ ಮೇಲೆ ಅವರು ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದಲ್ಲಿ ಆ ದಾವೆ ನಡೆಯುತ್ತಿದೆ. ಅದರ ಮಧ್ಯೆ ಈ ರೀತಿ ಐದು ಪಟ್ಟು ಶುಲ್ಕ ತೆಗೆದುಕೊಳ್ಳುವುದನ್ನು ನಾವು ವಾಪಸ್ ಪಡೆದುಕೊಂಡಿದ್ದೇವೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದೇವೆ. ಯಾರಿಗೂ ಆ ಹಣವನ್ನು ವಾಪಸ್ ಕೊಟ್ಟಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರೇ, ಬೆಂಗಳೂರಿಗೆ ಒಂದು ಪ್ರತ್ಯೇಕವಾದ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಮಾಡುವ ಯೋಚನೆ ಇದೆಯೇ ಎನ್ನುವುದು ಅವರ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರ, ಇದ್ದರೆ ಇದೆ ಎನ್ನಿ; ಇಲ್ಲದಿದ್ದರೆ ಇಲ್ಲ ಎನ್ನಿ.

**ಶ್ರೀ ಬಿ. ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ಅದು ಇಡೀ ರಾಜ್ಯಕ್ಕೆ ಒಂದೇ ಇರುವಂತಹದ್ದಾಗಿದೆ. ಅದು ಸರ್ಕಾರದ ನೀತಿಯ ಪ್ರಶ್ನೆಯಾಗಿದೆ. ಆದ್ದರಿಂದ ಅದನ್ನು ಇಲ್ಲಿ ಹೇಳಲು ಬರುವುದಿಲ್ಲ. ಅದು Central Act ಇರುವುದರಿಂದ ನಾವು ಅದನ್ನು ಪ್ರತ್ಯೇಕ ಮಾಡುವುದಕ್ಕೆ ಅವಕಾಶಗಳು ಸ್ವಲ್ಪ ಕಡಿಮೆ ಇದೆ. ಆದರೆ ಈ ರೀತಿ ಇರುವುದನ್ನು ಗುರುತಿಸಿ ಕಾನೂನಾತ್ಮಕವಾಗಿ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಧನ್ಯವಾದಗಳು. ಇಲ್ಲ ಅವರು ಆಗುವುದಿಲ್ಲ ಎಂದರು, ಅದನ್ನು ಬಿಡಿ.

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ, ಸಂವಿಧಾನದಲ್ಲಿ ಅವಕಾಶ ಇದೆಯಲ್ಲವೇ?

**ಸಭಾಪತಿಯವರು**:- ಅದು ಬೇರೆ. ಸಂವಿಧಾನದಲ್ಲಿ ಬಹಳಷ್ಟು ಅವಕಾಶಗಳಿವೆ ಆದರೆ ಅವರು ಮಾಡುವುದಿಲ್ಲ ಎಂದರು.

**ಚುಕ್ಕೆ ಪ್ರಶ್ನೆ ಸಂಖ್ಯೆ: 4599**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀಮತಿ ತಾರಾ ಅನೂರಾಧ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಶೈಕ್ಷಣಿಕ ಅರ್ಹತೆಗೆ ತಕ್ಕ ವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅವರು ಈ ಸತ್ಯವನ್ನು ಒಪ್ಪಿಕೊಂಡಿದ್ದಕ್ಕೆ ಮೊದಲನೆಯದಾಗಿ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ವೇತನ ಶ್ರೇಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ಇತರ ಭತ್ಯಗಳನ್ನು ಪರಿಷ್ಕರಿಸುವಂತೆ ಪ್ರಸ್ತಾವನೆಯನ್ನು ಅವರ ಉತ್ತರದಲ್ಲಿ 6ನೇ ವೇತನ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಈ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದರೆ ನಿಮ್ಮ ಜವಾಬ್ದಾರಿ ಮುಗಿಯಿತೇ ಎನ್ನುವ ಪ್ರಶ್ನೆಯನ್ನು ತಾವು ಹಾಕಿಕೊಳ್ಳಬೇಕು ಆದರೆ ನಾನೇ ನಿಮಗೆ ಈ ಪ್ರಶ್ನೆಯನ್ನು ಹಾಕುತ್ತಿದ್ದೇನೆ. ಹಾಗೆಯೇ ಅರಣ್ಯ ಅಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ತಯಾರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಜೇಷ್ಠತಾ ಪಟ್ಟಿಯನ್ನು ತಯಾರಿಸದೇ ಇರುವ ಅಧಿಕಾರಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ಎನ್ನುವ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ '1989 ರಿಂದ 2007ರವರೆಗೆ ಮತ್ತು 2008 ರಿಂದ 2017ರವರೆಗೆ ಜೇಷ್ಠತಾ ಪಟ್ಟಿಯನ್ನು ತಯಾರಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಏಕೆಂದರೆ, ಜೇಷ್ಠತಾ ಪಟ್ಟಿ ಕುರಿತಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಇದೆ. ಆದ್ದರಿಂದ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಆಗಲಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಮುಂದುವರೆದು, 'ಜೇಷ್ಠತಾ ಪಟ್ಟಿಯ ಪ್ರಕರಣವು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ವ್ಯಾಜ್ಯ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ನಿಗದಿತ ಅವಧಿಯಲ್ಲಿ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಸಾಧ್ಯವಾಗಿರುವುದಿಲ್ಲ' ಎಂದು ಉತ್ತರದಲ್ಲಿ ಸ್ಪಷ್ಟಪಡಿಸಿದ್ದೀರಿ. ಮುಂದುವರೆದು, 'ಉಪ ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಮುಂಬಡ್ತಿ ಪಡೆದ ಅರಣ್ಯ ರಕ್ಷಕರು ಎಷ್ಟು' ಎಂಬ ಪ್ರಶ್ನೆಗೆ ಬಳ್ಳಾರಿಯಲ್ಲಿ 91, ಬೆಳಗಾವಿ 128, ಬೆಂಗಳೂರು 178, ಚಾಮರಾಜನಗರ 66, ಕೆನರಾ 157, ಮಂಗಳೂರು 44, ಮೈಸೂರು 80, ಹಾಸನ, ಕಲಬುರ್ಗಿ, ಧಾರವಾಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟು 1290 ಜನರಿಗೆ ಈಗಾಗಲೇ ಮುಂಬಡ್ತಿಯನ್ನು ಕೊಟ್ಟಿದ್ದೀರಿ. ಉತ್ತರದಲ್ಲಿ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿ ಇವರಿಗೆ ಮುಂಬಡ್ತಿಯನ್ನು ಹೇಗೆ ಕೊಟ್ಟಿರಿ? ಇದು ನನಗೆ ಗೊತ್ತಾಗಲಿಲ್ಲ. ತಾವು 1290 ನೌಕರರಿಗೆ ಹೇಗೆ ಮುಂಬಡ್ತಿ ಕೊಟ್ಟಿರಿ ಎಂಬ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಏಕೆಂದರೆ, ನನಗೆ ಒದಗಿರುವ ಮಾಹಿತಿ ಪ್ರಕಾರ ಜೇಷ್ಠತಾ ಪಟ್ಟಿಯು ಬಹಳಷ್ಟು ನ್ಯೂನತೆಗಳಿಂದ ಕೂಡಿದ್ದು, ಅದನ್ನು ಸರಿಯಾಗಿ ತಯಾರು ಮಾಡಿಲ್ಲ, ನ್ಯಾಯಾಲಯವು ನಿಮ್ಮ ಇಲಾಖೆಗೆ ಒಂದು ಸೂಚನೆಯನ್ನು ಕೊಡುತ್ತದೆ. ಜೇಷ್ಠತಾ ಪಟ್ಟಿಯು ದೋಷಪೂರಕವಾಗಿರುವುದರಿಂದ ಮೂರು ತಿಂಗಳ ಒಳಗಾಗಿ ಅಂದರೆ, ಅಕ್ಟೋಬರ್ 31ರೊಳಗಾಗಿ ಹೊಸ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕು ಎಂದು ಸೂಚನೆ ಕೊಟ್ಟಿದೆ. ಆದರೆ ಇದುವರೆಗೂ ತಾವು ಜೇಷ್ಠತಾ ಪಟ್ಟಿಯನ್ನು ತಯಾರು ಮಾಡುವ ಅಥವಾ ಕೊಡುವ ಗೋಜಿಗೆ ನೀವು ಹೋಗಲಿಲ್ಲ ಎನ್ನುವ ಮಾಹಿತಿಯನ್ನು ನನಗೆ ಒದಗಿಸಿದ್ದಾರೆ. ಇದೆಲ್ಲವುಗಳಿಗೂ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ಈಗ ಪ್ರಥಮ ಪ್ರಶ್ನೆಯಲ್ಲಿ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಜೇಷ್ಠತಾ ಪಟ್ಟಿ, ಅದಕ್ಕಿಂತ ಮೊದಲು ವೇತನದ ಬಗ್ಗೆಯೂ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಜೇಷ್ಠತಾ ಪಟ್ಟಿಯನ್ನು circle wise ಮಾಡುತ್ತೇವೆ. ಅದರಲ್ಲಿ ತಾರತಮ್ಯಗಳು ಬಂದಿರುವುದು ಸಹಜ. ಅದಕ್ಕಾಗಿ ನಾವು ಒಂದು ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುತ್ತೇವೆ. ಅದಕ್ಕೆ ಕೆಲವು ನೌಕರರು ಕೆ.ಎ.ಟಿ ಯಲ್ಲಿ stay ತಂದರು. ಆದ್ದರಿಂದ ನಿಧಾನವಾಯಿತು. ಅದಕ್ಕೂ ಮೊದಲು ನಾವು ಮಾಡಿದ್ದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿದ್ದ list ಏನಿತ್ತು, ಅದರ ಪ್ರಕಾರ ಮುಂಬಡ್ತಿಯನ್ನು ನೀಡಿದೆವು. ಕೆ.ಎ.ಟಿ ಇಂದ stay ಬಂದ ನಂತರ ನಮಗೆ ಜೇಷ್ಠತಾ ಪಟ್ಟಿಯನ್ನು ಕೊಡಲು ಸಾಧ್ಯವಾಗಿಲ್ಲ. ಒಂದು ಪರಿಷ್ಕೃತ ಪಟ್ಟಿಯನ್ನು ತಯಾರು ಮಾಡಿ ಪರಿಶೀಲನೆ ಮಾಡಬೇಕೆಂದು ನ್ಯಾಯಾಲಯವು ನಮಗೆ ನಿರ್ದೇಶನ ಕೊಟ್ಟಿತ್ತು. ಆ ಪಟ್ಟಿಯನ್ನು ಸಿದ್ಧಪಡಿಸುವಾಗ 'ಪವಿತ್ರ' ರವರ ಪ್ರಕರಣದಲ್ಲಿ ಜೇಷ್ಠತಾ ನಿಯಮದ ಮೇಲೆ ಮಾಡುವುದಕ್ಕೆ ಅವಕಾಶಗಳು ಕಡಿಮೆಯಾಯಿತು. ನ್ಯಾಯಾಲಯದ ತೀರ್ಮಾನ ಇರುವುದರಿಂದ ಅದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈ ಸಮಸ್ಯೆಯು ಉದ್ಭವವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೇ, 1989 ರಿಂದ ಇದುವರೆಗೂ ಜೇಷ್ಠತಾ ಪಟ್ಟಿಯನ್ನು ಪ್ರಕಟ ಮಾಡಿಲ್ಲ. ಅದರಲ್ಲಿಯೂ 2008 ರಿಂದ 2017ರವರೆಗೂ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಸಾಧ್ಯವಾಗಿಲ್ಲ. ಆದರೆ ದಾವೆಯನ್ನು 2016ರಲ್ಲಿ ಒಂದು ವರ್ಷದ ಹಿಂದೆ ಹಾಕಲಾಗಿದೆ. ಆದರೆ ಒಂಭತ್ತು ವರ್ಷಗಳಿಂದ ಜೇಷ್ಠತಾ ಪಟ್ಟಿ ಬಂದಿಲ್ಲದಿರುವುದರಿಂದ ಅವರ ಗತಿ ಏನಾಗಬೇಕು?

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ಹಿಂದೆ ಆಗಿರುವುದಕ್ಕೆ ನಾನು ಕೊಟ್ಟಿರುವ ಉತ್ತರದಲ್ಲಿ ಅವರ ಹೆಸರನ್ನು ಕೊಟ್ಟಿದ್ದೇನೆ. ಹಿಂದೆ ಅಲ್ಲಿಯವರೆಗೆ ಜೇಷ್ಠತಾ ಪಟ್ಟಿಯನ್ನು ಮಾಡಿದ್ದೆವು. ಅನಂತರ ಕೆಲವು ಹುದ್ದೆಗಳನ್ನು ತುಂಬಬೇಕಾದಾಗ ನಿಯಮ 32ರಲ್ಲಿ ನಾವು ಅದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ.

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಚಿವರೇ, ಅಂದರೆ ಪ್ರಭಾರ ಕೊಟ್ಟಿದ್ದೀರಿ. ನಿಯಮ 32ರ ಅಡಿಯಲ್ಲಿ ಹುದ್ದೆಗಳನ್ನು ತುಂಬುವುದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಂತಾಗುವುದಿಲ್ಲವೇ?

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೇ, ಒಂದು ಹುದ್ದೆ ಖಾಲಿ ಇದ್ದಾಗ, ನ್ಯಾಯಾಲಯದಲ್ಲಿ ಇಂತಹ ಪ್ರಕರಣಗಳು ಬಂದಾಗ ಏನಾದರೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಲ್ಲವೇ?

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೇ, ನಾನು ತಾವು ಅಧಿಕಾರಕ್ಕೆ ಬಂದಾಗಿನಿಂದ ಎಂದು ಹೇಳುತ್ತಿಲ್ಲ, 16 ವರ್ಷಗಳಿಂದ ಇದೇ ರೀತಿ ಆಗುತ್ತಿದೆಯಲ್ಲವೇ?

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ವೀರಯ್ಯರವರೇ, ಈಗ ಮಾತನಾಡಬೇಡಿ. ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನಾನು ಯಾರಿಗೂ allow ಮಾಡುತ್ತಾ ಇಲ್ಲ. ಅವರು ನಿಂತಿದ್ದಾರೆ, ನೀವು ಹೀಗೆ ಮಧ್ಯೆ ಬಾಯಿ ಹಾಕಿದರೆ ಹೇಗೆ? ಅವರು ಮೂಲ ಪ್ರಶ್ನೆಯನ್ನು ಕೇಳುತ್ತಿದ್ದಾರೆ ಅವರಿಗೆ ಉತ್ತರ ಬೇಡವೇ? ಶ್ರೀಮತಿ ತಾರಾ ಅವರೇ, ಅವರು ನಿಮ್ಮನ್ನು ಮಾತನಾಡಲು ಬಿಡುವುದಿಲ್ಲವಂತೆ. ಮಾನ್ಯ ವೀರಯ್ಯನವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀಮತಿ ತಾರಾ ಅನೂರಾಧ**:- ಮಾನ್ಯ ಸಭಾಪತಿಯವರೇ, ನಿಯಮ 32ರ ಪ್ರಕಾರ ಮುಂಬಡ್ತಿ ಕೊಡುವುದರಿಂದ ಭ್ರಷ್ಟಾಚಾರಕ್ಕೆ ನಾವೇ ಅನುಕೂಲ ಮಾಡಿಕೊಟ್ಟಂತಾಗುವುದಿಲ್ಲವೇ? ಹತ್ತಾರು ವರ್ಷಗಳಿಂದ ಈ ರೀತಿಯ ಸಮಸ್ಯೆಗಳಿವೆ. ತಾವು ಬಂದ ನಂತರ ಇದನ್ನು ಸರಿಪಡಿಸಬಹುದಿತ್ತಲ್ಲವೇ?

**ಶ್ರೀ ಬಿ. ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ಈ ವಿಚಾರವು ನ್ಯಾಯಾಲಯದಲ್ಲಿದೆ ಎಂದು ಹೇಳಿದ್ದೇನೆ. ಆ ನಿಯಮ ಇರುವುದೇ ಇಂತಹ ಸಂದರ್ಭಗಳಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲು.

**ಶ್ರೀಮತಿ ತಾರಾ ಅನೂರಾಧ**:- ಮಾನ್ಯ ಸಚಿವರೇ, ನಾನು ಕೇಳುತ್ತಿರುವುದೇನೆಂದರೆ, 2016 ರಿಂದ ಅಲ್ಲ, 2016ರಿಂದ ನ್ಯಾಯಾಲಯದಲ್ಲಿದೆ ಅದು ನಿಜ. ಆದರೆ ಒಂಭತ್ತು ವರ್ಷಗಳಲ್ಲಿ ಆಗಿರುವ ಅನ್ಯಾಯಗಳಲ್ಲಿ ನಿಯಮ 32 ಅಡಿಯಲ್ಲಿ ಕೊಟ್ಟಿರುವುದರಿಂದ ಅನ್ಯಾಯಕ್ಕೆ ಅಧಿಕಾರಿಗಳಿಗೆ ನಾವೇ ದಾರಿ ಮಾಡಿಕೊಟ್ಟಂತಾಗುವುದಿಲ್ಲವೇ ಎಂದು ಕೇಳುತ್ತಿದ್ದೇನೆ.

**ಶ್ರೀ ಬಿ. ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೆ ಅಧಿಕೃತವಾಗಿ ಕೆಲವು ಮುಂಬಡ್ತಿಗಳನ್ನು ಕೊಟ್ಟಿದ್ದೇವೆ. ಅನಂತರ ನ್ಯಾಯಾಲಯದಲ್ಲಿ ದಾವೆಗೆ ಬಂದ ನಂತರ ನಾವು ಕೊಟ್ಟಿಲ್ಲ.

**ಶ್ರೀಮತಿ ತಾರಾ ಅನೂರಾಧ**:- ಮಾನ್ಯ ಸಭಾಪತಿಯವರೇ, ಅದನ್ನು ಈಗಲಾದರೂ ಸರಿಪಡಿಸಿ ಎಂದು ಹೇಳುತ್ತಿದ್ದೇನೆ; ನಿಮ್ಮ ಅವಧಿಯಲ್ಲಾದರೂ ಅದನ್ನು ಸರಿಪಡಿಸಿ ಎಂದು ಕೇಳುತ್ತಿದ್ದೇನೆ.

**ಶ್ರೀ ಬಿ. ರಮಾನಾಥ ರೈ**:- ಮಾನ್ಯ ಸಭಾಪತಿಯವರೇ, ನ್ಯಾಯಾಲಯದಲ್ಲಿರುವ ದಾವೆಯು ಮುಗಿಯುವ ಹಂತದಲ್ಲಿದೆ. ದಾವೆಯು ಮುಗಿದ ನಂತರ ತಕ್ಷಣವೇ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ. ನಿಯಮ 32 ಅಡಿಯಲ್ಲಿ ಅದನ್ನು ನೀಡಿಲ್ಲ ಈಗ 'ಪವಿತ್ರ' ಪ್ರಕರಣ ಬಂದ ನಂತರ ಅದಕ್ಕೆ ತಡೆಯಾಜ್ಞೆ ತರಲಾಗಿದೆ. ಆದ್ದರಿಂದ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ.

(ಮುಂದು . . .

(1162)22-11-2017/12-10/ಕೆಹೆಚ್/ಕೆಎಸ್

**ಪ್ರಶ್ನೆ ಸಂಖ್ಯೆ:4441**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಈ ಉತ್ತರಗಳು ಯಾವುದೇ ರೀತಿಯ ಸಮಾಧಾನವನ್ನು ಕೊಡುತ್ತಿಲ್ಲ. ಕಾವೇರಿ ನೀರಾವರಿ ನಿಗಮದಲ್ಲಿ ಭೂಮಾಪಕ ಸಿಬ್ಬಂದಿಗಳು ಇದ್ದಾರೋ, ಇಲ್ಲವೋ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ 58 ಭೂಮಾಪಕರುಗಳ ಹುದ್ದೆಗಳು ಮಂಜೂರಾಗಿವೆ ಮತ್ತು ಸರ್ವೆ ಇಲಾಖೆಯಿಂದ 11 ಜನ ಭೂಮಾಪಕರುಗಳನ್ನು ಎರವಲು ಪಡೆದಿದ್ದೇವೆ ಎಂದು ತಿಳಿಸಿದ್ದಾರೆ. ಕಾವೇರಿ ನೀರಾವರಿ ನಿಗಮ ನಿಯಮಿತದ ವಲಯಗಳ ವ್ಯಾಪ್ತಿಯಲ್ಲಿ ಹುದ್ದೆಯು ಮಂಜೂರಾಗಿರುವಾಗ 58 ಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಿಮ್ಮ ಇಲಾಖೆಗೆ ಇರುವಂತಹ ತೊಡಕುಗಳೇನು? ಈಗ 47 ಹುದ್ದೆ ಖಾಲಿಯಿದೆ. 11 ಸಿಬ್ಬಂದಿಗಳು deputation ಮೇಲೆ ಕರ್ತವ್ಯವನ್ನು ನಿರ್ವಹಿಸುತ್ತಾರೆ. ನಿನ್ನೆಯ ದಿವಸ ಕೆಳಮನೆಯಲ್ಲಿ ಕೆರೆ ಒತ್ತುವರಿ ಸಮಿತಿಯು ವರದಿಯನ್ನು ಕೊಟ್ಟಿದೆ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ನಗರದಲ್ಲಿ 837 ಕೆರೆಗಳಲ್ಲಿ 4,533 ಎಕರೆ ಭೂಮಿ ಒತ್ತುವರಿಯಾಗಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ 710 ಕೆರೆಗಳಲ್ಲಿ 6,252 ಎಕರೆಗಳು ಒತ್ತುವರಿಯಾಗಿದೆ. ಇನ್ನು ಇಡೀ ರಾಜ್ಯದ ಪರಿಸ್ಥಿತಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನಾಗಬೇಕು? ನಿಮ್ಮ ಕೆರೆ ಜಾಗವನ್ನು ನೀವು ರಕ್ಷಣೆ ಮಾಡಿಕೊಳ್ಳದೇ ಹೋದರೆ, ಸುಮ್ಮನೆ ಖಾಲಿ ಜಾಗ ಬಿಟ್ಟರೆ ಒತ್ತುವರಿ ಮಾಡದೇ, ಇನ್ನೇನು ಮಾಡುತ್ತಾರೆ. ನಿಮ್ಮ ಕೆರೆ, ನಿಮ್ಮ ನಾಲೆ, ನಿಮ್ಮ ಗುಂಟೆಯನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ನೀವು ಹೊರಬೇಕಲ್ಲವೇ, ಇದಕ್ಕೆ surveyor ಗಳು ಬೇಕಲ್ಲವೇ? ಕಂದಾಯ ಇಲಾಖೆಯಲ್ಲಿಯೇ surveyor ಗಳಿಲ್ಲ. ಸರ್ವೆ ಇಲಾಖೆಯಲ್ಲಿಯೇ surveyor ಗಳಿಲ್ಲ. ಈಗಾಗಲೇ ಭೂಮಾಪಕರುಗಳ ಹುದ್ದೆ ಮಂಜೂರಾಗಿದೆ. ಇನ್ನು ಹುದ್ದೆಗಳ ಸಂಖ್ಯೆ ಜಾಸ್ತಿಯಾಗಬೇಕು. ಭೂಮಾಪಕರುಗಳ ನೇಮಕಾತಿಯನ್ನು ಏಕೆ ಮಾಡಿಕೊಳ್ಳುತ್ತಿಲ್ಲ? ಮೊದಲನೆಯದು ಈ ಕೂಡಲೇ ಆ ಎಲ್ಲಾ 58 ಭೂಮಾಪಕರುಗಳ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಬೇಕು ಎರಡನೆಯದು, ಭೂಮಾಪಕರುಗಳನ್ನು ಎಷ್ಟು ದಿನದೊಳಗೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಮೂರನೆಯದು, ಎರವಲು ಪ್ರಕ್ರಿಯೆಯನ್ನು ನಿಲ್ಲಿಸಬೇಕು. ನಾಲ್ಕನೆಯದು, ಇಡೀ ರಾಜ್ಯದ ಕೆರೆಗಳ ಒತ್ತುವರಿಗಳು ಏನಿದೆ. ಅದಕ್ಕೂ ಮುಂಚಿತವಾಗಿ ಆ boundary ಯನ್ನು ನಿಗದಿ ಮಾಡಿಕೊಳ್ಳಬೇಕು. ನಿಮ್ಮ boundary ಅನ್ನು ನೀವು ಗುರುತು ಹಾಕಿಕೊಂಡು, ಇದು ನನ್ನ boundary ಎಂದು ಹೇಳಬಹುದು. ನಂತರ ಯಾರು ಬರುತ್ತಾನೋ, ಅದನ್ನು ನೋಡೋಣ. ಇಲ್ಲದಿದ್ದರೆ ಕಬಳಿಸುವಂತಹ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಾ ಹೋಗುತ್ತದೆ. ದಯಮಾಡಿ ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು, ಜಲಸಂಪನ್ಮೂಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳು ತುಂಬಾ ಪ್ರಮುಖವಾಗಿರುವಂತಹದ್ದು. ಸರ್ಕಾರವು ಅಗತ್ಯವಾಗಿ ಒಂದು ನಿರ್ಧಾರವನ್ನು ಮಾಡಬೇಕಾಗುತ್ತದೆ. ಆದರೆ, ಎಲ್ಲಾ ಇಲಾಖೆಗಳಿಗೂ ಭೂಮಾಪಕರುಗಳ ಅವಶ್ಯಕತೆ ತುಂಬಾ ಇದೆ. ಕೇವಲ ಕಂದಾಯ ಇಲಾಖೆಗೆ ಮಾತ್ರ ಭೂಮಾಪಕರುಗಳ ಅವಶ್ಯಕತೆ ಸೀಮಿತವಾಗಿಲ್ಲ. ನೀರಾವರಿ ಇಲಾಖೆಗೆ ಕೂಡ ಬೇಕಾಗುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ industries ನಲ್ಲೂ ಕೂಡ ಬೇಕಾಗುತ್ತದೆ. ಹೀಗಾಗಿ ಎಲ್ಲಾ ಇಲಾಖೆಗಳಿಗೂ ಭೂ ಮಾಪಕರುಗಳು ಬೇಕಾಗಿರುವುದರಿಂದ, ಕಂದಾಯ ಇಲಾಖೆಯೇ ಮೂಲ ಇಲಾಖೆಯಾಗಿರುವುದರಿಂದ ಆ ಇಲಾಖೆಯಿಂದಲೇ ಭೂಮಾಪಕರುಗಳ ಸಿಬ್ಬಂದಿಗಳನ್ನು ಎರವಲು ಸೇವೆಯನ್ನು ಪಡೆಯುವಂತಹದ್ದು, ಈಗಾಗಲೇ ಸುಮಾರು 1,000 ಕ್ಕೂ ಹೆಚ್ಚು ಜನರಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಇನ್ನು 2 ತಿಂಗಳಿನಲ್ಲಿ ಅವರು ಬರುವ ಮುನ್ಸೂಚನೆ ಇದೆ. ಇಂತಹ ಸಂದರ್ಭಗಳು ಉದ್ಭವಿಸಿದಾಗ ನಾವು ಭೂಮಾಪಕರುಗಳನ್ನು ಎರವಲು ಸೇವೆಯಲ್ಲಿ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪಡೆಯುತ್ತೇವೆ ಎಂಬುದು ನನ್ನ ಮೊದಲನೆಯ ಉತ್ತರವಾಗಿದೆ.

ಎರಡನೆಯದು, ನಮ್ಮ ವ್ಯಾಪ್ತಿಯಲ್ಲಿ ಒಟ್ಟು 58 ಹುದ್ದೆಗಳು ಮಂಜೂರಾಗಿದ್ದು, ಹಾಲಿ ಇರುವಂತಹ 11 ಹುದ್ದೆಗಳಾದರೂ ಕೂಡ, ಯಾವುದೇ ರೀತಿಯಲ್ಲಿಯೂ ಕೂಡ ಪ್ರಾಜೆಕ್ಟ್ ಮಾಡುವುದಕ್ಕಾಗಲಿ, ಇನ್ನೊಂದಕ್ಕೆ ಆಗಲಿ ತೊಂದರೆಯಾಗಿಲ್ಲ. ಕಾರಣವೇನೆಂದರೆ, ನಾವು ನಿವೃತ್ತಿ ಹೊಂದಿರುವಂತಹ ಅಧಿಕಾರಿಗಳನ್ನು ಪುನರ್ ನೇಮಕಾತಿ ಮಾಡಿಕೊಳ್ಳುವುದರಿಂದ, ಇದನ್ನು ಸರಿದೂಗಿಸುವುದಕ್ಕೆ ಸಾಧ್ಯವಾಗಿದೆ. ಮಾನ್ಯ ಸದಸ್ಯರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈಗ ಎಲ್ಲಾ ಇಲಾಖೆಯಲ್ಲಿಯೂ ಕೂಡ ಭೂಮಾಪಕರುಗಳು ಬೇಕಾಗಿದ್ದಾರೆ. ಕಂದಾಯ ಸಚಿವರು ಕೂಡ ಸದನದಲ್ಲೇ ಇದ್ದಾರೆ. ಮಾನ್ಯ ಸಚಿವರಿಂದ ಭೂಮಾಪಕರುಗಳನ್ನು ಪಡೆಯುವಂತಹ ಪ್ರಯತ್ನವನ್ನು ಮಾಡುತ್ತೇವೆ. ಒಂದು ವೇಳೆ ಇದರಲ್ಲಿ ವಿಳಂಬವಾದಂತಹ ಸಂದರ್ಭದಲ್ಲಿ ಅಥವಾ ಬೇಡಿಕೆಗನುಗುಣವಾಗಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಿಗದೇ ಇರುವಂತಹ ಸಂದರ್ಭದಲ್ಲಿ ನಾವು ನೇರವಾಗಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನದೊಂದು ಪ್ರಶ್ನೆಯೇನೆಂದರೆ, ಎರವಲು ಪಡೆಯುವ surveyor ಬರುತ್ತಾನೆಯಲ್ಲವೇ, ಅವನಿಗೆ commitment ಇರುವುದಿಲ್ಲ. ಅವನು ಬರುತ್ತಾನೆ, ಹೋಗುತ್ತಾನೆ, ಅವನು ಬರುವುದಕ್ಕೂ ಕಷ್ಟಪಡುತ್ತಾನೆ. ಮತ್ತೆ ವಾಪಸ್ಸು ಹೋಗುವುದಕ್ಕೆ ದಾರಿ ಹುಡುಕುತ್ತಿರುತ್ತಾನೆ. ನಮ್ಮ ಇಲಾಖೆಗೆ ಸಂಬಂಧಪಟ್ಟ surveyor ಇದ್ದರೆ ಅವರಿಗೆ commitment ಗಳು ಇರುತ್ತದೆ. ಆ ಸರ್ವೆಯರ್‌ಗೆ ಆಸ್ತಿಯ ಬಗ್ಗೆ ಏನು ಕೇಳಿದರೂ ಪಟಾಪಟ್ ಆಗಿ ಹೇಳುತ್ತಾನೆ ಮತ್ತು ರಕ್ಷಣೆಯ ಕೆಲಸವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಎರವಲು ಸೇವೆಯಲ್ಲಿರುವವನು ಏನು ಅಧಿಕಾರವನ್ನು ಚಲಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಅವನು ಬರುತ್ತಾನೆ, ಹೋಗುತ್ತಾನೆ, ಹಾಗಾಗಿ, ನೀವು ಅಷ್ಟು ಜನರನ್ನು ಖಾಯಂ ಆಗಿ ನೇಮಕಾತಿ ಮಾಡಿಕೊಂಡರೆ ಮಾತ್ರ ಆಸ್ತಿ ರಕ್ಷಣೆಯ ಬಗ್ಗೆ, ನನ್ನ ಆಸ್ತಿ ಎಂದು ಪ್ರೀತಿ ಬರುವುದಕ್ಕೆ ಮತ್ತು ಅದನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಖಾಯಂ ಆಗಿ ಭೂಮಾಪಕರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಮತ್ತು ಇದನ್ನು ಎಷ್ಟು ದಿನದೊಳಗೆ ಈ ಪ್ರಕ್ರಿಯೆಯನ್ನು ಮಾಡುತ್ತಾರೆ ಎಂಬುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ನೀಡಬೇಕು. ದಯಮಾಡಿ ಇದನ್ನು ತಡ ಮಾಡುವುದಕ್ಕೂ ಆಗುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದು ಸರಿಯಾಗಿ ಇದೆ. ಭೂಮಾಪಕರುಗಳನ್ನು ನೇಮಕಾತಿ ಮಾಡಿಕೊಂಡಂತಹ ಸಂದರ್ಭದಲ್ಲಿ ಮತ್ತಷ್ಟು Cadre and Recruitment Rules ಆಗಬೇಕಾಗುತ್ತದೆ. Promotion ಗಳನ್ನು ಕೊಡಬೇಕಾಗುತ್ತದೆ. Time bound promotion ಗಳನ್ನು ಕೊಡಬೇಕಾಗುತ್ತದೆ. ಈ ರೀತಿಯ ಎಲ್ಲಾ promotion ಗಳೆಲ್ಲ ಬರುತ್ತಿರುತ್ತದೆ. ಇದು ಈ ಒಂದು ಇಲಾಖೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಇಲಾಖೆಗೂ ಕೂಡ ಬೇಕಾಗುತ್ತದೆ. ಆ ಕಾರಣದಿಂದಲೇ promotions, cadre recruitments ಇದನ್ನೆಲ್ಲ ಕಂದಾಯ ಇಲಾಖೆಯಲ್ಲಿಯೇ ಮಾಡುವುದರಿಂದ ನಮಗೆ ತೊಂದರೆಯಾಗುವುದಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸದಸ್ಯರೇ ಒಂದು ನಿಮಿಷ, ಇವರನ್ನು ಎರವಲು ಸೇವೆಯಲ್ಲಿ ಪಡೆಯುವಂತಹದ್ದು ಒಂದು ಸೂಕ್ತವಾಗಿರುವಂತಹದ್ದು. ಈಗಾಗಲೇ ಸಾಕಷ್ಟು ಬಗೆಯಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ನೇಮಕಾತಿ ಪ್ರಕ್ರಿಯೆಯು ಬರುವುದಕ್ಕೆ ವಿಳಂಬವಾದಂತಹ ಸಂದರ್ಭದಲ್ಲಿ ಮುಂದಿನ ಪ್ರಕ್ರಿಯೆಯನ್ನು ಪ್ರಾರಂಭಿಸುವುದಕ್ಕೆ ಏನು ತೊಂದರೆಯಾಗುವುದಿಲ್ಲ, ಆದರೆ ಯಾವುದೇ ರೀತಿಯಲ್ಲೂ ಕೂಡ ನಮ್ಮ surveyor ಆಗಲಿ, ಇನ್ನೊಂದು ಕಾಮಗಾರಿಗಳಾಗಲಿ, ಇದನ್ನು ಹೊರಗುತ್ತಿಗೆಯಲ್ಲಿ ತೆಗೆದುಕೊಳ್ಳುವಂತಹದ್ದು ಅಥವಾ ನಿವೃತ್ತಿ ಹೊಂದಿರುವ ಅಧಿಕಾರಿಗಳನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯಿರುವುದರಿಂದ, ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ.

**ಪ್ರಶ್ನೆ ಸಂಖ್ಯೆ:4564**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಈ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಸಿಗುವುದೇ ತುಂಬಾ ಅಪರೂಪವಾಗಿದೆ ಮತ್ತು ಪ್ರಮಾಣ ಪತ್ರಗಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಡೆಯುವುದಕ್ಕೆ ನಿಧಾನವಾದರೆ ಇನ್ನು ಬಹಳ ತೊಂದರೆಯಾಗುತ್ತದೆ. ಇದಕ್ಕೆ ಒಂದು ಸಮಯ ನಿಗದಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಸಮಯವನ್ನು ನಿಗದಿ ಮಾಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, 15 ದಿನದೊಳಗೆ ಸಮಯವನ್ನು ನಿಗದಿ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆ. ಸ್ಥಳೀಯ ಅಧಿಕಾರಿಗಳಿಗೆ allow ಮಾಡಬೇಕು.

**ಸಭಾಪತಿಯವರು:-** ಅವರೇ ಹೇಳುತ್ತಾರೆ. The Minister is capable. ಮಾನ್ಯ ಸದಸ್ಯರೇ ನೀವು ಪ್ರಶ್ನೆಯನ್ನು ಕೇಳಬಹುದು.

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಪ್ರಮಾಣ ಪತ್ರಗಳನ್ನು ಕೊಡುವಂತಹ ಅಧಿಕಾರವನ್ನು ಸ್ಥಳೀಯ ಅಧಿಕಾರಿಗಳಿಗೆ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆಯನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ:4607**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಸತಿ ಯೋಜನೆಯ ಅರ್ಹ ಫಲಾನುಭವಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ ಮತ್ತು ಗ್ರಾಮೀಣ ಜಾಗೃತಿ ಸಮಿತಿಗೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದ್ದು, ಇನ್ನೂ ಇತ್ಯರ್ಥವಾಗಿರುವುದಿಲ್ಲ. ಈ ಮಧ್ಯೆ ಉಚ್ಚ ನ್ಯಾಯಾಲಯವು ಕೊಟ್ಟಿರುವ ಮಧ್ಯಂತರ ತೀರ್ಪಿನಂತೆ ಗ್ರಾಮ ಸಭೆಗಳ ಮೂಲಕ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು, ಸಂಬಂಧಪಟ್ಟ ತಾಲ್ಲೂಕಿನ ಕಾರ್ಯ ನಿರ್ವಾಹಣಾಧಿಕಾರಿಯು ನಿಯಮಾನುಸಾರ ಪರಿಶೀಲಿಸಿ, ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸಬೇಕಾಗುತ್ತದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈಗ ಯಾವ ಕಾರಣಕ್ಕಾಗಿ ಶ್ರೀ ನಂದನ ರೆಡ್ಡಿ ಮತ್ತು ಇತರರು ನ್ಯಾಯಾಲಯಕ್ಕೆ ಹೋಗಿ ಈ ಗ್ರಾಮ ಸಭೆಯ ಪರಮಾಧಿಕಾರವನ್ನು ಮೊಟಕುಗೊಳಿಸಬಾರದು. ಗ್ರಾಮೀಣ ಜಾಗೃತಿ ಸಮಿತಿಯ ಮೂಲಕ ಆಯ್ಕೆ ಮಾಡುವಂತಹ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕೆಂದು ಏನು ದಾವೆಗಳನ್ನು ಹೂಡಿದ್ದಾರೆ. ನ್ಯಾಯಾಲಯವು ಮಧ್ಯಂತರ ಆದೇಶವನ್ನು ಕೊಟ್ಟು ಗ್ರಾಮ ಸಭೆಗಳ ಆಯ್ಕೆ ಪ್ರಕ್ರಿಯೆಗಳನ್ನು ಎತ್ತಿ ಹಿಡಿಯಬೇಕೆಂದು ಮಾನ್ಯ ಸಚಿವರಿಗೆ ಸೂಚನೆಯನ್ನು ಕೊಟ್ಟಿದೆ, ಇನ್ನು ಮುಂದೆ ಗ್ರಾಮೀಣ ಜಾಗೃತಿ ಸಮಿತಿಯನ್ನು ರದ್ದುಗೊಳಿಸಿ, ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಎತ್ತಿ ಹಿಡಿಯುವುದಕ್ಕೆ ಸರ್ಕಾರವು ಬದ್ಧವಾಗಿದೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಶ್ರೀ ನಂದನ ರೆಡ್ಡಿ ಮತ್ತು ಇತರರು ಯಾರು ಪ್ರಕರಣವನ್ನು ದಾಖಲು ಮಾಡಿದ್ದಾರೆ. ಇದರ ಬಗ್ಗೆ ಅಂತಿಮ ತೀರ್ಪು ಬರುವ ತನಕ ಕಾಯಬೇಕಾಗುತ್ತದೆ. ಈಗಿರುವ ಪರಿಸ್ಥಿತಿ ಏನೆಂದರೆ, ಗ್ರಾಮ ಸಭೆಗಳಲ್ಲಿ ಆಯ್ಕೆಯಾಗಿರುವುದನ್ನು ಕಾರ್ಯ ನಿರ್ವಾಹಣಾಧಿಕಾರಿಯ ಮುಖಾಂತರ ಕಳುಹಿಸಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆ ಮಾಡಬೇಕೆಂದು ತೀರ್ಪಿನಲ್ಲಿದೆ. ಅದಕ್ಕೆ ನಾವು stick on ಆಗೋಣ. ಮುಂದೆ ಉಚ್ಚ ನ್ಯಾಯಾಲಯವು ಏನು ನಿರ್ದೇಶನವನ್ನು ಕೊಡುತ್ತದೆ ಎಂಬುದನ್ನು ನೋಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಗ್ರಾಮೀಣ ಜಾಗೃತಿ ಸಮಿತಿ ಅಗತ್ಯವಿದೆಯೇ?

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ಮಧ್ಯ ಬಾಯಿ ಹಾಕಬೇಡಿ. ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಂವಿಧಾನದ ಆಶಯಧ್ವಂತೆ 73ನೇ ತಿದ್ದುಪಡಿಯ ಆಧಾರದಲ್ಲಿ ಮಧ್ಯಂತರ ಆದೇಶದಂತೆ ಗ್ರಾಮ ಸಭೆಗಳ ಅಧಿಕಾರದಂತೆ ಪುನವಿ ಪ್ರಕ್ರಿಯೆಗಳನ್ನು ಆಯ್ಕೆಗೊಳಿಸುತ್ತಾರೆಂದು ಮಾನ್ಯ ಸಚಿವರು ಏನು ಹೇಳಿದ್ದಾರೆ, ಅದಕ್ಕೆ ಸರ್ಕಾರ ಬದ್ಧವಾಗಿದೆಯೇ? ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋದಂತಹ ಉದ್ದೇಶವೇನೆಂದರೆ ಗ್ರಾಮೀಣ ಜಾಗೃತಿ ಸಮಿತಿಯ ಮೂಲಕ ಗ್ರಾಮ ಸಭೆಗಳ ಅಧಿಕಾರವನ್ನು ಮೊಟಕುಗೊಳಿಸುತ್ತಾರೆ ಎಂದು. ಗ್ರಾಮೀಣ ಜಾಗೃತಿ ಸಮಿತಿಯನ್ನು ರದ್ದುಗೊಳಿಸಿ, ಗ್ರಾಮ ಸಭೆಗಳ ಪ್ರಕ್ರಿಯೆಗಳನ್ನು ಎತ್ತಿ ಹಿಡಿಯುವುದಕ್ಕೆ ಸರ್ಕಾರ ಬದ್ಧವಾಗಿದೆಯೇ?

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆಯೇ ಬರುವುದಿಲ್ಲ. ಶ್ರೀ ನಂದನ ರೆಡ್ಡಿ ಮತ್ತು ಇತರರು ಗ್ರಾಮ ಸಭೆಗಳ ಮೂಲಕ ಆಯ್ಕೆಯಾಗಬೇಕೆಂದು ನ್ಯಾಯಾಲಯಕ್ಕೆ ಹೋಗಿರುವುದು, ಇವತ್ತಿನವರೆವಿಗೂ ಕೂಡ ಅದೇ ಪ್ರಕ್ರಿಯೆಯಲ್ಲಿಯೇ ಆಯ್ಕೆ ನಡೆಯುತ್ತಿದ್ದು, ಗ್ರಾಮ ಪಂಚಾಯಿತಿಯು ಅನುಷ್ಠಾನಗೊಳಿಸುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪುರಸಭೆ ಎನ್ನುವುದು ಸಾಂಕೇತಿಕವಾಗಿದೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಧ್ಯ ಬಾಯಿ ಹಾಕಬೇಡಿ. The Minister is capable.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಬೇಕೆನ್ನುವುದಷ್ಟೆ ನನ್ನ ವಾದ. ಮಾನ್ಯ ಸಚಿವರು, ದಯವಿಟ್ಟು ಇದರ ಬಗ್ಗೆ ಗಮನವನ್ನು ಹರಿಸಬೇಕು. ನಮ್ಮಲ್ಲಿ ಏನು ಗೊಂದಲವಿಲ್ಲ. ಒಂದು ಲಕ್ಷ ಜನ ಪ್ರತಿನಿಧಿಗಳದ್ದಾರೆ. ಅವರ ಆಶಯದಂತೆ ಗ್ರಾಮ ಸಭೆಗಳ ಮೂಲಕ ಆಯ್ಕೆಯಾಗಬೇಕೆನ್ನುವುದಷ್ಟೇ ನನ್ನ ಆಶಯವಾಗಿದೆ. ಇಲ್ಲಿರುವಂತಹ ಸಂವಿಧಾನ 73ನೇ ತಿದ್ದುಪಡಿ, ಬೇಲೂರಿನ ಘೋಷಣೆ, ಅಧಿಕಾರ ವಿಕೇಂದ್ರಿಕರಣಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗ್ರಾಮ ಸಭೆಗಳ ಮೂಲಕ ಆಯ್ಕೆ ಪ್ರಕ್ರಿಯೆಯನ್ನು ಬಿಟ್ಟು, ಉಳಿದ ಯಾವುದೇ ರೀತಿಯಲ್ಲಿ ಆಯ್ಕೆ ಮಾಡುವುದಿಲ್ಲ ಎನ್ನುವುದನ್ನು ಮಾನ್ಯ ಸಚಿವರು ಒಪ್ಪುತ್ತಾರೆಯೇ ಎನ್ನುವುದಷ್ಟೇ ನನ್ನ ಪ್ರಶ್ನೆ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನೇ ಸುತ್ತಿ ಬಳಸಿ ಪ್ರಶ್ನೆಯನ್ನು ಕೇಳಿದರೂ ಸಹ ಗ್ರಾಮ ಸಭೆಗಳ ಮುಖಾಂತರವೇ ಆಯ್ಕೆಯಾಗುವುದು. ಗ್ರಾಮೀಣ ಪ್ರದೇಶದಲ್ಲಿ ಫಲಾನುಭವಿಗಳ ಆಯ್ಕೆ ಸಂಬಂಧ ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ಗ್ರಾಮೀಣ ಜಾಗೃತಿ ಸಮಿತಿ ಗ್ರಾಮಗಳಲ್ಲಿ ಆಗುವಂತಹದ್ದನ್ನು ಪರಿಶೀಲನೆ ಮಾಡುವುದರ ಬಗ್ಗೆ ಇತ್ತಷ್ಟೆ, ಹೊರತು ಆಯ್ಕೆ ಮಾಡುವುದು ಎಂದು ಇರಲಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸದಸ್ಯರೇ, ಹೇಳುವುದನ್ನು ಪೂರ್ತಿಯಾಗಿ ಕೇಳಿ, ನಗರ ಪ್ರದೇಶಗಳಲ್ಲಿ ಆಶ್ರಯ ಸಮಿತಿಗಳು ಎಂ.ಎಲ್.ಎ., ಗಳ ಅಧ್ಯಕ್ಷತೆಯ ಅಧೀನದಲ್ಲಿ ಇರುತ್ತದೆ. ಅವರು ಆಯ್ಕೆ ಮಾಡುತ್ತಾರೆ. ಇದನ್ನು ಗ್ರಾಮ ಸಭೆಗಳೇ ಆಯ್ಕೆ ಮಾಡುವುದು, ಇದರಲ್ಲಿ ಏನಾದರೂ ವ್ಯತ್ಯಾಸಗಳೇನಾದರೂ ಇದ್ದರೆ, ಪರಿಶೀಲನೆ ಮಾಡುವುದಕ್ಕೆ ಗ್ರಾಮೀಣ ಜಾಗೃತಿ ಸಮಿತಿ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆಯೆಂದರೆ, ಗ್ರಾಮೀಣ ಜಾಗೃತಿ ಸಮಿತಿಯು ಇರುವುದರಿಂದ ಗ್ರಾಮ ಸಭೆಗಳು ಫಲಾನುಭವಿಗಳನ್ನು ಆಯ್ಕೆ ಮಾಡುವ ಶಕ್ತಿಗಳನ್ನು ಕಳೆದುಕೊಂಡಿದೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

(ಮುಂದು)

(1163)22-11-2017/12:20/ಎಸ್‌ಪಿಆರ್/ಜಿಆರ್

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರು ಹೇಳುತ್ತಿರುವ ವಿಷಯ ಸುಳ್ಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಗ್ರಾಮ ಸಭೆಗಳಲ್ಲಿ ಆಯ್ಕೆಯಾದ . . .

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯತಿಗಳು ಅಧಿಕಾರವನ್ನು ಕಳೆದುಕೊಂಡಿರುವುದು ನಿಜ.

**ಸಭಾಪತಿಯವರು:-** ಮಧ್ಯದಲ್ಲಿ ಬಾಯಿ ಹಾಕಬೇಡಿ. ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ಅವರು ಸಮರ್ಥರಿದ್ದು ಹಾಗೂ ಅವರಿಗೆ ಶಕ್ತಿಯಿದೆ. .

**(ಗೊಂದಲ)**

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರ ತಪ್ಪಾಗಿದೆ. ಗ್ರಾಮ ಸಭೆಗಳ ಮೂಲಕವೇ ವಸತಿ ಯೋಜನೆಯ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವಂತೆ ನಡೆಯುತ್ತಿಲ್ಲ. ದಯಮಾಡಿ ನಾನು ಹೇಳುತ್ತಿರುವ ಅಂಶದ ಬಗ್ಗೆ ಮಾನ್ಯ ಸಚಿವರು ಕೇಳಿಸಿಕೊಳ್ಳಬೇಕು. ನಾವು ಸಂವಿಧಾನ ಬದ್ಧವಾಗಿ ಮಾತನಾಡುತ್ತಿರುವಾಗ ಮಾನ್ಯ ಸಚಿವರು ನ್ಯಾಯವನ್ನು ಒಪ್ಪಿಕೊಳ್ಳಬೇಕು. ನೀವು ಶಾಸಕರಿದ್ದೀರಿ. ನಿಮ್ಮ ಬಗ್ಗೆ ನನಗೆ ವಿರೋಧವಿಲ್ಲ. ಜಾಗೃತ ಸಮಿತಿಗಳ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯಿಂದಾಗಿ ಗ್ರಾಮ ಸಭೆಯ ಅಧಿಕಾರ ಸಂಪೂರ್ಣವಾಗಿ ಮೊಕಟುಗೊಂಡಿದೆ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಉತ್ತರವನ್ನು ನೀಡಲು ಅವಕಾಶ ಕೊಡಿ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುತ್ತಿರುವ ಮಾತನ್ನು ಸ್ವಲ್ಪ ಕೇಳಲಿ. ವಸತಿ ಯೋಜನೆಯ ಅರ್ಹ ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕವೇ ಆಯ್ಕೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿಗಳ ಮೂಲಕವೇ ಯೋಜನೆಯು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಷ್ಠಾನಗೊಳ್ಳುತ್ತಿದೆ ಎಂಬ ವಿಚಾರಗಳನ್ನು ಹೇಳುತ್ತಿದ್ದರೂ ಸಹಾ ಮಾನ್ಯ ಸದಸ್ಯರು ಗ್ರಾಮ ಸಭೆಗಳ ಅಧಿಕಾರವನ್ನು ಮೊಕಟುಗೊಳಿಸುತ್ತೀದ್ದೀರಿ ಎಂಬುದಾಗಿ ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವ ಅಂಶವು ಸಾಧ್ಯವೇ ಇಲ್ಲ. ಯಾವುದೇ ರೀತಿಯಲ್ಲಾದರೂ ಸಹ ಗ್ರಾಮಸಭೆಗಳ ಅಧಿಕಾರವನ್ನು ಮೊಕಟುಗೊಳಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಇದು ಮಾನ್ಯ ಸದಸ್ಯರ ತಪ್ಪು ಕಲ್ಪನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ 2016-17 ಮತ್ತು 2017-18 ನೇ ಸಾಲುಗಳಲ್ಲಿ ಬಸವ ವಸತಿ ಯೋಜನೆಯಡಿ 2,30,738 ಮನೆ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಅದರನ್ವಯ 20,712 ಮನೆಗಳು ಪೂರ್ಣಗೊಂಡಿದೆ ಎಂದು ತಿಳಿಸಿದ್ದಾರೆ. ಇದು ಹೆಚ್ಚು-ಕಡಿಮೆ ಯೋಜನೆಯ ಶೇಕಡಾ 9 ರಷ್ಟಿದೆ. ಮುಂದುವರೆದಂತೆ, 80,526 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 1,29,361 ಮನೆಗಳು ಪ್ರಾರಂಭವಾಗ ಬೇಕಿರುತ್ತದೆ ಎಂದು ತಿಳಿಸಲಾಗಿದೆ. ಹಾಲಿ ಸಾಧಿಸಿರುವ ಪ್ರಗತಿ ಸರ್ಕಾರಕ್ಕೆ ಸರಿ ಎನಿಸುತ್ತಿದೆಯೇ? ಯೋಜನೆಯ ಶೇಕಡಾ 9 ರಷ್ಟು ಮನೆಗಳು ಇನ್ನೂ ನಿರ್ಮಾಣವಾಗಿಲ್ಲ, ಪರಿಸ್ಥಿತಿ ಹೀಗಿರುವಾಗ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಹಾಗೂ ಯಾವಾಗ ಯೋಜನೆಯನ್ನು ಪೂರ್ಣಗೊಳಿಸುತ್ತಾರೋ?

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, 2016-17 ಮತ್ತು 2017-18 ನೇ ಸಾಲುಗಳಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯಕ್ರಮದಲ್ಲಿ, ಮಾನ್ಯ ಸದಸ್ಯರೇ ಹೇಳಿರುವಂತೆ, ಶ್ರೀಮತಿ ನಂದನ ರೆಡ್ಡಿ ಮತ್ತು ಇತರರು ಉಚ್ಛ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ, ಫೆಬ್ರವರಿ ಮಾಹೆಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಗೆ ತಡೆಯಾಜ್ಞೆಯನ್ನು ತಂದಿದ್ದರು. ಇದರಿಂದಾಗಿ ಸುಮಾರು ನಾಲ್ಕು ತಿಂಗಳುಗಳ ಕಾಲ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಸ್ಥಗಿತಗೊಂಡಿತ್ತು. ಹೀಗಾಗಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಗ್ರಾಮ ಸಭೆಯ ಅಧಿಕಾರವನ್ನು ಮೊಕಟು ಮಾಡುತ್ತಿದೆ ಎಂಬ ಕಾರಣಕ್ಕಾಗಿ ಶ್ರೀಮತಿ ನಂದನ ರೆಡ್ಡಿ ಮತ್ತು ಇತರರು ಉಚ್ಛ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆಯೇ ಹೊರತು, ಮನೆಗಳನ್ನು ನಿರ್ಮಾಣ ಮಾಡಬಾರದು ಎಂಬುದಾಗಿ ಎಲ್ಲಿಯೂ ಹೇಳಿಲ್ಲ. ದಯಮಾಡಿ ನನ್ನ ಮಾತನ್ನು ಸಚಿವರು ಕೇಳಲಿ. ಯಾವುದೇ ಒಂದು ಸರ್ಕಾರದ ಯೋಜನೆಯಲ್ಲಿ ಪ್ರಗತಿಯನ್ನು ಸಾಧಿಸುತ್ತಿದ್ದರೆ, ತಾಲ್ಲೂಕಿಗೆ ಒಂದಂತೆ ತಾಲ್ಲೂಕು ಪಂಚಾಯತಿಯ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಯನ್ನು ಸರ್ಕಾರವೇ ನೇಮಕ ಮಾಡಿದೆ. ಅಂತಹ ಅಧಿಕಾರಿಗಳಿಗೆ ಕಳೆದ 16 ತಿಂಗಳುಗಳಿಂದ ವೇತನವನ್ನು ಪಾವತಿಸಿರುವುದಿಲ್ಲ. ಆದರೂ ಸಹ ಅವರುಗಳು ಕೆಲಸವನ್ನು ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಹೇಗೆ ಪ್ರಗತಿಯನ್ನು ಸಾಧಿಸುವುದಕ್ಕಾಗುತ್ತದೆ?

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವ ಅಂಶವು ಅಪ್ರಸ್ತುತವಾದುದ್ದು. ಉಚ್ಛ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯಂತೆ, ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ನಾಲ್ಕು ತಿಂಗಳುಗಳಿಂದ ಸ್ಥಗಿತಗೊಂಡಿತ್ತು. ಆದ್ದರಿಂದ ಯೋಜನೆ ಅನುಷ್ಠಾನವು ವಿಳಂಬವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಒಂದು ಕ್ರಮ ಕೈಗೊಂಡರೆ ಮಾತ್ರವೇ ಮತ್ತೊಂದನ್ನು ಕೈಗೊಳ್ಳಲಾಗುವುದು. ಎಲ್ಲಿಯವರೆಗೆ ಅರ್ಹ ಫಲಾನುಭವಿಗಳ ಆಯ್ಕೆ ಆಗುವುದಿಲ್ಲವೋ ಅಲ್ಲಿಯವರೆಗೆ ವರ್ಕ್ ಆರ್ಡರ್‌ನ್ನು ನೀಡಲಾಗುವುದಿಲ್ಲ. ವರ್ಕ್ ಆರ್ಡರ್ ನೀಡುವವರೆಗೆ ಮನೆಗಳ ನಿರ್ಮಾಣದ ಕೆಲಸಗಳು ಆಗುವುದಿಲ್ಲ. ಈ ಕಾರಣಗಳಿಂದಾಗಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿದೆ ಹೊರತು, ಯಾವುದೇ ಕಾರಣದಿಂದಾಗಿ ಮಾನ್ಯ ಸದಸ್ಯರು ಹೇಳುತ್ತಿರುವಂತೆ ನೋಡಲ್ ಅಧಿಕಾರಿಗಳ ವಿಷಯ ಇಲ್ಲಿ ಅನ್ವಯಿಸುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮನೆ ನಿರ್ಮಾಣದ ಪ್ರಗತಿ ವಿಷಯ ಬಂದಾಗ ಅಧಿಕಾರಿಗಳಿಗೆ ನೀವು 16 ತಿಂಗಳುಗಳಿಂದ ವೇತನವನ್ನು ಪಾವತಿಸದೇ ಇರುವಂತಹ ಹಿನ್ನೆಲೆಯಲ್ಲಿ ಅವರುಗಳು ಜಿ.ಪಿ.ಎಸ್., ತಂತ್ರಾಂಶವನ್ನು ಪಾಲಿಸುತ್ತಿಲ್ಲ ಎಂಬ ಅಂಶವು ನಿಮ್ಮ ಗಮನಕ್ಕೆ ಬಂದಿರುತ್ತದೆ. ದಯಮಾಡಿ ನಾನು ಹೇಳುತ್ತಿರುವುದನ್ನು ಮಾನ್ಯ ಸಚಿವರು ಕೇಳಬೇಕು. ಸತ್ಯ ಸಂಗತಿಯನ್ನು ಒಪ್ಪಿಕೊಳ್ಳೋಣ. ನಾನು ಮಾನ್ಯ ಸಚಿವರ ವಿರುದ್ಧವಾಗಿ ಹೇಳುತ್ತಿಲ್ಲ. ಯೋಜನೆಯಲ್ಲಿ ಪ್ರಗತಿ ಸಾಧಿಸಬೇಕೆನ್ನುವ ಕಾರಣದಿಂದ ನಾನು ಹೇಳುತ್ತಿದ್ದೇನೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶಕ್ಕೆ ಸಂಬಂಧಪಟ್ಟಂತೆ ಇನ್ನೋರ್ವ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಪ್ರಶ್ನೆಯನ್ನು ಕೇಳಿದ್ದಾರೆ. ಸದರಿ ಪ್ರಶ್ನೆ ಬಂದಾಗ ಅದರಲ್ಲಿ ಉತ್ತರವನ್ನು ನೀಡಲಾಗುವುದು. ನೋಡಲ್ ಅಧಿಕಾರಿಗಳಿಗೂ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಗೂ ಯಾವುದೇ ರೀತಿ ಸಂಬಂಧವಿಲ್ಲ. ಪ್ರಸ್ತುತ ನೋಡಲ್ ಅಧಿಕಾರಿಗಳು ನಮ್ಮ ಬಳಿ ಕೆಲಸವನ್ನು ಮಾಡುತ್ತಿಲ್ಲ. ಉಚ್ಛ ನ್ಯಾಯಾಲಯದ ಆದೇಶದನ್ವಯ ಈಗಾಗಲೇ ಮೇ ತಿಂಗಳವರೆಗೆ ವೇತನವನ್ನು ನೀಡಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಅಧಿಕಾರ ವಿಕೇಂದ್ರಿಕರಣ ವಿಚಾರದಲ್ಲಿ ಸರ್ಕಾರವು ಕೊಟ್ಟಂತಹ ಉತ್ತರವು ಸರಿಯಾಗಿರುವುದಿಲ್ಲ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿರುವ ಉತ್ತರವು ಸರಿಯಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಹೀಗಾಗಿ ಮಾನ್ಯ ಸದಸ್ಯರು ವಿತಂಡ ವಾದವನ್ನು ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿತಂಡ ವಾದವಲ್ಲ. ವಾಸ್ತವಿಕ ವಿಚಾರವನ್ನು ಸರ್ಕಾರ ಒಪ್ಪಿಕೊಳ್ಳಬೇಕು.

**(ಗೊಂದಲ)**

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಸರಿಯಾದ ಮಾಹಿತಿಯನ್ನು ನೀಡಿದ್ದೇನೆ. ಇಂದಿಗೂ ಸಹ ಗ್ರಾಮ ಸಭೆಗಳ ಮುಖಾಂತರ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿಯೇ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಇದರಲ್ಲಿ ಯಾವುದೇ ರೀತಿಯಾದ ತಪ್ಪು ಮಾಹಿತಿ ಇಲ್ಲ.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಗ್ರಾಮ ಸಭೆಗಳ ಮುಖಾಂತರ ಫಲಾನುಭವಿಗಳ ಆಯ್ಕೆ ಆಗುತ್ತಿಲ್ಲ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4484**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು ಎಷ್ಟು ಎಂದು ಕೇಳಿರುವ ಪ್ರಶ್ನೆಗೆ ಒಟ್ಟು 1,340 ಮಂಜೂರಾದ ಹುದ್ದೆಗಳಲ್ಲಿ 976 ಹುದ್ದೆಗಳು ಭರ್ತಿಯಾಗಿದ್ದು, 364 ಹುದ್ದೆಗಳು ಖಾಲಿ ಇರುತ್ತದೆ ಎಂಬುದಾಗಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಮುಂದುವರೆದು, ನೌಕರರಿಲ್ಲದೆ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿರುವ ಪ್ರಶ್ನೆಗೆ ಸರ್ಕಾರವು ಹೌದು ಎನ್ನುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ನಮ್ಮ ಸರ್ಕಾರ ಬದ್ಧ ಸರ್ಕಾರ, ನುಡಿದಂತೆ ನಡೆದ ಸರ್ಕಾರ ಎಂಬುದಾಗಿ ಹೇಳುತ್ತಿದೆ. ಆದರೂ ಇಷ್ಟು ಹುದ್ದೆಗಳು ಖಾಲಿಯಾಗಿದೆ ಎಂಬ ವಿಚಾರವನ್ನು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಕ್ಕೆ ಕೇಳಬಯಸುತ್ತೇನೆ. ಸರ್ಕಾರವು ವಿವಿಧ ಭಾಗ್ಯ ಯೋಜನೆಗಳನ್ನು ಜಾರಿಗೊಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕರ ಕೆಲಸಗಳನ್ನು ಮಾಡುವುದು ಹೇಗೆ? ಕಂದಾಯ ಹಾಗೂ ಸರ್ವೆ ಇಲಾಖೆಗಳಲ್ಲಿ ಸಾರ್ವಜನಿಕರು ಕೆಲಸಗಳನ್ನು ಮಾಡಿಸಿಕೊಳ್ಳುವುದು ತುಂಬಾ ಕಷ್ಟ ಎಂಬ ಮಾತನ್ನು ನಾನು ಹೇಳುತ್ತೇನೆ. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ, ಹಾಲಿಯಿರುವ ನೌಕರರ ಮೇಲೆ ಕೆಲಸದ ಒತ್ತಡವು ಜಾಸ್ತಿಯಾಗುತ್ತದೆ. ಇಂತಹ ಒತ್ತಡವನ್ನು ನೌಕರರು ಬೇರೆ ರೂಪದಲ್ಲಿ ಫಲಾನುಭವಿಗಳ ಮೇಲೆ ಹೇರಿ, ಅವರಿಂದ ಲಂಚವನ್ನು ವಸೂಲಿ ಮಾಡುವಂತಹ ಕೆಲಸಗಳನ್ನು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ, ದಯಮಾಡಿ ಖಾಲಿಯಿರುವ ಎಲ್ಲಾ ವೃಂದದ ಹುದ್ದೆಗಳನ್ನು ಭರ್ತಿ ಮಾಡಿ. ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿಯಿರುವುದರಿಂದ ಸಾರ್ವಜನಿಕರಿಗೆ ಇಲಾಖೆಯಲ್ಲಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ತುಂಬಾ ಕಷ್ಟವಾಗುತ್ತಿದೆ. ಕೆಲಸದ ಒತ್ತಡದಿಂದಾಗಿ ಸಾರ್ವಜನಿಕರ ಮೇಲೆ ಅಧಿಕಾರಿಗಳಿಂದ ಶೋಷಣೆಯಾಗುತ್ತಿದೆ. ಆರು ತಿಂಗಳಿಂದ ಒಂದು ವರ್ಷದವರೆಗೆ ಸಮೀಕ್ಷೆ ಕಾರ್ಯಗಳು ನಡೆಯುತ್ತಿದ್ದು ಖಾತೆ, ಪಹಣಿಗಳು ಆಗುತ್ತಿಲ್ಲ. ಅಣ್ಣ-ತಮ್ಮಂದಿರು ಭಾಗ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಸರ್ಕಾರದ ವಿವಿಧ ರೀತಿಯ ಸೌಲಭ್ಯಗಳನ್ನು ಪಡೆಯಲೂ ಸಹ ಅನಾನುಕೂಲವಾಗುವಂತಹ ಸಂದರ್ಭಗಳು ಜಾಸ್ತಿಯಾಗಿವೆ. ಆದ್ದರಿಂದ ದಯಮಾಡಿ ಖಾಲಿಯಿರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಿ. ಈ ಸಂದರ್ಭದಲ್ಲಿ ನಾನು ವಿಶೇಷವಾದ ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ಅದೇನೆಂದರೆ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ಭೌಗೋಳಿಕವಾಗಿ ನಮ್ಮ ರಾಜ್ಯಕ್ಕೆ ಸೇರುತ್ತದೆಯೇ ಅಥವಾ ನೆರೆಯ ರಾಜ್ಯವಾದ ಆಂಧ್ರ ಪ್ರದೇಶಕ್ಕೆ ಸೇರುತ್ತದೆಯೇ? ಸದರಿ ತಾಲ್ಲೂಕುನಲ್ಲಿ ಒಬ್ಬ ಕಂದಾಯ ನಿರೀಕ್ಷಕ ಮತ್ತು ಸಮೀಕ್ಷಕರೂ ಸಹಾ ಇಲ್ಲ. ವಾಸ್ತವವಾಗಿ ಪಾವಗಡ ತಾಲ್ಲೂಕು ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಭಾಗದಲ್ಲಿದೆ. ಆದರೆ ಅದು ಆಂಧ್ರಪ್ರದೇಶಕ್ಕೆ ಸೇರಿಕೊಂಡಿದೆಯೇ ಎಂಬುದು ನನ್ನ ಅನುಮಾನ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಉತ್ತರ ಹೇಳಲು ಅವಕಾಶವನ್ನು ನೀಡಿ. ನೀವು ಈ ರೀತಿಯಾದ ಹೇಳಿಕೆಯನ್ನು ನೀಡಿದರೆ ಹೇಗೆ? ನಿಮಗೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ನೀಡುತ್ತೇನೆ. ಮಾನ್ಯ ಸದಸ್ಯರು ಪಾವಗಡ ತಾಲ್ಲೂಕಿನಲ್ಲಿ ಸರ್ಕಾರಿ ಅಧಿಕಾರಿಗಳಿಲ್ಲ. ಅದು ನಮ್ಮ ರಾಜ್ಯಕ್ಕೆ ಸೇರಿದೆಯೇ ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಕಛೇರಿಗಳಲ್ಲಿ ಅಧಿಕಾರಿಗಳು ಇಲ್ಲದೇ ಹೋದರೆ, ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುವುದು ನಿಜವಾಗಿದೆ. ಈ ದೃಷ್ಟಿಯಿಂದ ಖಾಲಿಯಿರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಪದೋನ್ನತಿ ನೀಡುವ ಬಗ್ಗೆಯೂ ಸಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಒಬ್ಬ ಹೆಣ್ಣು ಮಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದರ ಪರಿಣಾಮವಾಗಿ ಪದೋನ್ನತಿ ಪ್ರಕ್ರಿಯೆಯು ನಿಂತು ಹೋಗಿತ್ತು. ಈಗ ಪ್ರಕ್ರಿಯೆಗಳನ್ನು ಸರಿಪಡಿಸಿಕೊಂಡು ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು. ಮಾನ್ಯ ಸದಸ್ಯರ ಆತಂಕವು ನನಗೆ ಅರ್ಥವಾಗುತ್ತದೆ. ಆದಷ್ಟು ಶೀಘ್ರದಲ್ಲಿ ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಲಾಗುವುದು.

**ಸಭಾಪತಿಯವರು:-** ಪಾವಗಡ ತಾಲ್ಲೂಕು ನಮ್ಮ ರಾಜ್ಯದಲ್ಲಿಯೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಮಾನ್ಯ ಸದಸ್ಯರಿಗೆ ಆತಂಕವುಂಟಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ನಂತರವಷ್ಟೇ ಪಾವಗಡದ ವಾಸ್ತವಾಂಶ ನನಗೆ ಗೊತ್ತಾಗಿರುವುದು. ಆ ರೀತಿಯ ಸಂಶಯ ಅವರಿಗೆ ಏಕೆ ಮೂಡಿದೆ ಎಂಬುದು ನನಗೆ ಗೊತ್ತಿಲ್ಲ. ಆದಾಗ್ಯೂ ಕೂಡ ನಾನು ಸದ್ಯದಲ್ಲಿಯೇ ಪಾವಗಡ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕಿಗೆ ಭೇಟಿ ನೀಡಬೇಕೆಂದುಕೊಂಡಿದ್ದೇನೆ. ಸದರಿ ಸಂದರ್ಭದಲ್ಲಿ ಅವರ ಅನುಮಾನಕ್ಕೆ ಪರಿಹಾರವನ್ನು ಕಂಡು ಹಿಡಿಯಲಾಗುವುದು.

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ಮಾನ್ಯ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರರವರು ಹಾಗೂ ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಉಪಸ್ಥಿತರಿದ್ದಾರೆ.

**ಸಭಾಪತಿಯವರು:-** ಬೇರೆ ವಿಚಾರಗಳು ಇಲ್ಲಿ ಬೇಡ. ನೇರವಾಗಿ ನಿಮ್ಮ ಪ್ರಶ್ನೆಯನ್ನು ಕೇಳಿ. ಮಾನ್ಯ ಸಚಿವರು ಉತ್ತರವನ್ನು ನೀಡಲು ತಯಾರಿದ್ದಾರೆ.

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಶೀಘ್ರವಾಗಿ ಪಾವಗಡ ತಾಲ್ಲೂಕಿಗೆ ಕಂದಾಯ ನಿರೀಕ್ಷಕ ಹಾಗೂ ಸಮೀಕ್ಷಕರನ್ನು ನಿಯೋಜಿಸಿ. ತುಮಕೂರು ಜಿಲ್ಲೆಯ ಬೇರೆ ತಾಲ್ಲೂಕಿನಿಂದ ಸಿಬ್ಬಂದಿಗಳನ್ನು ತೆಗೆದು ಪಾವಗಡಕ್ಕೆ ನಿಯೋಜಿಸಬೇಡಿ. ಏಕೆಂದರೆ ಅಲ್ಲಿ ಸಿಬ್ಬಂದಿಯ ಕೊರತೆಯುಂಟಾಗಿ ಮತ್ತೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಕೇವಲ ಇಬ್ಬರು ಸಮೀಕ್ಷಕಗಳದ್ದಾರೆ ಹಾಗೂ ಎಲ್ಲಾ ತಾಲ್ಲೂಕುಗಳಲ್ಲಿ ಕಂದಾಯ ನಿರೀಕ್ಷಕರು ಕಡಿಮೆ ಸಂಖ್ಯೆಯಲ್ಲಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರು ಪಾವಗಡ ತಾಲ್ಲೂಕಿನ ಭೇಟಿ ನೀಡುತ್ತೇನೆ ಎಂಬುದಾಗಿ ಹೇಳುತ್ತಿದ್ದಾರೆ.

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಪಾವಗಡ ತಾಲ್ಲೂಕಿಗೆ ಸಿಬ್ಬಂದಿಗಳನ್ನು ನಿಯೋಜಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಯಾವುದಾದರೂ ಒಂದು ಕಾರ್ಯಕ್ರಮಕ್ಕೆ ಮಾನ್ಯ ಸಚಿವರನ್ನು ಆಹ್ವಾನಿಸಿ. ನಾನು ಬೆಳಗ್ಗೆಯಿಂದ ಪ್ರಶ್ನೋತ್ತರ ಅವಧಿಯಲ್ಲಿ ಬೇರೆ ಸದಸ್ಯರುಗಳಿಗೆ ಅವಕಾಶವನ್ನು ನೀಡಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಉಗ್ರಪ್ಪನವರೇ ಕುಳಿತುಕೊಳ್ಳಿ. ಸದನ ಪ್ರಾರಂಭವಾದಾಗಿನಿಂದ ನಾನು ನಿಭಾಯಿಸಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸಮೀಕ್ಷಕರ ಹುದ್ದೆಗಳಿಗೆ ನೇಮಕಾತಿಯಾಗಿದೆ. ಆಯ್ಕೆಗೊಂಡ ಸಮೀಕ್ಷಕರುಗಳು ತರಬೇತಿಯಲ್ಲಿದ್ದಾರೆ. ಇನ್ನು ಎರಡು ತಿಂಗಳುಗಳ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗುತ್ತಾರೆ. ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ತೀರಾ ಅನಿವಾರ್ಯದ ಸಂದರ್ಭದಲ್ಲಿ ಬೇರೆ ಕಡೆಯಿಂದ ಯಾರಾದರೂ ಖಾಲಿ ಹುದ್ದೆಗೆ ಹೋಗಲು ತಯಾರಿದ್ದರೆ ಪಾವಗಡಕ್ಕೆ ತಕ್ಷಣವೇ ನಿಯೋಜಿಸುವ ಕೆಲಸವನ್ನು ಮಾಡುತ್ತೇವೆ.

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಯಾದಾಗಿನಿಂದ ಹೇಳುತ್ತಲೇ ಬಂದಿದ್ದಾರೆ. ಮಾನ್ಯ ಸಚಿವರು ಬರುವಾಗ ಅಧಿಕಾರಿಗಳು ಸಹ ಬರಬೇಕಲ್ಲವೇ?

**ಸಭಾಪತಿಯವರು:-** ಮಂತ್ರಿಗಳು ಬಂದಾಗ ಎಲ್ಲಾ ಕೆಲಸಗಳಾಗುತ್ತವೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಬಂದರೆ, ಅವರ ಹಿಂದೆ ಅಧಿಕಾರಿಗಳೂ ಸಹ ಬರುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸಮೀಕ್ಷಕರನ್ನು ನಾವು ನೇಮಕ ಮಾಡುವುದಿಲ್ಲ. ಅವರುಗಳು ಕೆ.ಪಿ.ಎಸ್.ಸಿ. ವತಿಯಿಂದ ನೇಮಕಗೊಳ್ಳುತ್ತಾರೆ. ಈಗ ಆಯ್ಕೆ ಪ್ರಕ್ರಿಯೆಯು ಸುಲಭವಾಗಿದೆ. ನಾವೇ ನೇರವಾಗಿ ಸಿಬ್ಬಂದಿಗಳನ್ನು ಆಯ್ಕೆ ಮಾಡುವುದಾದರೆ ಮಾಡಿ ಬಿಡುತ್ತಿದ್ದೇವು. ಆ ರೀತಿಯಾಗಿ ನಾವು ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಕಾಂತರಾಜು(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ವೇತನವನ್ನು ನೀಡಲು ಹಣವಿಲ್ಲ ಹೀಗಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ ಎಂಬಂತಾಗಿಬಿಡುತ್ತದೆ ಹಾಗೂ ಕೆಟ್ಟ ಸಂದೇಶ ರವಾನೆಯಾಗುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4446**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ನಾನು ಈ ಇಲಾಖೆಗೆ ಸಂಬಂಧಪಟ್ಟಂತೆ ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೇನೆ. ರಾಜ್ಯ ಸರ್ಕಾರದ ಮಹತ್ವಾಂಕಾಕ್ಷೆಯ ಯೋಜನೆ ಇದಾಗಿದೆ. ಈ ಮುಂಚೆ ಸರ್ಕಾರವು ಬೇರೆ ಬೇರೆ ಇಲಾಖೆಗಳಿಂದ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು.

(ಮುಂದು)

(1164) 12.30/22.11.2017/ ಸಿಎಸ್/ಜಿಆರ್

ಶ್ರೀ ಕೆ.ಸಿ.ಕೊಂಡಯ್ಯ(ಮುಂದು):- ಕಳೆದ ವರ್ಷ ಅಂದರೆ ಸೆಪ್ಟೆಂಬರ್ 2016ರಿಂದ ಇದನ್ನೆಲ್ಲ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ತರಲಾಗಿದೆ. ಇದಾದ ಮೇಲೆ "Centre for Entrepreneurship Development of Karnataka (CEDOK)" ಎನ್ನುವ ಸಂಸ್ಥೆಯನ್ನು ನಿರ್ಮಿಸಿ ಅದರ ಮೂಲಕ ತರಬೇತಿಯನ್ನು ನೀಡಲಾಗುತ್ತಿತ್ತು. ಈ ಯೋಜನೆಯಡಿಯಲ್ಲಿ 1 ದಿವಸದಿಂದ 6 ದಿವಸಗಳ ವರೆಗೆ ತರಬೇತಿಯನ್ನು ನೀಡಲಾಗುತ್ತಿದೆ. ಇಷ್ಟು ದಿವಸಗಳ ಅವಧಿಯಲ್ಲಿ ಯಾವ ರೀತಿಯ ತರಬೇತಿಯನ್ನು ನೀಡಲಾಗುತ್ತಿದೆ, ಇದರ impact study ಏನು ಎನ್ನುವುದರ ಅಧ್ಯಯನ ಮಾಡಲಾಗಿದೆಯೇ? ಈ 6 ದಿವಸಗಳ ತರಬೇತಿಯಿಂದ ಯಾರಿಗಾದರೂ ಸ್ವಂತ ಉದ್ಯೋಗ ದೊರಕಿದೆಯೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಈ ತರಬೇತಿ ಕಾರ್ಯಕ್ರಮ ಜಾರಿಗೆ ಬಂದು ಒಂದು ವರ್ಷ ಆಗಿದೆ, ಒಂದು ವರ್ಷದಿಂದ ಈ ತರಬೇತಿ ಕಾರ್ಯಕ್ರಮಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕು. ನನ್ನ ಸಲಹೆ ಏನೆಂದರೆ ಈ ತರಬೇತಿ ಕಾರ್ಯಕ್ರಮ ಕನಿಷ್ಠ 3 ತಿಂಗಳು ಮಾಡಿದಾಗ ಮಾತ್ರ ಯಾರಿಗಾದರೂ ಸ್ವಂತ ಉದ್ಯೋಗಗಳನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದು ಒಂದು ಪ್ರತ್ಯೇಕವಾದ ಇಲಾಖೆಯೇ ಆಗಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಟ್ರಾಕ್ಟರ್‌ಗಳನ್ನು ರಿಪೇರಿ ಮಾಡುವುದಕ್ಕೆ ತರಬೇತಿಯನ್ನು ನೀಡುವುದು, ಪಂಪ್‌ಸೆಟ್‌ಗಳನ್ನು ರಿಪೇರಿ ಮಾಡುವುದು, ಹಾಗೆಯೇ pesticides ಗಳನ್ನು spray ಮಾಡಲಿಕ್ಕೆ ಬಳಸುವ dusters ಇವೆಲ್ಲ mechanized ಬಂದಿವೆ.ಈ ಬಗ್ಗೆ ತರಬೇತಿಯನ್ನು ನೀಡಬೇಕಾಗುತ್ತದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಶೇಕಡ 60ರಷ್ಟು ಭಾಗದಷ್ಟು ಜನರು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಈಗ harvesting machines ಗಳಿವೆ, ಇವುಗಳ ಬಳಕೆ ಬಗ್ಗೆ ತರಬೇತಿಯನ್ನು ನೀಡಿದರೆ atleast, self employment ಗ್ರಾಮೀಣ ಮಟ್ಟದಲ್ಲಿ ಸಿಗುತ್ತದೆ. ಅದನ್ನು ಬಿಟ್ಟು ನಗರಗಳಲ್ಲಿ ಬಂದು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ಬೋರ್ಡ್ ಹಾಕಿಕೊಂಡು ಅಲ್ಲಿ ತರಬೇತಿ ಮಾಡುತ್ತಾರೋ, ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಇಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯ ದುರ್ಬಳಕೆ ಆಗುತ್ತಿದೆ. ಸರ್ಕಾರ ಮುಂದೆ ಇದಕ್ಕಾಗಿ ಸೂಕ್ತ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, ಈ CEDOK ಎನ್ನುವುದು ನೇರವಾಗಿ ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಇಲಾಖೆಯ ಅಡಿಯಲ್ಲಿ ಬರುತ್ತದೆ. ಅಲ್ಲಿ ಯಾವುದೇ skilling programme ಮಾಡುತ್ತಿರಲಿಲ್ಲ. They were trained to give only awareness programmes. 3 ದಿವಸ 6 ದಿವಸಗಳಲ್ಲಿ ಯಾವುದೇ skilling programme ಇವತ್ತಿಗೂ ನೀಡುತ್ತಿಲ್ಲ. They are giving only awareness programmes. ಸರ್ಕಾರದಲ್ಲಿರುವ ವಿವಿಧ ಇಲಾಖೆಗಳಲ್ಲಿ ಏನೇನು ಕಾರ್ಯಕ್ರಮಗಳಿವೆ, ಅದರ ಬಗ್ಗೆ ಜಾಗೃತಿಯನ್ನು ಮೂಡಿಸುವುದು, awareness create ಮಾಡುವುದು, especially it is more related to the Industries Department. ಇದು CEDOK ಸಂಸ್ಥೆಯ ಕೆಲಸ. ಹೊಸದಾಗಿ ಅದು Skill Development Department ಗೆ ಸೇರಿದೆ. ಈ CEDOK ಸಂಸ್ಥೆಯನ್ನು ಮುಂದೆ ತರಬೇತಿ ಕೇಂದ್ರವನ್ನಾಗಿ ಬಳಕೆ ಮಾಡಲಾಗುವುದೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ.

ಶ್ರೀ ಕೆ.ಸಿ.ಕೊಂಡಯ್ಯ:- ಈ 6 ದಿವಸಗಳಲ್ಲಿ ಫಲಾನುಭವಿಗಳಿಗೆ ಯಾವ ರೀತಿಯ ತರಬೇತಿಯನ್ನು ನೀಡಲು ಸಾಧ್ಯವಾಗುತ್ತದೆ?

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, it is only an awareness programme.

ಶ್ರೀ ಕೆ.ಸಿ.ಕೊಂಡಯ್ಯ:- ಮಾನ್ಯ ಸಭಾಪತಿಯವರೇ, ಏನು awareness ಕೊಡುತ್ತಿದ್ದಾರೆ?

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, earlier they were only doing awareness programmes. ನಾವು ಅವರಿಗೆ ನೇರವಾಗಿ skilling programmes ಮಾಡಲು ಹೇಳುತ್ತಿಲ್ಲ. ಕೌಶಲ್ಯಾಭಿವೃದ್ಧಿ ಫಲಾನುಭವಿಗಳಿಗಾಗಿ we have created a web site. ಇದಕ್ಕೆ ಸುಮಾರು 7 ಲಕ್ಷದಷ್ಟು ಜನರು online ಮೂಲಕ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಸುಮಾರು 705 sectors, trade ಗಳಲ್ಲಿ ಇವರಿಗೆ ತರಬೇತಿಯನ್ನು ನೀಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಮುಂದಿನ ದಿವಸಗಳಲ್ಲಿ ಯಾರ್ಯಾರು ಫಲಾನುಭವಿಗಳಿರುತ್ತಾರೆ, ಇದರ ಮೂಲಕ ತರಬೇತಿ ಕೊಡಿಸುವ ವ್ಯವಸ್ಥೆ ಮಾಡಲಾಗುವುದು. As of now, they are only doing awareness programme. Hon'ble Member is telling about 3 days or 6 days programme. It is only an awareness programme and not a training programme.

ಸಭಾಪತಿಯವರು:- ಮಾನ್ಯ ಸಚಿವರು, ಅದು ಟ್ರೈನಿಂಗ್ ಪ್ರೋಗ್ರಾಮ್ ಅಲ್ಲ ಎನ್ನುತ್ತಿದ್ದಾರೆ.

ಶ್ರೀ ಕೆ.ಸಿ.ಕೊಂಡಯ್ಯ:- ಮಾನ್ಯ ಸಭಾಪತಿಯವರೇ, ಈ awareness ನಿಂದ ಏನು impact ಆಗಿದೆ? ಇಂತಹ ತರಬೇತಿಗಳನ್ನು Diploma ಮತ್ತು ಐಟಿಐ ವಿದ್ಯಾರ್ಥಿಗಳಿಗೆ ನೀಡಿದರೆ ಅನುಕೂಲವಾಗುತ್ತದೆ. ಈ ಕೌಶಲ್ಯಾಭಿವೃದ್ಧಿಯಲ್ಲಿ ಯಾವ ವಿಷಯದ ಮೇಲೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಬೇತಿಯನ್ನುನೀಡಲಾಗುತ್ತಿದೆ?

ಸಭಾಪತಿಯವರು:- ಅದು ಟ್ರೈನಿಂಗ್ ಪ್ರೋಗ್ರಾಮ್ ಅಲ್ಲ ಎನ್ನುತ್ತಿದ್ದಾರೆ ಮಾನ್ಯ ಸಚಿವರು.

ಶ್ರೀ ಸಂತೋಷ್ ಎಸ್ ಲಾಡ್:- ಮಾನ್ಯ ಸಭಾಪತಿಗಳೆ, ಇದು ಇತ್ತೀಚೆಗೆ ನಮ್ಮ ಇಲಾಖೆಗೆ merge ಆಗಿದೆ. When the CEDOK was in the Commerce and Industries Department, their earlier programmes were the same. Everywhere the CEDOK was supposed to go and create awareness. It is not a training. ಆ ಇಲಾಖೆಯವರು ನಡೆಸುತ್ತಿದ್ದ ಕಾರ್ಯಕ್ರಮ್ಮಗಳ ವಿವರಗಳನ್ನೇ ನಾನು ಉತ್ತರದಲ್ಲಿ ನೀಡಿರುವುದು. ನಮ್ಮ ಇಲಾಖೆಯಿಂದ ಹೊಸದಾಗಿ ಯಾವುದೇ ಕಾರ್ಯಕ್ರಮಗಳನ್ನು ಮಾಡುತ್ತಿಲ್ಲ. ಮಾಡಿದರೂ ಸಹ ಹಿಂದೆ ಅವರೇನು awareness programmes ಮಾಡುತ್ತಿದ್ದರೋ ಅದನ್ನೇ ಇಲ್ಲಿಯೂ ಮುಂದುವರೆಸುತ್ತಿದ್ದಾರೆ. ಇರುವ ತರಬೇತಿ ಕೇಂದ್ರಗಳ ಬಳಕೆ ಮಾಡಿಕೊಂಡು ತರಬೇತಿ ನೀಡಲಾಗುವುದೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರು ಕೇಳಿದ್ದಾರೆ. ಈಗ ಸಿಬ್ಬಂದಿಯ ಕೊರತೆ ಇದೆ, ಆದರೆ ಖಂಡಿತವಾಗಿ ಮುಂಬರುವ ದಿವಸಗಳಲ್ಲಿ ಇದನ್ನು V.T.P., ಆಗಿ ಮಾಡಿಕೊಂಡು ಮಾಡಬಹುದು. ಖಂಡಿತ ತರಬೇತಿಗಳನ್ನು ನೀಡುತ್ತೇವೆ.

ಶ್ರೀ ಕೆ.ಸಿ.ಕೊಂಡಯ್ಯ:- ಮಾನ್ಯ ಸಭಾಪತಿಯವರೇ, ಈ ತರಬೇತಿಗಳಿಗಾಗಿ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ ಎನ್ನುವ ಮಾಹಿತಿಯನ್ನು ನೀಡಲಿಲ್ಲ.

ಶ್ರೀ ಸಂತೋಷ್ ಎಸ್ ಲಾಡ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಖರ್ಚಿನ ಬಗ್ಗೆ ಪ್ರಶ್ನೆ ಕೇಳದೇ ಇದ್ದ ಕಾರಣ ನನ್ನ ಬಳಿ ಈಗ ಮಾಹಿತಿ ಇಲ್ಲ. ಅದನ್ನು ಅವರಿಗೆ ನಂತರ ಕಳುಹಿಸಿ ಕೊಡುತ್ತೇನೆ.

**<u>ತಡೆ ಹಿಡಿಯಲಾದ ಪ್ರಶ್ನೆಗಳು</u>**

**<u>ಪ್ರಶ್ನೆ ಸಂಖ್ಯೆ 3747</u>**
**<u>(ಉತ್ತರವನ್ನು ಲಗತ್ತಿಸಲಾಗಿದೆ)</u>**

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು ಉತ್ತರವನ್ನು ನೀಡಿದ್ದಾರೆ ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94 ಸಿಸಿ ಅಡಿಯಲ್ಲಿ ಕಡು ಬಡವರು ಸರ್ಕಾರಿ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ಹಕ್ಕುಪತ್ರಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಇಂತಹ ಅರ್ಜಿಗಳನ್ನು ಸ್ವೀಕರಿಸಲು ಪ್ರಾರಂಭಿಸಿ ಇಲ್ಲಿಗೆ ಮೂರೂವರೆ ವರ್ಷಗಳಾಗಿವೆ, ಈ ಅರ್ಜಿಗಳನ್ನು ಪಡೆದ ಒಂದು ವರ್ಷದಲ್ಲಿಯೇ ಅವುಗಳನ್ನು ವಿಲೇವಾರಿ ಮಾಡಲಾಗುವುದು ಎನ್ನುವುದು ಸರ್ಕಾರದ ನಿಲುವಾಗಿತ್ತು. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಅಡಿಯಲ್ಲಿ ಸುಮಾರು 5,96,618 ಅರ್ಜಿಗಳು, ಅಂದರೆ ಹೆಚ್ಚು ಕಡಿಮೆ 6 ಲಕ್ಷದವರೆಗೆ ಅರ್ಜಿಗಳು ಬಂದಿವೆ. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಸಿ ಅಡಿಯಲ್ಲಿ 2,17,622 ಅರ್ಜಿಗಳು ಬಂದಿವೆ. ಎರಡೂ ಸೇರಿ ಸುಮಾರು 8 ಲಕ್ಷಗಳಷ್ಟು ಅರ್ಜಿಗಳು ಬಂದಿವೆ. ಬಂದಿರುವ ಅರ್ಜಿಗಳಲ್ಲಿ ಶೇಕಡ 40 ಅರ್ಜಿಗಳಿಗೂ ಕೂಡ ಮಂಜೂರಾತಿಯನ್ನು ನೀಡಿರುವುದಿಲ್ಲ. ಈ ಸದನದಲ್ಲಿಯೇ ಒಂದು ಕಾಲ ಮಿತಿಯಲ್ಲಿ ಈ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು ಎನ್ನುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭರವಸೆಯನ್ನು ಮಾನ್ಯ ಸಚಿವರು 3-4 ಬಾರಿ ನೀಡಿದ್ದಾರೆ. ಆದರೆ ಏಕೆ ಇನ್ನೂ ಆಗಿಲ್ಲ ಎನ್ನುವುದು ಒಂದು ಪ್ರಶ್ನೆ.

ನನ್ನ ಮತ್ತೊಂದು ಪ್ರಶ್ನೆ ಏನೆಂದರೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿಸಿ ಅಡಿಯಲ್ಲಿ ಒಂದು ಗುಂಟೆ ಜಾಗಕ್ಕೆ ಹತ್ತೂವರೆ ಸಾವಿರ ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಇದನ್ನು ಸಹ ಸರ್ಕಾರ ಕಡಿಮೆ ಮಾಡಬೇಕೆನ್ನುವುದು ಬಡವರ ಆಗ್ರಹ. ಅದರ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕು. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94 ಸಿಸಿ ಅಡಿಯಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ಅವಕಾಶಗಳನ್ನು ಕಲ್ಪಿಸಲಾಗಿದ್ದರೂ ಸಿ.ಆರ್.ಜೆಡ್., ಪ್ರದೇಶ ವ್ಯಾಪ್ತಿಯಲ್ಲಿ ವಿಶೇಷ ಹಕ್ಕಿನ ಪ್ರದೇಶಗಳಾದ ಗೋಮಾಳ, ಸಿ ಅಂಡ್ ಡಿ ಮತ್ತು ಡೀಮ್ಡ್ ಫಾರೆಸ್ಟ್ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲ ಎಂದು ಉತ್ತರ ನೀಡಿದ್ದಾರೆ. ಇದರ ಜೊತೆಗೆ ಸರ್ಕಾರ ಒಂದು ಆದೇಶವನ್ನು ಹೊರಡಿಸಿ, ಸರ್ಕಾರಿ ಜಾಗ ಎಂದು ಪರಿಗಣಿಸಲಾಗಿರುವ ಜಾಗದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಚಿಕ್ಕಮಗಳೂರು, ಉಡುಪಿ, ಕೊಡಗು ಹೀಗೆ 5 ಜಿಲ್ಲೆಗಳಲ್ಲಿ ಅವಕಾಶ ನೀಡಿ ಬಸವ ವಸತಿ ಮನೆಗಳನ್ನು ಸರ್ಕಾರವೇ ಮಂಜೂರು ಮಾಡಿದೆ. ಅದರಲ್ಲಿ ಜನರು ಮನೆ ಕಟ್ಟಿಕೊಂಡಿದ್ದಾರೆ. ಈಗ ಗೋಮಾಳದಲ್ಲಿ ಕೊಡುವುದಕ್ಕೆ ಆಗುವುದಿಲ್ಲ, ಗೇರುಲೀಸ್, ಕುಮ್ಕಿಯಲ್ಲಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ, ಮನೆ ಕಟ್ಟಲೂ ಸರ್ಕಾರವೇ ಹಣ ನೀಡಿದೆ, ಇವರ ಪರಿಸ್ಥಿತಿ ಏನು ಎನ್ನುವುದು ಒಂದು ಪ್ರಶ್ನೆ. ಇದನ್ನೆಲ್ಲ ಸರ್ಕಾರ ಯಾವ ಅವಧಿಯಲ್ಲಿ ಮುಗಿಸುತ್ತದೆ ಎನ್ನುವುದನ್ನು ತಿಳಿಸಬೇಕು. ಇನ್ನು ಡೀಮ್ಡ್ ಫಾರೆಸ್ಟ್ ಜಾಗದ ಬಗ್ಗೆ ಸಚಿವಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆದರೆ ಈ ವಿಚಾರದ ಬಗ್ಗೆ ಒಂದು ಉದಾಹರಣೆಯನ್ನು ನೀಡುವುದಾದರೆ ಉಡುಪಿ ಜಿಲ್ಲೆಯಲ್ಲಿ 40,000 ಹೆಕ್ಟೇರ್ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್‌ನಿಂದ ಹೊರತುಪಡಿಸಿ ನೀಡಬಹುದೆಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ವರದಿಯನ್ನು ನೀಡಿದ್ದಾರೆ. ಇದಕ್ಕೆ ಸಚಿವರು ಸಚಿವ ಸಂಪುಟ ಸಭೆಯಲ್ಲಿ ಡೀಮ್ಡ್ ಫಾರೆಸ್ಟ್ ಅನ್ನು ವಿರಹಿತ ಮಾಡಿಸಲಾಗುವುದು ಎಂದು ಹೇಳಿದ್ದರು. ಹಾಗೆ ಮಾಡಿದರೆ 40,000 ಹೆಕ್ಟೇರ್ ಜಾಗದಲ್ಲಿ ಸಾವಿರಾರು ಬಡ ಜನರಿಗೆ ಮನೆಗಳು ದೊರೆಯುತ್ತವೆ. ಅದಕ್ಕೆ ಸರ್ಕಾರಕ್ಕೆ ಇರುವ ತಡೆ ಏನು; ಸರ್ಕಾರ ಯಾವಾಗ ಇದನ್ನೆಲ್ಲ ಸರಿಪಡಿಸುತ್ತದೆ; ಆ ಜನರಿಗೆ ಹಕ್ಕುಪತ್ರಗಳನ್ನು ಯಾವಾಗ ನೀಡಲಾಗುವುದು; ಹಾಗೂ ನಿಯಮಗಳನ್ನು ಯಾವಾಗ ಸಡಿಲಿಸಲಾಗುವುದು ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94 ಸಿಸಿ ಅಡಿಯಲ್ಲಿ ಬಂದಂತಹ ಅರ್ಜಿಗಳನ್ನು ವಿಲೇವಾರಿ ಮಾಡುವುದರಲ್ಲಿ ಸ್ವಲ್ಪ ತಡ ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರಣ ಏನೆಂದರೆ ಅನೇಕ ಕಡೆಗಳಲ್ಲಿ ಸಕಾಲದಲ್ಲಿ ಅರ್ಜಿಗಳನ್ನು ನಮಗೆ ನೀಡಲಿಲ್ಲ. ಅದಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ನಾವು ವಿಸ್ತಾರ ಮಾಡಿಕೊಂಡು ಬಂದೆವು. ಹಾಗಾಗಿ ಈ ಎಲ್ಲಾ ಅರ್ಜಿಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಈಗಲೂ ಸಹ ಈ ಅರ್ಜಿಗಳನ್ನು ಆದಷ್ಟು ಬೇಗನೆ ವಿಲೇವಾರಿ ಮಾಡಲಿಕ್ಕೆ ನಮ್ಮ ಅಧಿಕಾರಿಗಳಿಗೆ ನಾನು ನಿರ್ದೇಶನ ನೀಡುತ್ತೇನೆ. ಏಕೆಂದರೆ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಎಷ್ಟು ಆಸಕ್ತಿ ಇದೆ ಎನ್ನುವುದನ್ನು ಅರ್ಥ ಮಾಡಿಕೊಂಡು ನಾನು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮಾನ್ಯ ಸದಸ್ಯರು ಗುಂಟೆಗೆ ಹತ್ತೂವರೆ ಸಾವಿರ ಇರುವುದನ್ನು ಇನ್ನೂ ಕಡಿಮೆ ಮಾಡಬೇಕೆನ್ನುವ ಸಲಹೆಯನ್ನು ನೀಡಿದರು. ಆದರೆ ನಾನು ಅಧಿಕಾರಿಕ್ಕೆ ಬಂದ ಮೇಲೆ ಇದನ್ನು ಹತ್ತೂವರರೆ ಸಾವಿರಕ್ಕೆ ಇಳಿಸಿದ್ದೇನೆ. ಮೊದಲು ಇನ್ನೂ ಜಾಸ್ತಿಯಿತ್ತು. ಮಾನ್ಯ ಸದಸ್ಯರ ಸಲಹೆಯನ್ನು ಮತ್ತೊಮ್ಮೆ ಪರಿಶೀಲಿಸುತ್ತೇನೆ. ಇನ್ನು ಸಿ ಅಂಡ್ ಡಿ ಮತ್ತು ಗೋಮಾಳದ ವಿಚಾರ ಏನಾಗಿದೆ ಎಂದರೆ. . . .

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1165)/22-11-2017/12-40/ಎಲ್‌ಎಂ/ಎಂಡಿ

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ನಮ್ಮ ಕರ್ನಾಟಕ ಭೂ ಕಂದಾಯ ಕಾಯ್ದೆಯ ಸೆಕ್ಷನ್ 79(2)ರಲ್ಲಿ 'privileged lands' ಎಂದು ಇದೆ. ತಾವು ಆಗಲೇ ಹೇಳಿದ್ದೀರಿ. ಅವೆಲ್ಲವು 'privileged lands' ವ್ಯಾಪ್ತಿಯಲ್ಲಿ ಬರುತ್ತವೆ. ಅದರಲ್ಲಿ ಕೊಡಲು ಅವಕಾಶವಿತ್ತು. 94(ಬಿ)ನ್ನು ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಇದನ್ನು ಮಾಡಬಹುದು ಎಂದು ಮಾಡಿದರು. ಆದರೆ ಅದರಲ್ಲಿ 'ಅರಣ್ಯ' ಎನ್ನುವ ಒಂದು ಪದವನ್ನು ಸೇರಿಸಿಬಿಟ್ಟರು. ಆ 'ಅರಣ್ಯ' ಎನ್ನುವ ಪದವನ್ನು ಸೇರಿಸಿದ್ದರಿಂದ ಈಗ ಮಂಜೂರು ಮಾಡಲು ನಮಗೆ ತೊಂದರೆಯಾಗಿದೆ. ಅದನ್ನು ತಿದ್ದುಪಡಿ ಮಾಡಲು ಕಾನೂನಿಗೆ ತಿದ್ದುಪಡಿ ತರಲು ನಾನು ಈಗಾಗಲೇ move ಮಾಡಿದ್ದೇನೆ. ಅದು ಸರ್ಕಾರದ ಪರಿಶೀಲನೆಯಲ್ಲಿ ಇದೆ. ನಾನು ಕೂಡಾ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕೂರ್ಗ್, ಮಂಗಳೂರು, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ ಈ ಕಡೆಗಳಲ್ಲಿ ಅವು ಜಾಸ್ತಿ ಇವೆ. ಅದನ್ನು ತೆಗೆದು ಹಾಕಿದರೆ ಆ ಜಾಗದಲ್ಲಿ ಕೊಡಲು ಏನು ತೊಂದರೆಯಾಗುವುದಿಲ್ಲ. ಗೋಮಾಳ ವಿಚಾರದಲ್ಲಿ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಬಂದಿದೆ. ತಡೆಯಾಜ್ಞೆ ಇರುವುದರಿಂದ ಗೋಮಾಳದಲ್ಲಿ ನಿವೇಶನ ಕೊಡಲು ತೊಂದರೆಯಾಗಿದೆ. ಇದನ್ನು ಬೇಗನೆ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಹೈಕೋರ್ಟ್ ತಡೆಯಾಜ್ಞೆ ಇರುವುದರಿಂದ ನಿವೇಶನ ಕೊಡಲು ಬರುತ್ತದೆಯೇ ಇಲ್ಲವೆ ಎನ್ನುವ ಆತಂಕವಿದೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ನಿವೇಶನ ಕೊಡಲು ಏನು ಆತಂಕವಿಲ್ಲ ಎನ್ನುವುದು ಕಂಡುಬಂದರೆ ನಾಳೆಯೇ ಅದರ ಬಗ್ಗೆ ಇನ್ನೊಂದು ಸುತ್ತೋಲೆ ಹೊರಡಿಸಿ ಆ ಅರ್ಜಿಯನ್ನು ತೀರ್ಮಾನ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ. Deemed Forest ಬಗ್ಗೆ ಈಗ ಸರ್ಕಾರದ ಮುಂದೆ ಬಂದಿದೆ. ಅದನ್ನು ಆದಷ್ಟು ಬೇಗನೆ ತೀರ್ಮಾನ ಮಾಡುತ್ತೇವೆ.

**ಶ್ರೀ ಬಿ.ರಮಾನಾಥ್ ರೈ(ಅರಣ್ಯ ಸಚಿವರು):- ಮಾನ್ಯ ಸಭಾಪತಿಗಳೆ,** ಪಟ್ಟಿ ಮಾಡಿ ಇನ್ನು 10 ರಿಂದ 15 ದಿವಸಗಳೊಳಗೆ ಗೆಜೆಟ್‌ನಲ್ಲಿ ಪ್ರಕಟಣೆ ಮಾಡುತ್ತೇವೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ:-** ಮಾನ್ಯ ಸಭಾಪತಿಗಳೆ, ಹದಿನೈದು ದಿವಸಗಳಲ್ಲಿ ಪ್ರಕಟಣೆ ಮಾಡುತ್ತೇವೆಂದು ಸಚಿವರು ಹೇಳುತ್ತಿದ್ದಾರೆ. ಎರಡು ತಿಂಗಳಲ್ಲಿ ಪೂರ್ಣ ಹಕ್ಕುಪತ್ರಗಳನ್ನು ಕೊಡಬಹುದು. ಮಂತ್ರಿಗಳು ಪ್ರಾಮಾಣಿಕರು ಅದು ಎಲ್ಲವು ಸರಿ, ಅವರಲ್ಲಿ ನನ್ನ ಒಂದೇ ವಿನಂತಿ ಎಂದರೆ, ನಿಮ್ಮ ಮಾತನ್ನು District Commissioner ಯವರು ಕೇಳುತ್ತಿಲ್ಲ, District Commissioner ಯವರ ಮಾತನ್ನು Assistant Commissioner ಯವರು ಕೇಳುತ್ತಿಲ್ಲ, Assistant Commissioner ಯವರ ಮಾತನ್ನು Revenue Inspector ಕೇಳುತ್ತಿಲ್ಲ, Revenue Inspector ಮಾತನ್ನು Village Accountant ಕೇಳುತ್ತಿಲ್ಲ, Village Accountant ಮಾತನ್ನು ಗ್ರಾಮ ಸಹಾಯಕ ಕೇಳುತ್ತಿಲ್ಲ. ಇದರಿಂದಾಗಿ ಈ ವಿಚಾರದ ಬಗ್ಗೆ ಸರ್ಕಾರದಿಂದ ಗಟ್ಟಿಯಾದ ನಿಲುವು ತೋರಿಸಬೇಕಾಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ಇದು ಶಾಶ್ವತವಾದ ಖುರ್ಚಿಯಲ್ಲ. ಏನೊ ಅಪರೂಪಕ್ಕೆ ಸಿಗುತ್ತದೆ. ಸಿಕ್ಕಾಗ ಅದರ ಸ್ಥಾನಕ್ಕೆ ಗೌರವ ತರುವ ಹಾಗೆ ಕೆಲಸವನ್ನು ನಾವು-ನೀವು ಮಾಡಬೇಕು. ಈ ಅರ್ಜಿಯನ್ನು ಇತ್ಯರ್ಥಗೊಳಿಸಲು ಯಾವ ರೀತಿಯ ಸುತ್ತೋಲೆಯನ್ನು ಹೊರಡಿಸಿದ್ದೇನೆ ಎನ್ನುವುದನ್ನು ಕಳುಹಿಸಿ ಕೊಡುತ್ತೇವೆ ತಾವು ನೋಡಬೇಕು. Village Accountant ಗಳು Panchayat Development Officer ಗಳು ಜಂಟಿಯಾಗಿ ನಕಾಶೆಯನ್ನು ಇಟ್ಟುಕೊಂಡು ಪ್ರತಿಯೊಂದು ಊರಿಗೆ ಹೋಗಬೇಕು, ಅರ್ಜಿಗಳನ್ನು ಹಿಡಿದುಕೊಂಡು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಬೇಕು, ಆ ಅರ್ಜಿಗಳು ಇದ್ದರೆ ಅದರ ಪರಿಶೀಲನೆ ಮಾಡಬೇಕು. ಒಂದು ವೇಳೆ ಅರ್ಜಿ ಇಲ್ಲದಿದ್ದರೆ ಅಲ್ಲೇ ಅರ್ಜಿಯನ್ನು ತೆಗೆದುಕೊಂಡು ಆ ಅರ್ಜಿಯನ್ನು ಸಹ record ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವುದು ನನ್ನ ಇಚ್ಛೆ ಇದೆ. ಅದಕ್ಕೆ ನಾನು ನಿರಂತರವಾಗಿ ಬೆನ್ನು ಹತ್ತಿದ್ದೇನೆ. ತಮ್ಮ ಮನಸ್ಸಿನ ಆತಂಕವನ್ನು ಇತ್ಯರ್ಥಪಡಿಸುವ ರೀತಿಯಲ್ಲಿ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಯಾವುದೇ ಸಂಶಯವನ್ನು ಇಟ್ಟುಕೊಳ್ಳುವುದು ಬೇಡ. ಕ್ಯಾಪ್ಟನ್ ಗಣೇಶ್ ಕಾರ್ಣೀಕ್‌ರವರು ಶೇಕಡಾ 50ರ ಬಗ್ಗೆ ಹೇಳಿದರು. ಅದಕ್ಕೆ 6000 ರೂಪಾಯಿಗಳನ್ನು ಕಟ್ಟಬೇಕಾಗಿತ್ತು, ಈಗ 3000 ರೂ.ಗಳ ಕಡತ ಮಾಡಿದ್ದೇನೆ. 10,000 ರೂಪಾಯಿಗಳು ಇರಬೇಕೆಂದು ಎಂದು ನನಗೂ ಅನ್ನಿಸುತ್ತದೆ. ಆದರೆ ಎಲ್ಲರೂ ಒಪ್ಪಬೇಕಲ್ಲಾ.

**ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ:-** ಬಡವರಿಗಾಗಿ 2000 ರೂಪಾಯಿಗಳಾಗಿ ಮಾಡುತ್ತೇವೆ ಎಂದು ಇಲ್ಲಿ ತಾವು ಹೇಳಿದರೆ ಮುಗಿಯಿತು.

ಶ್ರೀ ಕಾಗೋಡು ತಿಮ್ಮಪ್ಪ:- ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಖಂಡಿತವಾಗಿ ತಮ್ಮ ಆತಂಕವನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 3711**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ. ಕೌಶಲ್ಯ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು ಎನ್ನುವುದಕ್ಕೆ ಹಲವಾರು ಯೋಜನೆಗಳನ್ನು ಕೊಟ್ಟಿದ್ದಾರೆ. ನಮಗೆ ಗೊತ್ತಿರುವ ಹಾಗೆ 2016 ಸೆಪ್ಟಂಬರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಪ್ರಾರಂಭ ಮಾಡಿಸಲಾಯಿತು. ಇದು ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಏಕೆಂದರೆ ಗ್ರಾಮೀಣ ಭಾಗದಲ್ಲಿರುವ ಯುವಕರು ರಾಜಧಾನಿಗೆ ಬರಲು ಆಗುವುದಿಲ್ಲ. ಅವರು ಯಾವುದರಲ್ಲಿ ಪರಿಣಿತರಿರುತ್ತಾರೆ ಅಂಥಹವರನ್ನು ಗುರುತಿಸಿ ಅವರಿಗೆ ತರಬೇತಿ ಕೊಟ್ಟು ಪ್ರಮಾಣ ಪತ್ರವನ್ನು ಕೊಟ್ಟು ಉದ್ಯೋಗ ಸೃಷ್ಟಿ ಮಾಡಿ ಅವರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಮಾಡುವಂತಹ ಮಹತ್ತರವಾದ ಯೋಜನೆಯನ್ನು ಪ್ರಧಾನ ಮಂತ್ರಿಗಳು ಹಾಕಿಕೊಂಡಿದ್ದಾರೆ. ಇಲ್ಲಿ ಮೂರು ಏನು ಮಾಡಲಾಗಿದೆ ಎನ್ನುವುದಕ್ಕೆ ಉತ್ತರವಾಗಿ 2016ರಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಪ್ರಾರಂಭ ಮಾಡಿಸಿ ಇದರಿಂದ 5 ಲಕ್ಷ ಜನರಿಗೆ ಉಪಯೋಗವಾಗುವಂತೆ ಮಾಡಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಅದರ ಸ್ಥಿತಿ-ಗತಿಗಳೇನು ಎನ್ನುವ ವಿವರವನ್ನು ಕೊಟ್ಟಿರುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ಇಲಾಖೆಗಳಲ್ಲಿಯು ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಏನು ಹಮ್ಮಿಕೊಂಡಿದ್ದಾರೆ ಎನ್ನುವುದು ಇನ್ನು ಗೊತ್ತಾಗುತ್ತಿಲ್ಲ. ಅದು ಬರಿ ಕಾಗದದಲ್ಲಿ, ಕಡತದಲ್ಲಿ ಅಥವಾ ಅಧಿಕಾರಿಗಳ ಟೇಬಲ್ ಮೇಲೆ ಇರುತ್ತದೆಯೇ ಗೊತ್ತಿಲ್ಲ. ಅಥವಾ Right to Information Act ಮುಖಾಂತರ ವಿವರ ಕೇಳಿದರೆ ಕೊಡಬೇಕಾಗುತ್ತದೆ ಎಂದು ಅದನ್ನು ಲಾಕರ್‌ನಲ್ಲಿ ಇಟ್ಟಿರುತ್ತಾರೊ ಏನು ಮಾಡುತ್ತಿದ್ದಾರೆ ಎನ್ನುವುದೆ ಗೊತ್ತಾಗುತ್ತಿಲ್ಲ. ಈ ಅನುಮಾನ ಏಕೆ ಬರುತ್ತಿದೆ ಎಂದರೆ, ಈ ಯೋಜನೆಗೆ ಕೇಂದ್ರ ಸರ್ಕಾರ ಎಷ್ಟು ಅನುದಾನವನ್ನು ಕೊಟ್ಟಿದೆ, ರಾಜ್ಯ ಸರ್ಕಾರ ಎಷ್ಟು ತೆಗೆದುಕೊಂಡಿದೆ ಎನ್ನುವ ಪ್ರಶ್ನೆಗೆ 2016ರಲ್ಲಿ ಕೇಂದ್ರ ಸರ್ಕಾರ ಒದಗಿಸಿರುವ ಅನುದಾನ 11.700,00 ಲಕ್ಷ ರೂ.ಗಳು, ಅದರಲ್ಲಿ ನಮ್ಮ ಸರ್ಕಾರದವರು ಕೇವಲ 4 ಕೋಟಿ 85 ಲಕ್ಷ ರೂ.ಗಳನ್ನು ಮಾತ್ರ ಉಪಯೋಸಿದ್ದಾರೆ. ಇನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಲ್ಲಿ 100.00 ಲಕ್ಷ ರೂ.ಗಳನ್ನು ಇಡಲಾಗಿದೆ, ಅದರಲ್ಲಿ 1,92,000 ರೂ.ಗಳನ್ನು ಮಾತ್ರ ಖರ್ಚು ಮಾಡಿರುವುದು. ಒಂದು ಕೋಟಿ ರೂ.ಗಳನ್ನು ಮಾನ್ಯ ಮುಖ್ಯಮಂತ್ರಿಗಳು ಅನುದಾನವನ್ನು ಕೊಟ್ಟರೆ ಇವರು ಬರೀ ಒಂದು ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ ಪಾಪ. ಒಟ್ಟು 81.906.00 ಲಕ್ಷ ರೂ.ಗಳ ಅನುದಾನವನ್ನು ಒದಗಿಸಿದ್ದು, ಅದರಲ್ಲಿ ಖರ್ಚು

ಮಾಡಿರುವುದು ಕೇವಲ 21.957.56 ಲಕ್ಷ ರೂ.ಗಳನ್ನು ಮಾತ್ರ. ಕೊಟ್ಟಿರುವ ಅನುದಾನವನ್ನು ಈ ರೀತಿಯಲ್ಲಿ ಖರ್ಚು ಮಾಡಿದರೆ ನೀವು ಏನು ಅಭಿವೃದ್ಧಿಯನ್ನು ತೋರಿಸುತ್ತೀರಿ? ಗ್ರಾಮೀಣ ಭಾಗದಲ್ಲಿಯ ಯುವಕರಲ್ಲಿ ಇರುವ ನಿರುದ್ಯೋಗವನ್ನು ಕಡಿಮೆ ಮಾಡುವ ಸಲುವಾಗಿ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ತರಲಾಗಿದೆ. ನಿರುದ್ಯೋಗ ಯುವಕ-ಯುವತಿಯರಿಗೆ ಒಂದು ಒಳ್ಳೆಯ platform ಕೊಡಲು ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ರಾಷ್ಟ್ರಕ್ಕೆ ಮಾತ್ರವಲ್ಲ ನಮ್ಮ ರಾಜ್ಯ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತಿತ್ತು. ಆದರೆ ಏಕೆ ಈ ರೀತಿ ಮಾಡಿದ್ದೀರಿ? 2016ನೇ ಇಸವಿಯ ನವೆಂಬರ್‌ನಲ್ಲಿ ಉದ್ಯೋಗ ಮೇಳ ಮಾಡಿದರು ಬಹಳ ಚೆನ್ನಾಗಿತ್ತು, ನಿಜವಾಗಿಯು ಆಶಾದಾಯಕವಾಗಿತ್ತು. ಎಲ್ಲಾ ರಾಜ್ಯಗಳಲ್ಲಿಯೂ ಮಾಡಿದರು. ಹಾಗೆ ನಮ್ಮ ರಾಜ್ಯದಲ್ಲಿಯೂ ಪ್ರಾರಂಭ ಮಾಡಿದರು. ಈ ಮೇಳವನ್ನು ಮಾಡಿರುವುದನ್ನು ಬಿಟ್ಟರೆ ಬೇರೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಮಗೆ ಕಾಣಿಸುತ್ತಿಲ್ಲ. ಇತ್ತೀಚೆಗೆ ಬ್ಯಾಂಕ್‌ಗಳಲ್ಲಿ ಸ್ಥಳೀಯರಿಗೆ ಅವಕಾಶ ಕೊಡುತ್ತಿಲ್ಲ ಎಂದು ಬಹಳ ಗಲಾಟೆಗಳಾಗಿದ್ದವು. ನಮ್ಮ ಕರ್ನಾಟಕದ ಅಭ್ಯರ್ಥಿಗಳಿಗೆ ಬ್ಯಾಂಕ್‌ಗಳಲ್ಲಿ ಉದ್ಯೋಗವನ್ನು ಕೊಡುತ್ತಿಲ್ಲ, ಬೇರೆ-ಬೇರೆ ರಾಜ್ಯಗಳಿಂದ ಬಂದವರಿಗೆ ಉದ್ಯೋಗವನ್ನು ಕೊಡುತ್ತಿದ್ದಾರೆ ಎನ್ನುವ ಮಾತಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆ ಒಳ್ಳೆಯ ಕೆಲಸವನ್ನು ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ. ಮಿಲಿಟರಿಯಲ್ಲಿ ಕೌಶಲ್ಯ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. Security Guard ಗೆ ಸಂಬಂಧಿಸಿದಂತೆ ಕೌಶಲ್ಯ ಅಭಿವೃದ್ಧಿ ಮಾಡುತ್ತೇವೆ ಎನ್ನುವ ಹೇಳಿಕೆ ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ಬಂತು. ಯುವಕರಿಗೆ ಮಿಲಿಟರಿ ಸೇರಬೇಕು ಎನ್ನುವ ಆಸೆ ಇರುತ್ತದೆ. ಅವರಿಗೆ ಇದುವರೆಗೆ ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ಏನಾದರೂ ತರಬೇತಿಯನ್ನು ಕೊಟ್ಟಿದೀರಾ? Security Guard ಗಳಿಗೆ ತರಬೇತಿ ಕೊಟ್ಟಿದ್ದೀರಾ? ಈ ಯಾವ ಅಂಶಗಳಿಗೂ ಸ್ಪಷ್ಟವಾದ ಉತ್ತರವನ್ನು ಕೊಟ್ಟಿರುವುದಿಲ್ಲ.

**ಶ್ರೀ ಸಂತೋಷ್.ಎಸ್. ಲಾಡ್:- ಮಾನ್ಯ** ಸಭಾಪತಿಗಳೆ, ಮಾನ್ಯ ಸದಸ್ಯರು ನಮಗೆ ನಾಲ್ಕು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯ ಪ್ರಶ್ನೆ Skill Development Department ಯಿಂದ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಎರಡು Stream ಗಳ ಬಗ್ಗೆ ಹೇಳಿದ್ದೇವೆ. ಈ ಎರಡು Stream ಗಳಲ್ಲಿ ಈ ವರ್ಷ 5 ಲಕ್ಷ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಲು target ಇಟ್ಟುಕೊಂಡಿದ್ದೇವೆ. ಒಂದು Stream ನಲ್ಲಿ ಎರಡೂವರೆ ಲಕ್ಷ ಜನರಿಗೆ, ಇನ್ನೊಂದು Stream ನಲ್ಲಿ ಎರಡೂವರೆ ಲಕ್ಷ ಜನರಿಗೆ ಅನುಕೂಲ ಮಾಡಿಕೊಡಲಾಗುತ್ತದೆ. ಮೊದಲನೆಯ Stream-1 ನಲ್ಲಿ ವಿಶೇಷವಾಗಿ

1. Karnataka Vocational Training and Skill Development Corporation (KVTSDC)
2. Deen Dayal Upadhyaya Grameena Koushalya Yojana (NRLM)
3. Employment through Skill Training and Placement under DAY-NULM.
4. Construction Academy
5. Pradhana Manthri Koushalya Vikasa Yojana Centrally Sponsored State Managed
6. Koushalya Mission (KGTTI+GTTC+others)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು Stream-1 ಆಗಿದೆ. Stream-2 ನಲ್ಲಿ ಈ ಇಲಾಖೆಯಲ್ಲಿ experts ಇರುವುದರಿಂದ Stream 2:- With a training target of 2.5 lakh, Programmes implemented by various departments that have domain specific knowledge. The departments include:

1. Information Technology and Bio-Technology
2. Social Welfare
3. Minorities
4. Commerce and Industries
5. Backward Classes
6. Sericulture
7. Technical Education
8. Women and Child Development
9. Tourism

Stream-1 ನಲ್ಲಿ ಎರಡೂವರೆ ಲಕ್ಷ ಜನರನ್ನು, Stream-2 ನಲ್ಲಿ ಎರಡೂವರೆ ಲಕ್ಷ ಜನರಿಗೆ ತರಬೇತಿಯನ್ನು ಕೊಡಬೇಕೆಂದು ನಮ್ಮ ಇಲಾಖೆ ಯೋಜನೆಯನ್ನು ಕೈಗೊಂಡಿದೆ. ಶ್ರೀಮತಿ ತಾರಾ ಅನೂರಾಧರವರು ನಿಮ್ಮ ಇಲಾಖೆಯಿಂದ ಯಾವುದೇ ತರಬೇತಿಯನ್ನು ಕೊಟ್ಟೇ ಇಲ್ಲ ಎಂದು ಹೇಳಿದ್ದಾರೆ. ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ.

(ಮುಂದು)

(1166)22-11-2017(12-50)ಬಿಎಸ್‌ಡಿ/ಎಂಡಿ

ಶ್ರೀ ಸಂತೋಷ್ ಎಸ್. ಲಾಡ್ (ಮುಂದು)

Stream-1 ಈಗಾಗಲೇ ಪ್ರಾರಂಭವಾಗಿ 5 ತಿಂಗಳು ಕಳೆದಿದೆ. It’s a five months old programme. ಅದರಲ್ಲಿ ಸುಮಾರು 61 ಸಾವಿರ ಜನರಿಗೆ ತರಬೇತಿ ಕೊಟ್ಟಿದ್ದೇವೆ. 36 ಸಾವಿರ ಜನರಿಗೆ ಕೆಲಸ ಸಿಕ್ಕಿದೆ. ಇದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಸುಮಾರು 71 ಸಾವಿರ ಜನರಿಗೆ ಮೊದಲನೆ Main Stream ನಲ್ಲಿ work order ಕೊಟ್ಟಿದ್ದೇವೆ. 2.5 ಲಕ್ಷ ಜನರಿಗೆ Main Stream ನಲ್ಲಿ ತರಬೇತಿ ಕೊಡಬೇಕು ಎನ್ನುವುದನ್ನು ಸಂಪೂರ್ಣವಾಗಿ ಈ ವರ್ಷದಲ್ಲಿ ಮಾಡುತ್ತೇವೆ. ಎರಡನೆಯ Stream ನಲ್ಲಿ Information Technology and Bio-Technology Department ನವರು Bosch and Tata Company ಯವರು ಸೇರಿದಂತೆ ಬೇರೆ ಬೇರೆ Multinational Company ಗಳ ಜೊತೆಗೆ tie-up ಆಗಿ ಈಗಾಗಲೆ ತರಬೇತಿ ಪ್ರಾರಂಭ ಮಾಡಿದ್ದಾರೆ. Physical balance ನಲ್ಲಿ ಸುಮಾರು 10 ಸಾವಿರ ಜನ achieve ಮಾಡಿದ್ದಾರೆ. ಅವರು 1 ಲಕ್ಷ ಜನರಿಗೆ ತರಬೇತಿ ಕೊಡಬೇಕು. Social Welfare Department has already called for an ‘Expression of Interest’. ಮಾನ್ಯ ಸಭಾಪತಿಯವರೇ, ಇವತ್ತು ‘Expression of Interest’ ಗೆ final day ಆಗಿದೆ. ಅವರು ಒಂದು ಲಕ್ಷ ತರಬೇತಿ ಕೊಡುತ್ತಾರೆ. ಮುಂದೆ ಬರುವ ದಿನಗಳಲ್ಲಿ ಬಹುಶಃ 6 ಅಥವಾ 8 ತಿಂಗಳಲ್ಲಿ ಅವರು 1 ಲಕ್ಷ ಜನರಿಗೆ ತರಬೇತಿ ಕೊಡುತ್ತಾರೆ. ಬೇರೆ ಬೇರೆ Backward Classes, Sericulture, Technical Education Departments ನವರು 62 ಸಾವಿರ ಜನರಿಗೆ ತರಬೇತಿ ಕೊಡುತ್ತಿದ್ದಾರೆ. These are all in the process now. ನಮ್ಮ ಗುರಿ 5 ಲಕ್ಷ ಜನರಿದ್ದು, ಇದರ ಬಗ್ಗೆ ಯಾರಿಗೂ ಸಂದೇಶ ಬೇಡ, ಪ್ರಾಮಾಣಿಕವಾಗಿ ತರಬೇತಿ ಕೊಟ್ಟು ಮಾನ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮುಖ್ಯಮಂತ್ರಿಯವರ ಕನಸನ್ನು ನನಸು ಮಾಡುತ್ತೇವೆ. ಮಾನ್ಯ ಸದಸ್ಯರು 2-3 ಪ್ರಶ್ನೆಗಳನ್ನು ಕೇಳಿದ್ದು, ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ಅನುದಾನ ಎಷ್ಟು ಎಂದು ನನ್ನ ಇಲಾಖೆಗೆ ಕೇಳಿದ್ದಾರೆ. ಅದು ಇರಲಿಲ್ಲ. As the Hon'ble member has asked the question, ನಾನು ಇಲಾಖೆಯಿಂದ ಸಂಪೂರ್ಣ ಮಾಹಿತಿ ತರಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳದ್ದನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ಮಾತನಾಡಿದ್ದು, ರೂ.166 ಕೋಟಿಗಳನ್ನು ಈ ವರ್ಷದಲ್ಲಿ ಕೇಂದ್ರ ಸರ್ಕಾರವು ಹಂಚಿಕೆ ಮಾಡಿದೆ. ಅದರಲ್ಲಿ ರೂ.91 ಕೋಟಿ ಬಂದಿದೆ. ನಾವು ರೂ.100 ಕೋಟಿಗಳನ್ನು ಖರ್ಚು ಮಾಡಿರುವುದಕ್ಕೆ ಅವರು appreciate ಮಾಡಬೇಕು. ಏಕೆಂದರೆ ನಮಗೆ OB (Opening Balance) carry forward ಆಗಿರುವುದು ರೂ.56 ಕೋಟಿ DAY-NRLM (Deendayal Antayodaya Yojana-National Rural Livelihoods Mission) ನಲ್ಲಿತ್ತು. ಅದರ ಜೊತೆಗೆ ರೂ.10.83 ಕೋಟಿ Employment through Skill Training and Placement under DAY-NULM (Deendayal Antayodaya Yojana-National Urban Livelihoods Mission ) ಇತ್ತು. ಈ ವರ್ಷದಲ್ಲಿ NRLM ನಲ್ಲಿ ರೂ.72 ಕೋಟಿ ಹಂಚಿಕೆಯಾಗಿದೆ. We have received the sum of Rs. 46 crores and we have spent around Rs. 91 crores. Opening Balance ಅನ್ನು ಇಲ್ಲಿ ಕವರ್ ಮಾಡಿದ್ದೇವೆ. ಕೇಂದ್ರ ಸರ್ಕಾರದ ಹಣವನ್ನು ಖರ್ಚು ಮಾಡುತ್ತಿಲ್ಲ ಎಂಬ ಅವರ ಆತಂಕಕ್ಕೆ clarification ಕೊಡುತ್ತಿದ್ದೇನೆ. We have over done it by this year itself. We will achieve this target. ಅದರಲ್ಲಿ ಸಂದೇಹ ಬೇಡ. KVTSDC (Karnataka Vocational Training and Skill Development Corporation) ನಲ್ಲಿ ಹಣ ಖರ್ಚಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ, certainly we admit to that point. ಆದರೆ ಇನ್ನೂ 5 ತಿಂಗಳು ಸಮಯ ಇದ್ದು, ಪ್ಲಾನ್ ಮಾಡಿ ಮುಂದೆ ಬರುವ ಹಣವನ್ನು ಖರ್ಚು ಮಾಡುತ್ತೇವೆ.

ಶ್ರೀಮತಿ ತಾರಾ ಅನೂರಾಧಃ- ಮಾನ್ಯ ಸಭಾಪತಿಯವರೇ, ಅವರು ಖರ್ಚು ಮಾಡಿ progress ತೋರಿಸಿದ್ದರೆ ಬಹಳ ಸಂತೋಷ. 71 ಸಾವಿರ ಮತ್ತು 10 ಸಾವಿರ ಜನರಿಗೆ ಉದ್ಯೋಗ ಸಿಕ್ಕಿದೆ ಎಂದೆಲ್ಲಾ ಹೇಳಿದ್ದಾರೆ. ಅದು ಎಲ್ಲೆಲ್ಲಿ ಸಿಕ್ಕಿದೆ ಎಂಬ ಮಾಹಿತಿ ಇಲ್ಲ. ಅಂದರೆ ಮಾನ್ಯ ಸಚಿವರಿಗೆ ಕೊಟ್ಟಿರುವ ಉತ್ತರ ಬೇರೆ ಹಾಗೂ ನನಗೆ ಕೊಟ್ಟಿರುವ ಉತ್ತರ ಬೇರೆಯಾಗಿದೆ. ಅದರ ಪ್ರಕಾರ ಅಧಿಕಾರಿಗಳನ್ನು ಅವರಿಗೆ ಏಕೆ ಆ ರೀತಿ ಉತ್ತರ ಮತ್ತು ನನಗೆ ಏಕೆ ಆ ರೀತಿ ಉತ್ತರ ಕೊಟ್ಟಿದ್ದಾರೆ ಎಂದು ಕೇಳಬೇಕು. ನಾನು ಈ ಪ್ರಶ್ನೆ ಕೇಳಲಿ ಎಂದು ಹಾಗೆ ಮಾಡಿರಬಹುದು. ಮಾನ್ಯ ಸಚಿವರು ಎಲ್ಲಾ ಕಡೆ ಮಾಡುತ್ತಿರುವ ಬಗ್ಗೆ ಹೇಳಿದ್ದು, ಅನುಬಂಧ 5(ಎ)ರಲ್ಲಿ Hyderabad-Karnataka Skill Training Programme ನಲ್ಲಿ ಎಲ್ಲಾ ಕಡೆ ಶೂನ್ಯ ಎಂದು ಉತ್ತರದಲ್ಲಿ ಇದೆ. ಉತ್ತರ ಕರ್ನಾಟಕ ಎಂದರೆ ಹೈದರಾಬಾದ್ ಕರ್ನಾಟಕವೂ ಸೇರಿಕೊಳ್ಳುತ್ತದೆ. ಉತ್ತರದಲ್ಲಿ ಏನೂ ಮಾಡಲಿಲ್ಲ ಎಂದು ಕೊಟ್ಟಿದ್ದಾರೆ.

ಶ್ರೀ ಸಂತೋಷ್ ಎಸ್. ಲಾಡ್ಃ- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಲಾಖೆಯಿಂದ ವಿಶೇಷವಾಗಿ 371(ಜೆ) ಪ್ರಕಾರ ಏನಾದರೂ ತೆಗೆದುಕೊಂಡಿದ್ದಾರೆಯೇ ಎಂದು ಕೇಳಿದ್ದಾರೆ. ನಮ್ಮ ಕೌಶಲ್ಯ ಅಭಿವೃದ್ಧಿಗಾಗಿ 5 ಲಕ್ಷ ಜನರ ಗುರಿ ಇದ್ದು, ಇದಕ್ಕೆ ಸಂಪೂರ್ಣವಾಗಿ ಒಂದು ತಿಙಙಾಜ ಮಾಡಿದ್ದೇವೆ. ಸುಮಾರು 7 ಲಕ್ಷಕ್ಕೂ ಹೆಚ್ಚು ಜನ between the age group of 18 to 35 enroll ಮಾಡಿದ್ದಾರೆ. 705 ಸೆಕ್ಟಾರ್‌ಗಳಲ್ಲಿ ಅವರು ತರಬೇತಿ ಹೊಂದಬಯಸುವ ಸೆಕ್ಟಾರ್‌ಗಳಲ್ಲಿ ಅವರೇ ನೋಂದಣಿ ಮಾಡುತ್ತಾರೆ. ಈಗ ಹೊಸದಾಗಿ VTP (Vocational Training Providers) trainers ಏನಿದ್ದಾರೆ, ಅವರಿಗೆ ಬಹಳ stringent ಆಗಿರುವ Central Government guidelines ಪ್ರಕಾರ certify ಮಾಡಿದ ಮೇಲೆ online register ಆಗಿರುವವರಿಗೆ ಅಂದರೆ ಸಂಪೂರ್ಣ

ಕರ್ನಾಟಕದ ಎಲ್ಲಾ ಜಿಲ್ಲೆಯವರು ನೋಂದಣಿ ಮಾಡಲು ಮಾಡುತ್ತಿದ್ದೇವೆ. ಇದರಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕ ಎಂದಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರು ಕೇಳಿರುವ ಮಾಹಿತಿಗಳು ಬಂದಿಲ್ಲ. ಅವರ ಕೆಲವಾರು ಪ್ರಶ್ನೆಗಳು tricky ಇವೆ. As it's a new department which we have started now and I have gathered all the information from all the concerned departments and have furnished it to the Member. If the Member is specifically asking for this particular year, then I have got more clarity on this. ಈ ವರ್ಷದ ಮಾಹಿತಿಗಳನ್ನು ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಕೇಳಿದರೆ, I can give it. ಏಕೆಂದರೆ ಈ ರೀತಿ skilling ಎಲ್ಲಾ 15 ಇಲಾಖೆಗಳಲ್ಲಿ ಆಗುತ್ತಿತ್ತು. It was very difficult for me to gather the information. ನಾನು ನಿಮಗೆ last week answer ಮಾಡಿದ್ದು, I am going to get the details. ಎಲ್ಲಾ 15 ಇಲಾಖೆಗಳ ವಿವರಗಳನ್ನು ಒದಗಿಸಿದ್ದೇನೆ.

ಶ್ರೀಮತಿ ತಾರಾ ಅನೂರಾಧ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಛಿಟಜಚಿಡಿ ಇರಲಿಲ್ಲ ಎಂದು ಒಪ್ಪಿಕೊಂಡರು, ತುಂಬಾ ಒಳ್ಳೆಯದಾಯಿತು.

ಶ್ರೀ ಸಂತೋಷ್ ಎಸ್. ಲಾಡ್:- ಯಾರು clear ಇರಲಿಲ್ಲ?

ಶ್ರೀಮತಿ ತಾರಾ ಅನೂರಾಧ:- ಈಗ ತಾನೆ ಮಾನ್ಯ ಸಚಿವರು ಹೇಳಿದರು. ಹೈದರಾಬಾದ್-ಕರ್ನಾಟಕ ಎಲ್ಲಿದ್ದರ ಬಗ್ಗೆ clear ಇರಲಿಲ್ಲ, ಈಗ clear ಆಯಿತು ಎಂದು ಹೇಳಿದರು.

**Sri Santhosh S.Lad:-** Don't mislead it. I will explain it to you. ಮಾನ್ಯ ಸಭಾಪತಿಯವರೆ, ನಾನು ಎಲ್ಲಾ ಇಲಾಖೆಯ ಮಾಹಿತಿಗಳನ್ನು ತರಿಸಿ ಒದಗಿಸುವ ಬಗ್ಗೆ ಛಿಟಜಚಿಡಿ ಇರಲಿಲ್ಲ ಎಂದು ಹೇಳಿದ್ದು. ಏಕೆಂದರೆ ಮೂರು ವರ್ಷಗಳ ಹಿಂದಿನ ಬೇರೆ ಬೇರೆ ಇಲಾಖೆಗಳ ಮಾಹಿತಿಗಳನ್ನು ನನಗೆ ಕೇಳಿದರೆ...... Obviously, this is a new department which has started. It is having its own teething problems. But still with that, we are achieving it. Whatever the member is asking about my department, I am able to answer about it. ನಾನು ಉತ್ತರ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಕೇಂದ್ರ ಸರ್ಕಾರದಿಂದ ಮೂರು ವರ್ಷಗಳ ಎಲ್ಲಾ ಇಲಾಖೆಗಳಿಗೆ ಬಂದಿರುವ ಹಣದ ವಿವರಗಳನ್ನು ಕೇಳಿದ್ದಾರೆ. ಅದೇ ರೀತಿ ರಾಜ್ಯ ಸರ್ಕಾರದ ಮೂರು ವರ್ಷಗಳ ಹಣದ ಬಗ್ಗೆ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೇಳಿದ್ದಾರೆ. To gather all the information it took time. That's why I am giving enough of information. ನಿರ್ದಿಷ್ಟವಾಗಿ ಯಾವುದೇ ಪ್ರಶ್ನೆ ಇದ್ದರೂ ಮಾನ್ಯ ಸದಸ್ಯರು ಕೇಳಬಹುದು, ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀಮತಿ ತಾರಾ ಅನೂರಾಧ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಾರ್ಯನಿರ್ವಹಣೆ ಬಗ್ಗೆ ನನಗೆ ಅನುಮಾನಗಳಿಲ್ಲ. ಅವರು ಮಾಹಿತಿ ಸಂಗ್ರಹಿಸಲು ಒಂದು ವಾರ ತೆಗೆದುಕೊಂಡು ಮಾಹಿತಿ ಕೊಟ್ಟಿದ್ದಾರೆ. Clear ಇಲ್ಲ ಎಂದೂ ಹೇಳಿದರು. ಎಲ್ಲಾ ಇಲಾಖೆಗಳು ಬರುವುದರಿಂದ ಈ ವಾರ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿದರು. ಆದರೆ ಎಲ್ಲದ್ದಕ್ಕೂ ಅಧಿಕಾರಿಗಳ ಮೇಲೆ ಏಕೆ depend ಆಗುತ್ತಾರೆ? ಇದೊಂದು ಒಳ್ಳೆಯ ಇಲಾಖೆ ಆಗಿರುವುದರಿಂದ experts ಅನ್ನು ತೆಗೆದುಕೊಳ್ಳಬೇಕು. ಇದರಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಬಹುದು. Experts ಅನ್ನು ತಯಾರು ಮಾಡುವಂಥಾದ್ದು. ಈ ಇಲಾಖೆಯಲ್ಲಿ ಕೌಶಲ್ಯಗಳನ್ನು ಹೆಚ್ಚು ಮಾಡಬಹುದು. ಯುವಕರಿಗೆ ಉದ್ಯೋಗ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬಹುದು, ಇದರಿಂದ ಸರ್ಕಾರ ಮತ್ತು ದೇಶಕ್ಕೂ ಹೆಸರು ಬರುತ್ತದೆ. ಅದರ ಬಗ್ಗೆ ಗಮನ ಕೊಟ್ಟು experts opinion ತೆಗೆದುಕೊಳ್ಳಬೇಕೆಂದು ನನ್ನ ಸಲಹೆ.

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, Who says we have not taken the experts. I will reply to it. VTPs (Vocational Training Providers) training process ನಲ್ಲಿ ಅವರಿಗೆ ತರಬೇತಿ ಕೊಡುವುದರ ಜೊತೆಗೆ placement ಮಾಡಬೇಕು. Without placing them we are not going to give their money. ಕನಿಷ್ಟ 6 ತಿಂಗಳಲ್ಲಿ ನಮಗೆ slip list ಕೊಡಬೇಕು. 70 percent of the money will be provided for training. Remaining 30 percent ಹಣವನ್ನು ನಾವು ಹಿಡಿದುಕೊಳ್ಳುತ್ತೇವೆ. ಏಕೆಂದರೆ ಅವರು complete establish ಮಾಡಿ, employment generate ಮಾಡಿ, 6 ತಿಂಗಳು ನಮಗೆ slip ಕೊಟ್ಟಮೇಲೆ ಉಳಿದ 30 ಪರ್ಸೆಂಟ್ ಹಣ ಕೊಡುತ್ತೇವೆ. So, this is the stringent guidelines from Government of India only. Based on to that, we are doing it. No doubt about it. ಮಾನ್ಯ ಮುಖ್ಯಮಂತ್ರಿಗಳ ಕನಸಿನಂತೆ 5 ಲಕ್ಷ ಗುರಿಯನ್ನು ಈ ವರ್ಷದೊಳಗೆ ಮುಗಿಸುತ್ತೇವೆ.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ದಿನಾಂಕ 22ನೇ ನವೆಂಬರ್ 2017ರ ಸಮೂಹ 3 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 131 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

***<u>2) ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>***

**ಅ) ವಿಷಯ: ರೈತರ ಆತ್ಮಹತ್ಯೆ ಬಗ್ಗೆ.**

ಶ್ರೀ ಮಹಾತ್ಮ ಗಾಂಧಿಯವರು ಹೇಳಿದಂತೆ ರೈತನು ಈ ದೇಶದ ಬೆನ್ನೆಲುಬು, ಇಂತಹ ರೈತನು ಆತ್ಮಹತ್ಯೆಯ ಹಾದಿ ತುಳಿದಿರುವುದು ನಿಜಕ್ಕೂ ಕಳವಳಕಾರಿಯಾದ ಅಂಶವಾಗಿದೆ. ದಿನಾಂಕ 20/11/2017ರ ಸೋಮವಾರದ ಕನ್ನಡ ಪ್ರಭ ದೈನಂದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಾಲ ಮನ್ನಾದ ಬಳಿಕವೂ 200 ರೈತರ ಸಾವು ಈ ವರ್ಷ ರಾಜ್ಯದ 750 ರೈತರ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜಕ್ಕೂ ಆಘಾತಕಾರಿ ವಿಷಯವಾಗಿದೆ. ಆತ್ಮಹತ್ಯೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅತೀ ಹೆಚ್ಚು ಅಂದರೆ ಜನವರಿಯಿಂದ ಇಲ್ಲಿಯವರೆಗೆ 72 ಜನರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಉತ್ತರ ಕರ್ನಾಟಕದಲ್ಲಿ 374 ಹಾಗೂ ಮೈಸೂರು ಕರ್ನಾಟಕದ 11 ಜಿಲ್ಲೆಗಳಲ್ಲಿ 392 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಕಂಡು ಬಂದಿರುತ್ತದೆ.

ಒಂದು ಕಡೆ ಅತೀ ವೃಷ್ಟಿ ಅನಾವೃಷ್ಟಿಯಂತ ಪ್ರಾಕೃತಿಕ ಅಸಮತೋಲನ ಇನ್ನೊಂದು ಕಡೆ ಕೀಟಬಾಧೆಯಿಂದ ತತ್ತರಿಸಿರುವ ರಾಜ್ಯದ ಅನ್ನದಾತನ ಸಾವಿನ ಸರಣಿ ನಿಲ್ಲುವಂತೆ ಕಾಣುತ್ತಿಲ್ಲ. ಆಡಳಿತ ನಡೆಸುವ ಸರ್ಕಾರಗಳು ರೈತರ ಬೆನ್ನಿಗೆ ನೆರವಾಗಿ ನಿಲ್ಲಬೇಕೆಂದು ಹಾಗೂ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳಿಗೆ ಸರಿಯಾದ ಪರಿಹಾರ ಹಣ ತಲುಪಿಸುವುದರೊಂದಿಗೆ ರೈತರ ಆತ್ಮಹತ್ಯೆಯನ್ನು ತಡೆಯಲು ಸರ್ಕಾರ ಮುಂದಾಗಬೇಕೆಂದು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಶೀಘ್ರ ಉತ್ತರವನ್ನು ಒದಗಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(1167)22.11.2017/1.00/ಹೆಚ್‌ವಿಃಎಕೆ**

**ಆ)ವಿಷಯಃ ಬೆಳಗಾವಿ ವಿಭಾಗದ ಕೆಲವು ಜಿಲ್ಲೆಗಳಲ್ಲಿ ಹಿಂದು ಲಿಂಗಾಯಿತರಿಂದ ಕೆಲವು ಹಿಂದುಳಿದ ಜಾತಿಗಳು 2ಎ ವರ್ಗಕ್ಕೆ ಸೇರಿಸುವ ಕುರಿತು.**

– – –

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗಾ, ಕೊಪ್ಪಳ, ಹುಬ್ಬಳ್ಳಿ–ಧಾರವಾಡ, ಗದಗ ಮತ್ತು ಹಾವೇರಿ ಈ ಎಲ್ಲಾ ಜಿಲ್ಲೆಗಳ ಬಹುತೇಕ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಮಾಳಿ, ಮಾಲಗಾರ್, ಹೂಗಾರ್, ತೋಟಗಾರ್, ಪೂಲ್‌ಮಾಳಿ, ಕ್ಷತ್ರಿಯಮಾಳಿ ಸಮಾಹ 2 'ಎ' ವರ್ಗಕ್ಕೆ ಸೇರಿದ್ದ ಹಲವು ಕುಟುಂಬಗಳು ಹಿಂದಿನಿಂದಲೂ ಸಾಮಾಜಿಕವಾಗಿ ಪರಿವರ್ತನೆಗೆ ಒಳಗಾಗಿ 'ಹಿಂದು ಲಿಂಗಾಯತ್' ಎಂದು ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿಕೊಂಡು ಬಂದಿರುತ್ತಾರೆ.

ಆದರೆ, ಮಾಳಿ, ಮಾಲಗಾರ್, ಹೂಗಾರ್, ತೋಟಗಾರ್, ಪೂಲ್‌ಮಾಳಿ, ಕ್ಷತ್ರಿಯಮಾಳಿ ಕುಟುಂಬಗಳು ಸೇರಿರುವುದಾಗಿ ಕೆಲವು ಪ್ರಕರಣಗಳು ನ್ಯಾಯಾಲಯದ ಆದೇಶದ ಮೇಲೆ ಬದಲಾಯಿಸಿಕೊಂಡು ಜಾತಿ ಪ್ರಮಾಣ ಪತ್ರದಲ್ಲಿ ಹಿಂದು ಲಿಂಗಾಯುತದಿಂದ ಮಾಳಿ, ಮಾಲಗಾರ್, ಹೂಗಾರ್, ತೋಟಗಾರ್, ಪೂಲ್‌ಮಾಳಿ, ಕ್ಷತ್ರಿಯಮಾಳಿ ಎಂದು 2 'ಎ' ವರ್ಗಕ್ಕೆ ಪರಿವರ್ತಿಸಿಕೊಂಡು ಜಾತಿ ಪ್ರಮಾಣ ಪತ್ರದ ಮೂಲಕ ದೃಢೀಕರಿಸಿಕೊಂಡಿರುತ್ತಾರೆ. ಇನ್ನು ಈ ಜನಾಂಗದ ಬಹಳಷ್ಟು ಕುಟುಂಬಗಳು ಹಾಗೂ ಜನ ನ್ಯಾಯಾಲಯದ ಮೊರೆ ಹೋಗದೆ ಸಾಮಾಜಿಕ ನ್ಯಾಯ ಮತ್ತು ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ.

ಈ ಕಾರಣಗಳಿಂದ ಮೂಲತಃ ಮಾಳಿ, ಮಾಲಗಾರ್, ಹೂಗಾರ್, ತೋಟಗಾರ್, ಪೂಲ್‌ಮಾಳಿ, ಕ್ಷತ್ರಿಯಮಾಳಿ ಈ ಜನಾಂಗಕ್ಕೆ ಸೇರಿದ ಇವರನ್ನು 'ಹಿಂದು ಲಿಂಗಾಯತ್' ವರ್ಗದಿಂದ ಬೇರ್ಪಡಿಸಲು ರಾಜ್ಯ ಸರ್ಕಾರವು ಮೇಲೆ ಹೇಳಿರುವ ಆಯಾ ಜಿಲ್ಲೆಗಳಲ್ಲಿ ಜಾತಿ ಪರಿಶೀಲನಾ ಸಮಿತಿಯನ್ನು ರಚಿಸಿ ಸಮಿತಿಯ ಮುಖಾಂತರ ಪ್ರತಿ ಪ್ರಕರಣವನ್ನು 'ಹಿಂದು ಲಿಂಗಾಯತ್' ಗುಂಪಿಗೆ ಒಳಗಾದ ಮಾಳಿ, ಮಾಲಗಾರ್, ಹೂಗಾರ್, ತೋಟಗಾರ್, ಪೂಲ್‌ಮಾಳಿ, ಕ್ಷತ್ರಿಯಮಾಳಿ ವರ್ಗ 2 'ಎ'ಗೆ ಬದಲಾಯಿಸಿಕೊಳ್ಳುವ ಸೂಕ್ತ ಪ್ರಕ್ರಿಯೆ ಹಾಗೂ ಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

**ಇ)ವಿಷಯಃ ಹೊಸಪೇಟೆ ತಾಲ್ಲೂಕಿನ ಹಂಪಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಒಕ್ಕಲೆಬ್ಬಿಸುತ್ತಿರುವ ಕುರಿತು.**

– – –

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಹಂಪಿ ಗ್ರಾಮ ಪಂಚಾಯಿತಿ ಇರುತ್ತದೆ. ಹಂಪಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಸರ್ವೆ ನಂಬರ್ 137, 138 ಮತ್ತು 141ರಲ್ಲಿ ಸುಮಾರು 170 ಮನೆಗಳಿದ್ದು, ಅವುಗಳನ್ನು 1958 ಮತ್ತು 1961 ಆಕ್ಟ್‌ನಲ್ಲಿ ಹಂಪಿ ಪ್ರಾಧಿಕಾರದ ಅಡಿಯಲ್ಲಿ ಬರುವ ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಿರುತ್ತಾರೆ. ಇವರುಗಳು ಸುಮಾರು 70–80 ವರ್ಷಗಳ ಹಿಂದೆ ಇಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಿರುತ್ತಾರೆ. ಆದರೆ, ಇವರು ವಾಸವಿರುವ ಮನೆಗಳಿಗೆ ಸರಿಯಾದ ದಾಖಲಾತಿಗಳು

ಇರುವುದಿಲ್ಲವೆಂದು ಇವರನ್ನು ಒಕ್ಕಲೆಬ್ಬಿಸಲು ಹಂಪಿ ವಿಶ್ವ ಪಾರಂಪರಿಕ ನಿರ್ವಹಣಾ ಪ್ರಾಧಿಕಾರ (HWHAMA) ನೋಟಿಸ್ ನೀಡಿರುತ್ತದೆ.

ಹಂಪಿಗೆ ವಿಶ್ವ ಪಾರಂಪರಿಕ ಸ್ಥಾನಮಾನ ಬರುವುದಕ್ಕೆ ಮೊದಲೇ ಇವರು ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. ಆದರೆ, ಹಂಪಿ ಪ್ರವಾಸಿ ತಾಣವಾಗಿದ್ದು ಅದನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಅಲ್ಲಿ ನಿಯಮಗಳನ್ನು ಉಲ್ಲಂಘಿಸಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆಯೆಂದು ಹಾಗೂ ಆ ಮನೆಗಳನ್ನು ಕಾಲಕಾಲಕ್ಕೆ ವಾಣಿಜ್ಯೀಕರಣಗೊಳಿಸಲಾಗಿದೆಯೆಂದು ಮನೆಗಳನ್ನು ಒಕ್ಕಲೆಬ್ಬಿಸಲು ಮುಂದಾಗಿರುತ್ತದೆ. ಆದರೆ, ಕೆಲವು ಮನೆಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಸರ್ಕಾರ ಪರಿಹಾರವನ್ನು ನೀಡಿದ್ದು, ಜೊತೆಗೆ ಮನೆಗಳನ್ನು ಸಹ ಬೇರೆ ನಿಗದಿತ ಸ್ಥಳಗಳಲ್ಲಿ ಸರ್ಕಾರವೇ ಕಟ್ಟಿಕೊಟ್ಟಿರುತ್ತದೆ. ಆದರೆ, ಇತ್ತೀಚೆಗೆ ಬಂದಂಥ ಕಾನೂನಿನ ಪ್ರಕಾರ ಮನೆಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಅವರಿಗೆ ಸೂಕ್ತ ಪರಿಹಾರ ಹಾಗೂ ಅವರು ವಾಸವಿರುವ ಪ್ರದೇಶದಿಂದ 500 ಮೀಟರ್ ದೂರದಲ್ಲಿ ಸುಸಜ್ಜಿತ ಮನೆಗಳನ್ನು ಕಟ್ಟಿಕೊಟ್ಟರೆ ಅನುಕೂಲವಾಗುತ್ತದೆ.

ಇತ್ತೀಚಿನ ಭೂ ಸುಧಾರಣಾ ಕಾಯಿದೆ 94(ಸಿ) ಅನ್ವಯ ಅಕ್ರಮ ಮನೆ ನಿರ್ಮಾಣವಾಗಿದ್ದಲ್ಲಿ ಸಕ್ರಮಗೊಳಿಸುವುದಕ್ಕೆ ಅವಕಾಶವಿರುತ್ತದೆ. ಆದಾಗ್ಯೂ ಸರ್ಕಾರ ಹಂಪಿಯನ್ನು ಪಾರಂಪರಿಕ ದೃಷ್ಟಿಯಿಂದ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕಾದಲ್ಲಿ ಅವರುಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವವರೆಗೆ ಒಕ್ಕಲೆಬ್ಬಿಸದಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

**ಈ)ವಿಷಯ: ಕರ್ನಾಟಕ ರಾಜ್ಯ ತ್ಯಾಜ್ಯದಿಂದ ಎಲೆಕ್ಟ್ರಾನಿಕ್ ಉತ್ಪಾದನೆಯಲ್ಲಿ ಇ-ವೇಸ್ಟ್ ನಿರ್ವಹಣೆ ಸಮಿತಿ ನಿರ್ಣಯ ಅನುಷ್ಠಾನಗೊಳಿಸುವ ಕುರಿತು.**

\- - -

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:20-11-2017ರ ಸೋಮವಾರದ 'ವಿಜಯವಾಣಿ' ದೈನಂದಿನ ಪತ್ರಿಕೆಯಲ್ಲಿ, **'ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ ತ್ಯಾಜ್ಯ ಉತ್ಪಾದನೆಯಲ್ಲಿ ದೇಶದಲ್ಲೇ 7ನೇ ಸ್ಥಾನ'** ಎನ್ನುವ ಶೀರ್ಷಿಕೆಯಡಿಯಲ್ಲಿ;

'ಕ್ಯಾನ್ಸರ್, ಸಾಂಕ್ರಾಮಿಕ ರೋಗಗಳಿಗೆ ಮುಕ್ತ ರಹದಾರಿ ಮಾಡಿಕೊಡಬಹುದಾಗಿದೆ. ದಟ್ಟ ಕಾನನಗಳಿಂದ ಕಂಗೊಳಿಸುವ ಪಶ್ಚಿಮ ಘಟ್ಟ, ಆಗಸ ಮುಟ್ಟುವಂತೆ ಕಾಣುವ ಮಲೆನಾಡಿನ ಗುಡ್ಡಗಾಡುಗಳೊಂದಿಗೆ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದ ನಮ್ಮ ಈ ಕರುನಾಡು ಈಗ ಇ-ತ್ಯಾಜ್ಯದ (ಎಲೆಕ್ಟ್ರಾನಿಕ್ ವೇಸ್ಟ್) ಗೂಡು! 'ಗಾರ್ಡನ್ ಸಿಟಿ'ಯಿಂದ 'ಗಾರ್ಬೆಜ್ ಸಿಟಿ' ಎಂಬ ಅಪಖ್ಯಾತ ಹೊತ್ತಿರುವ ರಾಜಧಾನಿ ಬೆಂಗಳೂರು ಒಳಗೊಂಡಂತೆ ಇಡೀ ಕರ್ನಾಟಕವೀಗ ಎಲೆಕ್ಟ್ರಾನಿಕ್ ವಸ್ತುಗಳ ತ್ಯಾಜ್ಯದಿಂದ ಗಬ್ಬೆದ್ದಿದೆ. ಡೆಂಗ್ಯೂ, ಚಿಕೂನ್ ಗುನ್ಯಾ ಮಾರಿಗಿಂತಲೂ ಭೀಕರವಾದ ಇ-ಮಾರಿ ರಾಜ್ಯದ ಜನರ ಬೆನ್ನೇರುತ್ತಿದೆ. ಇ-ವೇಸ್ಟ್ ಉತ್ಪಾದನೆಯಲ್ಲಿ 2012ರಲ್ಲಿ 15ನೇ ಸ್ಥಾನದಲ್ಲಿದ್ದ ರಾಜ್ಯ ಇದೀಗ 7ನೇ ಸ್ಥಾನ ಪಡೆದಿರುವುದೇ ಈ ಎಲ್ಲಾ ಚಿಂತೆ, ಆತಂಕಗಳಿಗೆ ಕಾರಣ ಸಿ.ಪಿ.ಸಿ.ಬಿ. ಪ್ರಕಾರ ದೇಶದಲ್ಲಿ ಒಟ್ಟು 178 ಇ-ವೇಸ್ಟ್ ಮರುಬಳಕೆ ಕೇಂದ್ರಗಳಿವೆ. ಇದರಲ್ಲಿ ರಾಜ್ಯದಲ್ಲೇ 57 ಕೇಂದ್ರಗಳಿವೆ.

ಕೇಂದ್ರ 2016ರಲ್ಲಿ ಇ-ವೇಸ್ಟ್ ನಿರ್ವಹಣಾ ನಿಯಮ ಜಾರಿ ಮಾಡಿದೆ. ನಿಯಮದ ಪ್ರಕಾರ, ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಇ-ತ್ಯಾಜ್ಯವನ್ನು ಮರುಬಳಕೆ ಕೇಂದ್ರಗಳಿಗೆ ವಿಲೇವಾರಿ ಮಾಡಬೇಕು. ಆದರೆ, ಅವು ನಿಯಮ ಮೀರಿ ನಡೆದುಕೊಳ್ಳುತ್ತಿವೆ.

ರಾಜ್ಯ ಸರ್ಕಾರ 2014ರಲ್ಲಿ ಇ-ವೇಸ್ಟ್ ವಿಚಾರವಾಗಿ ಹೈದ್ರಾಬಾದ್ ಸಿ-ಮೆಟ್ ಸ್ವಾಯುತ್ತ ಸಂಸ್ಥೆ ಜೊತೆಗೆ ಒಡಂಬಡಿಕೆ ಮಾಡಿಕೊಂಡಿದೆ. ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ 807 ಲಕ್ಷ ರೂಪಾಯಿಗಳನ್ನು, ರಾಜ್ಯ ಐ.ಟಿ., ಬಿ.ಟಿ., ಇಲಾಖೆ ಅಡಿ ಕಾರ್ಯನಿರ್ವಹಿಸುವ ಕೆಬಿಟ್ಸ್ 75 ಲಕ್ಷ ರೂಪಾಯಿಗಳನ್ನು, ಸಿ-ಮೆಟ್ 130 ಲಕ್ಷ ರೂಪಾಯಿಗಳನ್ನು ಹಾಗೂ ರಾಜ್ಯದಲ್ಲಿರುವ ಇ- ಪರಿಸರ 104 ಲಕ್ಷ ರೂಪಾಯಿಗಳನ್ನು ಇ-ವೇಸ್ಟ್ ನಿರ್ವಹಣೆಗೆ ಮೀಸಲಿಡಲಾಗಿದೆ.' ಎನ್ನುವ ವರದಿ ಪ್ರಕಟವಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2014ರಲ್ಲಿ ಕಿಯೋನಿಕ್ಸ್ ನಿರ್ದೇಶಕರಾದ ರಾಜೀವ್ ಶ್ರೀ ವಾತ್ಸವ್‌ರವರ ನೇತೃತ್ವದಲ್ಲಿ 'ಇ-ವೇಸ್ಟ್ ನಿರ್ವಹಣೆ'ಗಾಗಿ ರಚಿಸಿದ್ದ ಸಮಿತಿ ನಿರ್ಣಯಗಳನ್ನು ಅನುಷ್ಠಾನಗೊಂಡಿಲ್ಲ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಇ-ವೇಸ್ಟ್ ನಿರ್ವಹಣೆಗಾಗಿ ರಚಿಸಿದ ಸಮಿತಿ ನಿರ್ಣಯಗಳನ್ನು ಅನುಷ್ಠಾನಗೊಳಸಬೇಕು ಹಾಗೂ ಇ-ವೇಸ್ಟ್‌ನಿಂದ ಬರುವ ರೋಗಗಳನ್ನು ತಡೆಯಬೇಕೆಂದು ಕೋರುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

**ಉ)ವಿಷಯ: ಸಾಗರ ತಾಲ್ಲೂಕು ಕೊಪ್ಪ ನಾರಗೊಂಡ ಹೂವುಹರನಕೊಪ್ಪ ಬಳ ಅರಣ್ಯದಲ್ಲಿ ಮರ-ಗಿಡಗಳನ್ನು ನಾಶ ಮಾಡಿರುವ ಕುರಿತು.**

- - -

**ಶ್ರೀ ಭಾನುಪ್ರಕಾಶ್(ವಿಧಾನ ಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸಾಗರ ತಾಲ್ಲೂಕು ಕೊಪ್ಪ, ನಾರಗೋಡ, ಹೂವುಹರನಕೊಪ್ಪ ಬಳಿ ಇರುವ 125 ಎಕರೆ ಪರಿಭಾವಿತ ಅರಣ್ಯದಲ್ಲಿನ ಬೆಲೆ ಬಾಳುವ ಸುಮಾರು 10 ಸಾವಿರ ಮರಗಿಡಗಳನ್ನು ಕಡಿದು ಹಾಕಲಾಗಿದೆ. ಹಿಂದಿನಿಂದಲೂ ಆರ್.ಟಿ.ಸಿ. ದಾಖಲೆಗಳಲ್ಲಿ ಅರಣ್ಯ ಪ್ರದೇಶ ನಾರಗೋಡ ಗ್ರಾಮಕ್ಕೆ ಸೇರಿದ "ಕಾನು" ಎಂದೇ ನಮೂದಾಗಿತ್ತು. ಈಗ ಬೇರೆ ಭಾಗದ ಕೆಲವು ಶ್ರೀಮಂತರು ತಮ್ಮ ಹೆಸರಿಗೆ ಖಾತೆ ಇದೆ ಎಂದು ಹೇಳಿಕೊಂಡು ಮರಗಳನ್ನು ನೆಲಕ್ಕುರುಳಿಸುತ್ತಿದ್ದಾರೆ. 50ಕ್ಕೂ ಹೆಚ್ಚು ಕಾರ್ಮಿಕರು ಕೊಡಲಿ, ಗರಗಸ, ಜೆ.ಸಿ.ಬಿ.ಗಳನ್ನು ಬಳಸಿ ಅಮೂಲ್ಯ ವನ ಸಂಪತ್ತನ್ನು ಹಾಳು ಮಾಡುತ್ತಿದ್ದಾರೆ. ಈಗಾಗಲೇ ಕೆಲವರು ನಿರ್ದಿಷ್ಟ ಪ್ರದೇಶದ ಸುತ್ತ ತಂತಿ ಬೇಲಿ ಹಾಕಿಕೊಂಡಿದ್ದು, ಅಲ್ಲಿನ ಕೆರೆಗಳನ್ನೂ ಕೂಡ ಅತಿಕ್ರಮಿಸಿದ್ದಾರೆ.

ಪ್ರಭಾವಿ ವ್ಯಕ್ತಿಗಳ ಈ ಕೃತ್ಯ ಖಂಡಿಸಿ ನೀಚಡಿ, ತ್ಯಾಗರ್ತಿ ಜಿಗಳಮನೆ, ಕೊಪ್ಪ, ಹೆಗ್ಗೋಡು, ನಾರಕೋಡ ಗ್ರಾಮಗಳ ನೂರಾರು ರೈತರು ಪರಿಸರ ಕಾರ್ಯಕರ್ತರು ಮರಗಳಿಗೆ ಕೊಡಲಿ ಹಾಕುವುದಕ್ಕೆ ತಡೆಯೊಡ್ಡಿದ್ದಾರೆ. ಅವರೆಲ್ಲರೂ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದು, ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಪ್ರದೇಶದಲ್ಲಿ ಅಂಕೋಲೆ, ಮತ್ತಿ, ನಂದಿ, ಶ್ರೀಗಂಧ, ಮರಗೌರಿ, ದಡಸಲ, ಕಾಸರಕ, ಕೊಡಸ, ಮೂರೆಲೆ, ಪೊದೆ, ಹಿನಾರಿ, ನೇರಲ, ತಾರಿ, ಬೀಟೆ, ಹೊನ್ನೆ, ತಗ್ಗಿ, ಹುಮ್ಮ, ಬೆಳ್ಳಟ್ಟೆ, ಸಂಪಿಗೆ, ರಂಜಲ, ಬಗಿನೆ, ಮುತ್ತಗ, ಮಾವು, ಮರಡಿಬಳ್ಳಿ, ಅಮೃತಬಳ್ಳಿ, ಕೂಗಲಬಳ್ಳಿ, ಉಗ್ಗಣೆಬಳ್ಳಿ, ಚಂದ್ರಸಾಲ ಬಳ್ಳಿ ಹಾಗೂ ಅಮೃತಾಂಜನ ಬಳ್ಳಿಗಳು ಹೇರಳವಾಗಿದ್ದು ಇದರಲ್ಲಿ ಹಲವು ವೃಕ್ಷ ಸಂತತಿಗೆ ಕೊಡಲಿ ಹಾಕಿರುವುದಾಗಿ ನವೆಂಬರ್ 21ರ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಪರಿಭಾವಿತ ಅರಣ್ಯ ಖಾಸಗಿ ವ್ಯಕ್ತಿಗಳ ಹೆಸರಿಗೆ ಹೇಗೆ ಖಾತೆ ಮಾಡಿಕೊಳ್ಳುತ್ತಾರೆ? ಈ ಕೃತ್ಯದಲ್ಲಿ ಕಾಂಗ್ರೆಸ್ ಮುಖಂಡರ ಕೈವಾಡವಿದೆಯೆಂದು ಹಾಗೂ ಅಕ್ರಮ ಅರಣ್ಯ ಸಾಗುವಳಿಗೆ ನೇರವಾಗಿ ಕಂದಾಯ ಸಚಿವರೇ ಬೆಂಬಲ ನೀಡುತ್ತಿರುವುದಾಗಿ ತಿಳಿದು ಬಂದಿರುವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

(ಮುಂದುವರಿದಿದೆ)

(1168)22.11.2017-1.10-ಪಿಕೆ-ಎಕೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತಿದ್ದಾರೆ.

(ಗೊಂದಲ)

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಬಂದಿರುವಂತಹ ಸುದ್ದಿ, ನನಗಿರುವ ಮಾಹಿತಿ ಮತ್ತು ಅಲ್ಲಿನ ಜನರಿಂದ ಬಂದಂಥ ಮಾಹಿತಿಯನ್ನು ಓದುತ್ತಿದ್ದೇನೆ. ಈ ಕುರಿತು ಚರ್ಚೆಗೆ ಸಿದ್ಧವಾಗಿದ್ದರೆ ಅದಕ್ಕೂ ಅವಕಾಶ ಮಾಡಿಕೊಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಬಂದಿರುವುದು conclusive proof ಆಗುತ್ತದೆಯೇ?

**ಸಭಾಪತಿಯವರು:–** ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತಿದ್ದಾರೆ. ಓದುವುದಕ್ಕೆ ಅಡ್ಡಿ ಮಾಡಬಾರದು. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿಲ್ಲ ಎನ್ನುವುದಾದರೆ ಅದನ್ನು ಉತ್ತರ ಕೊಡುವಾಗ ಸ್ಪಷ್ಟಪಡಿಸಿ.

ಮಾನ್ಯ ಭಾನುಪ್ರಕಾಶ್‌ರವರೆ ಇದು ನಿಮ್ಮ ಹೇಳಿಕೆಯೇ ಅಥವಾ ಪತ್ರಿಕೆಯಲ್ಲಿ ಬಂದಿರುವ ವರದಿಯೇ?

**ಶ್ರೀ ಭಾನುಪ್ರಕಾಶ್:–** ಇದು ಪತ್ರಿಕೆಯಲ್ಲಿ ಬಂದಿರುವಂಥದ್ದು. ಅಲ್ಲಿ ಜನ ಹೋರಾಟ ಮಾಡುತ್ತಿದ್ದಾರೆ. ಆ ಕುರಿತು ನನ್ನ ಹತ್ತಿರ ಮಾಹಿತಿ ಇದೆ. ಚರ್ಚೆಗೆ ಅವಕಾಶ ಕೊಟ್ಟರೆ ದಾಖಲೆ ಸಮೇತ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲ.

**ಶ್ರೀ ಎಂ.ಆರ್.ಸೀತಾರಾಂ:–**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಡುತ್ತಿರುವ ಆರೋಪಗಳು ನಿರಾಧಾರ. ಏಕೆಂದರೆ ಪತ್ರಿಕೆಯಲ್ಲಿ ಬಂದ ಹೇಳಿಕೆಯನ್ನು ಇಟ್ಟುಕೊಂಡು ಈ ರೀತಿ ಆರೋಪ ಮಾಡುವುದು ಸರಿಯಲ್ಲ. ಆ ರೀತಿ ಯಾವುದಾದರೂ ನಿರ್ದಿಷ್ಟವಾದ ದಾಖಲೆಗಳಿದ್ದರೆ ಅದನ್ನು ಸಲ್ಲಿಸಲಿ. ಆಗ ಈ ಕುರಿತು ಬೇಕಾದರೆ ನಿಯಮ ೩೩೦ರ ಅಡಿಯಲ್ಲಿ ಚರ್ಚೆ ಮಾಡೋಣ.

**ಶ್ರೀ ಭಾನುಪ್ರಕಾಶ್:–** ಹೊರಗಡೆ ಬಿಜೆಪಿಯ ಮುಖಂಡರು ಮಾತನಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರತಿಕ್ರಿಯೆ ಕೊಟ್ಟಿದ್ದು ಏನು ಪತ್ರಿಕೆಯಲ್ಲಿ ಬಂದಿತ್ತೋ ಅದನ್ನು ಮಾನ್ಯ ಶಿವಕುಮಾರ್‌ರವರು ಇಲ್ಲಿ ಪ್ರಸ್ತಾಪ ಮಾಡಬಹುದಾದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ನಾನೇಕೆ ಪ್ರಸ್ತಾಪ ಮಾಡಬಾರದು? ಇದು ತಪ್ಪು ಎನ್ನುವುದು ಯಾವ ಕಾನೂನಿನ ಅಡಿಯಲ್ಲಿ ಬರುತ್ತದೆ ಹೇಳಲಿ. ನೀವು ಪತ್ರಿಕೆಯಲ್ಲಿರುವುದನ್ನು ರೆಫರೆನ್ಸ್ ಆಗಿ ತೆಗೆದುಕೊಳ್ಳಬಹುದು, ಆದರೆ ನಾನು ತೆಗೆದುಕೊಂಡರೆ ಅದು ತಪ್ಪಾಗುತ್ತದೆಯೇ? ನಿಮಗೆ ಎಷ್ಟು ಹಕ್ಕಿದೆಯೋ ನನಗೂ ಅಷ್ಟೇ ಹಕ್ಕಿದೆ.

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ:–**ಮಾನ್ಯ ಸಭಾಪತಿಯವರೇ, ಶೂನ್ಯವೇಳೆ ಅಡಿ ಪ್ರಚಲಿತ ವಿಚಾರಗಳ ಬಗ್ಗೆ, ಆಗು–ಹೋಗುಗಳ ಬಗ್ಗೆ ಪ್ರಸ್ತಾಪಿಸಲು ಮಾತ್ರ ಅವಕಾಶ ಇರುತ್ತದೆ.

**ಶ್ರೀ ಭಾನು ಪ್ರಕಾಶ್:–**ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಜಿಲ್ಲೆಯವರು. ಅವರ ಬಗ್ಗೆ ನಾನು ಇದುವರೆಗೂ ಯಾವುದೇ ಆರೋಪ ಮಾಡಿಲ್ಲ. ನಾನೇನು ಪ್ರಸ್ತಾಪ ಮಾಡಿದ್ದೇನೆಯೋ ಆ ಕುರಿತು ನೀವು ನಾಳೆ ಸ್ಪಷ್ಟೀಕರಣ ಕೊಟ್ಟಾಗ ಅದೂ ಕೂಡ ಪತ್ರಿಕೆಯಲ್ಲಿ ಬಂದು, ವಿಷಯವೇ ಮುಕ್ತಾಯವಾಗುತ್ತದೆ. ನನಗೆ ಈ ವಿಚಾರವಾಗಿ ಹೆಚ್ಚು ಮಾತನಾಡಲು ಅವಕಾಶ ಕೊಟ್ಟಿದ್ದರೆ ಅಥವಾ ಸಾಕ್ಷಿ ಸಮೇತ ಪ್ರಸ್ತುತಪಡಿಸಿ ಎಂದು ಹೇಳಿದ್ದರೆ ನಾನು ಆ ಕೆಲಸವನ್ನೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೆ. ಶೂನ್ಯವೇಳೆ ಅಡಿ ಪ್ರಸ್ತಾಪ ಮಾಡುವ ವಿಚಾರಕ್ಕೆ ಒಂದು ಸೀಮೆ ಇದೆ ಎನ್ನುವುದು ನನಗೆ ಗೊತ್ತಿದೆ. ಆ ಒಂದು ಮಿತಿಯಲ್ಲಿ ಮಾತನಾಡಿದ್ದೇನೆಯೇ ಹೊರತು ಅಗೌರವ ಸೂಚಿಸುವಂತಹ ಯಾವ ಮಾತುಗಳನ್ನೂ ಆಡಿಲ್ಲ. ಮಾನ್ಯ ಚೌಡರೆಡ್ಡಿಯವರು ಮಾತನಾಡುವಾಗ ಪತ್ರಿಕೆಯನ್ನು ಉಲ್ಲೇಖ ಮಾಡಿ ಹೇಳಿದರು. ಮಾನ್ಯ ಶರವಣರವರು ಪತ್ರಿಕೆಯನ್ನು ಉಲ್ಲೇಖ ಮಾಡಿ ಹೇಳಿದರು. ಬೇರೆ ಇತರ ಸದಸ್ಯರೂ ಕೂಡ ಪತ್ರಿಕೆಗಳನ್ನು ರೆಫರ್ ಮಾಡಿ ಹೇಳಿದ್ದಾರೆ. ಆದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ರೆಫರ್ ಮಾಡಿ ಹೇಳುವುದಕ್ಕೆ ನನಗೇಕೆ ಅವಕಾಶ ಇಲ್ಲ? ನಾನು ಕಡಿಮೆ ದರ್ಜೆಯ ಸದಸ್ಯನೇ? ನಾನೂ ಕೂಡ ಈ ಮನೆಯ ಸದಸ್ಯ. ಕಳೆದ ನಾಲ್ಕು ವರ್ಷಗಳಿಂದ, ಯಾರ್‍ಯಾರು ಪತ್ರಿಕೆಯಲ್ಲಿ ಬಂದ ವರದಿಯನ್ನು ಆಧಾರವಾಗಿಟ್ಟುಕೊಂಡು ಮಾತನಾಡಿದ್ದಾರೆ ಎಂಬುದನ್ನು ನಾನು ನೋಡಿದ್ದೇನೆ. ಬಾಕಿಯವರಿಗೆ ಇರುವಷ್ಟು ಕಾನೂನಿನ ಪರಿಜ್ಞಾನ ನನಗೆ ಇಲ್ಲದೇ ಇರಬಹುದು. ನಾನು ಯಾರಿಗಾದರೂ ಮನ ನೋಯಿಸುವಂಥದ್ದನ್ನು ಹೇಳಿದ್ದೇನೆಯೇ ಅಥವಾ ಕ್ಲ್ಯಾರಿಫಿಕೇಷನ್ ಕೇಳಿದ್ದೇನೆಯೇ? ನೀವು ಕಳ್ಳರು, ಸುಳ್ಳರು ಎಂದು ಹೇಳಿದ್ದೇನೆಯೇ? ನಾನು ಕಡಿಮೆ ದರ್ಜೆಯ ಸದಸ್ಯ ಅಲ್ಲ ಎಂದು ಹೇಳುವುದಾದರೆ ಪತ್ರಿಕೆಯಲ್ಲಿ ಬಂದಿರುವುದನ್ನು ರೆಫರ್ ಮಾಡಿ ವಿಷಯ ಪ್ರಸ್ತಾಪ ಮಾಡಲು ನನಗೂ ಹಕ್ಕಿದೆ.

**ಸಭಾಪತಿಯವರು:-** ದಯವಿಟ್ಟು ಬೇರೆ ಯಾವ ಸದಸ್ಯರೂ ಮಧ್ಯದಲ್ಲಿ ಮಾತನಾಡಬೇಡಿ. You are not the Government. ಸರ್ಕಾರ ಇದಕ್ಕೆ ಉತ್ತರ ಕೊಡುತ್ತದೆ.

**ಶ್ರೀ ಭಾನುಪ್ರಕಾಶ್:-** ನಾನು ರೆಫರ್ ಮಾಡಿದ ಪತ್ರಿಕೆಯಲ್ಲಿ, ಏನೇನು ಕಡಿದಿದ್ದಾರೆ ಎನ್ನುವ ವಿವರ ಇದೆ. ಇದು ಸುಳ್ಳೇ? ಅಲ್ಲಿನ ಅಧಿಕಾರಿಗಳು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು ಸುಳ್ಳೇ? ಜನರು ಅಲ್ಲಿಯೇ ಧರಣಿ ಮಾಡುತ್ತಿದ್ದಾರೆ, ಅದು ಸುಳ್ಳೇ?

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ನೇರವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರ ಹೆಸರನ್ನು ಹೇಳಿದರು.

**ಶ್ರೀ ಭಾನು ಪ್ರಕಾಶ್:-** ನಾನು ಅವರ ಹೆಸರನ್ನು ಹೇಳಲಿಲ್ಲ. ಕಂದಾಯ ಸಚಿವರು ಎಂದು ಹೇಳಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ನನಗೆ ಗೌರವ ಇದೆ. ಇದನ್ನು Let the Government make a note of it.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಇದಕ್ಕೆ ಉತ್ತರ ಕೊಟ್ಟುಬಿಡಲಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಸರ್ಕಾರದ ಪರವಾಗಿ ಇದಕ್ಕೆ ಉತ್ತರವನ್ನು ಇವತ್ತು ಹೇಳುತ್ತೀರೋ, ನಾಳೆ ಹೇಳುತ್ತೀರೋ?

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಭಾನು ಪ್ರಕಾಶ್‌ರವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

ಸಭಾಪತಿಯವರು:- ಈ ಹಿಂದೆ ಶೂನ್ಯವೇಳೆ ಅಡಿ ಪ್ರಸ್ತಾಪ ಮಾಡಿದಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಈಗ ಉತ್ತರಗಳನ್ನು ಮಂಡಿಸುತ್ತದೆ.

## 3. ಸಚಿವರ ಹೇಳಿಕೆಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಅ) ವಿಷಯ: ರಾಜ್ಯದ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳನ್ನು ನೇಮಕ ಮಾಡುವ ಬಗ್ಗೆ.**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 16.11.2017ರಂದು ಮಾನ್ಯ ಎಸ್.ವಿ.ಸಂಕನೂರ ಅವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಆ) ವಿಷಯ: ರಾಷ್ಟ್ರೀಯ ಹೆದ್ದಾರಿ 169, ಮಂಗಳೂರು-ಮೂಡಬಿದ್ರೆ ರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಮಾಡುವ ಬಗ್ಗೆ.**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 16.11.2017ರಂದು ಮಾನ್ಯ ಐವನ್ ಡಿ'ಸೋಜಾ ಅವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರ ಮಂಡಿಸಲಾಗಿದೆ)

**ಇ) ವಿಷಯ: ಅನುಕೂಲತೆಯ ದೃಷ್ಟಿಯಿಂದ ಹೊಸದಾಗಿ ರಚಿಸಲಾಗಿರುವ ತಾಲ್ಲೂಕುಗಳಿಗೆ ಯಾವ ಹಳ್ಳಿಗಳನ್ನು ಮತ್ತು ಯಾವ ತಾಲ್ಲೂಕುಗಳನ್ನು ಯಾವ ಜಿಲ್ಲೆಗಳಿಗೆ ಸೇರಿಸಬೇಕು ಎನ್ನುವುದರ ಬಗ್ಗೆ.**

.....

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 17.11.2017 ರಂದು ಮಾನ್ಯ ಬಸನಗೌಡ ರಾ.ಪಾಟೀಲ (ಯತ್ನಾಳ್) ಅವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)

**ಈ) ರಾಷ್ಟ್ರೀಯ ಹೆದ್ದಾರಿ 73, ಮೂಡಿಗೆರೆ ವ್ಯಾಪ್ತಿಯಲ್ಲಿನ ಹೆದ್ದಾರಿಯನ್ನು ಕೂಡಲೇ ದುರಸ್ತಿ ಮಾಡುವ ಬಗ್ಗೆ.**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 20.11.2017 ರಂದು ಮಾನ್ಯ ಎಂ.ಕೆ.ಪ್ರಾಣೇಶ್ ಅವರು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ:-ನಾವು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರ ಇನ್ನೂ ಉತ್ತರ ಒದಗಿಸಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಕೇಳಿದ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ ಎಂದು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ**:- ಅದೊಂದೇ ಅಲ್ಲ, ನಾವು ನಿಯಮ ೩೩೦ರ ಅಡಿಯಲ್ಲಿ ಕೊಟ್ಟಿರುವ ಮತ್ತು ಗಮನ ಸೆಳೆಯುವ ಸೂಚನೆ ಅಡಿ ಕೊಟ್ಟಿರುವ ವಿಷಯಗಳೂ ಬರುತ್ತಿಲ್ಲವಲ್ಲ? ಸುಮಾರು ಒಂದು ಡಜûನ್‌ನಷ್ಟು ಕೊಟ್ಟಿದ್ದೇನೆ. ಒಂದೂ ಕೂಡ ಬರುತ್ತಿಲ್ಲ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ನಿನ್ನೆ ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಕೇಳಿದ ಪ್ರಶ್ನೆಗೆ ಉತ್ತರ ಬಂದಿಲ್ಲ.

ಸಭಾಪತಿಯವರು:- ಹೌದು, ಕೆಲವರು ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಬರುವುದು ಬಾಕಿ ಇದೆ. ಅವರೆಲ್ಲರ ಪರವಾಗಿಯೇ ಈ ವಿಷಯವನ್ನು ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಕೇಳುತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಒಟ್ಟು ಪ್ರಶ್ನೆಗಳ ಪೈಕಿ ಶೇಕಡ ೬೦-೬೫ ರಷ್ಟು ಉತ್ತರಗಳನ್ನು ಈಗಾಗಲೇ ಒದಗಿಸಿ ಕೊಟ್ಟಿದ್ದೇವೆ. ಈ ಸದನ ಮುಗಿಯುವುದರೊಳಗೆ ಶೇಕಡ ೯೦ ರಷ್ಟು ಉತ್ತರಗಳನ್ನು ಕೊಡುವ ವ್ಯವಸ್ಥೆ ಮಾಡಿ, ಮತ್ತೆ ಏನು ಉಳಿಯುತ್ತದೆಯೋ ಅದಕ್ಕೆ ಸಂಬಂಧಪಟ್ಟಂತೆ ಉತ್ತರಗಳನ್ನು ಮಾನ್ಯ ಸದಸ್ಯರುಗಳಿಗೆ ತಲುಪಿಸುವ ಕೆಲಸ ಮಾಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಕೊಡಬಯಸುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನಾವು ಸರ್ಕಾರದಿಂದ ಭಿಕ್ಷೆ ಕೇಳುತ್ತಿಲ್ಲ. ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ. ಇದನ್ನು ಒಂದು ವರ್ಷದಿಂದಲ್ಲ, ನಿರಂತರವಾಗಿ ಕೇಳುತ್ತಾ ಬರುತ್ತಿದ್ದೇವೆ. ಇದಕ್ಕೆ ಪರಿಹಾರ ಬೇಡವೇ?

(ಗೊಂದಲ)

ಶ್ರೀ ಟಿ.ಎ.ಶರವಣ:- ಸರ್ಕಾರಕ್ಕೆ ಉತ್ತರ ಕೊಡಲು ಸಮಯವಿಲ್ಲ ಎಂದಾದರೆ ಏತಕ್ಕೆ ಅಧಿವೇಶನ ಕರೆಯುತ್ತಾರೆ?

(ಗೊಂದಲ)

ಸಭಾಪತಿಯವರು:- ಒಟ್ಟಿಗೆ 7 ಜನ ಸದಸ್ಯರು ನಿಂತು ಮಾತನಾಡುತ್ತಿದ್ದೀರಿ. ಇದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಆರ್.ಸೀತಾರಾಂ:- ಮಾನ್ಯ ಸಭಾಪತಿಯವರೇ, ಸದನ ಮುಗಿದ ಮೇಲೂ ಮಾನ್ಯ ಸದಸ್ಯರುಗಳಿಗೆ ಉತ್ತರ ಮುಟ್ಟಿಸುವ ವ್ಯವಸ್ಥೆ ಮಾಡಿಸುತ್ತೇನೆ.

**<u>4. ಗಮನ ಸೆಳೆಯುವ ಸೂಚನೆಗಳು</u>**

ಅ)**ವಿಷಯ: ಮೂಡಿಗೆರೆ ಕೇಂದ್ರದಿಂದ ಕಳಸಾ ೧೦೦ ಕಿ.ಮೀ. ದೂರದಲ್ಲಿದ್ದು, ಜನಸಾಮಾನ್ಯರಿಗೆ ಮೂಡಿಗೆರೆ ಕೇಂದ್ರಕ್ಕೆ ಹೋಗಿ ಬರಲು ತೊಂದರೆಯಾಗುತ್ತಿರುವುದರಿಂದ, ಕಳಸಾ ಗ್ರಾಮವನ್ನು ತಾಲ್ಲೂಕೆಂದು ಘೋಷಿಸುವ ಬಗ್ಗೆ.**

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ)**:- ಮೂಡಿಗೆರೆ ಕೇಂದ್ರದಿಂದ ಕಳಸಾ ೧೦೦ ಕಿ.ಮೀ. ದೂರದಲ್ಲಿದ್ದು, ಜನಸಾಮಾನ್ಯರಿಗೆ ಮೂಡಿಗೆರೆ ಕೇಂದ್ರಕ್ಕೆ ಹೋಗಿ ಬರಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗುತ್ತಿರುವುದರಿಂದ, ಕಳಸಾ ಗ್ರಾಮವನ್ನು ತಾಲ್ಲೂಕೆಂದು ಘೋಷಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):- ಮಾನ್ಯ ಸಭಾಪತಿಯವರೇ, . . .

(ಲಿಖಿತ ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಕಾಗೋಡು ತಿಮ್ಮಪ್ಪ**:-ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರ 50 ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿ ಅವುಗಳನ್ನು ಜನವರಿ ತಿಂಗಳ ಒಳಗೆ ಅಸ್ತಿತ್ವಕ್ಕೆ ತರುವ ಪ್ರಯತ್ನ ಮಾಡುತ್ತಿದೆ. ಇವುಗಳ ಹೊರತಾಗಿ ಸದ್ಯಕ್ಕೆ ಯಾವುದೇ ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡುತ್ತಿಲ್ಲ. ಆ ರೀತಿ ಹೊಸ ತಾಲ್ಲೂಕುಗಳನ್ನು ಮಾಡುವ ಸನ್ನಿವೇಶ ಬಂದಾಗ ಮಾನ್ಯ ಮೋಟಮ್ಮನವರ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

**ಶ್ರೀಮತಿ ಮೋಟಮ್ಮ**:- ಮಾನ್ಯ ಸಭಾಪತಿಯವರೇ, ಇಲ್ಲಿರುವ ಎಲ್ಲಾ ಸದಸ್ಯರು ಹೊರನಾಡಿಗೆ ಹೋಗುವ ಸಂದರ್ಭದಲ್ಲಿ ಕಳಸ ಮಾರ್ಗವಾಗಿಯೇ ಹೋಗಿರುತ್ತಾರೆ. ಮೂಡಿಗೆರೆಯಿಂದ ಕಳಸ ಸುಮಾರು 80 ಕಿಲೋ ಮೀಟರ್ ಇದೆ. ಅಲ್ಲಿಂದ ಕುದುರೆಮುಖಕ್ಕೆ 100 ಕಿಲೋ ಮೀಟರ್ ಆಗುತ್ತದೆ. ಕಾರ್ಕಳದ ಕಿಮ್ಮಿಗೋಳಿ, ಬಜಗೋಳಿ ಇಲ್ಲಿಯ ತನಕ ಇದರ ವಿಸ್ತಾರ ಇದೆ. ಅಲ್ಲಿ ಹೆಚ್ಚಾಗಿ ಗಿರಿಜನ ಮತ್ತು ಪರಿಶಿಷ್ಟ ಪಂಗಡದ ಬಡ ಜನರೇ ಇದ್ದಾರೆ. ಅವರ ದಿನನಿತ್ಯದ ಕರ್ತವ್ಯಗಳು ಅಥವಾ ಏನೇ ಕೆಲಸಗಳಾಗಬೇಕಾದರೆ ತಾಲ್ಲೂಕು ಕೇಂದ್ರವಾದ ಮೂಡಿಗೆರೆಗೆ ಬರಬೇಕಾಗುತ್ತದೆ. ಬಸ್ಸುಗಳ ಅನಾನುಕೂಲತೆ ಒಂದು ಕಡೆಯಾದರೆ, ಹೋಗಿ-ಬರುವುದಕ್ಕೆ ದುಡ್ಡು ಕೂಡ ಖರ್ಚಾಗುತ್ತದೆ.

(ಮುಂದು . . .)

(1169)22-11-2017 1.20 ಡಿಎಸ್-ಆರ್ಎನ್

**ಶ್ರೀಮತಿ ಮೋಟಮ್ಮ(ಮುಂದು)**:-

ಸುಮಾರು 2000 ಇಸವಿಯಿಂದ ಇದರ ಬೇಡಿಕೆ ಇದೆ. ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯವರು ಕೂಡ ಶಿಫಾರಸ್ಸು ಮಾಡಿದ್ದಾರೆ. ರಾಜ್ಯದಲ್ಲಿ ಈ ವರ್ಷ ಸುಮಾರು 49 ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಾರೆ. ಅದರಲ್ಲಿ ಇದೊಂದು ಸೇರಿಸಿದರೆ 50 ತಾಲ್ಲೂಕು ಎಂದು ಒಂದು round figure ಆಗುತ್ತದೆ. ಇದನ್ನು ಏಕೆ ಸೇರಿಸಬಾರದು? ಮಾನ್ಯ ಸಚಿವರು ಕೂಡ ಮಲೆನಾಡು ಪ್ರದೇಶದಿಂದ ಬಂದಿರುವಂಥವರು. ಮಾನ್ಯ ಸಚಿವರು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ಕಳಸವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು**:- ಮಾನ್ಯ ಸಚಿವರೇ, ಮೋಟಮ್ಮನವರು ಅಷ್ಟು ಸುಲಭವಾಗಿ ಬಿಡುವುದಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಇದು ಇವರೊಬ್ಬರದ್ದಲ್ಲ, ಇನ್ನೂ ಬಹಳಷ್ಟು ಜನರ ಬೇಡಿಕೆಗಳಿವೆ. ಆದ್ದರಿಂದ ಒಂದು ಮಾಡುವುದಕ್ಕೆ ಹೋದರೆ ಮತ್ತೊಬ್ಬರು ಬೆನ್ನತ್ತುತ್ತಾರೆ. ಮುಂದಿನ ದಿನಗಳಲ್ಲಿ ಹೊಸ ತಾಲ್ಲೂಕುಗಳು ಮಾಡುವ ಸನ್ನಿವೇಶ ಬಂದಾಗ ಇದನ್ನು ಪರಿಗಣಿಸುತ್ತೇವೆ.

**ಸಭಾಪತಿಯವರು**:- ಆ ಭಾಗದ ಮಾನ್ಯ ಪ್ರಾಣೇಶ್‌ರವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಬೇಗ ಮುಗಿಸಿ ಎಂದು ಹೇಳಬೇಡಿ. ಏಕೆಂದರೆ, ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು, ನಿನ್ನೆಯ ಹೋರಾಟವಲ್ಲ. ನಿರಂತರವಾಗಿ ಹೋರಾಟ ನಡೆಯುತ್ತಿದೆ. ನಾನು ಯಾವುದೇ ಪಕ್ಷದ ಮೇಲೆ ಆರೋಪ ಮಾಡುವುದಿಲ್ಲ. ಆದರೆ ಮೂಡಿಗೆರೆಯೊಳಗೆ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ನನಗೆ ವಿಶ್ವಾಸದಿಂದ ಮಾತನಾಡಬೇಕೆಂದು ಅನಿಸುತ್ತಿಲ್ಲ. ಏಕೆಂದರೆ ನಾನು ಮೊದಲೆ ಹೇಳಿದ್ದೇನೆ, ಮೂಡಿಗೆರೆಯ ಭಾಗದಲ್ಲಿರುವಂತಹ ಕಳಸವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಕಳಸವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವುದಕ್ಕೆ ಈ ಸರ್ಕಾರಗಳು ಏಕೆ ಮುಂದೆ ಬರುತ್ತಿಲ್ಲ? ಮಾನ್ಯ ಕಂದಾಯ ಸಚಿವರು ಈಗಾಗಲೇ 49 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದೇವೆ ಎಂದು ಹೇಳಿದರು. ಹಿಂದೆ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಂತಹ ಮಾನ್ಯ ಪರಮೇಶ್ವರ್‌ರವರು ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಸಲ ನಮ್ಮ ಸರ್ಕಾರ ಕಳಸವನ್ನು ಖಂಡಿತವಾಗಿಯೂ ತಾಲ್ಲೂಕು ಕೇಂದ್ರವನ್ನಾಗಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಸದನದಲ್ಲಿ ಹಲವಾರು ಸಚಿವರುಗಳಿದ್ದಾರೆ. ಮಾನ್ಯ ಸಚಿವರುಗಳು ಹೇಳಿರುವ ಮಾತುಗಳನ್ನು ನಾನು ಉಲ್ಲೇಖ ಮಾಡಬೇಕಾಗುತ್ತದೆ. ಪ್ರತಿಯೊಬ್ಬರು ಅನ್ನಪೂರ್ಣೇಶ್ವರಿ ಸನ್ನಿಧಾನಕ್ಕೆ ಬಂದಿದ್ದಾರೆ. ಅನ್ನಪೂರ್ಣೇಶ್ವರಿ ಸನ್ನಿಧಾನಕ್ಕೆ ಬಂದಂತಹ ಸಂದರ್ಭದಲ್ಲಿ ಅವರ ಮುಂದೆ ಪ್ರಥಮವಾಗಿ ಬೇಡಿಕೆ ಇರುವಂಥದ್ದೇ ಕಳಸವನ್ನು ತಾಲ್ಲೂಕು ಕೇಂದ್ರ ಮಾಡಬೇಕು ಎನ್ನುವಂಥದ್ದು. ಅವರೆಲ್ಲರೂ ಆ ತಾಯಿಯ ಸನ್ನಿಧಿಯಲ್ಲಿ ಹೇಳಿದ್ದಾರೆ. ನಾವು ಕಳಸವನ್ನು ಖಂಡಿತವಾಗಿಯೂ ತಾಲ್ಲೂಕು ಕೇಂದ್ರವನ್ನಾಗಿ ಮಾಡುತ್ತೇವೆಂದು ಅಲ್ಲಿ ಹೇಳಿ ಬಂದಿದ್ದಾರೆ. ಅವರು ಮುಂದಿನ ದಿನಗಳಲ್ಲಿ ಆ ಕ್ಷೇತ್ರಕ್ಕೆ ಬಂದಂತಹ ಸಂದರ್ಭದಲ್ಲಿ ಯಾವ ರೀತಿ ಉತ್ತರವನ್ನು ಕೊಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನಾನು ಒಂದು ವಿಚಾರವನ್ನು ಮಾತ್ರ ಹೇಳಬಲ್ಲೆ. ಅದು ಮೀಸಲು ಕ್ಷೇತ್ರ, ಏಕೆ ಈ ಮೀಸಲು ಕ್ಷೇತ್ರವನ್ನು ಇಷ್ಟು ಕಡೆಗಣನೆ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಆ ಕ್ಷೇತ್ರಕ್ಕೆ ಬಂದಂತಹ ಸಂದರ್ಭದಲ್ಲಿ ಮಾತನ್ನು ಕೊಡುತ್ತಾರೆ, ಅದರಲ್ಲೂ ಕಳಸದಲ್ಲಿ ನಕ್ಸಲ್ ಚಟುವಟಿಕೆ ಇರುವಂಥದ್ದು ಎಲ್ಲರಿಗೂ ಗೊತ್ತಿದೆ. ದಿನನಿತ್ಯ ಪತ್ರಿಕೆಗಳನ್ನು ನೋಡುವಂತಹ ಸಂದರ್ಭದಲ್ಲಿ ಅಲ್ಲಿ ನಕ್ಸಲ್ ಚಟುವಟಿಕೆಗಳು ಪ್ರಾರಂಭವಾಗಿರುವುದು ತಿಳಿದು ಬರುತ್ತಿದೆ. ಅವರಿಗೆ ಅಲ್ಲಿ ಯಾವುದೇ ಸವಲತ್ತುಗಳನ್ನು ತೆಗೆದುಕೊಳ್ಳಬೇಕೆಂದರೆ 100 ಕಿ.ಮೀ. ದೂರ ಬರಬೇಕು ಎಂದು ಶ್ರೀಮತಿ ಮೋಟಮ್ಮನವರು ಉಲ್ಲೇಖ ಮಾಡಿದರು, ನೂರು ಕಿ.ಮೀ. ತಾಲ್ಲೂಕಿಗೆ ಬರಬೇಕು. ಅಲ್ಲಿರುವಂಥವರು ಎಸ್.ಸಿ./ಎಸ್.ಟಿ. ಜನಾಂಗದವರು, ಕೂಲಿಕಾರ್ಮಿಕರು. 100 ಕಿ.ಮೀ. ದೂರ ಬಸ್ಸಿನಲ್ಲಿ ಬರಬೇಕಾದರೆ 500 ರೂಪಾಯಿ ಬೇಕು. ಆದರೆ ದುಡಿಮೆ ಮಾಡುವ ಒಬ್ಬ ಕಾರ್ಮಿಕ 250 ರೂಪಾಯಿ ಸಂಪಾದನೆ ಮಾಡುವುದೇ ಒಂದು ದೊಡ್ಡ ವಿಚಾರ. 500 ರೂಪಾಯಿ ಖರ್ಚು ಮಾಡಿಕೊಂಡು ಮೂಡಿಗೆರೆಗೆ ಬರುತ್ತಾನೆಂದರೆ ಸರ್ಕಾರ ಕಣ್ತೆರೆಯಬೇಕಾಗಿದೆಯಲ್ಲವೆ? ಅಲ್ಲಿ ನಕ್ಸಲ್ ಚಟುವಟಿಕೆ ಪ್ರಾರಂಭವಾಗುವುದಕ್ಕೆ ಇದೂ ಕೂಡ ಒಂದು ಕಾರಣವಾಗಿದೆ.

**ಸಭಾಪತಿಯವರು:-** ನಿಮಗೆ ಏನಾಗಬೇಕೆಂದು ಹೇಳಿ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಹಾಗಾದರೆ ನಕ್ಸಲ್ ಚಟುವಟಿಕೆ ಎನ್ನುವುದು ಸಣ್ಣ ವಿಚಾರವೇ? ನಕ್ಸಲ್ ಚಟುವಟಿಕೆ ಅಲ್ಲಿ ಏಕೆ ಪ್ರಾರಂಭವಾಯಿತು? ನಕ್ಸಲ್ ಚಟುವಟಿಕೆಯನ್ನು ತಡೆಯಬೇಕೆಂದು ಸರ್ಕಾರಕ್ಕೆ ಗೊತ್ತಿಲ್ಲವೆ? ಸಾಮಾನ್ಯ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದ ಕೈಯಿಂದ ಆಗುತ್ತಿಲ್ಲ. ಹಾಗಾಗಿ ಅವರು ಬೇರೆ ಕಡೆ ಹೋಗುತ್ತಿದ್ದಾರೆ. ಅವರನ್ನು ಅವಲಂಬಿತರಾಗಿ ನಕ್ಸಲ್ ಚಟುವಟಿಕೆಯೊಳಗೆ ಸಕ್ರಿಯರಾಗುವುದಕ್ಕೆ ಹೊರಟಿದ್ದಾರೆ. ಇದನ್ನು ಸರ್ಕಾರ ಯೋಚನೆ ಮಾಡಬೇಕು.

ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವುದೇನೆಂದರೆ, ಪ್ರತಿ ಸಂದರ್ಭದಲ್ಲೂ ಅಲ್ಲಿ ದೊಡ್ಡ ಪ್ರತಿಭಟನೆ ಆಯಿತು. ಪ್ರತಿಭಟನೆ ಮುಖಾಂತರ ಬೆಂಗಳೂರಿಗೆ ಬರಬೇಕು. ಈ ಸರ್ಕಾರಗಳಿಗೆ ಯಾವ ರೀತಿ ಇದೆ ಎಂದರೆ ಇವರ ಮೇಲೆ ಒತ್ತಡ ತರಬೇಕು, ಅಲ್ಲಿ ಯಾವ ರೀತಿ ಚಟುವಟಿಕೆಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯುತ್ತಿವೆ ಎಂದು ಅವರು ಮಾನ್ಯ ಮಂತ್ರಿಗಳ ಬಳಿ ಬಂದು ಒತ್ತಡ ತಂದರೆ ಆಗ ಮಂತ್ರಿಗಳ ಕಣ್ತೆರೆಯುತ್ತದೆ, ಮುಖ್ಯಮಂತ್ರಿಗಳ ಕಣ್ತೆರೆಯುತ್ತದೆ, ಇಲ್ಲದಿದ್ದರೆ ಬಡವರು ಚಿಕ್ಕಮಗಳೂರುವರೆಗೆ ಬರುವುದೇ ಕಷ್ಟವಾಗುತ್ತದೆ. ಇನ್ನು ಬೆಂಗಳೂರಿನ ವಿಧಾನಸೌಧದವರೆಗೆ ಬಂದು ಪ್ರತಿಭಟನೆ ಮಾಡುವುದಕ್ಕಾಗುತ್ತದೆಯೇ?

**ಸಭಾಪತಿಯವರು**:- ಏನಾಗಬೇಕೆಂಬುದನ್ನೇ ನೀವು ಹೇಳಲಿಲ್ಲ?

**ಶ್ರೀ ಎಂ.ಕೆ.ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಕಳಸವನ್ನು ತಾಲ್ಲೂಕು ಮಾಡುವುದಕ್ಕೆ ಇವರು ಯಾವುದೇ ರೀತಿಯ ವಿಚಾರವನ್ನು ತಮ್ಮ ಮುಂದೆ ಇಟ್ಟುಕೊಂಡಿಲ್ಲ. ಇದು ಕೇವಲ ಕಣ್ಣೊರೆಸುವ ತಂತ್ರವನ್ನು ಸರ್ಕಾರ ಮಾಡುತ್ತಿದೆ. ಇದು ಇವತ್ತು, ನಿನ್ನೆಯ ವಿಚಾರವಲ್ಲ. ಮಾನ್ಯ ಕಂದಾಯ ಸಚಿವರು ಮೂಡಿಗೆರೆಗೆ ಬಂದಾಗಲೂ ಅವರ ಮೇಲೆ ಒತ್ತಾಯ ಮಾಡಲಾಗಿದೆ. ಇನ್ನೇನು ಆಗಿಬಿಡುತ್ತದೆಂದು ಪಾಪ ಅಲ್ಲಿನ ಜನರು ನಮ್ಮ ಈ ಭಾಗವನ್ನು ಸೇರಿಸಿ ಎಂದು ಅವರ ಮುಂದೆ ಅಹವಾಲನ್ನು ತೋಡಿಕೊಂಡರು. ಅವರು ಕೂಡ ನಾನು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತೇನೆಂದು ಹೇಳಿದರು. ಈ ಮಾತನ್ನು ಬಹಳ ಹಿಂದೆ ಅಲ್ಲ, ಕೇವಲ ಒಂದು ತಿಂಗಳ ಹಿಂದೆ ಹೇಳಿದ್ದಾರೆ. ಅದು ಮಾನ್ಯ ಸಚಿವರಿಗೆ ಗೊತ್ತಿದೆ. ಇಲ್ಲಿರುವಂತಹ ಮಂತ್ರಿಗಳು ಸಾಮಾನ್ಯ ಮಂತ್ರಿಗಳಲ್ಲ. ಮಾನ್ಯ ಆಂಜನೇಯರವರು ಇಲ್ಲೇ ಕುಳಿತಿದ್ದಾರೆ. ಮಾನ್ಯ ಆಂಜನೇಯರವರು ಗ್ರಾಮ ವಾಸ್ತವ್ಯವನ್ನು ಮಾಡಿದರು. ಅವರ ಹತ್ತಿರವೂ ಇದೇ ಅಹವಾಲನ್ನು ಕೊಟ್ಟರು. ಕಳಸವನ್ನು ಖಂಡಿತವಾಗಿಯೂ ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕಾಗಿದೆ, ಇದು ನನ್ನ ಗಮನಕ್ಕೆ ಬಂದಿದೆ ಎಂದು ಮಾನ್ಯ ಆಂಜನೇಯರವರು ಹೇಳಿದ್ದಾರೆ. ಆದರೆ ಮೂಡಿಗೆರೆ ಬಿಟ್ಟು ಬೆಂಗಳೂರಿಗೆ ಬಂದ ತಕ್ಷಣ ಏಕೆ ಮರೆತು ಹೋಗುತ್ತದೆ? ನಾನು ಹೇಳುತ್ತಿರುವುದು ಇಷ್ಟೇ, ಮೀಸಲು ಕ್ಷೇತ್ರ, ಅವರಿಗೆ ಅದರ ಬಗ್ಗೆ ಆಸಕ್ತಿ ಇಲ್ಲ, ಅದರಲ್ಲೂ ಶ್ರೀಮತಿ ಮೋಟಮ್ಮನವರು ಮಂತ್ರಿಯಾಗಿದ್ದರು, ಶ್ರೀ ಬಿ.ಬಿ.ನಿಂಗಯ್ಯನವರು ಮಂತ್ರಿಯಾಗಿದ್ದರು, ಅವರು ಅವತ್ತಿನಿಂದಲೂ ಹೋರಾಟ ಮಾಡುತ್ತಿದ್ದಾರೆ. ನಾನು ಹೋರಾಟ ಮಾಡಿಲ್ಲ ಎಂದು ಹೇಳುತ್ತಿಲ್ಲ. ಅವರೂ ಕೂಡ ಮಾಡಲೇಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಸರ್ಕಾರ ಸ್ಪಂದನೆಯನ್ನು ಮಾಡುತ್ತಿಲ್ಲ. ಹಾಗಾಗಿ ನಾನು ನೇರವಾಗಿ ಸರ್ಕಾರದ ಮೇಲೆ ಆರೋಪವನ್ನು ಹೊರಿಸುತ್ತೇನೆ. ಅಜ್ಜಂಪುರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ನನ್ನ ಕ್ಷೇತ್ರಕ್ಕೆ ಸೇರುತ್ತದೆ. ನಾನು ಆ ಜಿಲ್ಲೆಯಿಂದ ಪ್ರತಿನಿಧಿಸುವಂತವನು. ಅದಕ್ಕೆ ಸುತ್ತಮುತ್ತ ಕೇವಲ 30 ಕಿ.ಮೀ. ಅಂತರದಲ್ಲಿದೆ. ಅದು ಅಗತ್ಯವಾಗಿ ಆಗಬೇಕಿತ್ತು, ಕೊಟ್ಟಿದ್ದಾರೆ. ಆದರೆ ಕಳಸ 70-80 ಕಿ.ಮೀ. ಇದ್ದರೆ ಏಕೆ ಕೊಡುತ್ತಿಲ್ಲ? ಇದನ್ನು ಏಕೆ ಗಂಭೀರವಾಗಿ ಪರಿಗಣಿಸುತ್ತಿಲ್ಲ?

ಮಾನ್ಯ ಸಭಾಪತಿಯವರೇ, ಮಾತು ಎತ್ತಿದರೆ ಈ ಸರ್ಕಾರ ನಾನು ಎಸ್.ಸಿ/ಎಸ್.ಟಿ. ಜನಾಂಗದವರ ಕಡೆ, ಕೂಲಿ ಕಾರ್ಮಿಕರ ಕಡೆ, ಪಾಪ ಇವತ್ತು ಅವರು ತುಳಿತಕ್ಕೆ ಒಳಗಾಗಿದ್ದಾರೆ. ಅವರಿಗೆ ಎಲ್ಲಾ ಸವಲತ್ತುಗಳು ಕೊಡಬೇಕು ಎನ್ನುವ ಮಾತನ್ನು ಹೇಳುತ್ತದೆ. ಆದರೆ, ಈ ವಿಚಾರದಲ್ಲಿ ಏಕೆ 50 ತಾಲ್ಲೂಕು ಮಾಡಬೇಕಾದರೆ ಇದರ ಬಗ್ಗೆ ಆಸಕ್ತಿ ಬರಲಿಲ್ಲ, ಕಣ್ಣು ಕಾಣಲಿಲ್ಲ, ಆ ಕಡೆ ಏಕೆ ದೃಷ್ಟಿ ಹಾಯಿಸಲಿಲ್ಲ? ಹೊರನಾಡಿಗೆ ಎಲ್ಲರು ಬರಬೇಕು, ಹೊರನಾಡಿನ ಒಳಗೆ ಬಂದು ದೇವರಿಗೆ ಕೈಮುಗಿಯಬೇಕು. ಅಲ್ಲಿ ಸುಳ್ಳು ಹೇಳಿ ಬರಬೇಕು, ನಮಗೆ ಆಗುವುದಿಲ್ಲವೆಂದು ಹೇಳಿ. ಅಲ್ಲಿ ಏನು ಗೊತ್ತಿಲ್ಲದಂತಹ ಹಿಂದುಳಿದ ಜನಾಂಗದವರು ಇದ್ದಾರೆ. ಅವರಿಗೆ ಏಕೆ ಸುಳ್ಳು ಆಶ್ವಾಸನೆಯನ್ನು ಕೊಡುತ್ತಾರೆ? ನನ್ನ ಪ್ರಶ್ನೆ ಇಷ್ಟೆ, ಏಕೆ ಈ 50 ತಾಲ್ಲೂಕಿನೊಳಗೆ ಕಳಸವನ್ನು ಸೇರಿಸಲಿಲ್ಲ? ನಮ್ಮ ಉಸ್ತುವಾರಿ ಮಂತ್ರಿಗಳಾಗಿರುವಂತಹ ಮಾನ್ಯ ಪರಮೇಶ್ವರ್‌ರವರು ಇನ್ನು ಎರಡು ತಾಲ್ಲೂಕುಗಳು ಬಾಕಿ ಇದೆ, ಆ ಎರಡರೊಳಗೆ ಖಂಡಿತವಾಗಿಯೂ ಕಳಸವನ್ನು ತಾಲ್ಲೂಕು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ ಬಂದಿದ್ದರು. ಆದರೆ, ಇವತ್ತು ಕಂದಾಯ ಸಚಿವರು ಮುಂದಿನ ಸಲ ಎಂದು ಹೇಳುತ್ತಾರೆ. ಮುಂದಿನ ಸಲ ಯಾವಾಗ? 50 ವರ್ಷಗಳಿಂದಲೂ ಮುಂದಿನ ಬಾರಿ, ಮುಂದಿನ ಬಾರಿ ಎಂದು

ಹೇಳುವಂತಹ ಕೆಲಸಗಳಾಗುತ್ತಿವೆ. ಖಂಡಿತವಾಗಿಯೂ ಸರ್ಕಾರ ಮನಸ್ಸು ಮಾಡಿದರೆ ಯಾವುದೂ ದೊಡ್ಡದಲ್ಲ. ಕಳಸವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿದರೆ ಅದರ ಸಂಪೂರ್ಣ ಕ್ರೆಡಿಟ್‌ಗಳು ಅವರಿಗೆ ಬರಲಿ. ಅವರು ಚುನಾವಣೆಗಳಲ್ಲೂ ಅನುಕೂಲ ಮಾಡಿಕೊಳ್ಳಲಿ. ಆದರೆ, ತಾಲ್ಲೂಕು ಕೇಂದ್ರಗಳನ್ನು ಮಾಡುವಾಗ ಖಂಡಿತವಾಗಿಯೂ ಕಳಸವನ್ನು ಮಾತ್ರ ಯಾವುದೇ ಕಾರಣಕ್ಕೂ ಕೈಬಿಡಬೇಡಿ. ಇದೇ ಅವಧಿಯೊಳಗೆ ಇನ್ನೂ ಒಂದು ತಿಂಗಳ ಕಾಲಾವಕಾಶ ಇದೆ. ಅಷ್ಟರೊಳಗೆ ಕಳಸವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕು, ನಕ್ಸಲ್ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು, ಆ ಜನರು ಈ ದಿಕ್ಕಿನ ಕಡೆಗೆ ನೋಡುವಂತಹ ವ್ಯವಸ್ಥೆಗಳಾಗಬೇಕು. ಆ ಜನರು ಕೂಡ ಎಲ್ಲಾ ಸವಲತ್ತುಗಳನ್ನು ಪಡೆಯುವಂತಹ ವ್ಯವಸ್ಥೆ ಆಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕಂದಾಯ ಸಚಿವರು ಖಂಡಿತವಾಗಿಯೂ ಮಾಡಿಕೊಡುತ್ತಾರೆನ್ನುವ ವಿಶ್ವಾಸದೊಂದಿಗೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಗ್ರವಾದ ಧ್ವನಿಯಲ್ಲಿ ಹೇಳಿದ್ದಾರೆ. ಸರ್ಕಾರಕ್ಕಿರುವ ಇತಿಮಿತಿಯಲ್ಲಿ ತೀರ್ಮಾನ ಮಾಡಿದೆ. ಮುಂದೆ ಇಂತಹ ತೀರ್ಮಾನ ಮಾಡುವ ಸಂದರ್ಭ ಬಂದಾಗ ಇದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ಹೇಳಿದ್ದೇನೆ. ಅದನ್ನೇ ನಾನು ಪುನಃ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಸಭೆಯಲ್ಲಿ ನಿನ್ನೆ ದಿವಸ ಸಭಾಪತಿ ಸ್ಥಾನದಿಂದ ಒಂದು ಸಣ್ಣ ನಿರ್ಣಯವನ್ನು ಹೇಳಿದ್ದರು. ಅಂದರೆ, ಇವತ್ತು ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಎರಡು ವಿಚಾರಗಳಂತೂ ನಾವು ತೆಗೆದುಕೊಳ್ಳುತ್ತೇವೆ. ಒಂದು ಶ್ರೀಮತಿ ಮೋಟಮ್ಮನವರ ಗಮನ ಸೆಳೆಯುವ ಸೂಚನೆ, ಎರಡನೆಯದು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ನಿಯಮ 330ರಡಿಯಲ್ಲಿ ಕೊಟ್ಟಿರುವಂಥದ್ದನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಲಾಗಿತ್ತು. ಶ್ರೀಮತಿ ಮೋಟಮ್ಮನವರ ಗಮನ ಸೆಳೆಯುವ ಸೂಚನೆಯನ್ನು ಮುಗಿಸಿದ್ದೇವೆ. ನಿಯಮ 330ರಡಿಯಲ್ಲಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ವಿಚಾರಕ್ಕೆ ಗ್ರಾಮೀಣಾಭಿವೃದ್ಧಿ ಸಚಿವರು ನಾನು ಕೆಳಮನೆಯಲ್ಲಿದ್ದೇನೆ, ನಾನು ಬರುತ್ತೇನೆಂದು ಸುದ್ದಿ ಕಳುಹಿಸಿರುವ ಕಾರಣಕ್ಕಾಗಿ ಅದನ್ನು ನಂತರ ತೆಗೆದುಕೊಳ್ಳುತ್ತೇನೆ. ಈಗ ನನಗೆ ಮತ್ತೊಂದು ಸಣ್ಣ ಚೀಟಿಯನ್ನು ಕಳುಹಿಸಿಕೊಟ್ಟಿದ್ದಾರೆ, ಮಾನ್ಯ ಸಚಿವರಾದ ಆಂಜನೇಯರವರು ಅವರು ತುರ್ತಾಗಿ ಬೆಳಗಾವಿಯನ್ನು ಬಿಟ್ಟು ಬೇರೆ ಕಡೆ ಹೋಗಬೇಕಾಗಿರುವ ಕಾರಣಕ್ಕೆ ನನ್ನ ಇಲಾಖೆಗೆ ಸಂಬಂಧಪಟ್ಟಿರುವಂತಹ ನಿಯಮ 330ರ ವಿಷಯವನ್ನು ಭೋಜನ ವಿರಾಮಕ್ಕಿಂತ ಮುಂಚೆಯೇ ತೆಗೆದುಕೊಳ್ಳಿ ಎಂದು ಚೀಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗಾಗಿ ನಿಯಮ 330ರಡಿಯಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ.

**ಸಭಾಪತಿಯವರು:-** ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮೋಟಮ್ಮನವರ ಗಮನ ಸೆಳೆಯುವ ಸೂಚನೆಯಾದ ತಕ್ಷಣ ಎರಡನೆಯವನು ನಾನೇ ಇದ್ದೇನೆ.

**ಸಭಾಪತಿಯವರು:-** ನಾನು ಹೇಳಿದ್ದು ನಿಮಗೆ ಕೇಳಿಸಲಿಲ್ಲವೆ? ನನಗೂ ಒತ್ತಡಗಳಿರುತ್ತವೆ. ಸಚಿವರುಗಳ ಬೇಡಿಕೆ ಇರುತ್ತದೆ.

(ಮುಂದು)

1170/22-11-2017/1-30/ಬಿಕೆಪಿ-ಆರ್‌ಎನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಅದೇ ನನಗೆ ಅರ್ಥವಾಗಲಿಲ್ಲ. ಒತ್ತಡ ಏಂದರೆ ಏನು?

**ಸಭಾಪತಿಯವರು:–** ಅವರು ತಮ್ಮ ಬೇಡಿಕೆಯನ್ನು ಕಳುಹಿಸಿಕೊಟ್ಟಿದ್ದಾರೆಂದು ನಾನು ಹೇಳಿದ್ದೇನೆ. ನಾನು ಶ್ರೀಯುತ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ವಿಚಾರವನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು ಸಹಕರಿಸಿ. ಮುಂದಿನದ್ದನ್ನು ಅಮೇಲೆ ನೋಡೋಣ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನನ್ನ ಗಮನ ಸೆಳೆಯವ ಸೂಚನೆಯ ವಿಚಾರವನ್ನು ತೆಗೆದುಕೊಳ್ಳಲಿಕ್ಕೆ ಆಗುತ್ತದೋ ಇಲ್ಲವೋ ಎನ್ನುವುದನ್ನು ಹೇಳಿ.

**ಸಭಾಪತಿಯವರು:–** ಅದರ ಬಗ್ಗೆ ಮುಂದೆ ನೋಡೋಣ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮಾನ್ ವಿ.ಸೋಮಣ್ಣನವರ ಗಮನ ಸೆಳೆಯುವ ಸೂಚನೆ ಏನಿದೆ, ಅದನ್ನು ಮಾನ್ಯ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರು ನೋಡಿ, ಈ ವಿಚಾರ ಗೃಹ ಇಲಾಖೆಗೆ ಹೋಗಬೇಕಾಗುತ್ತದೆ, ಇವರು ಟ್ರಾಫಿಕ್ ಬಗ್ಗೆ ಕೇಳಿದ್ದಾರೆ, ಇದರ ಬಗ್ಗೆ ಗೃಹ ಇಲಾಖೆಯವರು ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ.

**ಸಭಾಪತಿಯವರು:–** ಈಗ ಶ್ರೀಯುತ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಿಯಮ ೩೩೦ ರಡಿಯಲ್ಲಿ ತಮ್ಮ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ ೩೩೦ ರ ಪ್ರಕಾರ . . .

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ನಿನ್ನೆಯ ದಿವಸ ನಿಯಮ ೬೮ ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಚಾರವಾಗಿ ಕೇಳಿದ್ದೆ.

(ಗೊಂದಲ)

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ನಿನ್ನೆ ಕೆಳಮನೆಯಲ್ಲಿ 7–8 . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಯುತ ಹೆಚ್. ಆಂಜನೇಯರವರದ್ದು ಮೊದಲು ಮುಗಿಯಲಿ.

**ಸಭಾಪತಿಯವರು:–** ಮಾನ್ಯ ಸಚಿವರಾದ ಶ್ರೀಯುತ ಆಂಜನೇಯರವರದ್ದು ಮೊದಲು ಮುಗಿಯಲಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಶ್ರೀಯುತ ಶಾಣಪ್ಪನವರೆ, ನಿಮ್ಮ ವಿಷಯ ಇದೆಯೇ?

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ಈ ವಿಷಯವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಬಿ.ಶಾಣಪ್ಪನವರು ಪ್ರಸ್ತಾಪ ಮಾಡಿದ್ದರು. ಆ ವಿಚಾರ ರೆಕಾರ್ಡ್ ಬರಬೇಕೆನ್ನುವ ನಿಟ್ಟಿನಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸ್ವಲ್ಪ ಸಮಯ ಕುಳಿತುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಇವರು ಹೊಸ ತಾಲ್ಲೂಕಿಗೆ ಕೆಲವು ಹಳ್ಳಿಗಳನ್ನು ಸೇರಿಸಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ನಮಗೆ ಈ ವಿಚಾರದಲ್ಲಿ ಸಂಶಯಗಳು ಬಂದಿವೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಈಗ ಹೊಸ ತಾಲ್ಲೂಕುಗಳನ್ನು ಮಾಡುವಲ್ಲಿ ಮಾನದಂಡಗಳನ್ನು ಇಟ್ಟುಕೊಂಡೇ ಮಾಡಿರುವುದಾಗಿದೆ. ಅಲ್ಲಿನ ಜಿಲ್ಲಾಧಿಕಾರಿಗಳು, ಸಚಿವರು ಸೇರಿಕೊಂಡು ತೀರ್ಮಾನ ಮಾಡಿ ಈ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡುತ್ತಾರೆ. ಅದರ ವ್ಯಾಪ್ತಿಯಲ್ಲಿ ಬಂದರೆ ಪರಿಶೀಲನೆ ಮಾಡೋಣ.

**ಶ್ರೀ ಕೆ.ಬಿ.ಶಾಣಪ್ಪ:-**ನಾವು ಈ ಕೆಲಸವನ್ನು ಮಾಡಬೇಡಿ ಎಂದು ಹೇಳುತ್ತಿದ್ದೇವೆ. ಆದರೆ, ಈ ಕೆಲಸವನ್ನು ಮಾಡಿ ಎಂದವರು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಈ ವಿಚಾರವನ್ನು ನಾನು ನೋಡುತ್ತೇನೆ. ಏಕೆಂದರೆ, ಹೋಬಳಿಯನ್ನು ಒಡೆಯಬಾರದು ಎನ್ನುವುದು ಇಲ್ಲಿನ ವಿಚಾರವಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ:-** ಬೇಡ ಸರ್, ನೀವು ಮೊದಲು ಮಾಡಿದ್ದು ಸರಿಯಾಗಿದೆ. ಹಾಗೆಯೇ ಇರಬೇಕೆನ್ನುವುದು ನಮ್ಮ ಇಚ್ಛೆಯಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಆಯಿತು.

**ಸಭಾಪತಿಯವರು:-** ಮಾನ್ಯ ಸಚಿವರು ಆಯಿತು ಎಂದು ಹೇಳಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಧನ್ಯವಾದಗಳು. ಈಗ ನಮಗೆ ಸಮಾಧಾನವಾಯಿತು.

**ಕ. ನಿಯಮ 330 ರ ಮೇರೆಗೆ**

**ವಿಷಯ: ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರಿಗೆ ಪ್ರವರ್ಗ-1ರ ಪ್ರಮಾಣ ಪತ್ರ ನೀಡುವಾಗ ಜನಾಂಗವನ್ನು ನಮೂದಿಸಿ ಕೊಡುವ ಬಗ್ಗೆ.**

- - - -

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 330 ರಡಿಯಲ್ಲಿ ರಾಜ್ಯದಲ್ಲಿರುವ ಅಲೆಮಾರಿ ಹಾಗೂ ಅರೆಅಲೆಮಾರಿ ಕೊರಮ, ಕೊರಚ ಹೀಗೆ ಒಟ್ಟಾರೆ ಕಡಿಮೆ ಜನಸಂಖ್ಯೆಯಿರುವ ಈ ಸಮಾಜದ ಅಭಿವೃದ್ಧಿಗೆ ಪೂರಕವಾದಂತಹ ಯೋಜನೆಗಳನ್ನು ರೂಪಿಸಿ ಅವರುಗಳು ಸಮಾಜದ ಅಭಿವೃದ್ಧಿಗೆ ಪೂರಕವಾದ ಯೋಜನೆಯನ್ನು ರೂಪಿಸಿ, ಅವರು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವುದು ಅವಶ್ಯವಿದೆ. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ವಿವಿಧ ನಿಗಮ, ಮಂಡಳಿ ಯೋಜನೆಗಳನ್ನು ಕ್ರೋಢೀಕರಿಸಿ ಸಮಗ್ರ ಅಭಿವೃದ್ಧಿಗೆ ಚಾಲನೆ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಈ ಸಮಾಜಕ್ಕೆ ಒದಗಿಸಿದ ಅನುದಾನದ ಸದ್ಬಳಕೆಗೆ ಅಗತ್ಯ ನಿಯಮ ರೂಪಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಹೆಚ್. ಆಂಜನೇಯ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಅಲೆಮಾರಿ ಜನಾಂಗದಲ್ಲಿ ಬರತಕ್ಕಂತಹ 46 ವರ್ಗಗಳಿಗೆ ಸರ್ಕಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಾಕಷ್ಟು ಪ್ರಮಾಣದಲ್ಲಿ ಅವರುಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಮತ್ತು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವು ಮಾಡುತ್ತಿದ್ದೇವೆ. ಇವರು ಹೇಳುವ ಪ್ರಕಾರ ಇವರುಗಳನ್ನು ಅಲೆಮಾರಿ ಎಂದು ಹೇಳಿ ಕರೆಯಬೇಕೆಂದು ಹೇಳುತ್ತಾರೆ. ಅಲೆಮಾರಿ ಎನ್ನುವಂತಹದ್ದೇ ಒಂದು ಗುಂಪು. ಪ್ರವರ್ಗ–1 ರಲ್ಲಿ ಇರುವಂತಹ 46 ಜಾತಿಗಳು ಏನಿವೆ, ಅವುಗಳು ಅವಕಾಶ ವಂಚಿತ ಸಮುದಾಯ, ಒಂದು ಕಡೆ ಅವರುಗಳಿಗೆ ನೆಲೆಯಿಲ್ಲ, ಮತ್ತೆ ಅವರಿಗೆ ಯಾವುದೇ ರೀತಿಯಾದಂತಹ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಅದರ ಸೌಲಭ್ಯಗಳನ್ನು ಪಡೆಯಲಿಕ್ಕೆ ಆಗದೇ ಇರತಕ್ಕಂತಹ ಒಂದು ಸಮುದಾಯ ಎಂದು ತಿಳಿದುಕೊಂಡೇ ಸರ್ಕಾರ ಅವರಿಗೆ ಪ್ರವರ್ಗ–1ರ ಗುಂಪಿಗೆ ಸೇರಿಸುವ ಮೂಲಕ ಅವರುಗಳಿಗೆ ಉದ್ಯೋಗದಲ್ಲಿ 4% ಇವತ್ತು ಮೀಸಲಾತಿ ನೀಡಿದೆ. ಆ ಮೂಲಕ ಅವರ ಅಭಿವೃದ್ಧಿಗೋಸ್ಕರ ಕೆಲಸವನ್ನು ಮಾಡುತ್ತಿದ್ದೇವೆ. ಶೈಕ್ಷಣಿಕವಾಗಿಯೂ ಸಹ ಅವರುಗಳಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಮತ್ತೆ, ದೇವರಾಜ ಅರಸ್ ಅಭಿವೃದ್ಧಿ ನಿಗಮ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿ ನಿಗಮದಿಂದ ಒಂದು ಮಂಡಳಿಯನ್ನು ಮಾಡಿ, ಇವರುಗಳಿಗಾಗಿಯೇ ಒಂದು ವಿಶೇಷ ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ಕೂಡ ಕೊಡಲಾಗುತ್ತಿದೆ. ಈ ಕಾರಣದಿಂದ, ಸದರಿ 46 ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಪ್ರವರ್ಗ–1ರ ಪ್ರಮಾಣ ಪತ್ರವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದ್ದು, ಪ್ರವರ್ಗ–1 ರ ಪ್ರಮಾಣ ಪತ್ರದಲ್ಲಿ ಅಲೆಮಾರಿ ಎಂದು ಹೇಳಿ, ಅರೆಅಲೆಮಾರಿ ಜನಾಂಗವೆಂದು ನಮೂದಿಸುವ ಬಗ್ಗೆ ಕಂದಾಯ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯೊಂದಿಗೆ ಸಮಾಲೋಚನೆ ಮಾಡಿ ಮುಂದಿನ ಕ್ರಮವನ್ನು ನಾವು ಕೈಗೊಳ್ಳಬಹುದಾಗಿದೆ.

ಆದ್ದರಿಂದ, ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಈ ವರ್ಗದವರ ಕಲ್ಯಾಣವಾಗಬೇಕಾಗಿದೆ, ಈ ಜನರ ಅಭಿವೃದ್ಧಿಯಾಗಬೇಕಾಗಿದೆ ಎಂದು ಕೇಳಿದ್ದಾರೆ. ಅದಕ್ಕಾಗಿ ಸರ್ಕಾರದವರು ಕೂಡ ಇವರ ಬಗ್ಗೆ ವಿಶೇಷವಾದಂತಹ ಆಸಕ್ತಿ ವಹಿಸಿ ಅವರುಗಳಿಗಾಗಿಯೇ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಿ, ಅವರುಗಳನ್ನು ಈ ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ನಿಮಗೆ ಮಧ್ಯಾಹ್ನದ ನಂತರ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಈ ವಿಚಾರದ ಮೇಲೆ ನಾನು ಮಾತನಾಡಬೇಕಾಗಿದೆ.

**ಸಭಾಪತಿಯವರು:–** ಈ ವಿಚಾರ ಬೇಡ. ಈ ವಿಷಯದಲ್ಲಿ ಅವರು ತಮ್ಮ ಚರ್ಚೆಯನ್ನು ಮುಗಿಸುತ್ತಾರೆ.

**ಶ್ರೀ ಹೆಚ್. ಆಂಜನೇಯ:–** ಅವರಿಗೆ ಸಾಮಾಜಿಕ ನ್ಯಾಯವನ್ನು ಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ನಾನು ಹೇಳಿರುವುದನ್ನು ಬಿಟ್ಟು, ಇನ್ನುಳಿದದ್ದು ಏನಾದರೂ ಇದ್ದರೆ, ಅವರ ಅಭಿವೃದ್ಧಿಗೆ ಪೂರಕವಾಗಿ ಏನಾದರೂ ಸಲಹೆ ಸೂಚನೆಗಳನ್ನು ಕೊಟ್ಟರೆ ಅದನ್ನೂ ಕೂಡ ಸ್ವಾಗತ ಮಾಡಿ ಅವರ ಅಭಿವೃದ್ಧಿಗಾಗಿ ಶ್ರಮಿಸಲಿಕ್ಕೆ ನಮ್ಮ ಸರ್ಕಾರ ತಯಾರಿದೆ ಎನ್ನತಕ್ಕಂತಹ ಮಾತನ್ನು ಹಿರಿಯ ಸದಸ್ಯರಾದ ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸಚಿವರಾದ ಶ್ರೀಯುತ ಆಂಜನೇಯವರ ಮಾತನ್ನು ಕೇಳಿದರೆ ಗಿಡದಲ್ಲಿನ ಮಂಗಗಳನ್ನು ಕೈಬಿಡಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಬೇಡಿ ಕುಳಿತುಕೊಳ್ಳಿ, ನನ್ನ ಹತ್ತಿರ ಸಮಯ ಇಲ್ಲ. ಮಧ್ಯಾಹ್ನ ಬಿಲ್‌ಗಳ ಮೇಲೆ ನೀವು ಮಾತನಾಡುವುದಿಲ್ಲವೇ? ಬೇಡ ದಯವಿಟ್ಟು ಕುಳಿತುಕೊಳ್ಳಿ. ಎಲ್ಲಾ ವಿಚಾರದಲ್ಲೂ ನಾನು ಮಾತನಾಡಬೇಕೆಂದರೆ ನನಗೆ ಕಷ್ಟವಾಗುತ್ತದೆ. ಬೇರೆ ಸಮಯದಲ್ಲಿ ಅವಕಾಶವನ್ನು ಕೊಡುತ್ತೇನೆ, ಕುಳಿತುಕೊಳ್ಳಿ. ಶ್ರೀಯುತ ಹೊರಟ್ಟಿಯವರು ತಮ್ಮ ಮಾತನ್ನು ಮುಗಿಸಲಿ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ನನಗೆ ನಿಯಮ 330 ರಡಿಯಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:-** ನಿಯಮ 330 ರಡಿಯಲ್ಲಿ ಮಾತನಾಡಲಿಕ್ಕೆ ಸಾಯಂಕಾಲದವರೆಗೂ ಅವಕಾಶವನ್ನು ಕೊಡಲಿಕ್ಕೆ ಬರುವುದಿಲ್ಲ. ಅದಕ್ಕೆ ಇರುವುದೇ 20 ನಿಮಿಷಗಳ ಕಾಲಾವಕಾಶ. ದಯವಿಟ್ಟು ಕುಳಿತುಕೊಳ್ಳಿ. ನೀವು ಬಹಳ ಕಾನೂನು ಮಾಡುವವರಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ. ಶ್ರೀಯುತ ಹೊರಟ್ಟಿಯವರು ತಮ್ಮ ಮಾತನ್ನು ಮುಂದುವರಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನೀವು ಈ ರೀತಿ ಮಾಡಿದರೆ ನನಗೆ ಅರ್ಥವಾಗುವುದಿಲ್ಲ.

**ಸಭಾಪತಿಯವರು:-** ನಿಮಗೆ ಅರ್ಥವಾಗದಿದ್ದರೆ, ನಾನು ಏನೂ ಮಾಡಲಿಕ್ಕೆ ಬರುವುದಿಲ್ಲ. ಶ್ರೀಯುತ ಹೊರಟ್ಟಿಯವರು ಮಾತನಾಡುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಶ್ರೀಮಾನ್ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಯೀಲ್ಡ್ ಆಗಿದ್ದಾರೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಅ ರೀತಿ ಆಗುವುದಿಲ್ಲ, ಕುಳಿತುಕೊಳ್ಳಿ. I will not allow it. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವುದೇ ಒಂದು ಸ್ಪಷ್ಟವಾದಂತಹ ಉತ್ತರವನ್ನು ಹೇಳಲಿಲ್ಲ. ನಾನು ನಮ್ಮ ನೋಟೀಸ್‌ನಲ್ಲಿ ಇದ್ದಂತೆ ನಾನು ಹೇಳಲಿಕ್ಕೆ ಬಯಸುತ್ತೇನೆ.

ಈ ಮೊದಲು ನೊಮೆಡಿಕ್ ಹಾಗೂ ಸೆಮಿನೋಮೆಡಿಕ್ ಟ್ರೈಬ್‌ಗಳಾಗಿದ್ದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರನ್ನು ಪ್ರವರ್ಗ-1ಕ್ಕೆ ಸೇರಿಸಲಾಗಿದೆ. ಆದರೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 127 ಬಿಸಿಎ 2005, ದಿನಾಂಕ: 15-06-2017 ರಂತೆ 46 ಅಲೆಮಾರಿ ಜನಾಂಗದವರಿಗೆ ಸಿಗಬೇಕಾದ ಸವಲತ್ತುಗಳನ್ನು ಕೊಡುವಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

ಮಾನ್ಯ ಸಚಿವರು ಈ ವಿಚಾರವನ್ನು ಗಮನಿಸಬೇಕು. ಆದರೆ, ಈ ಆದೇಶ ಕೇವಲ ಕಾಗದದಲ್ಲಿ ಉಳಿದಿದ್ದು, 1977 ರವರೆಗೂ ಅಲೆಮಾರಿ ಜನಾಂಗದವರಿಗೆ ಸಿಗುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತಿತ್ತು. 1977ರ ನಂತರ ಇಲ್ಲಿಯವರೆಗೆ ಇವರುಗಳಿಗೆ ಯಾವುದೇ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ. ಅನೇಕ ರೀತಿಯಿಂದ ಅವರುಗಳಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ದಿನಾಂಕ: 13-10-1986 ರಲ್ಲಿ ಇವರನ್ನು ಗ್ರೂಪ್- 'ಎ' ಹಾಗೂ ದಿನಾಂಕ: 17-09-1994 ರಲ್ಲಿ ಪ್ರವರ್ಗ-1 ರಲ್ಲಿ ಸೇರಿಸಲಾಗಿತ್ತು. ಸರ್ಕಾರಿ ಆದೇಶವನ್ನು ಯಥಾವತ್ತಾಗಿ ಜಾರಿಗೊಳಿಸಿದರೆ ಏನು 46 ಜಾತಿಗಳಿವೆ, ಬೈರಾಗಿ, ಬಾಳಸಂಗಾ, ಜೋಗಿ ಇತ್ಯಾದಿ ಜಾತಿಗಳು ಒಂದೇ ವರ್ಗದಲ್ಲಿ ಬರುತ್ತವೆ. ನೀವು ಏನು ಮಾಡಿದ್ದೀರಿ ಎಂದರೆ ಇವರುಗಳಿಗೆ ಪ್ರಮಾಣ ಪತ್ರಗಳನ್ನು ನೀಡುವಾಗ ಅಲೆಮಾರಿ, ಅರೆಅಲೆಮಾರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾತಿ ಎಂದು ಕೂಡಲೇ ನಮೂದಿಸಿಲ್ಲ, ಅದನ್ನು ಅಧಿಕಾರಿಗಳು ಬಿಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಹೀಗಾಗಿ, ಇವರೆಲ್ಲರೂ ಸಿಗಬೇಕಾದಂತಹ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ನೀವು ಮಾಡಿರುವಂತಹ 3-4 ಆದೇಶಗಳನ್ನು ನೋಡಿ. ದಿನಾಂಕ: 04.3.1977 ರಲ್ಲಿ ಬ್ಯಾಕ್‌ವರ್ಡ್ ಟ್ರೈಬ್ ಎಂದು, ದಿನಾಂಕ: 13-10-1986 ರಲ್ಲಿ ಗ್ರೂಪ್ 'ಎ' ಮತ್ತೆ 17-09-1994 ರಲ್ಲಿ ಪ್ರವರ್ಗ-1 ಈ ರೀತಿಯಾಗಿ ವರ್ಗೀಕರಣ ಮಾಡಿದ್ದರೆ, ದಿನಾಂಕ: 05-06-2006 ಮತ್ತೊಂದು ಆದೇಶವನ್ನು ಹೊರಡಿಸಿದ್ದೀರಿ. ಈ ರೀತಿಯಲ್ಲಿ ಒಂದಕ್ಕೊಂದು ಹೊಂದಾಣಿಕೆಯಾಗದೆ, ಗೊಂದಲ ಮಾಡಿ, ಯಾವ ಒಂದು ಸೌಲಭ್ಯವೂ ಕೂಡ ಇವರಿಗೆ ಸಿಗದಂತಾಗಿದೆ.

ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಇವರಿಗೆ ಯಾರು ಕೇಳುವವರಿಲ್ಲ, ಹೇಳುವವರಿಲ್ಲ. ಅವರ ಪರಿಸ್ಥಿತಿಯನ್ನು ನೋಡಿದರೆ ಕಣ್ಣೀರು ಬರುತ್ತದೆ. ಸರ್ಕಾರದ ಆಜ್ಞೆ ಇದೆ. ನೋಡಿ, ಇದು ಗೆಜೆಟ್‌ನಲ್ಲಿ ಬಂದಿದೆ. ಗೆಜೆಟ್‌ನಲ್ಲಿ ಬಂದಿರುವಂತಹದ್ದು ಜಾರಿಯಾಗುವುದಿಲ್ಲ. ಅವರಿಗೆ ಯಾವುದೇ ರೀತಿಯಲ್ಲಿ ಸೌಲಭ್ಯಗಳು ಸಿಕ್ಕುತ್ತಿಲ್ಲ. ಅವರು ಬಂದರೆ ಏನೂ ಕೇಳುತ್ತಿಲ್ಲ. ತಿಳುವಳಿಕೆಯಿಲ್ಲದ ಅವರಿಗೆ ಹೇಳಿ ಕಳುಹಿಸಿಬಿಡುತ್ತಾರೆ. ಶಿಕ್ಷಣವಿಲ್ಲದ ಅವರು ಏನೂ ಕೇಳುವುದಿಲ್ಲ. ಅಂತಹವರ ಪರಿಸ್ಥಿತಿ ನಿಮಗೆ ಏತಕ್ಕೆ ಅರ್ಥವಾಗುವುದಿಲ್ಲವೆಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ನೀವು ಈಗ ಸಿಂಪಲ್ ಆಗಿ ಉತ್ತರ ಕೊಟ್ಟಿದ್ದೀರಿ. ಈ ಉತ್ತರವನ್ನು ನೀವೇ ಅರ್ಥ ಮಾಡಿಕೊಳ್ಳಿ. ನೀವು ಹೇಳಿದ್ದು ಸರಿ ಇದೆಯೇ ಎಂದು ಪ್ರಾಮಾಣಿಕವಾಗಿ ಹೇಳಿ. ಇಂತಹ ಅಲೆಮಾರಿ/ಅರೆಅಲೆಮಾರಿ ಜನರು ಎಲ್ಲಿ ಇದ್ದಾರೆ, ಯಾವ್ಯಾವ ಊರಿಗೆ ಹೋಗುತ್ತಾರೋ, ಬರುತ್ತಾರೋ ಯಾವುದನ್ನು ಹೇಳಿಲ್ಲ. ಈಗ ಅವರು ಸ್ವಲ್ಪ ಶಾಲೆಯನ್ನು ಕಲಿಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಮತ್ತೆ ಸಣ್ಣ-ಪುಟ್ಟ ನೌಕರಿಯನ್ನು ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ಏನು ಆದೇಶ ಮಾಡಿದ್ದೀರಿ, ಇದನ್ನು ಜಾರಿಗೆ ತರುವಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಮುಖ್ಯವಾಗಿರುತ್ತದೆ. ಆದ್ದರಿಂದ, ಈ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸ್ಪಷ್ಟವಾದಂತಹ ನಿರ್ದೇಶನವನ್ನು ಕೊಡಿ. ಕಲಿತವರು, ದೊಡ್ಡವರು, ತಿಳುವಳಿಕೆ ಇದ್ದವರು, ಇದೆಲ್ಲವನ್ನೂ ಮಾಡಬಹುದು. ಆದರೆ, ಈ ಒಂದು ಜನಾಂಗದವರು ನಿಮಗೂ ಸಹ 2 ಬಾರಿ ಭೇಟಿಯಾಗಿದ್ದಾರೆ. ಇಷ್ಟೆಲ್ಲಾ ಆದೇಶಗಳಾಗಿ, 2006 ರಲ್ಲಿ ಕರ್ನಾಟಕ ಗೆಜೆಟ್‌ನಲ್ಲಿ ಪ್ರಕಟವಾಗಿದೆ. ಇದೆಲ್ಲವೂ ಆಗಿ, ಇಲ್ಲಿಯವರೆಗೂ ಈ ನಿಟ್ಟಿನಲ್ಲಿ ಕೆಲಸ ಮಾಡಿಲ್ಲವೆಂದರೆ ತಪ್ಪಾಗುತ್ತದೆ. ಯಾರೂ ಕೇಳಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಆದೇಶಗಳು ಏನಿವೆ, ಆ ಆದೇಶಗಳನ್ನು ಜಾರಿಗೆ ತರಬೇಕು.

**ಸಭಾಪತಿಯವರು**:- ಮಾನ್ಯ ಸದಸ್ಯರು ಹೊಸ ಆದೇಶಗಳನ್ನು ಕೇಳುತ್ತಿಲ್ಲ. ಇರುವಂತಹ ಆದೇಶಗಳನ್ನೇ ಜಾರಿ ಮಾಡಿ ಎಂದು ಕೇಳುತ್ತಿದ್ದಾರೆ.

ಮುಂದು. .

(1171)22.11.2017/01.40/ಎಸ್‌ವಿ-ವಿಕೆ

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ನಾನು ಅಧಿಕಾರಕ್ಕೆ ಬಂದ ಮೇಲೆ ಇವರನ್ನೆಲ್ಲಾ ಕರೆದು ಮಾತನಾಡಿ ಇವರಿಗಾಗಿಯೇ ವಿಶೇಷವಾದಂತಹ ಒಂದು ಮಂಡಳಿಯನ್ನು ಮಾಡಿ ಅವರ ಬೇಡಿಕೆಗಳನ್ನು, ಅವರ ಸಮಸ್ಯೆಗಳನ್ನು ಆಲಿಸುವಂತಹ ಕೆಲಸವನ್ನು ಮಾಡಬೇಕೆಂದು ಆದೇಶಗಳನ್ನು ಮಾಡಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ನಮ್ಮ ಅಧಿಕಾರಿಗಳು ಸಭೆಯನ್ನು ಮಾಡಬೇಕೆಂದು ಹೇಳಿದ್ದೇವೆ. ಕ್ಯಾಟಗರಿ-1 ರಲ್ಲಿ ಬರುವಂತಹ ಜಾತಿಗಳು ಅತ್ಯಂತ ನಿಕೃಷ್ಟವಾದಂತಹ, ಸೌಲಭ್ಯ ವಂಚಿತವಾದಂತಹ, ಅನ್ಯಾಯಕ್ಕೆ ಒಳಗಾದಂತಹ ಸಮುದಾಯಗಳಾಗಿವೆ. ಆ ಕಾರಣಕ್ಕಾಗಿಯೇ 46 ಜಾತಿಗಳನ್ನು ಕ್ಯಾಟಗರಿ-1 ರಲ್ಲಿ ಸೇರಿಸಿದ್ದೇವೆ. ಇಂದು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಎಲ್ಲಾ ಸವಲತ್ತುಗಳನ್ನು ಕೊಡುವುದಕ್ಕೆ ವಿಶೇಷವಾದಂತಹ ಒಂದು ಮಂಡಳಿಯನ್ನು ಮಾಡಿ ಅನುದಾನವನ್ನು ಕೊಟ್ಟು ಉದ್ಧಾರ ಮಾಡಲಾಗುತ್ತಿದೆ. ಕ್ಯಾಟಗರಿ-1 ರಲ್ಲಿರತಕ್ಕಂಥವರು ಜಾತಿ ಪ್ರಮಾಣಪತ್ರವನ್ನು ತೆಗೆದುಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉದ್ಯೋಗವನ್ನು ಪಡೆಯಬಹುದು, ಶಾಲೆಗೆ admission ಕೂಡ ಆಗಬಹುದು. ಎಲ್ಲಾ ಸವಲತ್ತುಗಳನ್ನೂ ಕೂಡ ಪಡೆಯಬಹುದು. ಇದಕ್ಕೆ ಯಾವುದೇ ಧಕ್ಕೆಗಳಿಲ್ಲ. ಸರ್ಕಾರದ ಆದೇಶದ ಪ್ರಕಾರ ಅನುಷ್ಠಾನಗೊಳಿಸಿ ಆ ಜನರಿಗೆ ಉಪಕಾರ ಮಾಡಬೇಕು ಮತ್ತು ಸೌಲಭ್ಯಗಳನ್ನು ನೀಡಬೇಕೆಂದು ನಾನು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡುತ್ತೇನೆಂಬ ಮಾತನ್ನು ಈ ಸದನದ ಮೂಲಕ ಹಿರಿಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಒಟ್ಟು ಮೂರು ಸಮಿತಿಗಳನ್ನು ಮಾಡಲಾಗಿದೆ. ಮೊದಲನೆಯದು ರಾಜ್ಯ ಮಟ್ಟದ ಸಮಿತಿಯನ್ನು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಎರಡನೆಯದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿ. ಮೂರನೆಯದು ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ಮಾಡಲಾಗಿದೆ. ರಾಜ್ಯಮಟ್ಟದ ಸಮಿತಿಯ ಸಭೆಯನ್ನು ಸಚಿವರು ಕರೆಯುತ್ತಾರೆ ಹಾಗೂ ಜಿಲ್ಲಾ ಮಟ್ಟದ ಸಭೆಯನ್ನು ಜಿಲ್ಲಾಧಿಕಾರಿಗಳು ಕರೆಯುತ್ತಾರೆ. ಮೂರನೆಯದು ತಾಲ್ಲೂಕು ಮಟ್ಟದಲ್ಲಿ ಜನರನ್ನು ಹಚ್ಚಿಕೊಳ್ಳುವುದಿಲ್ಲ. ಸರ್ಕಾರ ಎಲ್ಲೆಲ್ಲಿಯೋ ಜಾಹೀರಾತು ಕೊಡುತ್ತದೆ. ಒಂದು ಜಾಹೀರಾತನ್ನು ಇವರಿಗೆ ಕೊಟ್ಟು ಈ ಜನಾಂಗದವರೊಡನೆ ಯಾವುದೇ ತಾಲ್ಲೂಕು ಅಧಿಕಾರಿ ಅಥವಾ ಜಿಲ್ಲಾ ಅಧಿಕಾರಿ ಸರಿಯಾದ ರೀತಿಯಲ್ಲಿ ಸ್ಪಂದಿಸದಿದ್ದರೆ ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಒಂದು ದೂರವಾಣಿ ಸಂಖ್ಯೆಯನ್ನು ನೀಡಿ ಸ್ಪಷ್ಟವಾಗಿ ಒಂದು ಸುತ್ತೋಲೆಯನ್ನು ಹೊರಡಿಸಬೇಕು. ಈ ಜನಾಂಗಗಳಲ್ಲಿ ಅವಿದ್ಯಾವಂತರೇ ಹೆಚ್ಚು, ವಿದ್ಯಾವಂತರು ಬಹಳ ಕಡಿಮೆ.

ಇದರಲ್ಲಿ 46 ಪಂಗಡಗಳಿವೆ. ಅವುಗಳಲ್ಲಿ ಬೈರಾಗಿ, ಬಾಲ ಸಂತೋಷಿ ಜೋಷಿ-ಜೋಷಿ, ಚಿತ್ರಕಥಿ ಜೋಷಿ ಎಂದೆಲ್ಲಾ ಇದೆ. ಇವುಗಳೆಲ್ಲವನ್ನೂ ನಾನು ಓದಿದ್ದೇನೆ ಹಾಗೂ ತಿಳಿದುಕೊಂಡಿದ್ದೇನೆ. ಅವರು ಸವಲತ್ತುಗಳನ್ನು ಕೇಳಿಕೊಂಡು ಕಛೇರಿಗಳಿಗೆ ಹೋದಾಗ "ನೀವು ಬ್ರಾಹ್ಮಣರಿದ್ದೀರಿ, ನಿಮಗೆ ಹೇಗೆ ಕೊಡಲಿಕ್ಕಾಗುತ್ತದೆ" ಎಂದು ವಾಪಸ್ ಕಳುಹಿಸಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಮಾಡಿ ಇವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಹೆಚ್. ಆಂಜನೇಯ:-** ಮಾನ್ಯ ಸಭಾಪತಿಯವರೇ, ಆಯಾ ಜಾತಿಯ ಗುಣವಿಶೇಷಣಗಳನ್ನು ಹಿಂದುಳಿದ ವರ್ಗಗಳ ಆಯೋಗ ಗುರುತಿಸಿದೆ. ಅವರ ನಡವಳಿಕೆಗಳು, ಆಚರಣೆಗಳ ಆಧಾರದ ಮೇಲೆ ಹಿಂದುಳಿದ ವರ್ಗಗಳ ಆಯೋಗವು ಗುರುತಿಸಿದೆ. ಅದರ ಪ್ರಕಾರ ಜಾತಿ ಹೆಸರುಗಳು ಇವೆ. ಇವರು ಹೇಳಿದಂತೆ ಜನಾಂಗದವರನ್ನು ಮಾತನಾಡಿಸುವಂತಹ, ಅವರ ಸಮಸ್ಯೆಗಳನ್ನು ಆಲಿಸುವಂತಹ ಮತ್ತು ಅವರಿಗೆ ಸೌಲಭ್ಯಗಳನ್ನು ಒದಗಿಸುವಂತಹ ಅಧಿಕಾರಿಗಳೇನಿದ್ದಾರೆ, ಅವರು ಕಟ್ಟುನಿಟ್ಟಾಗಿ ಈ ಜನರು ಅವರ ಬಳಿ ಬಂದಂತಹ ಸಂದರ್ಭದಲ್ಲಿ ಮಾಡಬೇಕು. ಪ್ರತಿಯೊಂದು ಜಿಲ್ಲೆ/ತಾಲ್ಲೂಕುಗಳಲ್ಲಿ ಕೂಡ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಇದ್ದಾರೆ. ಅವರು ಈ ಜಾತಿಗಳ ಜನರ ಸಮಸ್ಯೆಗಳನ್ನು ಆಲಿಸಿ ಯಾವುದೇ ರೀತಿಯ ತಾರತಮ್ಯ ಆಗದಂತೆ ಈ ಜನಾಂಗಕ್ಕೆ ಅನ್ಯಾಯವಾಗದಂತೆ ನ್ಯಾಯವನ್ನು ಕೊಡುವಂತಹ ಕೆಲಸವನ್ನು ಮಾಡಬೇಕು. ಮಾಡದಿದ್ದಲ್ಲಿ ಅಂಥವರ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತೇನೆಂದು ಎಚ್ಚರಿಕೆ ಪತ್ರವನ್ನೂ ಸಹ ಬರೆಯುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ವಿಷಯ ನಿಯಮ 330ರ ಅಡಿಯಲ್ಲಿ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮೊನ್ನೆ ಪಂಚಾಯತ್ ರಾಜ್ ವಿಷಯಕ್ಕೆ ಸಂಬಂಧಪಟ್ಟಂತೆ ನಾವು 25 ಜನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಸದಸ್ಯರು ಒಟ್ಟು ಸೇರಿದ್ದೆವು. ಆಗ ಮಾನ್ಯ ಮಾನೆ ಶ್ರೀನಿವಾಸ ರವರು ಎಲ್ಲಾ ವಿಚಾರಗಳನ್ನು ನಾವು ಮಂತ್ರಿಗಳ ಗಮನಕ್ಕೆ, ಸರ್ಕಾರದ

ಗಮನಕ್ಕೆ ತಂದು ಬಿಟ್ಟರೆ ಒಂದೇ ಬಾರಿ ಅವರು ಪರಿಶೀಲನೆ ಮಾಡುತ್ತೇನೆಂದು ಹೇಳಬಹುದು. ಆದರೆ ಅನುಷ್ಠಾನ ಮಾಡಲು ಕಷ್ಟವಾಗುತ್ತದೆ ಎನ್ನುವ ಕಾರಣಕ್ಕೆ ಯಾವುದಾದರೊಂದೆರಡು ವಿಷಯಗಳನ್ನು ಮಂತ್ರಿಗಳ ಗಮನಕ್ಕೆ ತರಬೇಕು ಎನ್ನುವುದು ನಮ್ಮ ಒಟ್ಟು ತೀರ್ಮಾನವಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಶ್ರೀನಿವಾಸ ಪೂಜಾರಿಯವರೆ, ನೀವು ಮಾಡಿದ ತಪ್ಪಿಗೆ ಮಾನ್ಯ ಮಾನೆ ಶ್ರೀನಿವಾಸ ರವರನ್ನೇಕೆ ದೂಷಿಸುತ್ತೀರಿ. ನೀವು ಬಹಳ ಬುದ್ಧಿವಂತರು.

ಮಾನ್ಯ ಸಭಾಪತಿಯವರೆ, ತಾವು ದಯಮಾಡಿ ಇದನ್ನು ಗಮನಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಿಬ್ಬಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಪಿ.ಎಫ್, ಇ.ಎಸ್.ಐ. ಸೌಲಭ್ಯ, ಬಾಪೂಜಿ ಸೇವಾ ಕೇಂದ್ರಗಳಿಗೆ ಕಂಪ್ಯೂಟರ್ ಒದಗಿಸುವುದು, ಈ ಸ್ವತ್ತುಗಳಲ್ಲಿನ ಗೊಂದಲ ನಿವಾರಣೆ, ಪಿ.ಡಿ.ಓ. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವುದು, ಆರ್.ಡಿ.ಓ ಹುದ್ದೆಯ ಸೃಜನೆ, ಹೆಚ್ಚುವರಿ ಎ.ಡಿ ಹುದ್ದೆಗಳ ಸೃಜನೆಯ ಕಡತ ಬಾಕಿ ಇರುವ ಬಗ್ಗೆ, ಸಮರ್ಪಕ ತೆರಿಗೆ ವಿಧಿಸಿ ವಸೂಲಿ ಮಾಡುವಲ್ಲಿ ವಿಫಲತೆ, ಗ್ರಾಮಪಂಚಾಯ್ತಿಗಳಲ್ಲಿ ಆಸ್ತಿ ವಹಿಗಳ ಸಮರ್ಪಕ ನಿರ್ವಹಣೆ, ಸಾಮಾನ್ಯ ಸಭೆ ಸೇರಿದಂತೆ ವಿವಿಧ ಸಭೆ ಸೇರಲು ನಿಯಮಾವಳಿಗಳನ್ನು ರೂಪಿಸಿರುವುದು ಇತ್ಯಾದಿ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸುವುದು. ಇನ್ನ್ಯಾವ ವಿಷಯವೂ ಉಳಿದೇ ಇಲ್ಲ.

**ಸಭಾಪತಿಯವರು:-** ಮಾನ್ಯ ಶ್ರೀನಿವಾಸ ಪೂಜಾರಿಯವರು ಇಡೀ ಆರ್.ಡಿ.ಪಿ.ಆರ್. ಇಲಾಖೆಯ ಬಗ್ಗೆ ಒಂದು ಚರ್ಚೆಗೆ ಅವಕಾಶವನ್ನು ಕೇಳಿದ್ದಾರೆ. ಇಷ್ಟೊಂದು ವಿಷಯಗಳನ್ನು ನಿಯಮ ೩೩೦ರ ಅಡಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ನಾವು ಗಮನಿಸಿಲ್ಲ. ಯಾವುದಾದರೊಂದು ವಿಷಯ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಆರ್.ಡಿ.ಪಿ.ಆರ್. ಇಲಾಖೆಯ ಬಗ್ಗೆ ಚರ್ಚೆ ಮಾಡಲು ಈ ಸದನದಲ್ಲಿ ಆಗಲಿ ಅಥವಾ ಮುಂದಿನ ಸದನದಲ್ಲಿಯಾಗಲೀ ಪ್ರಯತ್ನವನ್ನು ಮಾಡೋಣ. ಇಲ್ಲವಾದಲ್ಲಿ ಕಷ್ಟವಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಾನೆ ಶ್ರೀನಿವಾಸರವರು ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಸಲಹೆಯನ್ನು ಕೊಟ್ಟರು. ಎರಡು ವಿಚಾರಗಳನ್ನು ಉಲ್ಲೇಖ ಮಾಡಿ ಎಂದು ಹೇಳಿದರು. ಅದಕ್ಕಾಗಿ ಸಿಬ್ಬಂದಿಗಳು ಮತ್ತು ತೆರಿಗೆಗೆ ಸಂಬಂಧಪಟ್ಟಂತೆ ಮಾತ್ರ ತಮ್ಮ ಗಮನಕ್ಕೆ ತರುತ್ತೇನೆಂದು ಹೇಳಿದೆನು. ಎಲ್ಲಾ ವಿಚಾರಗಳ ಕ್ರೋಢೀಕರಣವಾಗಿರಬಹುದು. ಸಮಯದ ದೃಷ್ಟಿಯಿಂದ ಮತ್ತು ಮಂತ್ರಿಗಳ ಗಮನಕ್ಕೆ ತರುವ ದೃಷ್ಟಿಯಿಂದ ಹಾಗೂ ಅವರಿಗೆ ಸುಲಭವಾಗಲಿ ಎನ್ನುವ ದೃಷ್ಟಿಯಿಂದ ಎರಡು ವಿಚಾರಗಳನ್ನು ಉಲ್ಲೇಖ ಮಾಡುತ್ತೇನೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ನಾನು ತಂದೆನು. ಆ ಸಲಹೆಯನ್ನು ಕೊಟ್ಟವರು ಮಾನ್ಯ ಮಾನೆ ಶ್ರೀನಿವಾಸ ರವರು ಎಂದು ಹೇಳಿದೆನು.

**ಸಭಾಪತಿಯವರು:-** ಮಾನ್ಯ ಪೂಜಾರಿಯವರೆ, ಒಂದು ನಿಮಿಷ ಕುಳಿತುಕೊಳ್ಳಿ. ಇಷ್ಟು ವಿಷಯಗಳನ್ನು ತಾವು ಕೊಟ್ಟಿದ್ದೀರಿ ಎಂಬ ಅಂಶವನ್ನು ನಾನೂ ಸಹ ಗಮನಿಸಲಿಲ್ಲ. ಸ್ವಲ್ಪ ಮಾತ್ರ ನೋಡಿ ಇದೊಂದು ಒಳ್ಳೆಯ ವಿಷಯ ಎಂದು ಚರ್ಚೆಗೆ ನಾನು ಅವಕಾಶ ಮಾಡಿಕೊಟ್ಟಿರುತ್ತೇನೆ. ಈಗ ಮಾನ್ಯ ಸಚಿವರು ಹೇಳಿದುದನ್ನು ನೋಡಿದರೆ ಇಷ್ಟು ವಿಷಯವನ್ನು ಚರ್ಚೆ ಮಾಡುವುದು ಕಷ್ಟವಾಗುತ್ತದೆ. ಅದರೊಳಗೆ ಒಂದೆರಡೆಂದರೆ ಯಾವುದು? ನಿಮಗೆ ಒಂದು ವಿಷಯ ಬೇಕಾದರೆ, ಮತ್ತೊಬ್ಬರಿಗೆ ಇನ್ನೊಂದು ವಿಷಯದ ಬಗ್ಗೆ ಬೇಕಾಗಿರುತ್ತದೆ. ಹಾಗಾಗಿ ಇದು ಕಷ್ಟದ ಕೆಲಸ. ನಿಯಮ ೩೩೦ರಡಿಯಲ್ಲಿ specific ಆಗಿ ಇರಬೇಕಿತ್ತು. ನೀವು ಕೊಟ್ಟ ವಿಷಯಕ್ಕೆ ಅವರು ಉತ್ತರ ತಯಾರಿಸಿಕೊಂಡು ಬರಬೇಕಿತ್ತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಎರಡು ವಿಚಾರಗಳನ್ನಾದರೂ ಉಲ್ಲೇಖ ಮಾಡಬಹುದಲ್ಲವೆ?

**ಸಭಾಪತಿಯವರು:-** ಅದು ಹಾಗಾಗುವುದಿಲ್ಲ. ದಯಮಾಡಿ ಒಂದು ನಿಮಿಷ ಕೇಳಿ. ನನ್ನ ಕಷ್ಟವನ್ನೂ ಅರ್ಥ ಮಾಡಿಕೊಳ್ಳಿ, ಸರ್ಕಾರದ ಕಷ್ಟವನ್ನೂ ಅರ್ಥ ಮಾಡಿಕೊಳ್ಳಿ. ಈಗ ಶ್ರೀಮತಿ ಮೋಟಮ್ಮನವರು ಕಳಸಾ ಗ್ರಾಮವನ್ನು ತಾಲ್ಲೂಕಾಗಿ ಮಾಡಬೇಕೆಂದು specific ಆಗಿ ಕೇಳಿದ್ದರು. ಅದಕ್ಕೆ ಅವಕಾಶವನ್ನು ಕೊಟ್ಟಿದ್ದೆನು. ಈಗ ಮಾನ್ಯ ಹೊರಟ್ಟಿಯವರು specific ಆಗಿ ಇಂತಹ ಜನಾಂಗದವರಿಗೆ ಅನ್ಯಾಯವಾಗಿದೆ ಎಂದು ಕೊಟ್ಟರು. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಟ್ಟರು. ನೀವು ಈಗ ಇಪ್ಪತ್ತರಲ್ಲಿ ಯಾವುದಾದರೂ ಎರಡನ್ನು ತೆಗೆದುಕೊಳ್ಳುತ್ತೇನೆಂದರೆ ಯಾವ ಎರಡು ತೆಗೆದುಕೊಳ್ಳುತ್ತೀರಿ? ಇಡೀ ಇಲಾಖೆಯ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

(... ಮುಂದು)

(1172)22.11.2017/1.50 ಕೆಜಿ-ವಿಕೆ

**ಸಭಾಪತಿಯವರು (ಮುಂದು):-**

ಶ್ರೀನಿವಾಸ ಪೂಜಾರಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ತಾವು ಕೊಟ್ಟಿರುವುದರಲ್ಲಿ ಯಾವುದಾದರೂ ಎರಡನ್ನು ತೆಗೆದುಕೊಳ್ಳುತ್ತೇವೆಂದರೆ, ಮಾನ್ಯ ಸಚಿವರು ಯಾವ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಲು ತಯಾರು ಇರಬೇಕು? ನಿಮಗೆ ಉತ್ತರ ಬೇಡವೇ? ತಾವು ಕೇವಲ ಭಾಷಣ ಮಾಡುತ್ತೀರಾ? ಆ ರೀತಿ ಆಗುವುದಿಲ್ಲ. No, it's not fair. ನಾನು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಒಪ್ಪಿದೆ..

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಸರ್ಕಾರ ಒಪ್ಪಿದೆ ಎಂದು ಹೇಳುತ್ತಿದ್ದಾರೆ. ತಾವು ಮಾನ್ಯ ಸದಸ್ಯರು ಹೇಳುವ ಎಲ್ಲಾ ವಿಷಯಗಳಿಗೂ ಉತ್ತರ ಕೊಡಲು ತಯಾರಿದ್ದರೆ, ತಾವು ಹೇಳಬಹುದು. ಮಾನ್ಯ ಸದಸ್ಯರೇ, ಸರ್ಕಾರದ ಪರವಾಗಿ ಅವರು ಹೇಳುತ್ತಾರೆ.

(ಗೊಂದಲ)

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೆಲ್ಲಾ ಗೆದ್ದಿರುವಂತಹವರು ಒಂದು ಕಡೆ ಸಭೆ ಸೇರಿ, ಎಲ್ಲರೂ ಎರಡು/ಎರಡು ವಿಚಾರಗಳನ್ನು ಪ್ರಸ್ತಾಪ ಮಾಡೋಣವೆಂದು ಹೇಳಿ calling attention ಕೊಟ್ಟಿದ್ದೇವೆ. ಈಗ ಸದನದ ಮುಂದೆ ಮಾನ್ಯ ಪೂಜಾರಿಯವರು ಕೊಟ್ಟಿರುವುದು ಮಾತ್ರ ಬಂದಿರುತ್ತದೆ. ಇವತ್ತೋ, ನಾಳೆಯೋ ಸದನ ಮುಗಿಯುತ್ತದೆ. ಈಗ ಅವರು ಪ್ರಸ್ತಾಪ ಮಾಡುತ್ತಾರೆ. ನಾಳೆ ಯಾವುದು ಬರುವುದಿಲ್ಲ. ಅಲ್ಲಿಗೆ ನಾವು ಕೊಟ್ಟಿರುವಂತಹ calling attention ಯಾವುದು ಬರುವುದಿಲ್ಲವೆಂದು ತೀರ್ಮಾನ ಆಯಿತು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಅದಕ್ಕೆ ಏನು ಮಾಡಬೇಕು ಹೇಳಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಪೂಜಾರಿಯವರಿಗೆ 10 ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಕನಿಷ್ಠ ಪಕ್ಷ ಅವರು ಪ್ರಸ್ತಾಪವಾದರೂ ಪ್ರಾರಂಭ ಮಾಡಲಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಒಪ್ಪುವುದಾದರೆ,.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ ಚರ್ಚೆಗೆ ಅವಕಾಶ ಮಾಡಿಕೊಡಿ. ಈಗ ಪ್ರಸ್ತಾವಾದರೂ ಆಗಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಮಾನ್ಯ ಸಚಿವರು ಮಧ್ಯೆ ಎದ್ದು, ಅವರ ಅನಿಸಿಕೆಯನ್ನು ಹೇಳಿದ್ದಾರೆ. ಸಚಿವರು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡು ಅವರಿಗೆ ಹೇಳಿದ್ದೇನೆ. ಈಗ ಸಚಿವರು ಆಯಿತು, ಮಾನ್ಯ ಸದಸ್ಯರು 10 ನಿಮಿಷ ಮಾತನಾಡಲಿ ಆ ಮೇಲೆ ನೋಡೋಣವೆಂದು ಹೇಳಿದ್ದರೆ, ನಾನು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ, ನಾನು ಅದನ್ನು ಗಮನಿಸುತ್ತಿರಲಿಲ್ಲ. ಈಗ ನಾನು ಸಚಿವರು ಹೇಳಿದ್ದನ್ನು ಗಮನಕ್ಕೆ..

(ಗೊಂದಲ)

ನಾನು ಮಾತನಾಡುವಾಗ ಮಧ್ಯೆ ಮಾತನಾಡಿ. ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ನನಗೆ ಇದು ಒಪ್ಪಿಗೆ ಇಲ್ಲ. ಮಾನ್ಯ ಸಚಿವರು ಏನು ಹೇಳಿದ್ದಾರೆ, ಅದನ್ನು ನಾನು ಗಮನಿಸಿದ್ದೇನೆ. ಈಗ ಸಚಿವರನ್ನೇ ವಾಪಸ್ಸು ಪ್ರಶ್ನೆ ಕೇಳುತ್ತೇನೆ. ಅವರು ಅಷ್ಟು ಉದ್ದ ಇದ್ದರೂ ಪರವಾಗಿಲ್ಲ ಒಂದು ಸ್ವಲ್ಪ ಹೊತ್ತು ಅವರಿಗೆ ಮಾತನಾಡುವುದಕ್ಕೆ ಬಿಡಿ, ನನಗೂ ಗಮನಕ್ಕೆ ಬರುತ್ತದೆ. ಏಕೆಂದರೆ, ಅವರು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡು ಆರ್‌ಡಿಪಿಆರ್ ಇಲಾಖೆಯ ಬಗ್ಗೆ ಪೂರ್ಣ ಚರ್ಚೆಗೆ ಬರಬೇಕು. ಇದನ್ನು ಪೂರ್ಣ ಚರ್ಚೆಗೆ ಕೇಳಿದ್ದರೆ ಚೆನ್ನಾಗಿ ಇತ್ತು. ಅದಕ್ಕೆ ಅವಕಾಶ ಸಿಗಲಿಲ್ಲ. ಮಾನ್ಯ ಸದಸ್ಯರಾದ ಎಸ್.ರವಿಯವರು ಚೆನ್ನಾಗಿ ಹೇಳಿದ್ದಾರೆ. ಅವರು ಗಮನಿಸಿದ್ದಾರೆ, ಸದನ ನಾಳೆ ಅಥವಾ ನಾಳಿದ್ದು ಮುಗಿದು ಹೋಗುತ್ತದೆ. ಹಾಗಾಗಿ, ಏನು ಮಾಡುವುದು? ನಾನು ಏನು ಮಾಡುವುದಕ್ಕೂ ಬರುವುದಿಲ್ಲ; ನೀವು ಸಹ ಏನು ಮಾಡುವುದಕ್ಕೂ ಬರುವುದಿಲ್ಲ. ಅದಕ್ಕೆ ಮಾನ್ಯ ಸಚಿವರ ಅಭಿಪ್ರಾಯವನ್ನು ಕೇಳೋಣ. ಅವರು ಏನೂ ಹೇಳುತ್ತಾರೆ ಆ ರೀತಿ ಮಾಡೋಣ. ಹೌದು, ನಿನ್ನೆ ದಿವಸ ಉತ್ತರ ಕರ್ನಾಟಕದವರಿಗೆ ಸಮಯ ಕೊಟ್ಟಿದ್ದೇನೆ ಅಲ್ಲವೇ,..

(ಗೊಂದಲ)

**ಶ್ರೀ ಬಸವನಗೌಡ ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಮಯ ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುತ್ತಿಲ್ಲ. ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಸಹ ಅಷ್ಟೇ ಮಹತ್ವದ್ದು. ಆದ್ದರಿಂದ ಇದಕ್ಕೂ ಸಹ ಸಮಯ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದಕ್ಕೂ ಸಹ ಸಮಯವನ್ನು ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳೋಣ. ಮಾನ್ಯ ಸಚಿವರೇ, ತಾವು ಹೇಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಅವರು 25 ಜನ ಇದ್ದಾರೆ. ಅವರು ಯಾವಾಗಲೂ ಇಲ್ಲಿಗೆ ಬರುವುದಿಲ್ಲ. ಒಂದು ದಿವಸ ಪೂರ್ತಿ ಚರ್ಚೆಗೆ ಅವರಿಗೆ ಏಕೆ ಸಮಯವನ್ನು fix ಮಾಡಬಾರದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ದಿವಸ special session ಮಾಡುವುದಕ್ಕೆ ಬರುವುದಿಲ್ಲ. Session ನೊಳಗೆ ಇದನ್ನು fix ಮಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಪದೇ ಪದೇ ಅವರದ್ದು ಬರುತ್ತಿದೆ. ಬಂದಾಗ ಅವರಿಗೆ ಅವಕಾಶ ಸಿಗುವುದಿಲ್ಲ. ಈ ರೀತಿ ಎಷ್ಟೋ ಬಾರಿ ಆಗಿರುವುದಿಲ್ಲ. ಮಾನ್ಯ ಶ್ರೀನಿವಾಸ ಪೂಜಾರಿಯವರು ಕಳುಹಿಸಿರುವುದು ಇಡೀ ಇಲಾಖೆಯ ಬಗ್ಗೆ ಇದೆ. ಈಗ ಚರ್ಚೆ ಮಾಡಲಿ. ಅವರು ಇವತ್ತು ಎರಡು ಗಂಟೆ ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಅವರು ಮಾಡಿದರೆ ಒಳ್ಳೆಯದು ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, what I am heading ಎಂಬುದನ್ನು ಅರ್ಥ ಮಾಡಿಕೊಳ್ಳಿ. ನಾನು ಏನು ಹೇಳುತ್ತೇನೆಂದರೆ, ಉತ್ತರ ಕರ್ನಾಟಕದ ಬಗ್ಗೆ ನಿನ್ನೆ ದಿವಸ ಮಧ್ಯಾಹ್ನ 3.30 ರಿಂದ ರಾತ್ರಿ 9.15 ಗಂಟೆಯವರೆಗೆ ಚರ್ಚೆ ನಡೆದಿದೆ. ಒಟ್ಟು 5.45 ಗಂಟೆಗಳ ಕಾಲ ಸುರ್ದೀರ್ಘವಾಗಿ ಚರ್ಚೆ ನಡೆದಿದೆ. ಆದರೆ, ಅದರ ಬಗ್ಗೆ ಇನ್ನು ಕೆಲವರು ಮಾತನಾಡಬೇಕೆಂದು ಹೇಳಿದ್ದರಿಂದ ಸ್ವಲ್ಪ ಸಮಯ ನಿಗಧಿ ಮಾಡಿ ಇಟ್ಟುಕೊಂಡಿದ್ದೇನೆ. ಅದರ ಬದಲು ಇದಕ್ಕೆ ಕೊಡಿ ಎಂದರೆ, ಮಧ್ಯಾಹ್ನ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಏಕೆಂದರೆ, ಇಬ್ಬರೆ ಇದ್ದಾರೆ..

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇಡೀ ಸದನವನ್ನು ನಾವು ಒಪ್ಪುತ್ತೇವೆ. ಏಕೆಂದರೆ, 29 ಇಲಾಖೆಗಳು ಈ ವ್ಯವಸ್ಥೆಗೆ ಬರುತ್ತವೆ. Article 243 ಪ್ರಕಾರ, ಈ ಎಲ್ಲಾ ಇಲಾಖೆಗಳು ಬರುವಂಥದ್ದು. ದಯಮಾಡಿ 2 ಗಂಟೆಗಳ ಕಾಲಾವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಖಂಡಿತವಾಗಿ, I am heading for that. ನಾನು ಏನು ಮಾತನಾಡುತ್ತಿದ್ದೇನೆಂದು ತಮಗೆ ಅರ್ಥವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸಂವಿಧಾನದ ರೀತಿಯಲ್ಲಿ ಹೇಳುತ್ತಿದ್ದೇನೆ. ತಮಗೆ ಅರ್ಥವಾಗಿದ್ದರೆ, ದಯಮಾಡಿ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನೋಡೋಣಾ ಮಾನ್ಯ ಸಚಿವರು ಮತ್ತು ಸದನ ಒಪ್ಪುವುದಾದರೆ, ಭೋಜನ ವಿರಾಮದ ನಂತರ ಎರಡು ವಿಧೇಯಕಗಳು ಇವೆ. ಆ ವಿಧೇಯಕಗಳು ಸರ್ಕಾರದ ಜವಾಬ್ದಾರಿ. Constitutional obligations ಅವು. ಆ ವಿಧೇಯಕಗಳನ್ನು ಮುಗಿಸಿಕೊಂಡ ಮೇಲೆ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ಉತ್ತರ ಸ್ವಲ್ಪ ತಡೆ ಹಿಡಿದು, ಈ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಸದನ ಒಪ್ಪುವುದಾದರೆ, ನನ್ನದೇನೂ ಅಭ್ಯಂತರ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇಬ್ಬರು ಇದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅವರಿಬ್ಬರದ್ದು ಆದಮೇಲೆ ಸಮಯ ಹೇಗೆ ಇರುತ್ತದೆಂದು ನೋಡೋಣ.

**ಐವನ್ ಡಿ'ಸೋಜಾ(ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ,.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಆಯಿತು ಅವರಿಗೆ ಕೊಡಲೇಬೇಕು. It is a commitment by the Chair. ಅವರಿಗೆ ಕೊಡುತ್ತೇವೆಂದು ಹೇಳಿ ಈಗ ಕೊಡುವುದು ಬೇಡವೇ ಎಂದು ಸಭೆ ಮುಂದೆ ಇಡುತ್ತಿದ್ದೇನೆ.

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಪೀಠದಿಂದ ಸಂಜೆ 5 ಗಂಟೆಯಿಂದ ಒಂದು ಗಂಟೆಯವರೆಗೆ ಸಮಯ ಕೊಡಲಾಗುವುದು ಎಂದು ಹೇಳಿದೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಆಯಿತು.

**ಐವನ್ ಡಿ'ಸೋಜಾ(ಸರ್ಕಾರದ ಮುಖ್ಯಸಚೇತಕರು)**:- ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ನಾನು ಕೊಟ್ಟಿರುವಂತಹ ಪಟ್ಟಿಯಲ್ಲಿ ಇನ್ನೂ 6 ರಿಂದ 8 ಜನರು ಮಾತನಾಡುವವರ ಪಟ್ಟಿ ಇದೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಹಾಗಾದರೆ, ಇದು ಯಾವಾಗ? ಈ 25 ಜನರ ಗತಿ ಹೇಳಿ?

**ಐವನ್ ಡಿ'ಸೋಜಾ(ಸರ್ಕಾರದ ಮುಖ್ಯಸಚೇತಕರು)**:- ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಸಂಜೆ ಮಾತನಾಡುತ್ತಾರೆ.

(ಗೊಂದಲ)

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಅವರು 25 ಜನಕ್ಕೆ ಕೇಳುತ್ತಿದ್ದಾರೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಅಖಿಲ ಕರ್ನಾಟಕದ ಬಗ್ಗೆ ಮಾತನಾಡುವವರಿಗೆ ಅವಕಾಶ ಇದೆಯೋ ಅಥವಾ ಇಲ್ಲವೋ ಹೇಳಿ?

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ನಂಜುಂಡಪ್ಪನವರ ವರದಿ ಪ್ರಕಾರ ಎರಡು ಕಡೆ ಬರುತ್ತದೆ. ಅದಕ್ಕೋಸ್ಕರ, ಪಾವಗಡ ಒಂದೇ ಅಲ್ಲ, ಮಾಗಡಿಯು..,

(ಗೊಂದಲ)

**ಸಭಾಪತಿಯವರು**:- ಮಾನ್ಯ ಸದಸ್ಯರೇ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

**ಶ್ರೀ ಎಚ್.ಕೆ.ಪಾಟೀಲ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**:- ಮಾನ್ಯ ಸಭಾಪತಿಯವರೇ, ನಾನು ಸದನದ ಅಭಿಪ್ರಾಯವನ್ನು ಕೇಳಿದೆ. ಅವರು ತಮಗೂ ಅರಿಕೆ ಮಾಡಿಕೊಂಡಿದ್ದಾರೆ. ಮಾನ್ಯ ಶ್ರೀನಿವಾಸ ಪೂಜಾರಿಯವರದ್ದು ಅದೇ ಉದ್ದೇಶ ಇದೆ ಎಂದು ಅವರ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ತಾವು ಯಾವ ಸಮಯವನ್ನು ನಿಗಧಿ ಪಡಿಸುತ್ತೀರಿ, ಒಂದು ಗಂಟೆ, ಎರಡು ಗಂಟೆ ಚರ್ಚೆ ಮಾಡಿ, ಅದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

**ಸಭಾಪತಿಯವರು**:- ಹಾಗಾದರೆ, ಈ ಸದನದಲ್ಲಿ ನಿರ್ಣಯವಾಗಿದೆ. ಅದನ್ನು ನಾನು overrule ಮಾಡುವುದಕ್ಕೆ ಬರುವುದಿಲ್ಲ. ಸಭಾಪತಿಯವರ ಸ್ಥಾನದಲ್ಲಿ ಯಾರು ಕುಳಿತಿರುತ್ತಾರೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ನಿರ್ಣಯಕ್ಕೆ ನಾವೆಲ್ಲರೂ ಬದ್ಧರು. ಅದನ್ನು ನಾವು ಮರೆಯಬಾರದು. ಸಭಾಪತಿಯವರ ಸ್ಥಾನದಲ್ಲಿ ಕುಳಿತಿದ್ದಂತಹವರು ನಿನ್ನೆ ದಿವಸ ಸಭೆಗೆ ಒಂದು ಮಾತನ್ನು ಕೊಟ್ಟಿದ್ದಾರೆ. ಇವತ್ತು ಸಂಜೆ ಎರಡು ವಿಧೇಯಕಗಳು ಮುಗಿದ ತಕ್ಷಣವೆ ಬಹುಶಃ ಸಂಜೆ 5 ಗಂಟೆ ಅಷ್ಟರಲ್ಲಿ ಅವು ಮುಗಿಯುತ್ತವೆ ಅಂದುಕೊಂಡು, ಮುಗಿದ ತಕ್ಷಣ ಉತ್ತರ ಕರ್ನಾಟಕದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇಚ್ಛೆ ಪಟ್ಟಿದ್ದಾರೆ, ಅವರುಗಳಿಗೆ ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ಮತ್ತು ಸರ್ಕಾರದ ಉತ್ತರ ಎಂಬ ಮಾತನ್ನು ಹೇಳಿದ್ದಾರೆ. ಅದರಂತೆ ನಾವು ನಡೆದುಕೊಳ್ಳೋಣ. ಯಾವುದಾದರೂ ಕಾರಣಕ್ಕೆ ಅದು ಬೇಗ ಮುಗಿದರೆ, ಈ ಆರ್‌ಡಿಪಿಆರ್ ಇಲಾಖೆಯ ಬಗ್ಗೆ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ನಾನು ಬೇಗ ಮುಗಿಸಿ ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ಮಾತ್ರ ನಾನು ಅದನ್ನು ಮಾಡಬಹುದು. ಬೇರೆ ಸಮಯದಲ್ಲಿ ನಾನು ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಮಧ್ಯಾಹ್ನದ ನಂತರ ಯಾವ ರೀತಿ ಸಮಯ ಸಿಗುತ್ತದೆಂದು ನೋಡೋಣ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಸಿಗುತ್ತಿಲ್ಲ.

(ಗೊಂದಲ)

**ಸಭಾಪತಿಯವರು:-** ಶ್ರೀನಿವಾಸ ಪೂಜಾರಿಯವರೇ, ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡೋಣ. ತಾವು ದಯವಿಟ್ಟು ಕುಳಿತುಕೊಳ್ಳಿ. ನಿಯಮ 330 ರ ಬಗ್ಗೆ ನಾನು ಹೇಳಿದ್ದನ್ನು ತಾವು ಗಮನಿಸಿಲ್ಲ. ನಾನು ತಮ್ಮ ನೋಟೀಸ್‌ನ್ನು ಓದಿ ನೋಡಿಲ್ಲ. ಈಗ ಅವರು ಓದಿ ಹೇಳಿದ್ದ ಕಾರಣಕ್ಕಾಗಿ, ಅದು ನಿಯಮ 330 ರ ಅಡಿಯಲ್ಲಿ ಆ ಸೂಚನೆ ಬರುವುದಿಲ್ಲ. ಆದರೆ, 25 ಜನರು ಗೌರವಾನ್ವಿತ ಸದಸ್ಯರಲ್ಲಿ ಕೆಲವರು ಆರ್‌ಡಿಪಿಆರ್ ಇಲಾಖೆಯ ಬಗ್ಗೆ ಚರ್ಚೆ ಮಾಡಲು ಒಂದು ಅವಕಾಶ ಕೊಡಿ ಎಂದು ಕೇಳಿದ್ದಾರೆ. ಸಮಯ ಹೇಗೆ ಹೊಂದಾಣಿಕೆ ಆಗುತ್ತದೆಯೋ ಆ ರೀತಿ ಸಮಯ ಕೊಡೋಣ. ನಿಯಮ 330 ಅಡಿಯಲ್ಲಿ ಅವಕಾಶ ತಾವು ಕೊಟ್ಟಿರುವಂತಹ ಸೂಚನೆ ಬರುವುದಿಲ್ಲ. ಇಡೀ ಇಲಾಖೆ ಬಗ್ಗೆ ನಿಯಮ 330 ರಡಿ ಕೊಡುವುದಕ್ಕೆ ಬರುವುದಿಲ್ಲ. ಒಂದು specific ಆಗಿ ಕೊಡಬೇಕಾಗಿತ್ತು. ಅದರಿಂದ ಅದನ್ನು ನೋಡೋಣ. ಇಷ್ಟರ ಮೇಲೆ...

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ.

(ಗೊಂದಲ)

**ಸಭಾಪತಿಯವರು:-** ಶ್ರೀನಿವಾಸ ಪೂಜಾರಿಯವರೇ, ದಯವಿಟ್ಟು ಕುಳಿತುಕೊಳ್ಳಿ. ನೋಡೋಣ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ ಅಲ್ಲವೇ, ಪೀಠ ಹೇಳಿದ್ದು, ಅದರಂತೆ ನಿಯಮ 330 ರ ಬಗ್ಗೆ ಚರ್ಚೆಗೆ ಅವಕಾಶ ಕೊಡಲಾಗಿತ್ತು. ಆದರೆ, ಕೊಡುವುದಕ್ಕೆ ಬರುವುದಿಲ್ಲವೆಂದು ಈಗ ಗೊತ್ತಾಯಿತು. It is not possible. Don't argue, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,.

(ಗೊಂದಲ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಯಾರದ್ದು? ನಿಯಮ 330 ಪಟ್ಟಿ ಆಗಿದೆ. ಆದರೆ, ಊಟ ಬೇಡವೆಂದರೆ ನಡೆಸಿ.

ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನ್ನನ್ನು ಮರೆತುಬಿಟ್ಟಿದ್ದೀರಿ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಹೌದು, ತಮ್ಮದು ಇದೆ. If time permits. ಯಾವುದೇ ಆದರೂ ಸಹಾ, time permit ಮಾಡಿದಾಗ ತೆಗೆದುಕೊಳ್ಳುವುದು. ಈಗಾಗಲೇ ಮಧ್ಯಾಹ್ನ 2.00ಗಂಟೆ ಸಮಯ ಆಗಿದೆ. ಊಟ ಬೇಡವೇ? ವಿರಾಮದ ವೇಳೆಯ ನಂತರ ನೋಡಿಕೊಳ್ಳೋಣ. ಈಗ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 3.30 ಗಂಟೆಯವರೆಗೆ ಮುಂದೂಡುತ್ತೇನೆ.

(ಭೋಜನ ವಿರಾಮಕ್ಕಾಗಿ ಸಭೆಯು 1 ಗಂಟೆ 49 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಮುಂದು...)

(1173)22.11.2017-3.30-ಎಂವಿ-ಬಿಎನ್‌ಎಸ್

**(ಸದನವು ಭೋಜನ ವಿರಾಮದ ನಂತರ 3 ಗಂಟೆ 36 ನಿಮಿಷಕ್ಕೆ ಪ್ರಾರಂಭವಾಯಿತು)**

**(ಉಪ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾಪ**

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)**:- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017 ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ತಮ್ಮಲ್ಲಿ ಸೂಚಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಸಮಾಜದಲ್ಲಿ ದುಷ್ಟ ಮತ್ತು ವಾಮಾಚಾರ ಪದ್ಧತಿಗಳು ಇನ್ನೂ ಕೂಡ ಜೀವಂತವಾಗಿರುವಂಥದ್ದನ್ನು ಕಾಣುತ್ತಿದ್ದೇವೆ. ಜನಸಾಮಾನ್ಯರನ್ನು ಶೋಷಣೆಯಿಂದ ತಪ್ಪಿಸುವುದಕ್ಕೋಸ್ಕರ ಸರ್ಕಾರ ಈ ವಿಧೇಯಕವನ್ನು ತಂದಿದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ವಿಧೇಯಕ ಮತ್ತು ಅಧಿನಿಯಮವನ್ನು ತರಬೇಕು ಎಂಬುದು ಸರ್ಕಾರದ ಉದ್ದೇಶವಾಗಿತ್ತು. ಅದರ ಜೊತೆಗೆ ಈಗಾಗಲೆ ಅನೇಕ ಸಂಘಟನೆಗಳು, ಹೋರಾಟಗಾರರು ಇವರುಗಳ ಜೊತೆ ಚರ್ಚೆ ಮಾಡಿ. ಈ ತರಹದ ಒಂದು ವಿಧೇಯಕವನ್ನು ತರಬೇಕೆಂದು ತೀರ್ಮಾನವನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದೇವೆ. ಈ ಕುರಿತು ಕಳೆದ ಮೂರ್ನಾಲ್ಕು ವರ್ಷಗಳಿಂದ ಅದು ಬರೀ ಚರ್ಚೆಯಲ್ಲೆ ಇತ್ತು. ಅಂತಿಮವಾಗಿ ಈ ವಿಧೇಯಕವನ್ನು ಮಂಡನೆ ಮಾಡಿದ್ದೇವೆ. ಈ ವಿಧೇಯಕವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲೂ ಕೂಡ ಅನೇಕ ವಿಚಾರಗಳು ಚರ್ಚೆಗೆ ಬಂದವು.

**(ಮುಂದು...)**

(1174)22.11.2017-03.40-ಎಲ್‌ಎಲ್-ಬಿಎನ್‌ಎಸ್

**ಶ್ರೀ ಟಿ.ಬಿ. ಜಯಚಂದ್ರ:- (ಮುಂದುವರೆದಿದ್ದು...)**

ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಯಾವುದು ನಂಬಿಕೆ ಮತ್ತು ಯಾವುದು ಮೂಢನಂಬಿಕೆ ಎನ್ನುವಂಥದ್ದನ್ನು ವಿಷದವಾಗಿ ಈ ವಿಧೇಯಕದಲ್ಲಿ ಹೇಳುವಂತಹ ಕೆಲಸ ಮಾಡಿದ್ದೇವೆ. ಈ ಬಗ್ಗೆ ಹೆಚ್ಚು ವಿವರಣೆ ಕೊಡುವುದಕ್ಕೆ, ನಾವು ಸೆಕ್ಷನ್ 15 ನಲ್ಲಿ "ಉಳಿಸುವಿಕೆಗಳು" ಎಂದು ಇದೆ, ಅದರಲ್ಲಿ ಯಾವುದೇ ಧಾರ್ಮಿಕ, ಆಧ್ಯಾತ್ಮಿಕ ಸ್ಥಳಗಳಲ್ಲಿ ನಡೆಸುವ ಪ್ರದಕ್ಷಿಣೆ, ಯಾತ್ರೆ, ಪರಿಕ್ರಮದಂಥ ಪೂಜಾ ವಿಧಾನಗಳನ್ನು ನಡೆಸುವುದಕ್ಕೆ ಯಾವುದೇ ರೀತಿಯಾದಂತಹ ಭಾದಕ ಇಲ್ಲ. ಅದೇ ರೀತಿಯಾಗಿ ಅದನ್ನು ಓದುತ್ತಾ ಹೋದರೆ ನಮ್ಮಲ್ಲಿಯೇ ನಂಬಿರತಕ್ಕಂಥದ್ದಕ್ಕೆ, ನಂಬಲೇಬೇಕಾಗಿರತಕ್ಕಂತಹ ನಮ್ಮ ವಿಧಿ-ವಿಧಾನಗಳಿಗೆ ಯಾವುದೇ ರೀತಿಯ ಬಾಧಕ ಆಗದೇ ಇರತಕ್ಕಂತಹ ರೀತಿಯಲ್ಲಿ ಆ ಎಲ್ಲಾ ಪದ್ಧತಿಗಳನ್ನು ಕೂಡ ಇದರಲ್ಲಿ ಸೇರಿಸುವಂತಹ ಕೆಲಸವನ್ನು ಮಾಡಿದ್ದೇವೆ. ಯಾವುದನ್ನು ನಾವು ಬಿಡಬೇಕು ಯಾವುದಕ್ಕೆ ನಿರ್ಬಂಧ ವಿಧಿಸಿದ್ದೇವೆ ಎನ್ನುವುದನ್ನು ಕೂಡ ಅನುಸೂಚಿಯಲ್ಲಿ ಸೇರಿಸಿದ್ದೇವೆ. ಭಾನಾಮತಿಯ, ಮಾಟಮಂತ್ರದ ಹೆಸರಿನಲ್ಲಿ ಮೌಲ್ಯಯುತ ವಸ್ತುಗಳು, ಗುಪ್ತ-ನಿಧಿನಿಕ್ಷೇಪ (bounty) ಮತ್ತು ಬಚ್ಚಿಟ್ಟ ನಿಧಿಗಳನ್ನು ಹುಡುಕುವುದಕ್ಕೆ ಅಥವಾ ಅಂತಹುದೇ ಕಾರಣಗಳಿಗಾಗಿ ಅಮಾನವೀಯ, ದುಷ್ಟ ಕೃತ್ಯ ಮತ್ತು ವಾಮಾಚಾರ ಮಾಡುವುದು, ಯಾವೊಬ್ಬ ವ್ಯಕ್ತಿಯ ಮೇಲೆ ಹಲ್ಲೆ ಮಾಡುವುದು, ಬೆತ್ತಲೆ ಮೆರವಣಿಗೆ ಅಥವಾ ಆತನ ದೈನಂದಿನ ಚಟುವಟಿಕೆಗಳ ಮೇಲೆ ನಿಷೇಧ ಹಾಕುವುದು ಅಥವಾ ಅಂಥ ಅಮಾನವೀಯ ಕೃತ್ಯಗಳನ್ನು ಮಾಡಲು ಪ್ರಚೋದಿಸುವುದು, ಸಲಹೆ ನೀಡುವುದು ಅಥವಾ ಪ್ರೋತ್ಸಾಹಿಸುವುದು. ಯಾರು ಇಂತಹ ದುಷ್ಕೃತ್ಯಗಳಿಗೆ ಪ್ರೋತ್ಸಾಹವನ್ನು ಮಾಡುತ್ತಾರೆ, ಸಲಹೆಗಳನ್ನು ನೀಡುತ್ತಾರೆ ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಬಹುದೇ ವಿನಾ ಬೇರೆ ರೀತಿಯಲ್ಲಿ ಇಲ್ಲ. ಇವತ್ತಿನ ದಿವಸ ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಕೆಂಡವನ್ನು ಹಾಯಿಸುತ್ತಾರೆ. ಅದಕ್ಕೂ ಕೂಡ ಬಾಧಕವಿಲ್ಲ. ಆದರೆ, ಆ ಕೆಂಡವನ್ನು ಹಾಯಲೇಬೇಕೆಂದು ಒತ್ತಾಯ ಮಾಡಿದರೆ ಮಾತ್ರ ಈ Act apply ಆಗುತ್ತದೆ. ಇಲ್ಲವಾದರೆ Act apply ಆಗುವುದಿಲ್ಲ. ಈ ರೀತಿಯಾಗಿ ನಂಬಿಕೆಗಳು ಯಾವುವು, ಮೌಢ್ಯಗಳು ಯಾವುವು ಎನ್ನುವಂಥದ್ದನ್ನು ಪುನಃ ಓದಿ ಹೇಳುವಂತಹ ಅವಶ್ಯಕತೆಯಿಲ್ಲ. ಬಹುಶಃ ಇವೆಲ್ಲವೂ ಕೂಡ ಈ ವಿಧೇಯಕದಲ್ಲಿ ನಮೂದಾಗಿದೆ ಮತ್ತು ಈಗಾಗಲೇ ಅದನ್ನು ಎಲ್ಲಾ ಸದಸ್ಯರಿಗೂ ತಲುಪಿಸಲಾಗಿದೆ ಎನ್ನುವ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ಜಾರಿಗೆ ತರುತ್ತಿದ್ದೇವೆ. ಇವತ್ತಿಗೂ ಕೂಡ ಕೆಳಸ್ತರದಲ್ಲಿ ಇರತಕ್ಕಂತಹವರು ಅಂದರೆ, ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದವರು ಶೋಷಣೆಗೆ ಒಳಗಾಗುವಂಥದ್ದನ್ನು ನಾವು ನೋಡುತ್ತಿರುತ್ತೇವೆ. ಅದಕ್ಕೆ ಎಲ್ಲಿಯೋ ಒಂದು ಕಡೆ ಕಾನೂನಿನ ನೆರವು ಬಂದಾಗ ಅದರ ಬಗ್ಗೆ ಅರಿವು ಮೂಡಿಸುವಂತಹ ಕೆಲಸವನ್ನು ಸಹ ಮಾಡಬೇಕಾಗುತ್ತದೆ. ಅರಿವಿನ ಜೊತೆಗೆ ಈ ರೀತಿಯಾದಂತಹ ಕಾನೂನು ತರುವುದರಿಂದ ಒಂದು ಭಯ ಇರುತ್ತದೆಯೆನ್ನುವಂಥದ್ದು ಮತ್ತು ಈ ರೀತಿಯಾದಂತಹ ಶೋಷಣೆ ಮಾಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಈ ವಿಧೇಯಕವನ್ನು ತಂದಿದ್ದೇವೆ. ಸದರಿ ವಿಧೇಯಕ ವಿಧಾನ ಸಭೆಯಲ್ಲಿ ಅಂಗೀಕೃತವಾಗಿದೆ. ತಾವೂ ಕೂಡ ಈ ವಿಧೇಯಕವನ್ನು ಒಪ್ಪಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧೇಯಕ, 2017 ನ್ನು ಏನು ತಂದಿದ್ದಾರೆ, ಈ ವಿಧೇಯಕವನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ. ಏಕೆಂದರೆ, ಅನೇಕ ವರ್ಷಗಳಿಂದ ನಮ್ಮ ಸಮಾಜದಲ್ಲಿ ಅನೇಕ ಪದ್ಧತಿಗಳು ಬಂದು ಹೋಗಿವೆ. ಉದಾಹರಣೆಗೆ, ಒಂದನೆಯದಾಗಿ, ಮನುಷ್ಯನ ದೇಹಕ್ಕೆ ಯಾವುದೇ ಒಂದು ಲೋಹದಿಂದ ನೋವನ್ನು ಉಂಟು ಮಾಡಬಾರದೆಂದು ಒಂದು ನಿಯಮವಿದೆ. ನಮ್ಮ ಹಿಂದುಳಿದ ಸಮಾಜಗಳಲ್ಲಿ, ಮುಂದುವರೆದ ಜನಾಂಗದಲ್ಲಿ ಈ ಪದ್ಧತಿಯನ್ನು ಮಾಡುತ್ತಾರೋ ಬಿಡುತ್ತಾರೋ ಅದು ನನಗೆ ಗೊತ್ತಿಲ್ಲ. ಮನೆಗಳಲ್ಲಿ ಮಕ್ಕಳಿಗೆ ಜ್ವರ ಬಂದರೆ, ಸೂಜಿಯನ್ನು ಬಿಸಿ ಮಾಡಿ 'ಚುಟಿಕೆ' ಎಂದು ಹಾಕುತ್ತಾರೆ. ಎಷ್ಟರಮಟ್ಟಿಗೆ ಅದರಿಂದ ಆ ಮಗು ಹುಷರಾಗುತ್ತದೋ ಬಿಡುತ್ತದೋ ಎನ್ನುವುದು ನನಗೆ ಗೊತ್ತಿಲ್ಲ. ಆ ಚುಟಿಕೆ ಹಾಕುತ್ತಿದ್ದಂತೆಯೇ ಆ ಚರ್ಮ 'ಚುಟುಕ್' ಎನ್ನುತ್ತದೆಯಲ್ಲಾ ಆಗ, ಆ ಮನೆಯವರು, "ಅಯ್ಯೋ ಅಯ್ಯೋ ಅಯ್ಯೋ ಎಷ್ಟು ಶಬ್ದ ಬಂತು ನೋಡಿ" ಎಂದು ಹೇಳುತ್ತಾರೆ. ಅದು ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಮರು ದಿನ ಬೆಳಗ್ಗೆ ಆ ಮಗುವಿನ ಜ್ವರ ಹೋಗಿ ಬಿಟ್ಟಿರುತ್ತದೆ.

ಎರಡನೆಯದಾಗಿ, ಈ ಸದನದಲ್ಲಿ ಬ್ರಾಹ್ಮಣ ಸಮಾಜದ ಸದಸ್ಯರು ಹೆಚ್ಚಿಗೆ ಇದ್ದಾರೆ. ಅವರು ಮುದ್ರೆ ಒತ್ತುತ್ತಾರೆ. ಲೋಹವನ್ನು ಬಿಸಿ ಮಾಡಿ 'ಮತ್ಸ್ಯ ಮುದ್ರಾಧಾರಣೆ' ಎಂತಲೋ ಏನೋ ಮಾಡುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅದನ್ನು 'ತಪ್ತ ಮುದ್ರಾಧಾರಣೆ' ಎಂದು ಕರೆಯುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ಅದನ್ನು ತಪ್ತ ಮುದ್ರಾಧಾರಣೆ ಎಂದು ಕರೆಯುತ್ತಾರೆ. ಈ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆಯೇ? ಏಕೆಂದರೆ, ಇದು ಶತಮಾನಗಳಿಂದ ನಡೆದುಕೊಂಡು ಬಂದಿದೆ. ಅಲ್ಲದೇ, ಈ ಸದನದಲ್ಲಿ ಅನೇಕ ಮುಸ್ಲಿಂ ಸದಸ್ಯರಿದ್ದಾರೆ. ಅವರು 'ಸುನ್ನತ್' ಎಂದು ಮಾಡುತ್ತಾರೆ. ಯಾವ ಯಾವ ಕಾಲದಿಂದಲೋ ಈ ಪದ್ಧತಿಗಳು ನಡೆದುಕೊಂಡು ಬಂದು ಬಿಟ್ಟಿದೆ. ಅದರಲ್ಲಿ ಸರಿ, ತಪ್ಪು ಇವೆಲ್ಲವೂ ನಂತರದ ವಿಷಯಗಳು. ಆ ಸುನ್ನತ್ ಮಾಡುವುದು ಅವರ ಸಂಸ್ಕೃತಿ. ಇದನ್ನು ನಾವು ನಿಲ್ಲಿಸುತ್ತೇವೆಂದು ಹೋದರೆ, ಈ ಸರ್ಕಾರಕ್ಕೆ ಏನಾದರೂ ತಲೆ ಕೆಟ್ಟಿದೆಯಾ ಎಂದು ಜನರು ಕೇಳುತ್ತಾರೆ. ಲಿಂಗಾಯತ ಸಮಾಜದಲ್ಲಿ ಶ್ರೀ ವೀರಭದ್ರೇಶ್ವರನ ಗುಗ್ಗಳದ ಸಂದರ್ಭದಲ್ಲಿ ತ್ರಿಶೂಲವನ್ನು ಈ ಕೆನ್ನೆಯಿಂದ ಆ ಕಡೆಗೆ ಹಾಕುತ್ತಾರೆ ಅಥವಾ ನಾಲಿಗೆಗೆ ಚುಚ್ಚುತ್ತಾರೆ. ನಾನು ಈ ಪದ್ಧತಿ ಸರಿ ಅಥವಾ ತಪ್ಪು ಎನ್ನುವ ವಾದಕ್ಕೆ ಹೋಗುತ್ತಿಲ್ಲ. ಯಾವುದೇ ಒಂದು ವಿಧೇಯಕವನ್ನು ಜಾರಿಗೆ ತರುವ ಸಂದರ್ಭದಲ್ಲಿ ಇದನ್ನು ಜಾರಿಗೆ ತರಲು ಸಾಧ್ಯವೇ ಎಂಬುದನ್ನು ಸಂಬಂಧಪಟ್ಟವರೊಂದಿಗೆ ಚರ್ಚೆ ಮಾಡಬೇಕು. ಈಗ ಚುನಾವಣೆ ಬರುತ್ತಿದೆ. ತಮಿಳರು 'ಹರೋಹರ ಹಬ್ಬ' ಎಂದು ಮಾಡುತ್ತಾರೆ. ಆ ಸಮಯದಲ್ಲಿ ಅವರು ನಾಲಿಗೆ ಚುಚ್ಚಿಕೊಳ್ಳುತ್ತಾರೆ, ಬೆನ್ನಿಗೆ ಹುಕ್ ಹಾಕಿಕೊಂಡು ರಥ ಎಳೆಯುತ್ತಾರೆ. ಮಾನ್ಯ ಟಿ.ಬಿ. ಜಯಚಂದ್ರರವರು ಅಲ್ಲಿಗೆ ಹೋಗಿ ಆ ಆಚರಣೆಯನ್ನು ನಿಲ್ಲಿಸಿಬಿಟ್ಟರೆ ನಾನು ಅವರು ಹೇಳಿದಂತೆ ಕೇಳುತ್ತೇನೆ. ಇದು ದೇವರ ಬಗ್ಗೆ ಅವರಿಗೆ ಇರುವಂತಹ ನಂಬಿಕೆ. ನಾನು ಆ ಧರ್ಮ, ಈ ಧರ್ಮ ಅಥವಾ ಆ ಜಾತಿ, ಈ ಜಾತಿ ಎನ್ನುವ ಹರವಾಗಿಲ್ಲ. ಈ ವಿಧೇಯಕವನ್ನು ಜಾರಿಗೆ ತರುವುದಕ್ಕೆ ಈ ಸರ್ಕಾರ ಏತಕ್ಕೆ ಹೊರಟಿದೆ ಎನ್ನುವುದೇ ನನ್ನ ಪ್ರಶ್ನೆ. ಸರ್ಕಾರದ ಮನಸ್ಸಿನಲ್ಲಿ ಯಾವುದಾದರೂ ನಿರ್ದಿಷ್ಟವಾದ ಅಂಶವಿದೆಯೇ? ಉದಾಹರಣೆಗೆ, ಮಡೆಸ್ನಾನ ಎಂಬ ಪದ್ಧತಿಯಲ್ಲಿ, ಭಕ್ತರು ಎಂಜಲು ಎಲೆಗಳ ಮೇಲೆ ಉರುಳುತ್ತಾರೆ. ಒಂದು ಬಾರಿ ಅದನ್ನು ನಾವು ತಡೆಯುತ್ತೇವೆಂದು ಈ ಸರ್ಕಾರ ಪೋಲೀಸರನ್ನು ಕರೆದುಕೊಂಡು ಹೋಗಿ ಆ ಪದ್ಧತಿಯನ್ನು ತಡೆದರು. ಆ ಪದ್ಧತಿ ಪುನಃ ಶುರುವಾಯಿತು. ಈ ರೀತಿ ಎಂಜಲು ಎಲೆಯ ಮೇಲೆ ಉರುಳುವುದರಿಂದ ತೊನ್ನು ರೋಗ ವಾಸಿಯಾಗುತ್ತದೆ. ಇವುಗಳೆಲ್ಲವೂ ಕೂಡ ಅವರ ನಂಬಿಕೆಗಳು. ವೈಜ್ಞಾನಿಕವಾಗಿ ಇದು ಎಷ್ಟರಮಟ್ಟಿಗೆ ಹೌದು, ಅಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಈ ಸರ್ಕಾರ ಜಾರಿಗೆ ತರುವುದಕ್ಕೆ ಹೊರಟಿರುವ ವಿಧೇಯಕ practically ಸಾಧ್ಯವಿಲ್ಲ ಎನ್ನುವುದೇ ನನ್ನ ಪ್ರಶ್ನೆ. ನಾನು ಆಗಲೇ ಹೇಳಿದಂತೆ, ತಪ್ತ ಮುದ್ರಾಧಾರಣೆ, ಸುನ್ನತ್ ಈ ಪದ್ಧತಿಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಚರಿಸುವಂತಹವರಲ್ಲಿ ಪ್ರಮುಖರನ್ನು ಕರೆದು, ಈ ವಿಧೇಯಕವನ್ನು ಜಾರಿಗೆ ತರಬೇಕೆಂದು ನಮ್ಮ ಸರ್ಕಾರ ಯೋಚನೆ ಮಾಡಿದೆ. ಇದನ್ನು ನಿಮ್ಮ ಸಮಾಜದಲ್ಲಿ ಒಪ್ಪಿಸಬಹುದೇ, ಮುದ್ರಾಧಾರಣೆಯನ್ನು ಹಾಕುವಂತಹ ಸಂದರ್ಭದಲ್ಲಿ ಹಿರಿಯ ಸ್ವಾಮಿಗಳನ್ನು ಕರೆದು ಈ ರೀತಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ಅದಕ್ಕೆ ತಮ್ಮ ಸಮಾಜದವರನ್ನು ಒಪ್ಪಿಸಬಹುದೇ ಎಂದು ಚರ್ಚಿಸಬೇಕು. ಅದೇ ರೀತಿ ಆಗಲೇ ಹೇಳಿದಂತೆ, ಹರೋಹರ ಎಂದು ನಮ್ಮ ಭಾಗದಲ್ಲಿ ಕರೆಯುತ್ತಾರೆ. ಬೇರೆ ಭಾಗದಲ್ಲಿ ಯಾವ ರೀತಿ ಕರೆಯುತ್ತಾರೆ ಅದು ನನಗೆ ಗೊತ್ತಿಲ್ಲ. ಸುಬ್ರಮಣ್ಯ ದೇವಸ್ಥಾನದಲ್ಲಿ 'ಆಡಿಕೃತ್ತಿಕೆ' ಎಂದು ಜಾತ್ರೆ ನಡೆಯುತ್ತದೆ.

**(ಗೊಂದಲ)**

ಹೌದು, ಆ ಪದ್ಧತಿಯನ್ನು ಕಾವಡಿ ಎಂದು ಕೂಡ ಕರೆಯುತ್ತಾರೆ. ಹಾಗಾಗಿ, ಇಂತಹ ವಿಧೇಯಕಗಳನ್ನು ಜಾರಿಗೆ ತರುವುದು, ನಂತರ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಆಗದೇ ಇರುವುದು, ಇದು ಎಷ್ಟರಮಟ್ಟಿಗೆ ಬರುತ್ತದೆ, ಯಶಸ್ವಿಯಾಗುತ್ತದೆ ಎನ್ನುವ ಬಗ್ಗೆ ನನಗಂತೂ ಗೊತ್ತಿಲ್ಲ. ಈ ವಿಧೇಯಕದಲ್ಲಿ ಬಹಳ ಸ್ಪಷ್ಟವಾಗಿ, ಜಾತ್ರೆಗಳು ಮತ್ತು ಧಾರ್ಮಿಕ ಹಬ್ಬಗಳ ಸಮಯದಲ್ಲಿ ದೈಹಿಕವಾಗಿ ಗಾಯವನ್ನು ಉಂಟುಮಾಡುವಂಥ ಕೆಂಡ ಹಾಯುವ ಪದ್ಧತಿಯನ್ನು ಮಾಡುವಂತೆ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಬಲವಂತ ಮಾಡುವುದು, ಬಾಯಿಬೀಗ ಹಾಕುವ ಪದ್ದತಿ ಇವುಗಳನ್ನು ಮಾಡಬಾರದೆಂದು ತಿಳಿಸಲಾಗಿದೆ.

ಇನ್ನೊಂದು ವಿಚಾರವೆಂದರೆ, ಮೊಹರಂ ಕೊನೆಯ ದಿನದ ಸಂದರ್ಭದಲ್ಲಿ ಮುಸ್ಲಿಂಮರು ಚಾಟಿ ಹೊಡೆದುಕೊಂಡು, ಅದು ಗಾಯವಾಗಿ ಅದರಿಂದ ರಕ್ತ ಸುರಿಯುತ್ತಿರುತ್ತದೆ. ಇದು ಎಷ್ಟರಮಟ್ಟಿಗೆ ಸರಿ, ತಪ್ಪು ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಈ ಪದ್ಧತಿಯನ್ನು ಸರ್ಕಾರದ ಕೈಯಲ್ಲಿ ತಿದ್ದುವುದಕ್ಕೆ ಆಗುತ್ತದೆಯೆಂದು ನನಗಂತೂ ಅನಿಸುವುದಿಲ್ಲ. ಅದಕ್ಕಾಗಿ ಯಾವುದೇ ನಿಯಮವನ್ನು ಜಾರಿಗೆ ತರುವುದಕ್ಕೆ ಮೊದಲು ಯೋಚಿಸಬೇಕು. ಆದರೆ, ಸರ್ಕಾರಕ್ಕೆ ನಾವು ಈ ವಿಧೇಯಕವನ್ನು ಜಾರಿಗೆ ತರುತ್ತೇವೆ ಎನ್ನುವ ಖುಷಿ ಇರುತ್ತದೆ. ಇದು ಮೂಢನಂಬಿಕೆ. ಇದು ಜನಗಳ ನಂಬಿಕೆ. ಯಾವುದು ನಂಬಿಕೆ, ಯಾವುದು ಮೂಢನಂಬಿಕೆ ಎನ್ನುವುದನ್ನು ತೀರ್ಮಾನ ಮಾಡಲು ಇವರು ಯಾರು? ಇವರಿಗೆ ಅಧಿಕಾರ ಕೊಟ್ಟವರು ಯಾರು? ಇವರು ಏನು ಒಂದು ಕಾನೂನು ತರುತ್ತಾರೆ, ಅದು ಮೊದಲು practically ಆಗಬೇಕು. Practically ಆಗಬೇಕಾದರೆ ಸಂಬಂಧಪಟ್ಟ ವ್ಯಕ್ತಿಗಳನ್ನು ಕರೆದು ಕೂರಿಸಿ, ಒಪ್ಪಿಸಿದರೆ ಆಗ ಈ ವಿಧೇಯಕವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ.

(ಮುಂದುವರೆದಿದೆ...)

(1175) 22.11.2017/3.50/ವೈಎಲ್-ಕೆಎಸ್

ಕೆ.ಎಸ್.ಈಶ್ವರಪ್ಪ(ಮುಂದು):-

ಉದಾಹರಣೆಗೆ ಹಿಂದೆ ಚಂದ್ರಗುತ್ತಿಯಲ್ಲಿ ಬೆತ್ತಲ ಸೇವೆ ನಡೆಯುತ್ತಿತ್ತು. ಇದನ್ನು ತಡೆಗಟ್ಟಲು ಎಷ್ಟು ಪ್ರಯತ್ನ ನಡೆದಿದೆ ಎಂದರೆ ಅಷ್ಟಿಷ್ಟಲ್ಲ. ಸಂಬಂಧಪಟ್ಟವರನ್ನು ಕರೆದು ಮಾತು-ಕತೆ ನಡೆಸಿ ಪ್ರಯತ್ನ ಮಾಡಲಾಗಿತ್ತು. ಈಗ ಬೆತ್ತಲ ಸೇವೆ ಅಲ್ಲಿ ನಡೆಯುತ್ತಿಲ್ಲ. ಅದರ ಬದಲಾಗಿ ಬೇವಿನ ಸೊಪ್ಪನ್ನು ಸುತ್ತಿ ಮಾಡುವುದನ್ನು ಮಾಡುತ್ತಿದ್ದಾರೆ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಮಾತ್ರ ಸಾಧ್ಯವಾಗಲಿಲ್ಲ. ಅದು ಅವರ ನಂಬಿಕೆ. ಕೆಲವರು ನಿಮ್ಮ ಸಮಾಧಾನಕ್ಕಾಗಿ ಬೇವಿನ ಸೊಪ್ಪನ್ನು ಕಟ್ಟಿಕೊಳ್ಳುವ ಹಾಗೆ ಮಾಡುತ್ತಾರೆ. ಬೆತ್ತಲ ಸೇವೆ ಇವತ್ತಿಗೂ ಸಹ ಮುಂದುವರೆಯುತ್ತಲೇ ಇದೆ. ಸರ್ಕಾರದವರು ಏನು ಮಾಡುವುದಕ್ಕಾಗುವುದಿಲ್ಲ ಅಥವಾ ಅವರು ದೇವರಿಗೆ ಭಕ್ತಿಯಿಂದ ಆಚರಣೆ ಮಾಡುವಂತಹ ಸಂದರ್ಭದಲ್ಲಿ ಹೋಗಿ ನಿಲ್ಲಿಸುತ್ತೀರಾ? ನಿಲ್ಲಿಸಿದರೆ ಪೋಲೀಸ್‌ನವರು ಉಳಿಯುವುದಿಲ್ಲ. ನಾನು ಅದಕ್ಕೋಸ್ಕರ ಹೇಳುವುದಕ್ಕೆ ಬಯಸುವುದೇನೆಂದರೆ, ವಿಧೇಯಕವನ್ನು ತರಬೇಕಾದರೆ ಸ್ವಲ್ಪ ಯೋಚನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ಈ ರೀತಿ ಮಾಡುವುದು ಸರಿಯಿಲ್ಲ. ನಿಲ್ಲಿಸಿ ಎಂದು ಯಾರೋ ಸ್ವಲ್ಪ ಜನ ಬಂದು ಹೇಳುತ್ತಾರೆ. ಆದರೆ, ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಈ ವಿಧೇಯಕವನ್ನು ತಂದರೆ, ಇದು practical ಅಲ್ಲ. ನಾನು ಅದಕ್ಕೋಸ್ಕರ ಹೇಳುವುದೇನೆಂದರೆ, ಈ ವಿಧೇಯಕವನ್ನು ತರುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಜಾತಿಯವರನ್ನು, ಧರ್ಮದವರನ್ನು ಕರೆದು, ಚರ್ಚೆ ಮಾಡಿ ಒಪ್ಪಿಸಿ ಮಾಡದಿದ್ದರೆ ಸರ್ಕಾರಕ್ಕೂ ಗೌರವವಿರುತ್ತದೆ. ಅದನ್ನು implement ಮಾಡುವಂತಹ ಸಂದರ್ಭದಲ್ಲಿ ನಮ್ಮನ್ನು ಅವರು ಒಪ್ಪಿಸಿದ್ದಾರೆ. ಅವರು ಮಾಡುವುದು ಸರಿ ಇದೆ ಎಂದು ಹೇಳುತ್ತಾರೆ. ಇಲ್ಲದಿದ್ದರೆ ನೀವೇ ಅಲ್ಲ ಯಾವುದೇ ಸರ್ಕಾರ ಬಂದರೂ ಕೂಡ ನಾವು ನಿಲ್ಲಿಸುವುದಿಲ್ಲ. ನಾವೂ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದೇವೆ. ಯಾರಾದರೂ ಇದನ್ನು ಪ್ರಶ್ನಿಸಿದಾಗ ಮಾಡುವುದಿಲ್ಲವೆಂದಾದರೂ ಹೇಳಬೇಕಾಗುತ್ತದೆ. ಆದರೆ, ವಿಧೇಯಕವನ್ನು ಜಾರಿಗೆ ತಂದಿದ್ದೇವೆ ಎಂದು ಹೇಳದಾಗ implement ಮಾಡುವವರ್ಯಾರು? ಕಾರ್ಯಗತಗೊಳಿಸುವವರಿಗೆ ತಲೆ ನೋವು. ಸರ್ಕಾರದವರೇನೋ ಜಾರಿಗೆ ತಂದಿದ್ದಾರೆ. ಜಾರಿಗೆ ತಂದಂತಹ ಸಂದರ್ಭದಲ್ಲಿ ಮುದ್ರಧಾರಣೆ ಆಗುವಂತಹ ಸಂದರ್ಭದಲ್ಲಿ ಯಾರೋ ಒಂದಿಷ್ಟು ಜನ ಬಂದು ಮುದ್ರಧಾರಣೆ ಹಾಕಿಸಿಕೊಳ್ಳುವಂತಹ ಸಂದರ್ಭದಲ್ಲಿ ದೇವರನ್ನು ನಂಬತಕ್ಕಂಥವರು, ನಂಬದೇ ಇರತಕ್ಕಂಥವರು ಎಲ್ಲರೂ ಇರುತ್ತಾರೆ. ಆ ಪದ್ಧತಿಯನ್ನು ನಂಬದೇ ಇದು ಅಮಾನವೀಯ ಎನ್ನುವವರು ಪೋಲೀಸ್ ಠಾಣೆಗೆ ದೂರು ನೀಡಿದಾಗ ಪೋಲೀಸ್ ಅಧಿಕಾರಿಗಳು ಬಂದಾಗ ಮುದ್ರಧಾರಣೆ ಆಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ?

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರಬೇಕಾದರೆ ಸೆಕ್ಷನ್ 14 ರಲ್ಲಿ ಅನುಸೂಚಿಯ ತಿದ್ದುಪಡಿಗೆ ಅಧಿಕಾರದ (***'Power to amend the Schedule')*** ಕಲಂ (1) ರಲ್ಲಿ, 'ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಮಾರ್ಪಡಿಸಬಹುದು'. ಮೂರನ್ನು ಕೂಡ ಮಾಡುವುದಕ್ಕೆ ಸಾಧ್ಯವಿದೆ. ಹಾಗೆಯೇ ಮಾಧ್ವಚಾರ್ಯರು ಮಾಡತಕ್ಕಂಥ ಪದ್ಧತಿಗಳೆಲ್ಲಾವನ್ನೂ ಕೂಡ allow ಮಾಡಲಾಗಿದೆ. ಯಾವುದಾದರೂ ಸೇರಿಸಬೇಕೆಂದರೆ, ಸೇರಿಸುವುದಕ್ಕೂ ಅವಕಾಶ ಇದೆ. ತೆಗೆದು ಹಾಕುವುದಕ್ಕೂ ಅವಕಾಶ ಇದೆ. ಆದುದರಿಂದ ಈ ವಿಧೇಯಕವನ್ನು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೋ ಒಂದು ಕಡೆ 21ನೇ ಶತಮಾತನದಲ್ಲಿಯೂ ಕೂಡ ಇಂತಹ ಒಂದು ಅನಿಷ್ಠ ಪದ್ಧತಿಗಳು ಇವತ್ತು ಜಾರಿಯಲ್ಲಿರಬೇಕಾದರೆ ಅದಕ್ಕೆ ಒಂದು ಕಾನೂನು ತಂದು ಕಾನೂನಿನಲ್ಲಿ ಅರಿವು ಮೂಡಿಸುವುದಕ್ಕೆ ಮತ್ತು ಪ್ರಜ್ಞೆಯನ್ನು ಮೂಡಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನಮ್ಮ ಉದ್ದೇಶ. ಏಕಾ-ಏಕಿಯಾಗಿ ಈ ವಿಧೇಯಕವನ್ನು ತರುವುದಕ್ಕೆ ಹೋಗಲಿಲ್ಲ. ಈ ವಿಧೇಯಕವನ್ನು ತರಬೇಕಾದಂತಹ ಸಂದರ್ಭದಲ್ಲಿ ಬಹಳಷ್ಟು ಜನರು ಈ ರೀತಿಯಾಗಿ ಕಾನೂನನ್ನು ತರಬೇಕೆಂದು ಮನವಿಯನ್ನು ಕೊಟ್ಟಿದ್ದರು. ಮಹಾರಾಷ್ಟ್ರದಲ್ಲಿ ಈ ಚಿಂತನೆ ಪ್ರಾರಂಭವಾಗಿತ್ತು. ಕೇರಳ ರಾಜ್ಯದಲ್ಲಿಯೂ ಪ್ರಾರಂಭವಾಗಿತ್ತು. ಕರ್ನಾಟಕದಲ್ಲಿಯೂ ಕೂಡ ಸಂಘಟನೆಗಳು ಬಂದು ಈ ರೀತಿಯ ವಿಶೇಷವಾದ ಕಾನೂನನ್ನು ತರತಕ್ಕಂಥ ಅವಶ್ಯಕತೆ ಇದೆ ಎಂದು ಹೇಳಿದ್ದರು. ಆ ಹಿನ್ನೆಲೆಯಲ್ಲಿ ಕಾನೂನು ವಿಶ್ವವಿದ್ಯಾನಿಲಯ ಮತ್ತು National Law School of India ರವರ ಹಾಗೂ ಸಂಘಟನೆಗಳ ಅಭಿಪ್ರಾಯಗಳನ್ನೂ ಸಹ ಪಡೆದು, ನ್ಯಾಯಾಧೀಶರ ಹತ್ತಿರ ಚರ್ಚೆ ಮಾಡಿ, ಇಂತಹ ಒಂದು ಕಾನೂನಿನ ಅವಶ್ಯಕತೆ ಇದೆ ಎನ್ನುವ ಹಿನ್ನೆಲೆಯಲ್ಲಿ ತರುವಂತಹ ಪ್ರಯತ್ನವನ್ನು ಮಾಡಿದ್ದೇವೆ. ನಮ್ಮಲ್ಲಿರತಕ್ಕಂಥ ಮೌಢ್ಯಗಳೇನಿದೆ ಅದನ್ನು ತೆಗೆಯತಕ್ಕಂಥದ್ದು ಅಷ್ಟೊಂದು ಸುಲಭವಲ್ಲ ಎನ್ನುವುದು ನಮಗೆ ಗೊತ್ತಿದೆ. ಆದರೆ, ಎಲ್ಲೋ ಒಂದು ಕಡೆ ಸುಧಾರಣೆಯಾಗಬೇಕು, ಸುಧಾರಣೆಯಾಗುವ ಕಡೆಗೆ ಹೋಗಬೇಕೆನ್ನುವ ಕಾರಣದಿಂದ ಈ ಕಾನೂನು ನೆರವಿಗೆ ಬರಬಹುದು awareness ಮೂಡಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದು ಸೃಷ್ಟಿಯಾಗುತ್ತದೆ. ಅದರಿಂದ ಯಾವುದೇ ಒಂದು ಪದ್ಧತಿ ಇರಬಹುದು, ನಮ್ಮಲ್ಲಿಯೂ

ಕೂಡ ದಾಸಯ್ಯ ಎನ್ನುವ ಪದ್ಧತಿಯನ್ನು ಮಾಡಿಕೊಂಡಿದ್ದಾರೆ. ಕೇವಲ ಮಾಧ್ವಚಾರ್ಯರು ಮಾತ್ರವಲ್ಲ. ಇವತ್ತಿನ ದಿನ ದಾಸಯ್ಯನವರು ಸಹ ಮುದ್ರಾಧಾರಣೆಯನ್ನು ಮಾಡಿಸಿಕೊಳ್ಳುತ್ತಾರೆ. ಅವೆಲ್ಲವನ್ನೂ ಕೂಡ allow ಮಾಡಿದ್ದೇವೆ. Notification ಮಾಡುವಂತಹ ಸಂದರ್ಭದಲ್ಲಿ ಅವೆಲ್ಲವನ್ನೂ ಸಹ ಕೈಬಿಡುತ್ತೇವೆ. ಆದರೆ, ಪ್ರಚೋದನೆ, ಪ್ರೋತ್ಸಾಹ ಎನ್ನುವ ರೀತಿಯಲ್ಲಿ ಮಾಡಿ, ಲಾಭ ಮಾಡತಕ್ಕಂಥ ಜನರು ಏನಿದ್ದಾರೆ ಅವರ ಬಗ್ಗೆ ಎಚ್ಚರಿಕೆಯನ್ನು ಹೊಂದಿರಬೇಕೆನ್ನುವುದಕ್ಕೋಸ್ಕರ ಈ ಕಾನೂನನ್ನು ತಂದಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಚೋದನೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ ನಾವೇ ಅವರ ಹತ್ತಿರ ಹೋಗುತ್ತೇವೆ. ನಮ್ಮ ಪದ್ಧತಿ ಈ ರೀತಿ ಇದೆ. ಇದಕ್ಕೆ ನೀವು ಸಹಕಾರ ನೀಡಬೇಕೆಂದು ಧಾರ್ಮಿಕ ಗುರುಗಳ ಹತ್ತಿರ ಹೋಗಿ ಈ ರೀತಿಯ ಕಾರ್ಯಗಳನ್ನು ಮಾಡಬೇಕೆಂದು ನಾವೇ ಅವರ ಹತ್ತಿರ ಹೋಗುತ್ತೇವೆ. ಮುಸ್ಲಿಂ ಸಮಾಜದವರು ಅವರ ಧಾರ್ಮಿಕ ಗುರುಗಳ ಹತ್ತಿರ ಹೋಗಿ, ಸುನ್ನತಿ ಮಾಡಿ ಎಂದು ಅವರು ಹೋಗುತ್ತಾರೆ. ಧಾರ್ಮಿಕ ಚಟುವಟಿಕೆಗಳನ್ನು ಮಾಡಿಸಿಕೊಳ್ಳಿ, ಸುನ್ನತಿ ಮಾಡಿಸಿಕೊಳ್ಳಿ ಎಂದು ಯಾರು ಹೇಳುವುದಿಲ್ಲ. ಜನರೆ ಹೋಗುತ್ತಾರೆ. ಸುನ್ನತಿ ಮತ್ತು ಮುದ್ರಾಧಾರಣೆಯನ್ನು ಸರ್ಕಾರದವರು ನಿಲ್ಲಿಸುವುದಕ್ಕಾಗುತ್ತದೆಯೇ? ನಿಲ್ಲಿಸುತ್ತೇವೆಂದು ಹೇಳಲಿ, ಮಾನ್ಯ ಸಚಿವರು ಹೇಳಿದ ಹಾಗೆ ನಾನು ಕೇಳಿ ಬಿಡುತ್ತೇನೆ. ಸಾಧ್ಯವೇ ಇಲ್ಲ. ಇದು ಸುಮ್ಮನೆ impractical.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಅದು ಯಾವುದೋ ಒಂದು ಧರ್ಮದಲ್ಲಿ ನಡೆದುಕೊಂಡು ಬಂದಿರತಕ್ಕಂಥದಾಗಿರುತ್ತದೆ. ಅದಕ್ಕೆ ಯಾವುದೇ ಬಾಧಕಗಳಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮತ್ತೆ ಏತಕ್ಕಾಗಿ ತರುತ್ತಿದ್ದಾರೆ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಏತಕ್ಕೆ ತರುತ್ತೀರಿ ಎಂದು ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ಹಾಗಾದರೆ, ಈ ರೀತಿಯ ಕಾನೂನನ್ನು ತರುವುದನ್ನು ನಿಲ್ಲಿಸಬೇಕೇ? ಏನರ್ಥ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, No, No ಇದನ್ನು ನಿಲ್ಲಿಸಿ. ಇದನ್ನು ಏಕೆ ತಂದಿದ್ದಾರೆ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳುವುದಾರೆ, ನಾವು ದೇವಸ್ಥಾನದ ಹತ್ತಿರ ನೋಡುತ್ತೇವೆ. ನಾನು ದೇವಸ್ಥಾನಕ್ಕೆ ಹೋಗುತ್ತೇನೆ. ಪೂಜೆಯನ್ನು ಮಾಡಿಸುತ್ತೇನೆ. ನಂಬಿಕೆ ಎನ್ನುವುದಕ್ಕೆ ವಿರೋಧ ಇಲ್ಲ. ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ಎಲ್ಲದಕ್ಕೂ ಕೂಡ ಮೂಲ ದೈವವೇ ಆಗುತ್ತದೆ. ದೇವರ ಹೆಸರಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಆದರೆ, ಯಾರಾದರು ದೇವಸ್ಥಾನದ ಹತ್ತಿರ ರಾತ್ರಿ ಹೋಗಿ ಮಲಗಿದರೆ ಸಾಕು ಖಾಯಿಲೆ ವಾಸಿಯಾಗುತ್ತದೆಂದು ಹೇಳಿದ್ದರೆ ಸಾಲು ಸಾಲಾಗಿ ಜನ ಬರತಕ್ಕಂಥದನ್ನು ನೋಡುತ್ತೇವೆ. ಇದು ಸಾಧ್ಯವೇ? ಮಾನಸಿಕವಾಗಿರುವಂತವರಿಗೆ ನೆಮ್ಮದಿಯನ್ನು ಕೊಡುವುದಕ್ಕೆ ಸಾಧ್ಯವೇ ವಿನಹಃ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾಗಿ ಪ್ರೋತ್ಸಾಹ ಮತ್ತು ಪ್ರಚೋದನೆ ಮಾಡಿ, ಕರೆದುಕೊಂಡು ಹೋಗುವಂಥದ್ದು ತಪ್ಪು ಎಂಬುದನ್ನು ಬಿಟ್ಟರೆ, ಬೇರೆ ಯಾವುದೇ ಉದ್ದೇಶ ಇಲ್ಲ. ಇವತ್ತಿನ ದಿನ ಹತ್ತಾರು ವರ್ಷಗಳಿಂದ ಆಚರಣೆಯಲ್ಲಿರತಕ್ಕಂಥದ್ದು ವೈಜ್ಞಾನಿಕ ಸರಿ ಅನ್ನಿಸುವುದನ್ನೆಲ್ಲಾವನ್ನು ಕೂಡ allow ಮಾಡುವುದಕ್ಕೆ ಅವಕಾಶ ಇದೆ. ಅದನ್ನು ನಾವು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಮಾಹಿತಿಯೂ ನಮಗೆ ಬಂದಿದೆ. ಯಾವುದನ್ನು ಸೇರಿಸಬೇಕು ಮತ್ತು ಯಾವುದನ್ನು ಸೇರಿಸಬಾರದು ಎನ್ನುವುದನ್ನು ಅನೇಕ ಸಂಘಟನೆಗಳವರು ಬಂದು ಭೇಟಿ ಮಾಡಿ ಹೇಳಿದ್ದಾರೆ. ನಾವು ಯಾವುದು ವೈಜ್ಞಾನಿಕವಾಗಿ ಸರಿ ಇದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೆಲ್ಲಾವನ್ನು ಒಪ್ಪುತ್ತೇವೆ. ಈಗಾಗಲೇ ಕಾನೂನಿನಲ್ಲಿ ಸೇರಿಸುವುದಕ್ಕೆ ಮಾರ್ಪಾಟು ಮಾಡುವುದಕ್ಕೆ ಅವಕಾಶ ಇದೆ. ಅದರಿಂದಾಗಿ, ಈ ವಿಧೇಯಕದಲ್ಲಿರತಕ್ಕಂಥದ್ದು ಯಾರಿಗೂ ಕೂಡ ತೊಂದರೆಯಾಗುವಂಥದ್ದಲ್ಲ. ಎಲ್ಲೋ ಒಂದು ಕಡೆ ಕಾನೂನು ತರುವುದರಿಂದ ಮಾನಸಿಕವಾಗಿ ಮೌಢ್ಯದ ಬಗ್ಗೆ ಎಚ್ಚರಿಕೆಯಿಂದ ಇರುವುದಕ್ಕೆ ಸಾಧ್ಯವಾಗುತ್ತದೆ. ಆ ಮೌಢ್ಯದ ಹೆಸರಿನಲ್ಲಿ ಶೋಷಣೆ ಮಾಡತಕ್ಕಂಥವರಿಗೆ ಶಿಕ್ಷೆ ವಿಧಿಸಬೇಕು ಎನ್ನುವುದಷ್ಟೇ ನಮ್ಮ ಉದ್ದೇಶ.

**ಶ್ರೀ ಅಬ್ದುಲ್ ಜಬ್ಬಾರ್ (ನಾಮನಿದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಸುನ್ನತಿ ವಿಚಾರವು ಈ ವಿಧೇಯಕದಲ್ಲಿ ಇಲ್ಲ. ಆದರೂ ವೈಜ್ಞಾನಿಕವಾಗಿ ನಮ್ಮ ಸಮಾಜ ಬಂದಾಗಿನಿಂದಲೂ ನಡೆಯುತ್ತಾ ಬಂದಂತಹ ಪದ್ಧತಿಯಾಗಿದೆ. ಅದರ ವಿಚಾರವನ್ನು ಇದರಲ್ಲಿ ತಂದಿಲ್ಲ. ಹಾಗೆಯೇ 'ಚುಟುಕಿ' ಹಾಕುವ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅದೆಲ್ಲಾವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗದ ಕೆಲಸ. ಅನಗತ್ಯವಾಗಿ ಜನರ ಮೇಲೆ ತೊಂದರೆ ಆಗುತ್ತಿದೆ ಅಂತಹ ವಿಚಾರದಿಂದ ಹೇಳಿದ್ದಾರೆ.

**ಶ್ರೀ ಸಯದ್ ಮುಧೀರ್ ಆಗಾ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸುನ್ನತಿ 'Definition' ಏನೆಂಬುದನ್ನು ಸ್ವಲ್ಪ ದಯವಿಟ್ಟು ಬಿಡಿಸಿ ಹೇಳಬೇಕು. ಸುನ್ನತಿ ಎಂದು ಆಡಳಿತ ಪಕ್ಷದವರು ಏನು ಹೇಳುತ್ತಾರೆ ಅದನ್ನು ನಮ್ಮಲ್ಲಿಯೇ ಮಾಡಿಕೊಳ್ಳುವುದಿಲ್ಲ. 'Definition' ಏನು ತಿಳಿದಿದ್ದಾರೆ ಸ್ವಲ್ಪ ಅದನ್ನಾದರೂ ಹೇಳಲಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾವು ಸುನ್ನತಿ ಮಾಡಿಸಿಕೊಂಡು ಇಲ್ಲ. ಹಾಗೆಂದರೆ ಏನೆಂಬುದು ನನಗೆ ಗೊತ್ತಿಲ್ಲ. ಅದು ಏನೆಂದು ಹೇಳಲಿ ಎಂದು ಕೇಳುತ್ತಿದ್ದಾರೆ. ನಾನು ಹೇಗೇ ಹೇಳಲಿ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಿಗೆ ಗೊತ್ತಿಲ್ಲದೇ ಇರುವುದಕ್ಕೆಯೇ ಈ ಎಲ್ಲಾ ಸಮಸ್ಯೆಗಳು ಉದ್ಭವಿಸುತ್ತಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, No, No... ಹಾಗಾದರೆ, ಮಾನ್ಯ ಟಿ.ಬಿ.ಜಯಚಂದ್ರರವರಿಗೆ ಸುನ್ನತಿ ಎಂದರೆ ಏನೆಂಬುದು ಗೊತ್ತೇ?

(ಗೊಂದಲ)

**ಶ್ರೀ ಸಯದ್ ಮುಧೀರ್ ಆಗಾ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿಯೇ ಸುನ್ನತಿ ಪದ್ಧತಿ ಇಲ್ಲ.

(ಗೊಂದಲ)

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಸುನ್ನತಿ ಬಗ್ಗೆಯಾಗಲಿ ಅಥವಾ ಮುದ್ರೆಧಾರಣೆಯಾಗಲಿ ಯಾವುದು ತಂದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇದು ದೇಹಗಳಿಗೆ ತೊಂದರೆಯಾಗುವಂತಹ ಅಂಶ. ದೇಹಗಳಿಗೆ ತೊಂದರೆಯಾಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಖಂಡ 16ರ ಅನುಸೂಚಿ (2)(1)(ಜಿ) ಪ್ರಕರಣದ ಕ್ರಮ ಸಂಖ್ಯೆ (3) ರಲ್ಲಿ *'...ವ್ಯಕ್ತಿಯ ಅಂಗಗಳಿಗೆ ಅಥವಾ ದೇಹಕ್ಕೆ ಬಿಸಿ ಮಾಡಿದ ವಸ್ತುಗಳನ್ನು ಮುಟ್ಟಿಸುವುದರ ಮೂಲಕ ಆತನಿಗೆ ನೋವುಂಟು ಮಾಡುವುದು....'* ಅಪರಾಧವೆಂದು ಸೇರಿಸಲಾಗಿದೆ. ಆ ನೋವುಂಟು ಮಾಡುವ ವಿಚಾರದಲ್ಲಿ ಮುಸಲ್ಮಾನರ ಸಂಪ್ರದಾಯದ 'ಸುನ್ನತಿ' ವಿಚಾರವನ್ನು ವಿರೋಧ ಪಕ್ಷದ ನಾಯಕರು ಉಲ್ಲೇಖಿಸಿದ್ದಾರೆ. ಅದಕ್ಕೆ ನಮ್ಮ ಗೊಂದಲವೇನು ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ನಾನು ಸುನ್ನತಿಯ ಬಗ್ಗೆ ವಿರೋಧ ಮಾಡುವುದಿಲ್ಲ. ಈ ವಿಧೇಯಕದಲ್ಲಿ ಸುನ್ನತಿ ಬಗ್ಗೆ ಉಲ್ಲೇಖವಿಲ್ಲವೆಂದು ಮಾನ್ಯ ಆಡಳಿತ ಪಕ್ಷದವರು ಹೇಳುವುದಾದರೆ, ಅದರ ಅರ್ಥ ಈ ವಿಧೇಯಕವು ಕೇವಲ ಹಿಂದೂಗಳಿಗೆ ಮಾತ್ರ ಸೀಮಿತವೇ?

(ಮುಂದು). . .

(1176)/22.11.2017/4.00/ಎಸ್‌ಕೆ-ಕೆಎಸ್

**ಶ್ರೀ ಕೆ.ಆರ್. ರಮೇಶ್‌ಕುಮಾರ್(ಮುಂದು):-** ಮಾನ್ಯ ಸಭಾಪತಿಯವರೆ, ತಾವು ವಿರೋಧ ಪಕ್ಷದಲ್ಲಿದ್ದುಕೊಂಡು, ಅದನ್ನು ಮಾತನಾಡುತ್ತಿದ್ದೀರಿ. ಅದರ ಬಗ್ಗೆ ಮಾತನಾಡುವಾಗ, ವಿರೋಧ ಬಂದು ಬಿಡುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇಲ್ಲ ಇಲ್ಲ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಅ ರೀತಿ ಇದ್ದನ್ನು bifurcate ಮಾಡುವುದಾದರೆ, ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನೂ ಸಹ ಅದರ ಬಗ್ಗೆಯೇ ಹೇಳುತ್ತಿರುವುದು. ಅವರು ಹೇಳುರುವಂತಹ ಪಾಯಿಂಟ್‌ನ್ನೇ, ನಾನು ಹೇಳುತ್ತಿರುವುದು. ಇಡೀ ಸಮಾಜದಲ್ಲಿ specific ಆಗಿ ತಂದಿರುವಂತಹ ಸಂದರ್ಭದಲ್ಲಿ, ನಾನು ಹೇಳುತ್ತಿರುವುದೇನೆಂದರೆ, ಚುಟುಕಿ ಇಲ್ಲ, ಹಾಗಾದರೆ ಚುಟಕಿ ಹಾಕುವಾಗೇ ಇಲ್ಲ. ಅದರ ಬಗ್ಗೆ ಇನ್ನೊಂದು ಮಾತನ್ನು ಹೇಳಿದ್ದೀರಿ. ದೇವಸ್ಥಾನದಲ್ಲಿ ಹೋಗಿ ಮಲಗುವುದು, ಮಲಗುವ ಮುಖಾಂತರ ವಾಸಿಯಾಗುತ್ತದೆ. ಬ್ರಹ್ಮ ಬಂದರೂ ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಇದು ಏನಾಗುತ್ತದೆಂದರೆ, ನಂಬಿಕೆಗಳು ಬಹಳ ವಿಚಿತ್ರವಾಗಿದೆ. ಇದನ್ನು ಕೇಳಿದರೆ ಆಶ್ಚರ್ಯ ಪಟ್ಟುಬಿಡುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿರುವಂತಹ ಒಂದು ಗ್ರಾಮ. ಆ ಗ್ರಾಮದಲ್ಲಿ ಈಶ್ವರ ಲಿಂಗದ ದೇವಸ್ಥಾನವಿದೆ. ಆ ಈಶ್ವರ ಲಿಂಗ ದೇವಸ್ಥಾನದಲ್ಲಿ ಒಬ್ಬರು ಅರ್ಚಕರು ಇದ್ದಾರೆ. ನಾನು ನಂಬಿಕೆಗಳ ಬಗ್ಗೆ ಹೇಳುತ್ತಿದ್ದೇನೆ. ಆ ಈಶ್ವರ ಲಿಂಗ ದೇವಸ್ಥಾನದ ಅರ್ಚಕರ ಹತ್ತಿರ, ಒಬ್ಬ ತಂದೆ-ತಾಯಿಯವರು ಹೆಣ್ಣು ಮಗಳನ್ನು ಕರೆದುಕೊಂಡು ಹೋಗುತ್ತಾರೆ. ನನ್ನ ಮಗಳಿಗೆ ಮದುವೆಯಾಗಿಲ್ಲ, ಏನು ಮಾಡಬೇಕು ಎಂದ ತಕ್ಷಣ ಆ ಅರ್ಚಕರು ಏನು ಹೇಳುತ್ತಾರೆಂದರೆ, ಅದು ನದಿ ದಡದಲ್ಲಿರುವಂತಹ ದೇವಸ್ತಾನ. ಆ ನದಿಯಿಂದ 25 ಕೊಡ ನೀರು ತೆಗೆದುಕೊಂಡು ಬಂದು, ಹದಿನೈದು ದಿನ ಆ ಈಶ್ವರ ಲಿಂಗಕ್ಕೆ ನೀರಿನ ಅಭಿಷೇಕ ಮಾಡಿದರೆ, ನಿಮ್ಮ ಮಗಳ ಮದುವೆಯಾಗುತ್ತದೆ. ಇದು ವಿಚಿತ್ರವಾಗಿರುವುದರಿಂದ ನಾನು ಇದನ್ನು ಹೇಳುತ್ತಿರುವುದು. ಇದಾದ ಮೇಲೆ ಈಶ್ವರ ಲಿಂಗಕ್ಕೆ ಅಭಿಷೇಕನೂ ಆಯಿತು. ಅದು ಯೋಗನೋ ಅಥವಾ ದೇವರ ಕಾಪಾಡಬೇಕು. ಅವರ ಮಗಳಿಗೆ ಮದುವೆ ನಿಶ್ಚಿಯವಾಯಿತು. ಮದುವೆ ನಡೆಸಿಕೊಡುವುದಕ್ಕೆ ಆ ಅರ್ಚಕರನ್ನು ಕರೆಯುವುದಕ್ಕೆ ಬಂದರು. ಯಾರು ಅವರು ಕರೆದುಕೊಂಡು ಬಂದಿದ್ದರಲ್ಲ ಗಂಡು, ಅಂದರೆ ಆ ವ್ಯಕ್ತಿ ಇಂಜಿನೀಯರ್. ಅವರ ಮನೆಯಲ್ಲಿ ಹೇಳಿದರು ಕರೆದುಕೊಂಡು ಬಂದರು. ಆ ಇಂಜಿನೀಯರಿಗೆ ಈ ಅರ್ಚಕರು ಕೇಳುತ್ತಾರೆ ನನ್ನ ಮಗಳಿಗೆ ಎಲ್ಲಿಯಾದರೂ ಒಂದು ಗಂಡು ಇದ್ದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುಡುಕಿಕೊಡಿ. ನಾನು ಬಹಳ ದಿನಗಳಿಂದ ಒದ್ದಾಡುತ್ತಿದ್ದೇನೆ. ಜನ ನಂಬಿಕೆ, ಈ ಅರ್ಚಕರ ಹತ್ತಿರ ಹೋದರೆ, ಅವರು ಹೇಳಿದ ರೀತಿಯಲ್ಲಿ ಮಾಡಿದರೆ, ಈಶ್ವರ ಲಿಂಗಕ್ಕೆ ಅಭಿಷೇಕ ಮಾಡಿದರೆ, ಮದುವೆಯಾಗುತ್ತದೆ. ಯೋಗಕ್ಕೆ ಮದುವೆಯಾಗಿ ಹೊಯಿತು. ಸಾವಿರಾರು ಜನಕ್ಕೆ ಈಶ್ವರ ಲಿಂಗಕ್ಕೆ ಅಭಿಷೇಕ ಮಾಡಿಸುವಂತಹ ಅರ್ಚಗರಿಗೆಯೇ, ಅವರ ಮಗಳಿಗೆ ಮದುವೆಯಾಗಿಲ್ಲ. ಈ ನಂಬಿಕೆಯನ್ನು ಒಪ್ಪುತ್ತೀರೋ, ಅದನ್ನು ನಂಬುತ್ತೀರೋ? ಇಲ್ಲಿ ನಾನು ಮತ್ತೆ ಹೇಳುವುದೇನೆಂದರೆ, ಸುನತ್ ಬಗ್ಗೆ ನನ್ನ ವಿರುದ್ಧವಿಲ್ಲ. ಅದು ನಿಮ್ಮ ನಂಬಿಕೆ, ಅಡ್ಡ ಬರುವುದಕ್ಕೆ ನಾನು ಯಾರು? ಇಲ್ಲಿ ಕಾನೂನು ತರುವಂತಹ ಸಂದರ್ಭದಲ್ಲಿ, ನಾನು ಅದನ್ನೆ ಹೇಳುತ್ತೇನೆ. ಅದನ್ನು ಜಾರಿ ತರುವುದಕ್ಕೆ ಹೊರಡುತ್ತೀರಾ. ಇಲ್ಲಿ ಧರ್ಮ ಧರ್ಮಗಳಿಗೆ ಗೊಂದಲ ಶುರುವಾಗುತ್ತದೆ. ಯಾರು ಧರ್ಮದವರು ಕೇಳುತ್ತಾರೆ. ಅವರಿಗೆ ಮಾಡುತ್ತೀರಿ, ಇದಕ್ಕೆ ಏಕೆ ಮಾಡುತ್ತಿಲ್ಲ. ಇದಕ್ಕೆ ಏನು ಉತ್ತರ ಕೊಡುತ್ತೀರಿ? ನಾನು ಹೇಳುತ್ತೇನೆಂದರೆ, ಇದು impractical ಎಂದು ಹೇಳುತ್ತಿರುವುದು. ಅದಕ್ಕೊಸ್ಕರ practical ಆಗುವಂತಹ ಅಂಶಗಳ ಬಗ್ಗೆ, ಈ ವಿಧೇಯಕ ತಂದಿರುವ ಬಗ್ಗೆ ನಾವು ಸ್ವಾಗತ ಮಾಡಬೇಕೋ ಅಥವಾ ವಿರೋಧ ಮಾಡಬೇಕೋ. ನೀವು ಮೌಢ್ಯರೋ ಅಥವಾ ಈ ಸರ್ಕಾರವೇ ಮೌಢ್ಯರು ನನಗೆ ಅನುಮಾನ. ದೇವಸ್ಥಾನಗಳಿಗೆ ಹೋದರೆ ನಮ್ಮ ನಂಬಿಕೆ.

**ಶ್ರೀ ಟಿ.ಬಿ. ಜಯಚಂದ್ರ**:- ಮಾನ್ಯ ಸಭಾಪತಿಯವರೆ, Bill circulate ಮಾಡುವುದರಿಂದ, ದೇವಸ್ಥಾನಕ್ಕೆ ಹೋಗುವುದು, ದೇವರ ಅರಿಕೆ ಮಾಡಿಕೊಳ್ಳುವುದು. ಇದಕ್ಕೆ ಯಾವುದೇ ರೀತಿಯ ನಮ್ಮ ಬಾಧಕವಿಲ್ಲ. ಆದರೆ, ಇದನ್ನೆ ತಂತ್ರ ಮಾಡಿ ಹಣ ಮಾಡುವ ಜನರು ಇರುತ್ತಾರೆ ಅಲ್ಲಾ ಅವರಿಗೆ ಸ್ವಲ್ಪ ಕಡಿವಾಣ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ನಾನು ಅದೇ ವಿಚಾರವನ್ನು ಹೇಳುತ್ತಿರುವುದು. ಇಲ್ಲಿ ತಂತ್ರಿಗಾರಿಕೆ ಮಾಡುವಂತಹ ಸಂದರ್ಭದಲ್ಲಿ, ನಾನೇ ಅವರ ಹತ್ತಿರ ಹೋಗುತ್ತೇನೆ. ನಾನು ಹೋಗಲಿಲ್ಲವೆಂದರೆ ಅವರು ನನ್ನನ್ನು ಕರೆಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಸಮಯಕ್ಕೆ ಬಂದರು ಬನ್ನಿ. ಮಾನ್ಯ ಮುಖ್ಯಮಂತ್ರಿಗಳಿಗೆ ಮುಂಚೆ ದೇವರ ಬಗ್ಗೆ ನಂಬಿಕೆ ಇರಲಿಲ್ಲ. ಆದರೆ ಇತ್ತೀಚೆಗೆ ನಂಬಿಕೆ ಬರುವುದಕ್ಕೆ ಶುರುವಾಗಿದೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:- ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ಯಾವಾಗಲೂ ತಪ್ಪು ಗ್ರಹಿಕೆ ಮತ್ತು ತಪ್ಪಾಗಿ ಅರ್ಥಮಾಡಿಕೊಳ್ಳುವುದು. ಅದನ್ನು ತಪ್ಪಾಗಿ ಅರ್ಥಮಾಡಿಕೊಂಡು ಕೂಡಲೇ react ಮಾಡುತ್ತಾರೆ. ಪಾಪ ಈ ತರಹ ಮಾಡಿಬಿಡುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ಪಾಪ ಏಕೆ?

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:- ಮಾನ್ಯ ಸಭಾಪತಿಯವರೆ, ಅವರು ಆಮೇಲೆ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ನಾನು ದೇವರನ್ನು ಯಾವತ್ತು ವಿರೋಧ ಮಾಡಲಿಲ್ಲ. ದೇವರಲ್ಲಿ ಒಂದು ಶಕ್ತಿಯಿದೆ ಎಂದು ನಾನು ಕೂಡ ಭಾವಿಸಿದ್ದೇನೆ. ಆದರೆ ದೇವಸ್ಥಾನದಲ್ಲಿ ದೇವರಿಲ್ಲ ಎಂದು ಅಂದುಕೊಂಡಿರುವುದಷ್ಟೆ. That is the difference between you and me. ನಮಗೂ ಮತ್ತು ಇವರಿಗೂ ಇರುವಂತಹ ವ್ಯತ್ಯಾಸ. ಗುಡಿಯಲ್ಲಿ ದೇವರು ಇಲ್ಲ. ಬಸವಣ್ಣನವರು ವಚನದಲ್ಲಿ ಏನು ಹೇಳಿದ್ದಾರೆ. 'ಉಳ್ಳವರು ದೇವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ, ನನ್ನ ಕಾಲೆ ಕಂಬ, ನನ್ನ ದೇಹವೇ ದೇಗುಲ, ನನ್ನ ಶಿರವೇ ಹೊನ್ನ ಕಳಶವಯ್ಯ. ಆದರೆ, ನಾನು ಅದರಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಎಲ್ಲಾ ದೇವಸ್ಥಾನದ ಕಡೆಗಳಲ್ಲಿ ನಾನು ನುಗ್ಗುವುದಕ್ಕೆ ಹೋಗುವುದಿಲ್ಲ.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ದೇವಸ್ಥಾನಗಳಿಗೆ ಹೋಗುತ್ತಿರಲ್ಲವೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:– ಮಾನ್ಯ ಸಭಾಪತಿಯವರೆ, ನಾನು ದೇವಸ್ಥಾನಗಳಿಗೆ ಹೋಗುತ್ತೇನೆ. ನಾನು ದೇವಸ್ಥಾನಗಳಿಗೆ ಹೋಗುವುದೇ ಇಲ್ಲ ಎಂದು ಹೇಳುವುದಿಲ್ಲ. ಒಂದು ಕಾಲದಲ್ಲಿ ಹೋಗುತ್ತಿರಲಿಲ್ಲ, ಅದು ನಿಜ. ನಾನು ಎಂ.ಎಲ್.ಎ. ಆದ ಮೇಲೆ ಹೋಗುತ್ತಿದ್ದೇನೆ. ನಾನು ಅದಕ್ಕಿಂತ ಮುಂಚೆ ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ನಾನು ಎಲ್ಲಿಯೂ ದೇವರು ಇಲ್ಲ ಎಂದು ಹೇಳಿಲ್ಲ. ನಾನು ನಾಸ್ತಿಕ ಅಲ್ಲ. ಆದರೆ ದೇವರು ಇದ್ದಾನೆ, ಆದರೆ ದೇವರು ಎಲ್ಲಾ ಕಡೆಗಳಲ್ಲಿ ಇದ್ದಾನೆ. ದೇವರು ನಮ್ಮಲ್ಲಿ ಮತ್ತು ನಿಮ್ಮಲ್ಲಿ, ಮಾನ್ಯ ಈಶ್ವರಪ್ಪನವರಲ್ಲಿಯೂ ಇದ್ದಾನೆ. 'ದೇವರು ಸರ್ವತ್ರಯಾಮಿ', 'ದೇವ ಒಬ್ಬ ನಾಮ ಹಲವು', ಆದರಿಂದ, ಎಲ್ಲಾ ಕಡೆಗಳಲ್ಲಿ ದೇವರು ಇದ್ದಾನೆ. 'ಆಚಾರವೇ ಸ್ವರ್ಗ, ಅನಾಚರವೇ ನರಕ, ಸತ್ಯವೇ ದೇವರು, ಮಿತ್ಯವೇ ನರಕ' ನಾವು ಇದನ್ನೆಲ್ಲಾ ತಿಳಿದುಕೊಂಡ ಮೇಲೆ, ಆ ದೇವರ ಬಗ್ಗೆ ಏಕೆ ಜಿಜ್ಞಾಸೆ. ದೇವರುಗಳಿಗೆ ಬೇಕಾದಷ್ಟು ಹೆಸರುಗಳಿವೆ. ಅಲ್ಲಲ್ಲೇ ಬೇರೆ ದೇವರುಗಳು ಇರುತ್ತವೆಯೇ? ಒಂದು ದೇವರು ಇರುವುದು. ಆ ದೇವರು ಜಗತ್ತಿನ ಒಂದು ಶಕ್ತಿ. ಅದೇ ಬೇರೆ, ನಾನು ಅದರಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. 'Nature is God', ಎಂಬುವುದನ್ನು ನಾವು ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ.

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:– ಮಾನ್ಯ ಸಭಾಪತಿಯವರೆ, ...

**ಉಪ ಸಭಾಪತಿಯವರು**:– ಮಾನ್ಯ ಪ್ರಾಣೇಶ್...

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:– ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಾಣೇಶ್‌ರವರೆ, ಶ್ರೀ ಬಸವಣ್ಣನವರ ವಚನಗಳನ್ನು ಅರ್ಥವಾಗುವುದಿಲ್ಲ ಕುಳಿತುಕೊಳ್ಳಿ. ಚಿಕ್ಕಮಗಳೂರಿನ ಕಡೆಯವರು.

**ಶ್ರೀ ಪ್ರಾಣೇಶ್ ಎಂ.ಕೆ.**:– ಮಾನ್ಯ ಸಭಾಪತಿಯವರೆ, ನಾವು ಆ ದೇವಸ್ಥಾನ, ಈ ದೇವಸ್ಥಾನದಲ್ಲಿ ದೇವರುಗಳು ಇದೆ ಎಂದು ಹೋಗುತ್ತೇವೆ. ಎಲ್ಲಾ ಕಡೆಗಳಲ್ಲಿ ಅವರಿಗೆ ನಂಬಿಕೆ ಇದೆ. ಇವರು ಅದಕ್ಕೆ ದೇವಸ್ಥಾನಕ್ಕೆ ಹೋಗುವುದಿಲ್ಲ.

**ಉಪ ಸಭಾಪತಿಯವರು**:– ಮಾನ್ಯ ಪ್ರಾಣೇಶ್‌ರವರೇ ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಮುಖ್ಯಮಂತ್ರಿಗಳು ...

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:– ಮಾನ್ಯ ಸಭಾಪತಿಯವರೆ, ದೇವರು ಎಲ್ಲಾ ಕಡೆಗಳಲ್ಲಿ ಇಲ್ಲ ಎಂದು ಹೇಳಿ.

ಶ್ರೀ ಪುಟ್ಟಣ್ಣ :–ಮಾನ್ಯ ಸಭಾಪತಿಯವರೆ, ಈಗ ಹೇಳಿದ್ದಾರೆ.

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ.**:– ಮಾನ್ಯ ಸಭಾಪತಿಯವರೆ, ...

**ಉಪ ಸಭಾಪತಿಯವರು**:– ಮಾನ್ಯ ಪ್ರಾಣೇಶ್‌ರವರೇ, ಮಾನ್ಯ ಸಚಿವರೇ

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ.**:– ಮಾನ್ಯ ಸಭಾಪತಿಯವರೆ, ...

(ಗೊಂದಲ)

**ಉಪ ಸಭಾಪತಿಯವರು**:– ಮಾನ್ಯ ಪ್ರಾಣೇಶ್‌ರವರೇ, ಮಾನ್ಯ ಸಚಿವರೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಒಂದು ನಿಮಿಷ...

**ಶ್ರೀ ಪ್ರಾಣೇಶ್ ಎಂ.ಕೆ.**:-:- ಮಾನ್ಯ ಸಭಾಪತಿಯವರೆ, ಯಾರು ದೇವರಲ್ಲಿ ದ್ವೇಷ ಮಾಡುತ್ತಾರೆ. ಅವರು ದೇವರನ್ನು ಕೂಡ ಪ್ರೀತಿ ಮಾಡುವುದಿಲ್ಲ ಮತ್ತು ಅವರು ದೇವರಿಗೂ ಕೂಡ ದ್ವೇಷ ಮಾಡುತ್ತಾನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಎಲ್ಲರಲ್ಲೂ ದೇವರು ಇದ್ದಾನೆಂದು ಹೇಳಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ,...

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೆ, ನಾವೂ ಸಹ ಅದನ್ನೆ ಅಂದುಕೊಂಡಿರುವುದು. ಎಲ್ಲಾರಲ್ಲೂ ದೇವರು ಇದ್ದರೆ, ಕೆಲವರು ಏಕೆ ಮಾಡುತ್ತಾರೆಂಬುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ ಎಲ್ಲರೂ ಅಲ್ಲ ಕೆಲವರು ಮಾತ್ರ ಹಾಗೇ ಮಾಡುವುದು.

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:-ಮಾನ್ಯ ಸಭಾಪತಿಯವರೆ, ದೇವರ ಹೆಸರಿನಲ್ಲಿ ಶೋಷಣೆ ಮಾಡಿವರೇ, ಈಗ ಮಾಡುವರು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ,...

**ಉಪ ಸಭಾಪತಿಯವರು**:- ಮಾನ್ಯ ಉಗ್ರಪ್ಪನವರೇ ಮಾತನಾಡಬೇಡಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನಾನು ಏನು ಹೇಳಿದ್ದೇನೆಂದರೆ, ದೇವಸ್ಥಾನದಲ್ಲಿ ದೇವರು ಮಾತ್ರ ನಾವು ನಂಬುತ್ತೇವೆಂದು, ಇಲ್ಲ. ಎಲ್ಲಾ ಕಡೆಗಳಲ್ಲಿ ದೇವರು ಇದ್ದಾನೆಂದು ಅವರು ಹೇಳಿದರು. ನಾವು ಗಾಳಿಗೆ ವಾಯು ದೇವರು, ನೀರಿಗೆ ಗಂಗಾ ಮಾತೆ, ಪಶು, ಪಕ್ಷಿ, ಪ್ರಾಣಿ ಮರಕ್ಕೂ ಕೂಡ ಪೂಜೆ ಮಾಡುವಂತಹ ಜನ. ಎಲ್ಲಾ ಕಡೆಗಳಲ್ಲಿ ದೇವರು ಇದ್ದಾನೆಂದು ನಾವು ಹೇಳುತ್ತೇವೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ)**:-ಮಾನ್ಯ ಸಭಾಪತಿಯವರೆ, ಅವರ ನಂಬಿಕೆ ಅಡ್ಡ ಬರುವುದಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ಮನುಕುಲಕ್ಕೆ ನಮ್ಮ ನಂಬಿಕೆಗಳು ದುಷ್ಪರಿಣಾಮ ಬೀರಬಾರದು. ನಮ್ಮ ನಂಬಿಕೆಗಳು ಮನುಕುಲಕ್ಕೆ ಧಕ್ಕೆಯಾಗದ ರೀತಿಯಲ್ಲಿರಬೇಕು. ಮನುಕುಲದ ಉದ್ಧಾರಕ್ಕೆ ಪೂರಕವಾಗಿರುವಂತಹ ನಂಬಿಕೆಗಳಾಗಿರಬೇಕು. ಮನುಕುಲ ಮನುಷ್ಯನ ವಿಕಾಸಕ್ಕೆ ಪೂರಕವಾಗಿರುವಂತಹದ್ದು ಇರಬಹುದು. ಅದರ ವೈಚಾರಿಕತೆಗೆ ಪೂರಕವಾದಂತಹ ನಂಬಿಕೆಗಳು ಇರಬಹುದು. ಅಂತಹ ನಂಬಿಕೆಗಳಿಗೆ ನಮ್ಮ ವಿರೋಧವೇ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ ಮಾತಿಗೆ ಶೇಕಡ 100 ಕ್ಕೆ 100 ರಷ್ಟು ನಾವು ಒಪ್ಪುತ್ತೇವೆ. ಇಲ್ಲಿ impractical ವಿಧೇಯಕವಾಗಿ ಬಿಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

(1177)22.11.2017/4.10, ಟಿಸಿಹೆಚ್/ಜಿಆರ್(ಕೆಎಸ್)

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು) (ಮುಂದು)**

ದೇವಸ್ಥಾನಕ್ಕೆ ಯಾರು ಯಾರನ್ನು ಕರೆಯಬೇಕು? ಮಾನ್ಯ ಮುಖ್ಯಮಂತ್ರಿಗಳು ಉಡುಪಿ ದೇವಸ್ಥಾನಕ್ಕೆ ಯಾರು ನನ್ನನ್ನು ಕರೆಯದಿಲ್ಲಾ ಎಂದರು. ದೇವಸ್ಥಾನ ಯಾರದಾದರು ಆಸ್ತಿಯೇ? ಕನಕದಾಸರನ್ನು ಯಾರು ಕರೆಯಲಿಲ್ಲ. ಒಂದು ನಿಮಿಷ. ಒಂದು ನಿಮಿಷ.. .

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)**:- ಮಾನ್ಯ ಸಭಾಪತಿಯವರೇ, ಜನರಿಗೆ wrong message ಹೋಗಬಾರದು. ನಾನು ಏನು ಹೇಳಿದೆನೆಂದರೆ, ನಿಮ್ಮನ್ನು ಇವತ್ತು ಉಡುಪಿ ಮಠಕ್ಕೆ ಕರಿದಿದ್ದಾರಾ ಎಂದು ಕೇಳಿದರು, ಅದಕ್ಕೆ ನನ್ನನ್ನು ಕರೆದಿಲ್ಲ ಎಂದು ಹೇಳಿದೆನು ಗೊತ್ತಾಯಿತೆ. ನಾನು ಶ್ರೀ ಕೃಷ್ಣನನ್ನು ಉಡುಪಿ ದೇವಸ್ಥಾನದಲ್ಲೇ ಹಿಂದೆ ಭೇಟಿ ಮಾಡಿ, ಹೋಗಿ ದರ್ಶನ ಮಾಡಿದ್ದೇನೆ. ಆದರೆ ಇವತ್ತು ಹೋಗುವುದಿಲ್ಲವೆಂದು ಹೇಳಿದೆನು. ನಾನು ಯಾವ ದೇವಸ್ಥಾನಕ್ಕೂ ಹೋಗುವುದಿಲ್ಲವೆಂದು ಹೇಳಿದೆ. ನಾನು ಹಂಪಿಗೆ ಹೋಗಿದ್ದೆನು, ಅಲ್ಲಿ ವಿರೂಪಾಕ್ಷಸ್ವಾಮಿ ದೇವಸ್ಥಾನ ಇದೆ, ಅದಕ್ಕಿಂತಲೂ ಮೊದಲು ಸುಮಾರು ಎರಡು ಮೂರು ಸಲ ಅಲ್ಲಿಗೆ ಹೋಗಿದ್ದೇನೆ. ಇವತ್ತು ಏಕೆ ಹೋಗಲಿಲ್ಲವೆಂದು ಹೇಳಿದರೆ, ಏನು ಅಲ್ಲಿಗೆ ಹೋದಾಗಲೆಲ್ಲಾ ನನ್ನ ಬಳಿಗೆ ನೀವು ಬರಬೇಕೆಂದು ದೇವರು ಕರೆಯುತ್ತಾನೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯುವರೇ, ಸರಿಯಾಗಿದೆ, ಅಲ್ಲಿಗೆ ನೀವು ಹೋದಾಗಲೆಲ್ಲಾ ಹೋಗಬೇಕೆಂದು ಇಲ್ಲ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ನಮಗೆ ಅಲ್ಲಿ ಅಗತ್ಯವಿದ್ದರೆ ಹೋಗುತ್ತೇವೆ. ಅಗತ್ಯ ಇಲ್ಲದಿದ್ದರೆ ಏಕೆ ಹೋಗೋಣ ಅಲ್ಲವೇ? ನೀವು ವಿರೂಪಾಕ್ಷ ದೇವಸ್ಥಾನಕ್ಕೆ ಏಕೆ ಹೋಗಲಿಲ್ಲ, ಉಡುಪಿ ಶ್ರೀ ಕೃಷ್ಣನ ದೇವಸ್ಥಾನಕ್ಕೆ ಏಕೆ ಹೋಗಲಿಲ್ಲವೆಂದರೆ, ನನಗೆ ಅಗತ್ಯವಿರಲಿಲ್ಲ ಅದಕ್ಕೆ ಅಲ್ಲಿಗೆ ಹೋಗಲಿಲ್ಲ. ಅಗತ್ಯವಿದ್ದರೆ ನಾನು ಹೋಗುತ್ತೇನೆ. ನನಗೆ ನೀವು ಅಲ್ಲಿ ಏಕೆ ಹೋಗಲಿಲ್ಲವೆಂದು ಕೇಳಿದರೆ ಹೇಗೆ? ಉಡುಪಿ ಶ್ರೀ ಕೃಷ್ಣನ ದೇವಸ್ಥಾನಕ್ಕೆ ನೀವು ಹೋಗಲೇಬೇಕು ಎಂದು ಹೇಳಿದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ**:-ನಾನು ಹೇಳುತ್ತಿರುವುದು ಅದು ಅಲ್ಲ. ಅದು ಅಲ್ಲ ಪ್ರಶ್ನೆ ಬಂದಿರುವುದು.

**ಶ್ರೀ ಸಿದ್ದರಾಮಯ್ಯ** – ಮಾನ್ಯ ಸಭಾಪತಿಯವರೇ, who are they to force me? ನೀವು ಇಂತಹ ದೇವಸ್ಥಾನಕ್ಕೆ ಹೋಗಬೇಕೆಂದು ಹೇಳಿದರೆ, ನಮಗೆ ಅಲ್ಲಿ ಯಾರು ಇದ್ದಾರೆ?

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಯಾರು ಇಲ್ಲ, ನೀವು ಹೇಳುವುದು ಖಂಡಿತ ಸರಿ ಇದೆ. ನೀವೇನು ಹೇಳಿದಿರಿ ಎಂದರೆ,..

**ಶ್ರೀ ಭಾನು ಪ್ರಕಾಶ್**:- ಮಾನ್ಯ ಸಭಾಪತಿಯವರೇ, force ಮಾಡಿ ಏನನ್ನೂ ಮಾಡುವಂತಿಲ್ಲ, ದೇವಸ್ಥಾನಕ್ಕೂ ಕಳುಹಿಸುವಂತಿಲ್ಲ ಎನ್ನುವುದು ಸಹ ಈ ವಿಧೇಯಕದಲ್ಲಿ ಇದೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಹೌದು ಮತ್ತೆ, ಅದನ್ನೇ ನಾನು ಹೇಳುತ್ತಿರುವುದು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತೇನೆ. ಇಲ್ಲಿ ಪ್ರಶ್ನೆ ಇದ್ದಿದ್ದು, ನೀವು ನಾಲ್ಕು-ನಾಲ್ಕು ಬಾರಿ ಉಡುಪಿ ಹೋಗಿದ್ದೀರಿ, ಅದು ತಪ್ಪು ಎಂದು ನಾನು ಹೇಳಲಿಲ್ಲ. ಆದರೆ ನನ್ನನ್ನು ಯಾರು ಕರೆದಿಲ್ಲವೆಂದು ಹೇಳಿದಿರಿ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಹೌದು, ಆಗಲೇ ನಾನು ಹೇಳಿದೆನಲ್ಲಾ ರೀ. ನನಗೆ ಮಾಧ್ಯಮದವರು ನಿರ್ದಿಷ್ಟವಾಗಿ ನಿಮ್ಮನ್ನು ಉಡುಪಿ ಮಠದವರು ಕರೆದಿದ್ದಾರಾ ಎಂದು ಕೇಳಿದರು. ಅದಕ್ಕೆ ನಾನು ಈ ಬಾರಿ ಕರೆದಿಲ್ಲ ಎಂದು ಹೇಳಿದೆನು. What is wrong in it?

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಶ್ರೀ ಪೇಜಾವರ ಶ್ರೀ ಸ್ವಾಮಿಗಳು ಈ ಹಿಂದೆ ಉಡುಪಿ ಮಠಕ್ಕೆ ಕರೆದಿದ್ದೆವು ಎಂದು ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಹೌದು, ಈ ಹಿಂದೆ ಉಡುಪಿ ಮಠಕ್ಕೆ ನನ್ನನ್ನು ಕರೆದಿದ್ದು ನಿಜ. ಆದರೆ ನಾನು ಅಲ್ಲಿಗೆ ಹೋಗಿಲ್ಲ. It is also a fact.

**ಶ್ರೀ ಕೆ.ಎಸ್.ಈಶ್ವರಪ್ಪ**:- ಸರಿಯಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ**:- ಮಾನ್ಯ ಸಭಾಪತಿಯವರೇ, ಅಲ್ಲಿ ನೀವು ಸಹ ಗೋಪುರ ಬಿದ್ದಾಗ ಅಲ್ಲಿಗೆ ಬಂದು ವಾಪಸ್ಸು ಬಂದುಬಿಟ್ಟರಲ್ಲಾ. ಕನಕ ಗೋಪುರ ಬಿದ್ದಂತಹ ಸಂದರ್ಭದಲ್ಲಿ ತಮ್ಮನ್ನು ಕರೆದರಲ್ಲಾ, ನೀವು ಅಲ್ಲಿಂದ ವಾಪಸ್ಸು ಓಡಿಬಂದರಲ್ಲಾ ಜ್ಞಾಪಿಸಿಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ದೇವರ ವಿಚಾರ ಬಂದಾಗ, ಆ ದೇವರೇ ಅಡ್ಡ ಬಂದರೂ ಕೂಡ ನಾನು ಓಡುವುದಿಲ್ಲ. ಇಲ್ಲಿ ಪ್ರಶ್ನೆ ಬಂದಿರುವುದು ಮಾನ್ಯ ಮುಖ್ಯಮಂತ್ರಿಗಳೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈ ವಿಧೇಯಕದಲ್ಲಿ practical ಅಂಶ ಇಲ್ಲವೆಂದು ಹೇಳಬಯಸುತ್ತೇನೆ. ಏಕೆಂದರೆ, ಅವರವರ ನಂಬಿಕೆಗಳು, ನಂಬಿಕೆ ಮತ್ತು ಮೂಢನಂಬಿಕೆ ಎರಡು ಬೇರೆ ಬೇರೆ. ಕೆಲವರಿಗೆ ಅದು ಮೂಢನಂಬಿಕೆ ಇರಬಹುದು, ಇನ್ನೂ ಕೆಲವರಿಗೆ ನಂಬಿಕೆ ಇರಬಹುದು. ನಮ್ಮ ಮನೆಯಲ್ಲಿ 'ಚುಟುಕೆ' ಯನ್ನು ಹಾಕುತ್ತಾರೆ. ಅದೇ ರೀತಿ ಇನ್ನೂ ಕೆಲವರು 'ಸುನ್ನತ್' ಮಾಡಿಕೊಳ್ಳುತ್ತಾರೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ನಂಬಿಕೆಗಳಲ್ಲಿ ಎರಡು-ಮೂರು ರೀತಿ ಇವೆ. ನಂಬಿಕೆ, ಮೂಢನಂಬಿಕೆ ಮತ್ತು ಅಪನಂಬಿಕೆ. ನಂಬಿಕೆಗಳು ಮನುಷ್ಯರ ಉದ್ಧಾರಕ್ಕೆ, ಮನುಷ್ಯರ ವಿಕಾಸಕ್ಕೆ, ಮನುಷ್ಯರ ಹಿತಕ್ಕಾಗಿ ಆಗುವುದಾದರೆ, ಆ ನಂಬಿಕೆಗಳು ಬೇಕು. ಮೂಢನಂಬಿಕೆಗಳು ಏನು ಮಾಡುತ್ತವೆಂದರೆ ಮನುಕುಲವನ್ನೇ ಶೋಷಣೆ ಮಾಡುವುದಕ್ಕೆ ಹೊರಟುಬಿಡುತ್ತವೆ. ಆ ನಂಬಿಕೆಗಳು ನಮಗೆ ಬೇಡ. ಇನ್ನು ಕೆಲವು ಅಪನಂಬಿಕೆಗಳು ಇರುತ್ತವೆ, ಮನುಷ್ಯ ಮನುಷ್ಯನನ್ನೇ ನಂಬದೇ ಇರುವಂಥದ್ದು ಇವುಗಳು ಬೇಡವೆಂದು ಹೇಳುವುದು ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ ಮಾನ್ಯ ಮುಖ್ಯಮಂತ್ರಿಗಳೇ, ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮುದ್ರಾಧಾರಣೆ ಈ ತರಹದ್ದೆಲ್ಲಾ ಇದೆ, ಸರಿಯೋ ತಪ್ಪೋ ಅವರವರ ನಂಬಿಕೆ. ಸುನ್ನತ್ ಚಾಟಿ ಹೊಡೆದುಕೊಂಡು ರಕ್ತ ತರಿಸಿಕೊಳ್ಳುವುದು ಅವರವರ ನಂಬಿಕೆ. ಸ್ವಲ್ಪ ತಡೆಯಿರಿ ಸರ್.

**ಉಪ ಸಭಾಪತಿಯವರು**:- ಮಾನ್ಯ ಸಚಿವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಸಂಸದೀಯ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರು)**:- ಮಾನ್ಯ ಸಭಾಪತಿಯವರೇ, ಇದನ್ನು ತಾವು ಓದಿ ಎಂದರೆ ಓದುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ತಾವು ಮಧ್ಯೆ ಮಾತನಾಡುವುದಕ್ಕೆ ಬರಬೇಡಿ. ನೀವು ಹೇಳಿದ್ದೀರಲ್ಲಾ, ಈಗ ನನ್ನ ಅಭಿಪ್ರಾಯ ಮತ್ತು ಟೀಕೆಗಳನ್ನು ದಯವಿಟ್ಟು ಪೂರ್ಣವಾಗಿ ಕೇಳಿ. ಈ ವಿಧೇಯಕ practical ಆಗಿ ಆಗಬೇಕೆಂಬುದು ನನ್ನ ಆಸೆ. ಅದು ಬಿಟ್ಟು ಬೇರೆ ಇನ್ನೇನೂ ಇಲ್ಲ.

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಈಗ ತಾವು ಇದರಲ್ಲಿ ಯಾವ್ಯಾವುದನ್ನು ಬಿಡಬೇಕೆಂದು ಹೇಳಿ, ನಾವು ಅದನ್ನು ನಾವು ಬಿಟ್ಟು ಕೊಡುತ್ತೇವೆ.

(ಗೊಂದಲ)

**ಶ್ರೀ ಸಿದ್ಧರಾಮಯ್ಯ**:- ಮಾನ್ಯ ಸಭಾಪತಿಯವರೇ, ಹೌದು ಬಿಡುತ್ತೇವೆ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ ಒಂದು ನಿಮಿಷ.

**ಉಪ ಸಭಾಪತಿಯವರು**:- ಶ್ರೀ ಪ್ರಾಣೇಶ್ ಎಂ.ಕೆ ಯವರೇ, ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಾಣೇಶ್ ಎಂ.ಕೆ**:- ಮಾನ್ಯ ಸಭಾಪತಿಯವರೇ, ಈಗ ಅವರು yield ಆಗಿದ್ದಾರೆ. ನಾವು ರಾಜಕಾರಣಿಗಳು ಪ್ರಥಮ ಹೆಜ್ಜೆಯನ್ನು ಇಡಬೇಕು. ಹಾಗಾಗಿ, ನಾವು ಪ್ರಥಮವಾಗಿ ರಾಹುಕಾಲ, ಗುಳಿಕಾಲ, ಅಮಾವಾಸ್ಯೆ ಮತ್ತು ಹುಣ್ಣಿಮೆ ಇವುಗಳನ್ನು ಬಿಡಬೇಕು. ಹಾಗಾದರೆ ಇಲ್ಲಿ ಇರುವಂತಹ ಸದಸ್ಯರು ಈ ಸಮಯದಲ್ಲಿ ಅಂದರೆ, ರಾಹುಕಾಲದಲ್ಲಿ nomination ಅನ್ನು ಹಾಕಲಿ ನೋಡೋಣ, ಮೂಢ ನಂಬಿಕೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಈ ಮೂಢನಂಬಿಕೆಯ ಬಗ್ಗೆ ಇವರು ಹೇಳುವುದು (ಗೊಂದಲ) ಅದನ್ನು, ಇದನ್ನು ಎಂದು ಹೇಳುತ್ತಿದ್ದಾರೆ. ನೀವು ಅಲ್ಲಿಂದ ಪ್ರಾರಂಭ ಮಾಡಿ, ಅದನ್ನು ಏಕೆ ಸೇರಿಸಿಲ್ಲ. ಅದನ್ನೂ ಸೇರಿಸಿ, ನೀವು ಅದನ್ನು ಬಿಟ್ಟು ಯಾವುದೋ ಒಂದು ವಿಚಾರವನ್ನು ಇಟ್ಟುಕೊಂಡು ಮಾತನಾಡುತ್ತಿದ್ದೀರಲ್ಲಾ, ಬನ್ನಿ ರಾಹುಕಾಲದಲ್ಲಿ nomination ನ್ನು ಹಾಕಿ ನೋಡೋಣ. ನೀವು ಅದನ್ನು ಹೇಳಿ, ನೀವು ಅದನ್ನು ಬಿಡಬೇಡಿ. ..ನಿಮಗಿಲ್ಲವೇ ಮೂಢನಂಬಿಕೆ.. .

(ಗೊಂದಲ)

**ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ಸಮಯ ಕೇಳಲಿ.

(ಗೊಂದಲ)

**ಶ್ರೀ ವಿ.ಎಸ್.ಈಶ್ವರಪ್ಪ**:- ನಾನು ಒಂದು ಸಲ ಹೇಳಿ ಕೊಟ್ಟ ಮಾತನ್ನು ಸುಮ್ಮನೆ ಇದನ್ನೇ ಎಳೆದುಕೊಂಡು ಹೋಗುವುದು ಸರಿಯಲ್ಲ,

**ಉಪ ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ 45 ನಿಮಿಷ ಆಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಅದರಲ್ಲಿ ನನ್ನದು 2 ನಿಮಿಷ ಸೇರಿದೆಯೇ?

**ಉಪ ಸಭಾಪತಿಯವರು**:- ಇಲ್ಲ, ಇಲ್ಲ, ಈ ವಿಷಯ ಚರ್ಚೆ ಪ್ರಾರಂಭವಾಗಿ 45 ನಿಮಿಷ ಆಯಿತು. ದಯಮಾಡಿ ತಾವು ಆ ವಿಧೇಯಕದ ಬಗ್ಗೆ ಏನು ಸಲಹೆ ಕೊಡುತ್ತೀರೋ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆಯಿತು.

**ಉಪ ಸಭಾಪತಿಯವರು:-** ಈಗ ತಾವು ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದೀರಿ, ತಾವು ನಿಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿ. ಬೇರೆ ಸದಸ್ಯರು ಕೂಡ ಮಾತನಾಡಲು ಅವಕಾಶ ಕೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಈ ಸದನಕ್ಕೆ ಬರುತ್ತಾರೋ, ಆಗ 40 ನಿಮಿಷಗಳನ್ನು ತಿಂದೇಬಿಟ್ಟರು. ನೀವು ಬಂದಾಗಲೆಲ್ಲಾ ಸಮಯ ತಿಂದುಬಿಡುತ್ತೀರಿ. . .

**ಉಪ ಸಭಾಪತಿಯವರು:-** ವಿರೋಧಪಕ್ಷದ ನಾಯಕರೇ ಇಲ್ಲಿ ನೋಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರಿಗೆ ನಾನು ಈ ಸದನಕ್ಕೆ ಬರುವುದೇ ಇಷ್ಟವಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನೋಡಿ, ನೋಡಿ, ನೀವು ಈ ಸದನಕ್ಕೆ ಬರಬೇಕು, ಚರ್ಚೆ ಮಾಡಬೇಕು ಆಗಲೇ ನಮಗೆ ಖುಷಿ.

**ಶ್ರೀ ಸಿದ್ದರಾಮಯ್ಯ:-** ಹೌದೇ ಮಾನ್ಯ ಈಶ್ವರಪ್ಪನವರೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಖಂಡಿತ ಹೌದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮತ್ತೆ ಇದ್ಯಾಕೆ ರಾಗ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧಪಕ್ಷದ ನಾಯಕರು)** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳೇ ತಾವು ದಯವಿಟ್ಟು immediate ಆಗಿ ಉಡುಪಿ ಮಠಕ್ಕೆ ಹೋಗಿ ಬಂದುಬಿಡಿ. ಮಾನ್ಯ ಸಭಾಪತಿಯವರೇ, ನಾನು ದೀರ್ಘವಾಗಿ ಮಾತನಾಡಿಕೊಂಡು ಹೋಗುವುದಿಲ್ಲ. ಇಲ್ಲಿ ಪ್ರಶ್ನೆ ಇರುವುದು ಮೂಢನಂಬಿಕೆ ಮತ್ತು ನಂಬಿಕೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಅಪನಂಬಿಕೆ. ಈ ಮೂರು ಬೇರೆ ಬೇರೆ. ಮೂಢನಂಬಿಕೆಗಳನ್ನು ತೆಗೆಯಬೇಕು. ಇದರಲ್ಲೇನು ನನ್ನದು ಭಿನ್ನಾಭಿಪ್ರಾಯ ಇಲ್ಲ. ಆದರೆ, ನೀವು ಹೇಳಿರುವುದು ಒಬ್ಬೊಬ್ಬರಿಗೆ ಒಂದೊಂದು ಇದೆ. ನಿಮಗೆ ಮೂಢನಂಬಿಕೆ, ನಮಗೆ ನಂಬಿಕೆ, ಹಾಗಾಗಿ, ಈ ವಿಧೇಯಕವನ್ನು ತರುವುದಕ್ಕಿಂತ ಮುಂಚೆ ಯಾರೋ ಒಂದಷ್ಟು ಜಡ್ಜ್‌ಗಳು ಹೇಳಿದ್ದಾರೆ, ಅವರೆಲ್ಲರೂ ಸಹ ಬಹಳ ವಿದ್ಯಾವಂತರು. ಅವರ ನಡವಳಿಕೆಗಳಾದ ಈಶ್ವರ ಲಿಂಗದ ಅಭಿಷೇಕದ ಬಗ್ಗೆ ನಾನು ಹೇಳಿದೆನು. ಅದು ಅವರವರ ನಂಬಿಕೆ. ಹೋಗುವವರ ನಂಬಿಕೆ, ಆಚರಣೆ ಮಾಡುವವರು ಯಾರು ಮಾಡಿಸುತ್ತಿದ್ದಾರೆ, ಅದು ಅವರವರ ನಂಬಿಕೆ. ಅದಕ್ಕಾಗಿ ಹೇಳುತ್ತಿರುವುದು ಈ ರೀತಿ ವಿಧೇಯಕಗಳನ್ನು ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಸಮಾಜದ ಪ್ರಮುಖರನ್ನು ಅಂದರೆ, ಸ್ವಾಮೀಜಿಗಳು, ಮುಲ್ಲಾಗಳು ಮತ್ತು ಫಾದರ್ ಇವರುಗಳನ್ನು ಕರೆದು ಇಂತಿಂತಹ ವ್ಯವಸ್ಥೆಗಳು ಆಗುತ್ತಿದೆ, ಇದರಿಂದ ಇಂತಹ ವಿಧೇಯಕಕ್ಕೆ ತೊಂದರೆ ಆಗುತ್ತಿದೆ. ಹಾಗಾಗಿ, ಇದನ್ನು ನಾವು ಬೇಡವೆಂದು ಅಂದುಕೊಂಡಿದ್ದೇವೆ. ಇದನ್ನು ಜಾಗೃತಿ ಮಾತ್ರ ಮಾಡುತ್ತಿದ್ದೇವೆ. ಇಂತಹದ್ದನ್ನು ಟಿಚಿಟ ಮಾಡುತ್ತಿದ್ದೇವೆಂದು ಹೇಳಿ ವಿಧೇಯಕವನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಆ ರೀತಿಯೇ ನಾವು ವಿಧೇಯಕವನ್ನು ತಂದಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರನ್ನೆಲ್ಲಾ ತಾವು consult ಮಾಡಬೇಕಿತ್ತು ಎಂದು ಹೇಳಿದೆನು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು consultation ಮಾಡಿದ್ದೇವೆ. ಅವರು ನಮ್ಮ ಹತ್ತಿರ ಬಂದು ಮನವಿಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವುದನ್ನು Law Commission ಗೂ ಸಹ ಕೊಟ್ಟಿದ್ದೇವೆ. ನಾವು ಎಲ್ಲಾ ಕಡೆಗಳಲ್ಲಿ verify ಮಾಡಿ, ಸುಮಾರು ಮೂರು ವರ್ಷಗಳಾದ ನಂತರ ಈ ವಿಧೇಯಕವನ್ನು ತಂದಿರತಕ್ಕಂಥದ್ದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಹೇಳುತ್ತಿರುವುದು, ನೀವು ಚರ್ಚೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ನಾನು ಅದಕ್ಕೆ ಹೇಳದೇನೆಲ್ಲಾ, ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಸಮಾಜಗಳಲ್ಲಿ ಅವರವರ ಪ್ರಮುಖರನ್ನು. . .

**ಉಪ ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಇಂತಿಂತಹದ್ದನ್ನು ಬಿಡಬೇಕು ಎಂದು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, No, ನಾನು ಹೇಳುತ್ತಿರುವುದು ಇಂತಿಂತದ್ದು ಬಿಡಬೇಕು, ಬಿಡಬಾರದು ಎನ್ನುವುದಲ್ಲ.

**ಉಪ ಸಭಾಪತಿಯವರು:-** ಮತ್ತೆ ಸುಮ್ಮನೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದು ಅವರವರ ನಂಬಿಕೆ ಅಷ್ಟೆ, ಇದನ್ನು ಜಾರಿಗೆ ತರಬೇಕೆನ್ನುವುದು ನನ್ನ ಆಸೆ. (ಗೊಂದಲ) ಓಂ ಓಂ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಾನು ಸ್ವಾಗತ ಮಾಡುವುದಿಲ್ಲವೆಂದು ಹೇಳಲಿಲ್ಲ. ಆದರೆ, ಇದು practical ಆಗಿ ಆಗುವಂತೆ ಆಗಬೇಕು.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನು ಇದೆ ಎಂದು ನೋಡಿದರೆ ತಾನೆ, ನಾವು ಏನು ಬಿಡಬೇಕು, ಬಿಡಬಾರದು ಎಂಬುದು ಗೊತ್ತಾಗುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆಯಾಯ ಸಂಬಂಧಪಟ್ಟ ಹಿಂದೂ ಸಮಾಜದ ಸ್ವಾಮಿಗಳು, ಮುಸ್ಲಿಂ ಸಮಾಜದ ಮುಲ್ಲಾಗಳು, ಕ್ರಿಶ್ಚಿಯನ್ ಸಮಾಜದ ಫಾದರ್‌ಗಳು ಅವರನ್ನು ಕರೆದು, ನಿಮ್ಮಲ್ಲಿ ಇಂತಿಂತಹ ಅವ್ಯವಸ್ಥೆಗಳಿವೆ, ಈಗ ಉದಾಹರಣೆಗೆ ಬೆನ್ನಿಗೆ ಕೊಕ್ಕೆ ಹಾಕಿಕೊಂಡು 'ಹರೋಹರ' ಎಂದು ಹೋಗುತ್ತಿರುತ್ತಾರೆ. ಆ ಸಮಾಜದ ಪ್ರಮುಖರನ್ನು ಕರೆದು, convince ಮಾಡಿ ಮಾತನಾಡಿದರೆ ಎಷ್ಟು ಚೆನ್ನಾಗಿರುತ್ತಿತ್ತು. ಅದೇ ರೀತಿ 'ಮುದ್ರೆ ' ಹಾಕಿಸುವುದು ಇದೆ, ಇದು ಸರಿ ಅಥವಾ ತಪ್ಪು ಎಂದು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಅದು ಅವರವರ ನಂಬಿಕೆ. ಅವರವರ ಮಠಾಧೀಶರನ್ನು ಕರೆದು ಈ ರೀತಿ ಮಾಡುತ್ತಿದ್ದೇವೆ, ಅವರ ಬೇಕು ಬೇಡಗಳ ಬಗ್ಗೆ, ಮುಸ್ಲಿಂ ಸಮಾಜದಲ್ಲಿ 'ಸುನ್ನತ್' ಇರಬಹುದು, 'ಚಾಟಿ ಹೊಡೆದುಕೊಳ್ಳುವುದು' ಇರಬಹುದು, ಇದು ಒಳ್ಳೆಯದಲ್ಲ, ಆ ಸಮುದಾಯದ ಪ್ರಮುಖರನ್ನು ಕರೆದು ಈ ರೀತಿ ಮಾಡುತ್ತಿದ್ದೇವೆಂದು convince ಮಾಡಿದ್ದಿದ್ದರೆ, ಚೆನ್ನಾಗಿ ಇರುತ್ತಿತ್ತು ಎನ್ನುವುದು ನನ್ನ ಸಲಹೆ. ಸ್ವಲ್ಪ ತಡೆಯಪ್ಪಾ ಮುಗಿಯಿತು. ನಾನು ಮಾತನಾಡಿ ಮುಗಿಸಲೋ ಬೇಡವೋ? (ಗೊಂದಲ) ನಾನು ಮಾತನಾಡಿ ಮುಗಿಸುವುದಕ್ಕೆ ಬಿಡುತ್ತಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಇದು impractical ಹಾಗಾಗಿ, ಇದನ್ನು ಚರ್ಚೆ ಮಾಡಿ, ಆಮೇಲೆ ಈ ವಿಧೇಯಕವನ್ನು ಜಾರಿಗೆ ತಂದಿದ್ದರೆ ಚೆನ್ನಾಗಿರುತ್ತಿತ್ತು. ಇದನ್ನು ನಾನು ಖಂಡಿತವಾಗಿ ಸ್ವಾಗತ ಮಾಡುವುದಿಲ್ಲ. ಚರ್ಚೆ ಮಾಡಿ ಈ ವಿಧೇಯಕವನ್ನು ಜಾರಿಗೆ ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಅಭಿಪ್ರಾಯ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎ.ಮಂಜು (ಪಶುಪಾಲನೆ ಮತ್ತು ಪಶುವೈದ್ಯಕೀಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಇದನ್ನು ಸ್ವಾಗತ ಮಾಡುತ್ತೇನೆಂದು ಹೇಳಿದ್ರಲ್ಲಾ ಸರ್. ಈಗಾಗಲೇ ನಾನು ಸ್ವಾಗತ ಮಾಡುವುದಿಲ್ಲವೆಂದು ಹೇಳುತ್ತಿದ್ದೀರಿ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಧ್ಯೆ ದಯವಿಟ್ಟು ಮಾತನಾಡುವುದು ಬೇಡ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ. . .

**ಉಪ ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರವರೇ, ಏಕೆಂದರೆ, ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಬೇಕು. ಇನ್ನೂ ಮಾತನಾಡಲು ಬಹಳ ಮಂದಿ ಸದಸ್ಯರು ಇದ್ದಾರೆ. ಆದ್ದರಿಂದ ತಾವು ನೇರವಾಗಿ ಈ ವಿಧೇಯದ ಬಗ್ಗೆ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಯಾವತ್ತು ಲಂಬಿಸಿ ಮಾತನಾಡುವುದಿಲ್ಲ. ಅದರ ಬಗ್ಗೆ ಎಷ್ಟು ಬೇಕೋ ಅಷ್ಟು ಮಾತ್ರ ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ 2017 ನ್ನು ಜಾರಿಗೆ ತರುತ್ತಿರುವುದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಈ ನಾಡಿನ ವೈಚಾರಿಕ ಹಿನ್ನೆಲೆಯಲ್ಲಿ ಹಾಗೂ ಮಾನವೀಯ ಹಿನ್ನೆಲೆಯಲ್ಲಿ, ನಮ್ಮ ಆಚರಣೆಗೆ ನನ್ನ ವಿರೋಧವಿಲ್ಲ, ನಂಬಿಕೆಗೆ ನನ್ನ ವಿರೋಧವಿಲ್ಲ, ಆದರೆ ಕಂದಾಚಾರಕ್ಕೆ ನನ್ನ ವಿರೋಧವಿದೆ. ಮೂಢನಂಬಿಕೆಗೆ ನನ್ನ ವಿರೋಧವಿದೆ. ಇವತ್ತಿನ ದಿವಸ ಒಂದು ಕಾಲಕ್ಕೆ 'ಸತಿ ಸಹಗಮನ ಪದ್ಧತಿ' ಆಚರಣೆಯಲ್ಲಿತ್ತು. ಬಾಲ್ಯ 'ವಿವಾಹ ಪದ್ಧತಿ' ಆಚರಣೆಯಲ್ಲಿತ್ತು. ಸಾಮಾಜಿಕ ಸುಧಾರಣೆಯ ಹಿನ್ನೆಲೆಯಲ್ಲಿ, ಗಂಡ ಸತ್ತರೆ ಹೆಂಡತಿ ಸಾಯಬೇಕು ಎನ್ನುವಂತಹ ಆಚರಣೆ ಸರಿಯೇ? ನಾವು ಅದನ್ನು ತಪ್ಪಿಸಲಿಲ್ಲವೇ? ಅದಕ್ಕೆ ಕಾಯ್ದೆಯನ್ನು ಜಾರಿಗೆ ತರಲಿಲ್ಲವೇ?

**(ಮುಂದು...)**

**(1178)/22.11.2017/4.20/ಎಂ.ಎಂ/ಜಿ.ಆರ್**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು. .)**

ಬಾಲ್ಯ ವಿವಾಹ ಪದ್ಧತಿ ಬೇಡವೆಂದು ಅದನ್ನು ಹತ್ತಿಕ್ಕಿಲ್ಲವೇ? ಎಷ್ಟು ಜನ ಮುಗ್ಧ ಮಕ್ಕಳನ್ನು ಬಲಿ ಕೊಡುತ್ತಿದ್ದೆವು? ನಾವು ಅವರ ಅಭಿಪ್ರಾಯಗಳಿಗೆ ಬೆಲೆಯನ್ನೆಲ್ಲಿ ಕೊಡುತ್ತಿದ್ದೆವು? ಈ ದಿಸೆಯಲ್ಲಿ ಇವತ್ತು ಈ ರಾಜ್ಯದಲ್ಲಿ ಒಂದು ದೊಡ್ಡ ವೈಜ್ಞಾನಿಕ ಮತ್ತು ವೈಚಾರಿಕ ಆಂದೋಲನವು ಆರಂಭವಾಯಿತು. ಅಬ್ರಹಾಂ ಥಾಮಸ್ ಕೋವೂರ್ ಮತ್ತು ಡಾ: ಹೆಚ್. ನರಸಿಂಹಯ್ಯನವರ ನೇತೃತ್ವದಲ್ಲಿ ಇಡೀ ರಾಜ್ಯಾದ್ಯಂತ ಒಂದು ವೈಚಾರಿಕ ಮತ್ತು ವೈಜ್ಞಾನಿಕ ಜಾಗೃತಿಯನ್ನು ಮೂಡಿಸುವಂತಹ ಒಂದು ದೊಡ್ಡ ಆಂದೋಲನ ಈ ರಾಜ್ಯದಲ್ಲಿ ಆಯಿತು. ಈ ಮಸೂದೆಯನ್ನು ನಾನೇಕೆ ಸ್ವಾಗತಿಸುತ್ತೇನೆಂದರೆ, ಇವತ್ತು ಆಚರಣೆಗಳ ಹೆಸರಿನಲ್ಲಿ, ಕಂದಾಚಾರಗಳ ಹೆಸರಿನಲ್ಲಿ ಅಮಾನವೀಯ ಕೃತ್ಯಗಳು ನಡೆಯುತ್ತಿವೆ. ಈಗ 'ನಿಧಿ'ಯ ವಿಚಾರದಲ್ಲಿ ಎಷ್ಟು ಮಕ್ಕಳನ್ನು ಬಲಿ ಕೊಟ್ಟಿಲ್ಲ? ವಿಶೇಷವಾಗಿ ಎಷ್ಟು ಮುಗ್ಧ ಹೆಣ್ಣು ಮಕ್ಕಳನ್ನು ಬಲಿ ಕೊಟ್ಟಿಲ್ಲ? ಮಕ್ಕಳನ್ನು ಬಲಿ ಕೊಟ್ಟು ನಿಧಿಯನ್ನು ಪತ್ತೆ ಹಚ್ಚುವಂತಹ ಕೆಲಸ ಮಾಡುತ್ತಿದ್ದಾರೆ. 'ನಿಧಿ' ಅಥವಾ ಹಣ ಎಂದರೆ it's a medium of exchange ಅಷ್ಟೇ. ನಮ್ಮ ವಿನಿಮಯಕ್ಕಾಗಿ ಮುದ್ರಣ ಮಾಡಿಕೊಂಡಿರುವ ಹಣಕ್ಕೆ ನಮ್ಮ ಮಾನವೀಯ ಮೌಲ್ಯವನ್ನು ಮರೆತು ಮಕ್ಕಳನ್ನು ಬಲಿ ಕೊಡುವಂತಹ ಪದ್ಧತಿಯನ್ನು ಇನ್ನೂ ಜೀವಂತವಾಗಿ ಇಟ್ಟುಕೊಳ್ಳಬೇಕೇ? ಇದನ್ನು ಯಾರಾದರೂ ಒಪ್ಪುವುದಕ್ಕೆ ಸಾಧ್ಯವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮಲ್ಲಿ 'ದೆವ್ವ' ಮತ್ತು 'ದೇವರು' ಬಗ್ಗೆ ಬಹಳ ಮಾತನಾಡುತ್ತೇವೆ. ದೆವ್ವದ ಬಗ್ಗೆ ಹೇಳುವುದಾದರೆ ಅದು ಮಾನಸಿಕ ದೌರ್ಬಲ್ಯದ ಪ್ರತೀಕ. ಇದರ ಬಗ್ಗೆ ವೈದ್ಯರುಗಳನ್ನು ಕೇಳಿದರೆ, ಡಾ: ಚಂದ್ರಶೇಖರ್ ಎಂಬ ಮನೋತಜ್ಞರು ದೇವರು ಏಕೆ ಬರುತ್ತಾನೆ, ದೆವ್ವ ಏಕೆ ಬರುತ್ತದೆ ಎಂಬುದಕ್ಕೆ ಸಾಕಷ್ಟು ಪುಸ್ತಕಗಳನ್ನು ಘಟನಾವಳಿಗಳನ್ನು ದಾಖಲು ಮಾಡಿ ಬರೆದಿದ್ದಾರೆ. ದೆವ್ವ ಬಂದಾಗ ಹಾಕಿಕೊಂಡಿರುವ ಚಪ್ಪಲಿಯನ್ನು ತೊಳೆದು ಅದರ ನೀರನ್ನು ಕುಡಿಸಿದರೆ ಆ ಮನುಷ್ಯನಿಗೆ ದೆವ್ವ ಹೋದ ನಂತರ ಏನಾಗಬೇಕು? ಚಪ್ಪಲಿಯನ್ನು ತೆಗೆದುಕೊಂಡು ಹೊಡೆದು ದೆವ್ವ ಬಿಡಿಸುತ್ತೇನೆಂದರೆ, ಅದರ ಅರ್ಥವೇನು? ಮನುಷ್ಯನ ಮೇಲೆ ದೆವ್ವ ಬರುವುದಕ್ಕೆ, ದೇವರು ಬರುವುದಕ್ಕೆ ಸಾಧ್ಯವೇ? ಒಂದು ಸಲ ನಮ್ಮ ಊರಿನಲ್ಲಿ ಒಬ್ಬ ವಯಸ್ಸಾದ ಮುದುಕನಿಗೆ ದೇವರು ಬಂದಿತ್ತು. ಆಗ ಅದನ್ನು ನೋಡಲು ಮೈಸೂರಿನಲ್ಲಿ ಓದುತ್ತಿದ್ದ ನಮ್ಮ ಹುಡುಗರೆಲ್ಲಾ ಬಂದು ಬಿಟ್ಟರು. 'ಏನಪ್ಪ ಇದು ಯಾವ ದೇವರು' ಎಂದರು. ಅದು 'ಆಂಜನೇಯ' ಎಂದರು. ಅಲ್ಲಿದ್ದ ಒಬ್ಬನು 'ನೀನು ಆಂಜನೇಯನೇ ಆಗಿದ್ದರೆ ಇಲ್ಲಿರುವ ಮರವೊಂದನ್ನು ಹತ್ತು' ಎಂದನು. ಆಗ ಅವನು ಕೈ ತೋರಿಸುತ್ತಾ ಏಣಿ ಕೊಡಿ ಎಂದನು. ಏಣಿಯಿಂದ ಹತ್ತುವುದಾದರೆ ನೀನು ಯಾವ ಆಂಜನೇಯ ಎಂದು 'ಛಬ್ಬೆ'ಯೊಂದನ್ನು ತೆಗೆದುಕೊಂಡು ನಿಂತುಕೊಂಡನು. ಆಗ ದೇವರು ಹೊರಟು ಹೋಯಿತು. ನಮ್ಮ ಊರಿಗೆ ಇನ್ನೊಬ್ಬ ಹೊಸದಾಗಿ ತಾನು ಪೂಜಾರಿ ಎಂದು ಹೇಳಿಕೊಂಡು ಬಂದನು. ಅವನು ಏನು ಮಾಡಿದನೆಂದರೆ, ಯಾರೋ ಒಬ್ಬ ಹಾವಾಡಿಗನನ್ನು ಬುಕ್ ಮಾಡಿಕೊಂಡು ಬಿಟ್ಟು ದೇವಸ್ಥಾನದೊಳಗೆ ಹಾವೊಂದನ್ನು ಬಿಟ್ಟು ಬಿಟ್ಟನು. ಆಗ ದೇವಸ್ಥಾನದಲ್ಲಿ ಹಾವು ಪ್ರತ್ಯಕ್ಷವಾಗಿದೆಯೆಂದು ಊರಲ್ಲೆಲ್ಲಾ ಸುದ್ದಿ ಹಬ್ಬಿತು. ಜನರು ಕ್ಯೂ ನಿಂತಿದ್ದೇ ನಿಂತಿದ್ದು, ಇದು ನಮ್ಮ ಊರಿನ ಸಂತೇಮಾಳದ ಕೊಳದ ಹತ್ತಿರ ನಡೆದದ್ದು. ಹೆಂಗಸರು ಮತ್ತು ಮಕ್ಕಳೆಲ್ಲಾ 2-3 ತಿಂಗಳಲ್ಲಿ ಆ ದೇವಸ್ಥಾನದಲ್ಲಿರುವ ದೇವರಿಗೆ ಒಡವೆಗಳನ್ನು ತಂದು ಶೃಂಗಾರವನ್ನು ಮಾಡಿದ್ದೇ ಮಾಡಿದ್ದು. ಮಾರನೆಯ ದಿವಸ ಅವನು ಇಡೀ ಒಡವೆಗಳನ್ನೆಲ್ಲಾ ಹೊತ್ತುಕೊಂಡು ಹೋದನು. ಆಗ ಎಲ್ಲರೂ ಪೋಲೀಸ್ ಸ್ಟೇಷನ್‌ಗೆ ಬಂದು ಕಂಪ್ಲೇಂಟ್ ಕೊಟ್ಟರು. ನಾನು ಹೇಳುವುದೇನೆಂದರೆ, ದೇವರ ಹೆಸರಿನಲ್ಲಿ ಶೋಷಣೆಯಾಗುತ್ತಿರುವುದು ನಿಲ್ಲಬೇಕು. ದೇವರ ಹೆಸರಿನಲ್ಲಿರುವ ಕಂದಾಚಾರಗಳು ನಿಲ್ಲಬೇಕು. ಈ ದಿಸೆಯಲ್ಲಿ ಈ ಕಾಯಿದೆಯನ್ನು ಅತ್ಯಂತ ಪ್ರೀತಿಯಿಂದ ಮಾನವೀಯ ಹಿನ್ನೆಲೆಯಲ್ಲಿ ಸ್ವಾಗತ ಮಾಡುತ್ತೇನೆ. ಇದರಲ್ಲಿ ಬಹಳ ಎಚ್ಚರಿಕೆ ಇದೆ. ಇದನ್ನು ತಾವೇನು ಧಿಡೀರನೆ ಏಕಾಏಕಿ ಜಾರಿಗೆ ತರುತ್ತಿಲ್ಲ. ಇದಕ್ಕೆ ಒಂದು ಹಂತದಲ್ಲಿ ವಿರೋಧ ಬಂದದ್ದು ನಿಜ. ಅದನ್ನು ನೀವು ಚರ್ಚೆಗೆ ಬಿಟ್ಟಿರಿ. ಆಗ ಮತ್ತೆ ಈ ನಾಡಿನ ವಿಚಾರವಾದಿಗಳು ಅದರ ಬಗ್ಗೆ ಚರ್ಚೆ ಮಾಡಿದರು. ಏಕೆ ನೀವು ಇಂತಹ ವೈಚಾರಿಕ ಮಸೂದೆಯನ್ನು ತರುವ ಪ್ರಯತ್ನಕ್ಕೆ ಹಿಂಜರಿದಿರಿ ಎನ್ನುವ ಪ್ರಶ್ನೆಯನ್ನು ಇಟ್ಟರು. ಇವತ್ತು ಇಡೀ ನಾಡಿನಾದ್ಯಂತ ವಿಪುಲವಾದ ಚರ್ಚೆ ಈ ಬಿಲ್‌ನ ಮೇಲೆ ನಡೆದಿದೆ. ಈ ಬಿಲ್ ಅನ್ನು ಬಹಳ ಎಚ್ಚರಿಕೆಯಿಂದ ತಂದಿದ್ದೀರಿ. ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಏಕೆಂದರೆ, ಯಾವುದೆಲ್ಲ ಇದರ ವ್ಯಾಪ್ತಿಗೆ ಒಳಪಡುವುದಿಲ್ಲ ಎನ್ನುವ ವಿಚಾರವನ್ನು ನೀವು ಅತ್ಯಂತ ಸ್ಪಷ್ಟವಾಗಿ ಹೇಳಿದ್ದೀರಿ;

"**ಉಳಿಸುವಿಕೆಗಳು.-** ಸಂದೇಹವನ್ನು ನಿವಾರಿಸುವುದಕ್ಕಾಗಿ, ಮುಂದಿನವುಗಳ ಸಂಬಂಧದಲ್ಲಿ ಈ ಅಧಿನಿಯಮದಲ್ಲಿರುವ ವಿಚಾರಗಳಿಗೆ ಅನ್ವಯವಾಗತಕ್ಕದ್ದಲ್ಲ. ಆಧ್ಯಾತ್ಮಿಕ ಸ್ಥಳಗಳಲ್ಲಿ ನಡೆಸುವ ಪ್ರದಕ್ಷಿಣೆ, ಯಾತ್ರೆ ಮತ್ತು ಪೂಜಾ ವಿಧಾನ, ಹರಿಕಥೆ, ಪ್ರವಚನ, ಪಾರಂಪರಿಕ ಕಲಿಕೆಗಳ ಪ್ರಚಾರ ಮತ್ತು ದೈವತ್ವದ ಆರಾಧನೆ, ದರ್ಗಾ, ಮನೆ, ದೇವಾಲಯ, ಗುರುದ್ವಾರ, ಪಗೋಡ, ಚರ್ಚ್ ಇಲ್ಲಿ ಮಾಡುವಂತಹ ಉಪಾಸನೆಗಳು, ಇಂತಹ ಧಾರ್ಮಿಕ ಸಂಪ್ರದಾಯಗಳು ಮತ್ತು ಸಂಭ್ರಮಾಚರಣೆಗಳಿಗೆ ಯಾವ ಅಡ್ಡಿಯೂ ಇಲ್ಲ. ಜೊತೆಗೆ ವಾಸ್ತುಶಾಸ್ತ್ರ"ವನ್ನೂ ಒಪ್ಪಿಕೊಂಡಿದ್ದೀರಿ. ಎಲ್ಲಾ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಒಪ್ಪಬೇಕಾದ ಎಲ್ಲಾ ಅವಕಾಶಗಳಿಗೂ ಅನುವು ಮಾಡಿಕೊಟ್ಟು ಮನುಷ್ಯನನ್ನು ಅಮಾನವೀಯವಾಗಿ, ಕ್ರೂರವಾಗಿ ನೋಡುವ;

**ಬಾಯಿಬೀಗ**ದ ಬಗ್ಗೆ ಹೇಳುವುದಾದರೆ, ನಾನು ಚಿಕ್ಕ ಮಗುವಾಗಿದ್ದಾಗ ನನ್ನ ಅಕ್ಕಂದಿರು ಮತ್ತು ತಾಯಂದಿರ ಜೊತೆಯಲ್ಲಿ ಹೋಗಿದ್ದಾಗ, ಬಾಯಿಬೀಗ ಹಾಕಿಸಿಕೊಳ್ಳುವವನಿಗೆ ಕಬ್ಬಿಣದ ಸಲಾಕೆಯನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಕಡೆಯಿಂದಲೂ ಆ ಕಡೆಯಿಂದಲೂ ತಿವಿಯುತ್ತಾರೆ. ಆಮೇಲೆ ಬಾಯಿಗೆ ಬೀಗವನ್ನು ಹಾಕುತ್ತಾನೆ. ಆ ಕಷ್ಟ ದೇವರಿಗೊಬ್ಬನಿಗೇ ಪ್ರೀತಿ. ನಮ್ಮ ಊರಿನ ಪಕ್ಕ ಹಲ್ಲೆಗೆರೆ ಎಂಬ ಊರಿದೆ. ಅಲ್ಲಿ 'ಸಿಡಿ' ಎಂಬ ಹಬ್ಬ ಮಾಡುತ್ತಾರೆ. ಸಿಡಿ ಎಂದರೆ, ಸುಮಾರು 120 ಅಡಿಯ ಅವನ ಬೆನ್ನಿನ ಹಿಂದಿರುವ ನರಕ್ಕೆ ಕೊಂಡಿ ಹಾಕುತ್ತಾರೆ. ಆಮೇಲೆ ಆ ಕೊಂಡಿ ಸೆಪ್ಟಿಕ್ ಆಗಿ ಒಬ್ಬ ಪೂಜಾರಿ ಸತ್ತೇ ಹೋದನು. ಈಗ 'ಸಿಡಿ' ಇಲ್ಲ ಅದು ನಿಂತು ಹೋಗಿದೆ, ಅವರೇ ನಿಲ್ಲಿಸಿ ಬಿಟ್ಟರು. ಯಾರು ನಿಯಮವನ್ನು ಮಾಡಲಿಲ್ಲ. ಯಾರೂ ಮುಂದೆ ಬರಲಿಲ್ಲ. ಕೊಂಡಿ ಹಾಕಿ ಅವನನ್ನೆತ್ತಿ ಹಾವಾಡಿಸಿದ ಹಾಗೆ ಮೇಲೆ ಆಡಿಸಿದರೆ ಆ ಮನುಷ್ಯ ಏನಾಗಬೇಕು? ಆಚರಣೆಗಳಿರಲಿ ಆದರೆ ಕಂದಾಚಾರಗಳು ಬೇಡ. ನಂಬಿಕೆ ಇರಲಿ ಮೂಢನಂಬಿಕೆಗಳು ಬೇಡ ಈ ಹಿನ್ನೆಲೆಯಲ್ಲಿ ಈ ಬಿಲ್ ಬಂದಿದೆ. ಎಲ್ಲಾ ದೃಷ್ಟಿಯಲ್ಲಿ ಹತ್ತಾರು ಕಾರಣಗಳ ಹಿನ್ನೆಲೆಯಲ್ಲಿ ಇವತ್ತು ಸಂವಿಧಾನದ 51(ಹೆಚ್) ವಿಧಿ ಹೇಳುವುದೇನೆಂದರೆ, ಮೌಢ್ಯವನ್ನು ಹೋಗಲಾಡಿಸುವುದು, ವೈಜ್ಞಾನಿಕ ಮನೋಭಾವನೆಯನ್ನು ಬಿತ್ತುವಂತಹದ್ದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಹಾಗಾಗಿ ಇವತ್ತು ಮನುಷ್ಯನನ್ನು, ಮಕ್ಕಳನ್ನು ಬಲಿಕೊಡುವಂತಹ ಪರಂಪರೆಯನ್ನು ಹತ್ತಿಕ್ಕುವಂತಹ ಬಾಯಿಬೀಗದಂತಹ ದೈಹಿಕ ಹಿಂಸೆಯನ್ನು ತಪ್ಪಿಸುವಂತಹ ಕೆಲಸ ಮಾಡಬೇಕಾಗಿದೆ.

<u>**ಬೆತ್ತಲೆ ಸೇವೆ**</u>ಯ ಬಗ್ಗೆ ಹೇಳುವುದಾದರೆ, ಇದು ಎಲ್ಲಾದರೂ ಉಂಟೇ? ಈ ಭೂಮಿಯ ಮೇಲೆ ಬೆತ್ತಲೆ ಸೇವೆಯು ಒಂದು ಆಚರಣೆ ಎನ್ನುವುದಾದರೆ, ಅದನ್ನು ನಾವು ಹೇಗೆ ಒಪ್ಪುವುದು? ಮಕ್ಕಳನ್ನು ತೆಗೆದು ಮುಳ್ಳಿಗೆ ಎಸೆಯುವುದು, ನಮ್ಮ ಪೂಜಾರಿ ಕೊಂಡ ಹಾಯುವುದಿಲ್ಲ, ಆದರೆ ಇವರು ಬಿಡಲೊಲ್ಲರು. ಧೈರ್ಯವಿರುವವರು ಅಪರೂಪಕ್ಕೆ ಕೊಂಡ ಹಾಯುತ್ತಾರೆ. ಅದು ಸರಿ. ಎಷ್ಟು ಜನರು ಕೊಂಡದಲ್ಲಿ ಬಿದ್ದು ಆಸ್ಪತ್ರೆ ಸೇರಿಲ್ಲ? ಸತ್ತಿಲ್ಲ? ತುಮಕೂರು ಮಾತ್ರವಲ್ಲ ನೂರಾರು ಉದಾಹರಣೆಗಳಿವೆ. ನಾನು ದೈವಿಕ ಆಚರಣೆಗೆ ವಿರೋಧ ಮಾಡುತ್ತಿಲ್ಲ, ನಂಬಿಕೆಯನ್ನು ವಿರೋಧ ಮಾಡುತ್ತಿಲ್ಲ. ನಂಬಿಕೆಗಳು ನಮ್ಮನ್ನು ಬಲಿ ಕೊಡಬಾರದು. ನಮ್ಮನ್ನು ಶೋಷಣೆಗೊಳಪಡಿಸಬಾರದು, ನಮ್ಮ ದೈಹಿಕ ಹಿಂಸೆಗೆ ನಾಂದಿಯಾಡಬಾರದು. ಅಂತಹ ಆಚರಣೆಗಳ ಮೂಲಕ ಬಹಳ ಜನರನ್ನು ಶೋಷಣೆ ಮಾಡುವಂತಹ ಪದ್ಧತಿ ಇದೆ. ಮಾಟ-ಮಂತ್ರಗಳ ಕಥೆಯನ್ನು ಕೇಳಿದರೆ ನಾವೆಲ್ಲ ಬೆಚ್ಚಿ ಬೀಳಬೇಕು. ಮಾಟ-ಮಂತ್ರಗಳಿಂದ ಎಲ್ಲವನ್ನೂ ಮಾಡುವುದಾದರೆ ನಾವು ಚುನಾವಣೆಗೆ ನಿಂತು ಏಕೆ ಮುಖ್ಯಮಂತ್ರಿಯಾಗಬೇಕು? ಪೂಜಾರಿಗೆ ಹೇಳಿ ಮಾಟ-ಮಂತ್ರ ಮಾಡಿಸಿ ಮುಖ್ಯಮಂತ್ರಿಯಾಗಬಹುದಲ್ಲವೇ? ಎಂ.ಎಲ್.ಎ. ಗಳು ಏಕೆ ಬೇಕು? ವೋಟ್ ಏಕೆ ಬೇಕು? ಬಹುಮತ ಏಕೆ ಬರಬೇಕು? ಹಾಗಾಗಿ ನಾವು ವಾಸ್ತವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಮನುಷ್ಯನನ್ನು ಮನುಷ್ಯನಾಗಿ ನೋಡುವಂತಹ ಆಚರಣೆಗಳನ್ನು ಮನುಷ್ಯನ ಒಳಿತಿಗೆ ಪೂರಕವಾಗಿ ಆಚರಿಸುವಂತಹ ದಿಸೆಯಲ್ಲಿ ಈ ಕಾಯಿದೆ ಕೆಲಸ ಮಾಡುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಹೀಗೆ ಹೇಳಿದರು. ಕಾರ್ಯಾನುಷ್ಠಾನ ಮಾಡಲು ಎಲ್ಲವೂ ಆರಂಭದಲ್ಲಿ ಕಷ್ಟವೇ. ಸತಿ ಸಹಗಮನ ಪದ್ಧತಿಯನ್ನು ತಪ್ಪಿಸುವುದು ಆರಂಭದಲ್ಲಿ ಕಷ್ಟವಾಗಿತ್ತು. ಬಾಲ್ಯ ವಿವಾಹ ಪದ್ಧತಿಯನ್ನೂ ತಪ್ಪಿಸುವುದು ಕಷ್ಟವಾಗಿತ್ತು. ಈಗ ಎಷ್ಟು ಗಹನವಾದ ಪರಿಣಾಮವನ್ನು ಉಂಟು ಮಾಡಿದೆ ಎಂದರೆ, ಸತಿ ಸಹಗಮನ ಪದ್ಧತಿಯನ್ನು ಹುಡುಕಿದರೂ ಇಲ್ಲ. ಬಾಲ್ಯ ವಿವಾಹ ಪದ್ಧತಿಯು ಶೇ. 95ರಷ್ಟು ಹೊರಟು ಹೋಗಿದೆ. ಇದರ ಬಗ್ಗೆ ಎಲ್ಲರಿಗೂ ಅರಿವು ಬಂದಿದೆ. ಹೆಣ್ಣುಮಕ್ಕಳು ಹೇಳುತ್ತಾರೆ, ನಮ್ಮನ್ನೇಕೆ ಇಷ್ಟು ಬೇಗ ಮದುವೆ ಮಾಡುತ್ತೀರಿ ಎಂದು ಕೇಳುತ್ತಾರೆ.

**ಉಪ ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೇ, ಬೇಗ ಮುಗಿಸಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಹಾಗೆ ಇವತ್ತು ಈ ಬಿಲ್ ಬಂದಿದೆ. ಬಂದ ತಕ್ಷಣವೇ ನೂರಕ್ಕೆ ನೂರು ಭಾಗ ಅನುಷ್ಠಾನವಾಗಬೇಕೆಂದಿಲ್ಲ. ಇದಕ್ಕೆ ಸಮಯ ಬೇಕಾಗುತ್ತದೆ. ಕ್ರಮೇಣ ಡಾ: ಹೆಚ್. ನರಸಿಂಹಯ್ಯನವರ ಆಶಯಗಳಿಗೆ ಮತ್ತು ಅಬ್ರಹಾಂ ಥಾಮಸ್ ಕೋವೂರ್‌ರವರ ಆಶಯಗಳಿಗೆ ಬೆಲೆ ತಂದುಕೊಡುವ ಕೆಲಸವನ್ನು ನಾನೂ ಮಾಡಬೇಕಾಗಿದೆ. ಈ ನಾಡಿನ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಸ್.ವ್ಹಿ. ಸಂಕನೂರರವರೂ ಮಾಡಬೇಕಾಗಿದೆ. ಮಾನ್ಯ ಸಂಕನೂರರವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಜ್ಞಾನ ಪರಿಷತ್ತು ರಾಜ್ಯದಲ್ಲಿ ಅದನ್ನೇ ಮಾಡುತ್ತಿದೆ. ಈ ಬಿಲ್ ಕೂಡ ಅದೇ ಮಾಡುತ್ತಿದೆ. ಅವರು ಶಕ್ತಿ ತುಂಬುತ್ತಾರೆ. ಇವತ್ತು ನಮ್ಮ ಎಲ್ಲಾ ಆಚರಣೆಗಳನ್ನು ಕಂದಾಚರಣೆಗಳನ್ನು ಮಾಡುವ ವಿಚಾರದಲ್ಲಿ ನಮ್ಮ ವಿಜ್ಞಾನ ಪರಿಷತ್ತು ಮೂಢನಂಬಿಕೆಗಳ ಪ್ರದರ್ಶನಗಳನ್ನು ಶಾಲಾ-ಕಾಲೇಜುಗಳಿಗೆ ಬಂದು ಮಾಡುತ್ತಾರೆ. ಶೂನ್ಯದಲ್ಲಿ ಸೃಷ್ಟಿ ಸಾಧ್ಯವಿಲ್ಲ ಎಂದು ಅವರು ರುಜುವಾತು ಮಾಡಿ ತೋರಿಸುತ್ತಾರೆ. ಹಾಗಾಗಿ ನೀನು ಹಾವು ಕಚ್ಚಿದರೆ, ಚೇಳು ಕಚ್ಚಿದರೆ ಆಸ್ಪತ್ರೆಗೆ ಹೋಗಬೇಡ ಎನ್ನುತ್ತಾರೆ. ಆದರೆ ಅದು ಎಷ್ಟು ಜನರನ್ನು ಬಲಿ ತೆಗೆದುಕೊಂಡಿಲ್ಲ? ಇವೆಲ್ಲಾ ಹಿನ್ನೆಲೆಯಲ್ಲಿ ಇದೊಂದು ಸಕಾಲಿಕವಾದ ಬಿಲ್ ಆಗಿದೆ. ಇದನ್ನು ಯಾವಾಗಲೋ ಮಾಡಬೇಕಾಗಿತ್ತು. ಏಕೆಂದರೆ, ಬಹಳ ಜನ ನಿರಕ್ಷರಕುಕ್ಷಿಗಳೇ ಇರುವಂತಹ ಕಂದಾಚಾರಕ್ಕೆ ಹೋಗಿರುವಂತಹ ಸಾಮಾಜಿಕ ಭಾರತದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಬದಲಾವಣೆಯನ್ನು ತರುವಂತಹ ದಿಸೆಯಲ್ಲಿ ಪ್ರತಿರೋಧ ಇದ್ದದ್ದೇ. ಆದರೆ ಮಾನವೀಯ, ವೈಚಾರಿಕ, ವೈಜ್ಞಾನಿಕ ಹಿನ್ನೆಲೆಯಲ್ಲಿ ಈ ರೀತಿಯ ಪ್ರಯತ್ನಗಳು ಆಗಲೇ ಬೇಕಾಗುತ್ತದೆ. ಆ ದಿಸೆಯಲ್ಲಿ ಈ ಮಸೂದೆಯನ್ನು ಅತ್ಯಂತ ಪ್ರೀತಿಯಿಂದ, ಮಾನವೀಯ ಹಿನ್ನೆಲೆಯಲ್ಲಿ ನಾನು ಸ್ವಾಗತಿಸುತ್ತಾ, ವಿರೋಧಗಳಿರುತ್ತವೆ ಆದರೆ ಅವು ಕ್ರಮೇಣ ಸರಿಹೋಗುತ್ತವೆ ಈ ಬಿಲ್ಲನ್ನು ತಂದಿರುವವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ನನ್ನ ಆತ್ಮಕ್ಕೆ ನಾನು ವಂಚನೆ ಮಾಡುವುದಿಲ್ಲ. I never believe in God. That also I make it clear. Man has created the God. It is a philosophy. ಅದನ್ನು ಅಂಜಿ ನಡೆಯಲು ಒಳ್ಳೆಯ ಕೆಲಸ ಮಾಡಿದರೆ ಅದು ಸರಿಯಿದೆ. ದೇವರನ್ನಿಟ್ಟು exploit ಮಾಡುವಂತಹ ವ್ಯವಹಾರ ಏನು ನಡೆಯುತ್ತದೆ ಅದಕ್ಕೆ ನಾನು ವಿರೋಧಿ. ಸಾವಿರಾರು ವರ್ಷಗಳ ಹಿಂದೆ ಒಂದು ಕಾಲದಲ್ಲಿ 'ಚಾರ್ವಕ'ರಂತಹವರು ಹುಟ್ಟಿದ್ದರು. ಅವರು ಆಗಿನ ಕಾಲದ ವಿಜ್ಞಾನಿಗಳಾಗಿದ್ದರು. ನಾವು ಅಜ್ಞಾನದಿಂದ ಸುಜ್ಞಾನ ಪಡೆದು ವಿಜ್ಞಾನಕ್ಕೆ ಬಂದಿದ್ದೇವೆ. In the initial stage, ಮೋಡ, ಗುಡುಗು, ಮಿಂಚು ನಿಸರ್ಗದ ಎಲ್ಲಾ ಶಕ್ತಿಗಳನ್ನು ನೋಡಿ ಏನೋ ಒಂದು ದೊಡ್ಡ ಶಕ್ತಿಯಿದೆ ಎಂದು ತಿಳಿದುಕೊಂಡು the man started to think that something is there.

(ಮುಂದು . .

(1179)22-11-2017/4-30/ಕೆಹೆಚ್/ಎಂಡಿ

**ಶ್ರೀ ಕೆ.ಬಿ.ಶಾಣಪ್ಪ (ಮುಂದು):-** ಅದರ ಬಗ್ಗೆ ಪೂರ್ಣ ವಿವರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಏನು 8 ವಿಷಯಗಳನ್ನು ಸೇರಿ ಈ ವಿಧೇಯಕವನ್ನು ಸರ್ಕಾರದವರು ತೆಗೆದುಕೊಂಡು ಬಂದಿದ್ದಾರೆ ಅವುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವುಗಳನ್ನು ಉಳಿಸಬೇಕು. ಸರ್ಕಾರದವರು ಏನು ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ ಆ ವಿಧೇಯಕದ ಹೆಸರನ್ನೇ ಮೂಢನಂಬಿಕೆ ಎಂದು ಕರೆಯುತ್ತಾರೆ. What does it mean? ಮೂಢನಂಬಿಕೆ, which does not depend on the basis of the facts. 'ಅವೈಜ್ಞಾನಿಕ' means which can't be proved. ನಾನು ಚಿಕ್ಕವನಿದ್ದಾಗ ನಮ್ಮ ಅವ್ವ ಬೇವಿನ ಸೊಪ್ಪನ್ನು ತೆಗೆದುಕೊಂಡು ನನ್ನ ಮೇಲೆ ಹಾಕುತ್ತಿದ್ದರು. ಈ ಮೂಢನಂಬಿಕೆ ಯಾರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದೆ? ಈ ಮೂಢನಂಬಿಕೆ ಬಗ್ಗೆ ಸಾವಿರಾರು ಇತಿಹಾಸವನ್ನು ಓದಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಬಗ್ಗೆ ಜನರಲ್ಲಿ ಇವತ್ತಿಗೂ ಕೂಡ ಪ್ರಪಂಚದ ಎಲ್ಲಾ ಕಡೆ ಈ ಮೂಢನಂಬಿಕೆಗಳು ಇದೆ. ಆಫ್ರಿಕಾದಲ್ಲಿ ಇದೆ, ವೆಸ್ಟ್ ಅಮೇರಿಕಾದಲ್ಲಿ ಇದೆ. ಸೌತ್ ಅಮೇರಿಕಾದಲ್ಲಿ ಇದೆ. ಇನ್ನು ಅನೇಕ ಕಡೆಗಳಲ್ಲಿ ಇದೆ. ಬಸವಿಗೆ ಬಿಡುವಂತಹ ಪದ್ಧತಿ ಮುಂದುವರೆದ ಜನಾಂಗದಲ್ಲಿ ಇಲ್ಲ. ಈ ಪದ್ಧತಿಯನ್ನು ಏಕೆ ತಂದರು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಕಾರಣಕ್ಕಾಗಿ ತೆಗೆದುಕೊಂಡು ಬಂದರು? What was the reason behind it? ನಾವು ಮನುಸ್ಮೃತಿಯಲ್ಲಿ ಓದಿದ್ದೇವೆ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಓದಿದ್ದೇವೆ. ನಾವು ಚಾಣಕ್ಯನ ಬಗ್ಗೆ ಓದಿದ್ದೇವೆ. ನಾವು ಏನೂ ಮೂಢರಲ್ಲ. They forced that it should be continued. ಅದೆಲ್ಲ ಇವತ್ತಿನ ದಿವಸ ಇಂತಹ ಅನೇಕ ಮೂಢನಂಬಿಕೆಗಳನ್ನು ತೆಗೆದು ಹಾಕಿದ್ದೇವೆ. ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನು ತೆಗೆದು ಹಾಕುವುದಕ್ಕಾಗಿ ಶ್ರೀ ದೋಂಡು ಕೇಶವ ಕರ್ವೆ ನಂಥವರು, ಶ್ರೀ ಜ್ಯೋತಿಬಾ ಫುಲೇ ನಂಥವರು, ಬಸವಣ್ಣನಂಥವರು ಬಂದರು, ಈ ರೀತಿಯ ಸಾವಿರಾರು ಜನ ಈ ದೇಶದಲ್ಲಿ ಅಬ್ರಾಹಂ ಕೌರ್ ಆಗಿರಲಿ, ಶಿಕ್ಷಣ ತಜ್ಞರಾದಂತಹ ಶ್ರೀ ನರಸಿಂಹಯ್ಯನಂಥವರು ಎಲ್ಲರೂ ಇದರ ವಿರುದ್ಧ ಹೋರಾಟವನ್ನು ಮಾಡಿದ್ದಾರೆ. ನಮ್ಮ ಊರಿನಲ್ಲಿ ಚಿಂಚೂರು ಮಹಾತಾಯಿ ಜಾತ್ರೆ ಆಗುತ್ತಿತ್ತು. ಆ ಜಾತ್ರೆಯಲ್ಲಿ ನಮ್ಮ ಜನಾಂಗದವರು ಬೆತ್ತಲಾಗಿ ಬರೀ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಹೋಗುತ್ತಿದ್ದರು. ಊರು ಮಂದಿಯೆಲ್ಲ ಬಂದು ನಿಂತುಕೊಂಡು ನೋಡಬೇಕು. 1964ನೇ ಇಸವಿಯಲ್ಲಿ ಈ ಜಾತ್ರೆಯಲ್ಲಿ ಈ ರೀತಿಯಾಗಿ ನಡೆಯುತ್ತಿದ್ದಾಗ ನಾನು, ಚೆನ್ನಣ್ಣ ವಾಲಿಕಾರ್, ತೂಪಣ್ಣ, 60 ರಿಂದ 70 ಜನ ಹುಡುಗರು ಅಷ್ಟು ಜನರಿಗೆ ಬಡಿಗಿ ತೆಗೆದುಕೊಂಡು ಹೊಡೆದವು. ಇನ್ನೊಂದು ಸರಿ ಈ ರೀತಿಯಾಗಿ ಏನಾದರೂ ಮಾಡಿದರೆ ನಿಮ್ಮನ್ನೇ ಖಲಾಸೆ ಮಾಡುತ್ತೇವೆಂದು ಹೇಳಿದೇವು. We made laati charge on them and said not to do such sort of non-sense in the future. We stopped it. ಈ ರೀತಿಯಾಗಿ ನಮ್ಮ ಜನಾಂಗದ ಜನಗಳ ಮೇಲೆ ಏಕೆ ಮಾಡುತ್ತಾರೆ? ಇದರ ಹಿಂದೆ ಇದ್ದಂತಹ ಉದ್ದೇಶ ಗೊತ್ತಿತ್ತು. ಈ ಜನರ ಮೇಲೆ ಮಾನಸಿಕವಾಗಿ, ವೈಜ್ಞಾನಿಕ ದೃಷ್ಟಿ ಕೋನ ಇಲ್ಲದೆ ಇರುವಂತಹ ಎಲ್ಲಾ ನಡವಳಿಕೆಗಳನ್ನು ತೆಗೆಯಲು ಇಂತಹ ವಿಧೇಯಕಗಳನ್ನು ತೆಗೆದುಕೊಂಡು ಬಂದರೆ ನಾನು ನಿಮಗೆ ಸಹಕಾರವನ್ನು ಕೊಡುತ್ತೇನೆ ಮತ್ತು ನಿಮ್ಮ ಜೊತೆಯಲ್ಲಿಯೇ ಇರುತ್ತೇನೆ. ಇಂತಹ ವಿಷಯಗಳಲ್ಲಿ ನಾನು ಬೇರೆ, ನನ್ನ ಪಕ್ಷಕ್ಕೂ ಏನು ಸಂಬಂಧವಿಲ್ಲ. ಇದು ನನ್ನ ವೈಯಕ್ತಿಕವಾದ ವಿಚಾರ. Nobody can force me. When I sleep in the night and I feel that I am doing some sort of non-sense deceiving my own conscience, I will be the last man to tolerate it. ಅದಕ್ಕಾಗಿ ಇದರಲ್ಲಿ ಇನ್ನು ಏನು ಮೂಢನಂಬಿಕೆಗಳನ್ನು ತೆಗೆಯುವುದಕ್ಕೆ ಬೇಕು ಅದನ್ನು ಮಾಡಿ. ನಮ್ಮ ತಾಯಂದಿರು ದೇವರನ್ನು ನಂಬುತ್ತಾರೆ. ನಾನು ಕೇಳಿದರೆ ಇವತ್ತು ದೇವರು ನಮಗೆ ದುಡ್ಡು ಕೊಡುತ್ತಾನೆ ಎಂದು ಹೇಳುತ್ತಿದ್ದರು. ದೇವಸ್ಥಾನದಿಂದ ದೇವರ ಮುಂದಿಟ್ಟು ಪೂಜೆ ಮಾಡಿ ಕೊಡುತ್ತಿದ್ದ ನಿಂಬೆ ಹಣ್ಣನ್ನು ಗೋರಿ ಮೇಲೆ ತಂದಿಟ್ಟು, ಅವರನ್ನು ಸ್ಮಶಾನದವರೆಗೂ ಓಡಿಸುತ್ತಿದ್ದರು. ಇದನ್ನೇ ಎಷ್ಟು ದಿನದವರೆಗೂ ಈ ರೀತಿಯ ದಂಧೆ ಮಾಡುತ್ತೀರಿ ಎಂದು ಕೇಳಿದೆ, ನಂತರದ ದಿನಗಳಲ್ಲಿ ನಮ್ಮ ಜನಾಂಗದಲ್ಲಿಯೂ ಕೂಡ ಸಾವಿರಾರು ಜನ ವಿದ್ಯಾವಂತರಾದರು. ಈಗ ದೇವದಾಸಿ ಪದ್ಧತಿಯನ್ನು ನಿಲ್ಲಿಸಿದ್ದೇವೆ. ಬರೀ ಕಾನೂನು ಮಾಡುವುದರಿಂದ ಇಂತಹ ಪದ್ಧತಿಗಳು ನಿಲ್ಲುವುದಿಲ್ಲ. ಇವತ್ತಿನ ದಿವಸ ಆ ಒಂದು ಸಮುದಾಯದಲ್ಲಿ ಭಕ್ತರುಗಳು ಇನ್ನು ಕೂಡ ಉಳಿದಿದ್ದಾರೆ. ಅವರುಗಳಿಗೆ ಸರ್ಕಾರವು ಕೂಡ ಅನೇಕ ರೀತಿಯ ನಿರ್ಬಂಧಗಳನ್ನು ಹಾಕಿದೆ. ಆದರೆ ಇನ್ನೂ ಕೂಡ ಅಲ್ಲಲ್ಲಿ ದೇವದಾಸಿ ಪದ್ಧತಿ ನಡೆಯುತ್ತಿವೆ. ಇದನ್ನೂ ಕೂಡ ಸಂಪೂರ್ಣವಾಗಿ ನಿಲ್ಲಿಸಬೇಕು. ನಮ್ಮ ಅಬ್ಜಲ್‌ಪುರದಲ್ಲಿ ಬೆನ್ನಿಗೆ ಕೊಂಡಿಯನ್ನು ಚುಚ್ಚಿ ಹಾಕುವಂತಹ ಪದ್ಧತಿ ಇನ್ನೂ ಇದೆ. I can't see it. ಇವನ್ನೆಲ್ಲ ನೀವು ನಿಲ್ಲಿಸಬೇಕು. But, it is a hard core to stop it. ನಮ್ಮ ನಾಯಕರು ಹೇಳಿದ ಹಾಗೆ because they got a belief. Belief has no science. *H2SO4* is a *Sulfuric acid* ಎಂದು ಹೇಳಬಹುದು. ಇಲ್ಲ, ನೀರನ್ನು ನೀವು ವರುಣ, ನೀರು, ಇದು H2O ಆಗುವುದಿಲ್ಲವೆಂದು ವಾದ ಮಾಡಿದರೆ ನಾವೇನು ಮಾಡುವುದಕ್ಕಾಗುತ್ತದೆ? ಇದು ವಿತಂಡ ವಾದವಾಗುತ್ತದೆ. ವೈಜ್ಞಾನಿಕ ದೃಷ್ಟಿಕೋನದಿಂದ ಇನ್ನು ಪ್ರಪಂಚ ಬಹಳ ಮುಂದಕ್ಕೆ ಹೋಗಬೇಕಾಗಿದೆ. ನಾವು ಆದಷ್ಟು ಮಟ್ಟಿಗೆ ಈ ಮೂಢನಂಬಿಕೆಗಳನ್ನು ತೆಗೆಯಬೇಕು, ಈ ಸುಣ್ಣದ ಬಗ್ಗೆ ಮಾತನಾಡಿದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದು ನನಗೆ ಗೊತ್ತಿದೆ. I know what it is. I don't want to touch that religion now. That is their choice; I got all the knowledge about it. Why it has been done, whether it is scientific or not, we knew it. Because there was a problem, ನಾನು ನನ್ನ ಮೊಮ್ಮಗನಿಗೆ ಸುಣ್ಣ ಮಾಡಿದ್ದೇನೆ. We have to cut it. ಇದು surgical ಕೆಲಸ. ಇದಕ್ಕೆ ನಾವು ಮಾಡುತ್ತೇವೆ. ಆದರೆ ನಮ್ಮ ಜನರಲ್ಲಿ ಮೂಢನಂಬಿಕೆಗಳು ಇದ್ದು, ಜಾತಿ ಪಂಥಗಳೆಲ್ಲ ಮೂಢ ನಂಬಿಕೆಯಲ್ಲವೇ, ಪರಿಶಿಷ್ಟ ಜಾತಿಯವರು ಊರಿನೊಳಗೆ ಬರಬಾರದು ಎಂದು ಹೇಳುವುದು ಮೂಢ ನಂಬಿಕೆಯಲ್ಲವೇ, ಪರಿಶಿಷ್ಟ ಜಾತಿಯವರು ಬರಬೇಕಾದರೆ ನಿಮ್ಮ ಚಪ್ಪಲಿ-ಗಿಪ್ಪಲಿಯನ್ನೆಲ್ಲ ತೆಗೆದುಕೊಂಡು ಹೋಗಬೇಕಪ್ಪ ಎಂದು ಹೇಳುತ್ತಾರೆ. ಇದು ಮೂಢನಂಬಿಕೆಯಲ್ಲವೇ. ಪ್ರಪಂಚದಲ್ಲಿ ಎಲ್ಲಿಯೂ ಕೂಡ ಇಷ್ಟೊಂದು ಅನಿಷ್ಟ ಪದ್ಧತಿ ಇಲ್ಲ. ಪ್ರಪಂಚದ ಬೇರೆ ಭಾಗದಲ್ಲಿ ಪರಿಶಿಷ್ಟ ಪಂಗಡಗಳಿದೆ. ಕಪ್ಪು ಮತ್ತು ಬಿಳುಪು ಜನಾಂಗ ಎಂದು ಇದೆ, ಈ ದೇಶದಲ್ಲಿ ಪ್ರತಿಯೊಂದು ಹಂತದಲ್ಲೂ caste ಗಳಿವೆ. ಇದರ ವಿರುದ್ಧ ಹೋರಾಟ ಮಾಡುವುದಕ್ಕೆ ನಾವು ಒಂದು ಕಾಲು ಮುಂದೆ ಬರಬೇಕೇ ಹೊರತು, ಈ ಮೂಢನಂಬಿಕೆಗಳನ್ನು ತೆಗೆದುಕೊಂಡು ಮುಂದೆ ಹೋಗಬೇಕೆನ್ನುವುದನ್ನು ವಿಚಾರ. I condemn it, I will not support that. But, definitely I will be with you, whenever you bring such a Bill to prevent these things.

**(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಶ್ರೀ ವಿ.ಎಸ್.ಉಗ್ರಪ್ಪನವರೇ ನಿಮಗೆ ನಂತರ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಇನ್ನು ಬಹಳಷ್ಟು ಜನರು ಮಾತನಾಡಬೇಕೆಂದು ತಿಳಿಸಿದ್ದಾರೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನೇರವಾಗಿ ಎರಡು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಬೆಂಕಿ ಹಾಯುವ ಬಗ್ಗೆ ಇಲ್ಲೆಲ್ಲೂ ಪ್ರಸ್ತಾಪವಿಲ್ಲ. ಪ್ರಸ್ತಾಪವಿದ್ದರೂ ಕೂಡ ಇದಕ್ಕೆ ನಿಷೇಧ ಹಾಕಿದ್ದರೆ ಚೆನ್ನಾಗಿರುತ್ತಿತ್ತು. ಇದರ ಬಗ್ಗೆ ಬಲವಂತವಾಗಿ ಎಂದು ಏಕೆ ಹೇಳುತ್ತೇನೆಂದರೆ, ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಗ್ರಾಮದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಿತು. ಆ ಚುನಾವಣೆಗೆ ಒಬ್ಬ ಪೂಜಾರಿಯನ್ನು ನಿಲ್ಲಿಸಿ, ಈ ಚುನಾವಣೆಯಲ್ಲಿ ಗೆಲ್ಲಿಸಿದರು. ಮಾರಮ್ಮ ದೇವಸ್ಥಾನದ ಪೂಜಾರಿ ಚುನಾವಣೆಯಲ್ಲಿ ಗೆದ್ದನು. ಆ ವರ್ಷ ಆ ಪೂಜಾರಿನೇ ಕೊಂಡ ಹಾಯುವುದು, ಆ ಪೂಜೆ ಅವರ ವಠಾರಕ್ಕೆ ಬಂದಿತು. ಅವನ ಮೈಮೇಲೆ ದೇವರು ಬರುವುದು, ಅವನೇ ಕೊಂಡ ಹಾಯಬೇಕು, ಚುನಾವಣೆಯಲ್ಲಿ ಯಾರು ಸೋತಿದ್ದರು, ಅವರು ದೇವಸ್ಥಾನಕ್ಕೆ ಹತ್ತು ಬಂಡಿ ಸೌದೆಯನ್ನು ಕಟ್ಟುತ್ತಿದ್ದರು, ಅದನ್ನು ಆ ಪೂಜಾರಿಯು ಹಾಯುತ್ತಿದ್ದನು, ಪೂಜಾರಿ ವಠಾರದಲ್ಲಿ ಸೋತವರು ಇದ್ದರಲ್ಲವೇ, ಅವರು ಅರಕೆ ಮಾಡಿಕೊಂಡಿದ್ದೇವೆ ಎಂದು ಇನ್ನು ನಾಲ್ಕು ಗಾಡಿ ಸೌದೆಯನ್ನು ತಂದರು. ಇದು ಸತ್ಯವಾದ ಘಟನೆ. ಬೇಕಾದರೆ ಅವರ ಹೆಸರನ್ನು ಸಹ ಹೇಳುತ್ತೇನೆ. ಯಾವ ಸ್ಥಳವೆಂದು ಸಹ ಹೇಳುತ್ತೇನೆ. ಹತ್ತು ಗಾಡಿ ಸೌದೆ ಬದಲು ಮಮೂಲಿಯಾಗಿ ಆರು ಗಾಡಿ ಸೌದೆ ಬಂದಿತು, ಅದರ ಜೊತೆಗೆ ನಾಲ್ಕು ಲಾರಿ ಸೌದೆ ಬಂದಿತು, ನಾಲ್ಕು ಲಾರಿ ಸೌದೆ ಬಂದರೆ, ಅವನು ಕೊಂಡ ಹಾಯುವುದು ಎಲ್ಲಿ ಬಂದಿತು. ಗೆದ್ದವರು, ಸೋತವರು ಕಡೆಯವರು ನಾಲ್ಕು ಲಾರಿ ಸೌದೆಯನ್ನು ಹಾಕಿ ಬಿಟ್ಟು, ಅವನ ಮೈಮೇಲೆ ದೇವರು ಬರಲಿ ಎಂದು ತಮಟೆಯನ್ನು ಹೊಡೆಯುತ್ತಾರೆ. ಜೋರಾಗಿ ತಮಟೆಯನ್ನು ಹೊಡೆಸುತ್ತಾರೆ. ಇನ್ನು ಎಲ್ಲಿಂದ ದೇವರು ಮೈಮೇಲೆ ಬರುತ್ತದೆ. ಸೌದೆಯನ್ನು ನೋಡಿದರೆ ಏಣಿಯನ್ನು ಹಾಕಿ ಸೌದೆಯನ್ನು ಜೋಡಿಸಿದ್ದಾರೆ. ಕೊಂಡದಲ್ಲಿ ಕೆಂಡ ಹರಿದಾಡಿ ನಾಲ್ಕು ಅಡಿ ಬಿದ್ದಿದೆ. ಅವನನ್ನು ಆ ಕೆಂಡದಲ್ಲಿ ಹಾಯಿ ಎಂದು ಹೇಳುತ್ತಾರೆ, ಅವನು ಹೇಗೆ

ಹಾಯುವುದು? ಅವನು ಆ ಕೆಂಡದಲ್ಲಿ ಹಾಯಿದರೆ, ಅವನು ಇರುವುದಿಲ್ಲ. ಅವನ ಮೈಮೇಲೆ ದೇವರೇ ಬರಲಿಲ್ಲ. ನೆಂಟರಿಷ್ಟರು, ಸಂಬಂಧಿಕರು, ಎಲ್ಲ ಊರಿನ ಜನರೆಲ್ಲರೂ ಬಂದು ಬಿಟ್ಟಿದ್ದಾರೆ. ನೆಂಟರು ಮನೆಗೆ ಬಂದರೆ ಊಟ ಹಾಕಬೇಕೆಂದು, ಒಂದೊಂದು ಮನೆಗೆ ಒಂದೊಂದು ಮರಿ ತಂದಿದ್ದಾರೆ. ಅವರಿಗೆಲ್ಲ ಮರಿ ಕಡಿದು ಊಟ ಹಾಕಿಸಬೇಕು. ಇವನ ಮೈಮೇಲೆ ದೇವರು ಬರುವ ಹಾಗಿಲ್ಲ, ಕೆಂಡ ಹಾಯುವ ಹಾಗಿಲ್ಲ, ಮರಿ ಕಡಿಯುವ ಆಗಿಲ್ಲ, ಕೊಂಡ ಹಾಯಿದರೆ ತಾನೇ ದೇವರಿಗೆ ಮರಿ ಕಡಿಯುವುದು, ಮರಿ ಕಡಿದು ಎಲ್ಲರಿಗೂ ಊಟ ಹಾಕಿಸಬೇಕಲ್ಲವೇ? ಬಂದ ನೆಂಟರಿಷ್ಟರೆಲ್ಲ ಏನಾದರಾಗಲಿ ದೇವರು ಬರಲಿ ಕೊಂಡ ಹಾಯ್ದು ಬಿಡು ಎಂದು ಬಲವಂತ ಮಾಡುತ್ತಾರೆ. ಆದ್ದರಿಂದ ಇತ್ತೀಚೆಗಂತೂ ಈ ಕೊಂಡ ಹಾಯುವುದರಲ್ಲಿ ಬಹಳಷ್ಟು ಜನರು ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ಬಹಳಷ್ಟು ಜನರಿಗೆ ಕೈ-ಕಾಲು ಸುಟ್ಟು ಗಾಯಗಳಾಗುತ್ತಿರುವಂಥದ್ದು, ಜೊತೆಗೆ ಸಾವು-ನೋವುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ಆಚಾರ-ವಿಚಾರಗಳಿಗೆ ಅಡ್ಡಿಯಾಗುತ್ತಿದ್ದೇವೆ, ನಂಬಿಕೆಗಳಿಗೆ ಅಡ್ಡಿಯಾಗುತ್ತಿದ್ದೇವೆ, ಎಲ್ಲೋ ಒಂದು ಕಡೆ ರಾಜಕೀಯವಾಗಿ ತೊಂದರೆಯಾಗುತ್ತದೆ ಎಂದು ಎಲ್ಲೋ ಒಂದು ಕಡೆ ಹೇಳುತ್ತಾರೆ. ವಿರೋಧ ಪಕ್ಷದ ನಾಯಕರುಗಳ ಭಾಷಣವನ್ನು ಕೇಳಿದಾಗ ಇದನ್ನು ಎದುರಿಸಬೇಕೆಂದು ಅನಿಸುತ್ತದೆ. ಆದ್ದರಿಂದ, ಒಂದು ಕಠಿಣವಾದಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ clear cut ಆಗಿ ತೀರ್ಮಾನವನ ತೆಗೆದುಕೊಳ್ಳಬೇಕಾಗುತ್ತದೆ. ಕೊಂಡಕ್ಕೆ ಯಾರು ಬಲವಂತವಾಗಿ ಹಾಯುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಸ್ಪಷ್ಟತೆ ಇರಬೇಕು.

ಇದರ ಜೊತೆಗೆ ಜ್ಯೋತಿಷಿಗಳ ವಿಚಾರವನ್ನು ತೆಗೆದುಕೊಳ್ಳೋಣ, ಈ ಜ್ಯೋತಿಷಿಗಳು ಟಿ.ವಿ ಚಾನೆಲ್‌ಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ನವೆಂಬರ್ 21ನೇ ತಾರೀಖಿಗೆ ಪ್ರಳಯ ಆಗುತ್ತದೆ. ಜಲ ಪ್ರಳಯವಾಗುತ್ತದೆ. ವಾಯು ಪ್ರಳಯವಾಗುತ್ತದೆ, ಅಗ್ನಿ ಪ್ರಳಯವಾಗುತ್ತದೆ. ಈ ಜ್ಯೋತಿಷಿಗಳಿಗೆ ನಿರ್ದಿಷ್ಟವಾದ ಸಂಖ್ಯೆ, ಸಮಯ, ಇದು ಏಕೆ ಆಗುತ್ತದೆ ಎಂದು ಸಹ ಹೇಳುತ್ತಾರೆ, ಬುಧ ಗ್ರಹ, ಗುರು ಗ್ರಹ, ಇಂತಹ ಗ್ರಹಗಳಿಗೆ ಸಂಬಂಧಿಸಿರುವುದರಿಂದ, ಈ ಸಮಯದಲ್ಲಿ ಪ್ರಳಯವಾಗಿ ಬಿಡುತ್ತದೆ, ಭೂಮಿಯೇ ವಿನಾಶ ಹೊಂದುತ್ತದೆ. ಅದನ್ನು Electronic Media ದವರು ಒಂದು ದಿನ, ಎರಡು ದಿನ ಇದನ್ನು ತೋರಿಸಿದರೆ ಸರಿ, ಇದನ್ನೇ ಹತ್ತರಿಂದ ಹದಿನೈದು ದಿನಗಳವರೆವಿಗೂ ಪ್ರಸಾರ ಮಾಡುತ್ತಿರುತ್ತಾರೆ. ಇಷ್ಟು ಗಂಟೆಯಿಂದ ಇಷ್ಟು ಗಂಟೆಯವರೆಗೂ ನೋಡಿ, ಪ್ರಳಯವಾಗುವುದರ ಬಗ್ಗೆ ಚರ್ಚೆಯನ್ನು ಇಟ್ಟಿದ್ದೇವೆ. ಪದೇ ಪದೇ ಪ್ರಸಾರ ಮಾಡುತ್ತಾರೆ. ಅನಾವಶ್ಯಕವಾಗಿ ಜನರಲ್ಲಿ ಒಂದು ರೀತಿಯ ಗೊಂದಲದ ವಾತಾವರಣವನ್ನು ನಿರ್ಮಾಣ ಮಾಡುವಂತಹದ್ದು, ನಮ್ಮ ಸುಂಡಘಟ್ಟ ಎನ್ನುವಂತಹ ಒಂದು ಊರು ಇದೆ. Skylab ಬಿದ್ದು ಹೋಗುತ್ತದೆ ಎಂದು ಒಂದು ಸಂದರ್ಭ ಬಂದಾಗ ಈ ಪ್ರಳಯವಾದರೆ, ಸಾಲ-ಸೋಲ ಮಾಡಿ ಈ ನೆಂಟರಿಷ್ಟರನ್ನು ಕರೆದು ಮರಿ ಕಡಿದು ಊಟ ಹಾಕಿಸುವುದೆಲ್ಲ ಮಾಡಿದ್ದಾರೆ. ಇದಕ್ಕೆ ಜಮೀನನ್ನು ಮಾರುವಂತಹ ಕೆಲಸಗಳು ಸಹ ನಡೆದಿವೆ. ಪ್ರಳಯ ಆಗುತ್ತದೆ ಎಂಬುದಾಗಿಯೂ ಸಹ ಭವಿಷ್ಯ ಹೇಳುತ್ತಿರುತ್ತಾರೆ. ಈ ವಿಚಾರದಲ್ಲಿಯೂ ಸಹ ಸ್ಪಷ್ಟವಾದಂತಹ ನಿಲುವನ್ನು ಈ ವಿಧೇಯಕದಲ್ಲಿ ಅಳವಡಿಸಿದ್ದರೆ ಇನ್ನು ಚೆನ್ನಾಗಿ ಇರುತ್ತಿತ್ತು. ನಾನು ಸಂಪೂರ್ಣವಾಗಿ ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ಸ್ವಾಗತಿಸುತ್ತೇನೆ.

(ಮುಂದು)

**(1180)22-11-2017/4:40/ಎಸ್‌ಪಿಆರ್/ಎಂಡಿ**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ನಾನು ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017 ನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಎರಡನೆಯದಾಗಿ ಮಾನ್ಯ ಸದಸ್ಯರಾದ ರವಿಯವರು ಹೇಳಿದಂತೆ ಇನ್ನೂ ಹೆಚ್ಚಿನ ಅಂಶಗಳನ್ನು ವಿಧೇಯಕದಲ್ಲಿ ಅಳವಡಿಸಬೇಕು ಎಂಬುದು ನನ್ನ ಭಾವನೆಯಾಗಿದೆ. ಹಾಲಿ ಮಂಡಿಸಿರುವ ವಿಧೇಯಕವನ್ನು ನಾನು ಸ್ವಾಗತಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಇದು ಅಂಗೀಕಾರವಾಗಲಿ. ಆದರೆ, ಮುಂದಿನ ದಿನಗಳಲ್ಲಿ ಈ ಬಗ್ಗೆ ತಿದ್ದುಪಡಿಗಳನ್ನು ತೆಗೆದುಕೊಂಡು ಬರುವುದು ಸೂಕ್ತವಾಗಿರುವುದರಿಂದ ಅದನ್ನು ತನ್ನಿ. ಅಮಾನವೀಯ ದುಷ್ಟ ಪದ್ಧತಿಗಳ ನಿರ್ಮೂಲನೆಯು ಪ್ರಾರಂಭವಾಗಿದೆ. ಇಂತಹ ವಿಧೇಯಕಗಳಿಗೆ ಸದನದ ಅಂಗೀಕಾರಸಿಗಬೇಕು. ಏಕೆಂದರೆ, ಮಾನ್ಯ ಸದಸ್ಯರಾದ ರವಿಯವರು ತಿಳಿಸಿರುವಂತೆ ಕೆಲವು Electronic Media ದ ಕೆಲವು ಟಿವಿ ಚಾನಲ್‌ಗಳಲ್ಲಿ ‘ಜನ್ಮಾಂತರ’ ಎಂಬ ಕಾರ್ಯಕ್ರಮವು ಬಿತ್ತರವಾಗುತ್ತದೆ. ಅದರಲ್ಲಿ ನಮ್ಮನ್ನು ನಮ್ಮ ಹಿಂದಿನ ಜನ್ಮಕ್ಕೆ ಕರೆದುಕೊಂಡು ಹೋಗುತ್ತಾರೆ ಎಂಬುದಾಗಿ ಹೇಳುತ್ತಾರೆ. ಈ ಕಾರ್ಯಕ್ರಮವು ಪ್ರಸಾರವಾಗುತ್ತಲೇ ಇತ್ತು. ಇದನ್ನು ಪರೀಕ್ಷಿಸಬೇಕೆಂದು ನಾನು ಸದರಿ ಕಾರ್ಯಕ್ರಮಕ್ಕೆ ಹೋಗಿದ್ದೆನು.

**ಸಭಾಪತಿಯವರು:-** ತಾವು ಹಿಂದಿನ ಜನ್ಮಕ್ಕೆ ಹೋಗಿದ್ದಿರೇನು?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಹಿಂದಿನ ಜನ್ಮದ ಬಗ್ಗೆ ತಿಳಿದುಕೊಳ್ಳಲು ಯಾರು ಸದರಿ ಕಾರ್ಯಕ್ರಮವನ್ನು ನಡೆಸುತ್ತಿದ್ದರೋ ಅವರ ಬಳಿಗೆ ಹೋಗಿದ್ದೆನು. ನಾನು ನನ್ನ ಹಿಂದಿನ ಜನ್ಮದ ಬಗ್ಗೆ ತಿಳಿದುಕೊಳ್ಳಬೇಕು ಹೀಗಾಗಿ ನನಗೆ ನನ್ನ ಹಿಂದಿನ ಜನ್ಮವನ್ನು ತಿಳಿಯುವಂತೆ ಮಾಡಿ ಎಂದು ಹೇಳಿದೆನು. ನನ್ನನ್ನು ಕರೆದುಕೊಂಡು ಹೋಗಿ ಮಂಚದ ಮೇಲೆ ಮಲಗಿಸಿದರು. ಏನೇನೋ ಹೇಳಿದರು. ಆದರೂ ನಾನು ಚೆನ್ನಾಗಿ ಇದ್ದೆನು. ಅವರು 2-3 ಗಂಟೆಗಳು ಏನೇ ಮಾಡಿದರೂ ನನಗೇನೂ ಆಗಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ(ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ಟಿ.ವಿ. ವಾಹಿನಿ ಎಂಬ ಬಗ್ಗೆ ಮಾನ್ಯ ಸದಸ್ಯರು ಹೇಳಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಹೇಳುವುದಿಲ್ಲ. ಆ ವಿಷಯ ಇಲ್ಲಿ ಬೇಡ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಆದರೂ ಸದಸ್ಯರು ಹೇಳಲಿ ಪರವಾಗಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಯಾವುದೇ ಟಿ.ವಿ.ವಾಹಿನಿ ಆಗಿರಲಿ, ನಾನು ನನ್ನ ಸ್ವಂತ ಅನುಭವವನ್ನು ಹೇಳಿದ್ದೇನೆ. ನಾನು ಹಾಗೂ ನನ್ನ ಸ್ನೇಹಿತರೊಬ್ಬರು ಇಬ್ಬರೂ ಕೂಡಿ ಮಾತನಾಡಿಕೊಂಡು ಪರೀಕ್ಷೆ ಮಾಡಲು ಖುದ್ದಾಗಿ ಹೋಗಿದ್ದೆವು. ಅವರ ಯಾವುದೇ ಪರೀಕ್ಷೆಗಳು ನಮ್ಮಗಳ ಮೇಲೆ ಪರಿಣಾಮವನ್ನು ಬೀರಲಿಲ್ಲ. ಅವರಿಗೆ ಏನೂ ಮಾಡುವುದಕ್ಕಾಗಲಿಲ್ಲ. ಆದರೆ ಈಗಲೂ ಕೂಡ ಟಿ.ವಿ.ವಾಹಿನಿಗಳಲ್ಲಿ ಅಂತಹ ಕಾರ್ಯಕ್ರಮಗಳನ್ನೇ ಪ್ರಸಾರ ಮಾಡುತ್ತಾರೆ. ಅಂತಹ ಕಾರ್ಯಕ್ರಮಗಳನ್ನೂ ಸಹ ನಿಷೇಧಿಸಬೇಕು. ಮಾನ್ಯ ಸದಸ್ಯರಾದ ರವಿ ರವರು ಹೇಳಿದ ರೀತಿಯಲ್ಲಿ ಪ್ರಳಯವಾಗುತ್ತದೆ ಎಂದು ಒಂದು ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸುತ್ತಾರೆ. 2019 ನೇ ಸಾಲಿನಲ್ಲಿ ಏನೋ ಘಟನೆ ನಡೆಯುತ್ತದೆ ಎಂದು ತಿಳಿಸುತ್ತಾರೆ. ಮಕ್ಕಳಿಗೆ ಈ ಬಗ್ಗೆ ಯಾವ ವಿಚಾರಗಳೂ ಸಹ ತಿಳಿದಿರುವುದಿಲ್ಲ. ಇಂತಹ ಪ್ರಸಂಗಗಳು ಎಲ್ಲಾದರೂ ಉಂಟೇ? ಕೆಲವರು ಶಾಸ್ತ್ರವನ್ನು ಹೇಳುತ್ತಾರೆ. ಕೆಲವರು ಹೀಗೆಯೇ ಆಗುತ್ತಾರೆ, ಅವರು ಹೋಗುತ್ತಾರೆಂದು ಹೇಳುತ್ತಾರೆ. ಯಾರು ಹೋಗುತ್ತಾರೆ ಎಂಬ ಲೆಕ್ಕಾಚಾರವನ್ನು ಹಾಕುತ್ತಾರೆ. ಇದೆಲ್ಲಾ ಯಾವ ರೀತಿಯದ್ದಾಗಿವೆ? ‘ಸುಮ್ಮನೆ ಇರುವೆ ಬಿಡುತ್ತಾರೆ’ ಅಂತಾರಲ್ಲ, ಹಾಗೆ ನಮ್ಮಗಳೆಲ್ಲರಿಗೂ ಹಾಗೂ ಜನ ಸಾಮಾನ್ಯರ ಮೇಲೆ ಈ ರೀತಿಯಾದಂತಹ ಮಾನಸಿಕವಾಗಿ ದಾಳಿ ಮಾಡುವಂಥದ್ದಾಗಿದೆ. ದಯಮಾಡಿ ಇಂತಹ ಚಟುವಟಿಕೆಗಳನ್ನು ಸರ್ಕಾರ ಪ್ರತಿಬಂಧಿಸ ಬೇಕು. ಏಕೆಂದರೆ, ನಾವು ನೀವೆಲ್ಲರೂ ಕೂಡ ಶಿಕ್ಷಣವನ್ನು ಕೊಟ್ಟು ಸಮಾಜವನ್ನು ಪ್ರಗತಿಪಥದತ್ತ ಮುನ್ನಡೆಸಿಕೊಂಡು ಹೋಗುತ್ತಿದ್ದೇವೆ. ಆದರೆ ಎಲ್ಲಿಯೋ ಒಂದು ಕಡೆ ಶಿಕ್ಷಣದ ಮಟ್ಟ ಉತ್ತಮವಾಗಿ ಬೆಳವಣಿಗೆಯಾದರೂ ಕೂಡ ಇವತ್ತಿನ ದಿವಸ ದೇಶದ ಜೈಲಿನಲ್ಲಿರುವ ಖೈದಿಗಳ ಪೈಕಿ ಶೇಕಡಾ 30-40 ರಷ್ಟು ಖೈದಿಗಳು ವಿದ್ಯಾವಂತರಾಗಿದ್ದಾರೆ. ಅಂದರೆ,

ಅಪರಾಧಗಳು ಸಹ ಅಷ್ಟೇ ಪ್ರಮಾಣದಲ್ಲಿ ಬೆಳೆಯುತ್ತಿವೆ. ಅದೇ ರೀತಿಯಾಗಿ ಮೌಢ್ಯಗಳೂ ಸಹ ಬೆಳೆಯುತ್ತಿವೆ. ಮೌಢ್ಯಗಳನ್ನು ತಡೆಯುವಂತಹ ನಿಟ್ಟಿನಲ್ಲಿ ಪ್ರಸ್ತುತ ವಿಧೇಯಕವು ಸಹಕಾರಿಯಾಗುತ್ತದೆ. ನಾನು ಬಹಳಷ್ಟು ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ನೋಡಿದ್ದೇನೆ. 'ನಿಧಿ' ಅಥವಾ ಮತ್ತೊಂದನ್ನು ತೆಗೆದುಕೊಡುತ್ತೇವೆ ಎಂದು ಹೇಳಿ ಮಕ್ಕಳನ್ನು ಸಾಯಿಸುವಂತಹದ್ದು ಹಾಗೂ ಸಾಯಿಸುವ ಪ್ರಯತ್ನಗಳನ್ನು ಮಾಡುವಂತಹದ್ದು. ಇಂತಹ ಪ್ರಸಂಗಗಳನ್ನು ನಾವುಗಳೆಲ್ಲರೂ ನೋಡಿದ್ದೇವೆ. ಇಂತಹ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳಿಲ್ಲ ಎನ್ನುವ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಆರೋಪಿತರು ಖುಲಾಸೆಗೊಳ್ಳುತ್ತಾರೆ. ಆದರೆ ಆರೋಪಿ ಆ ರೀತಿ ಖುಲಾಸೆಗೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಎಚ್ಚರಿಕೆ ವಹಿಸಿ, ಅವರಿಗೆ ಶಿಕ್ಷೆಯಾಗಬೇಕು, ಯಾವುದೇ ಕಾರಣದಿಂದಲೂ ಸಹ ಆರೋಪಿತರು ಹೊರಗಡೆ ಬರಬಾರದು. ಇಂತಹ ತಪ್ಪುಗಳನ್ನು ಮಾಡಿದರೆ, ಇಂತಹ ಶಿಕ್ಷೆ ಖಂಡಿತವಾಗಿಯೂ ಸಹ ಆಗುತ್ತದೆ ಎಂದು ಸಮಾಜಕ್ಕೆ ಗೊತ್ತಾಗಬೇಕು. ಇಂತಹ ಕೃತ್ಯಗಳಿಗೆ ಉಪಯೋಗಿಸುವ ಮಕ್ಕಳಿಗೆ ಯಾವ ಉದ್ದೇಶಕ್ಕಾಗಿ ತಮ್ಮನ್ನು ಕರೆದುಕೊಂಡು ಹೋಗುತ್ತಿದ್ದಾರೆ ಎನ್ನುವ ಯಾವ ವಿಚಾರಗಳೂ ತಿಳಿದಿರುವುದಿಲ್ಲ. ಪಕ್ಕದ ಅಥವಾ ಎದುರು ಮನೆಯ ಮಕ್ಕಳನ್ನು ಅಥವಾ ಇನ್ನಾರದೋ ಮಕ್ಕಳನ್ನು ಕರೆದುಕೊಂಡು ಹೋಗಿ ಕೃತ್ಯಗಳಿಗೆ ಬಳಸುತ್ತಾರೆ. ಇತ್ತೀಚೆಗೆ ಅಂದರೆ, ಕಳೆದ ಒಂದು ತಿಂಗಳ ಹಿಂದೆ ಉತ್ತರ ಕರ್ನಾಟಕ ಭಾಗದಲ್ಲಿ ಇಂತಹ ಕೃತ್ಯದಲ್ಲಿ ಸಿಲುಕಿದ ಮಗುವನ್ನು ರಕ್ಷಿಸಿದ್ದಾರೆ. ಈ ರೀತಿಯಾಗಿ ಅಮಾಯಕ ಮಕ್ಕಳನ್ನು ಬಲಿ ಕೊಡುವಂತಹ ಕೃತ್ಯಗಳ ಬಗ್ಗೆ ಪ್ರಸ್ತುತ ವಿಧೇಯಕದಲ್ಲಿ ಅಳವಡಿಸಿರುವುದಿಲ್ಲ. ನಾನು ಪೂರ್ತಿಯಾಗಿ ವಿಧೇಯಕವನ್ನು ಓದಿದ್ದೇನೆ. ಇಂತಹ ಕೃತ್ಯಗಳಿಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವ ಯಾವ ಅಂಶವನ್ನು ಸಹ ಈ ವಿಧೇಯಕದಲ್ಲಿ ಅಳವಡಿಸಿಲ್ಲ. ಇಂತಹ ಅಂಶಗಳನ್ನು ವಿಧೇಯಕದಲ್ಲಿ ಅಳವಡಿಸಬೇಕಾಗಿತ್ತು. ಇನ್ನು ಮುಂದಾದರೂ ಇಂತಹ ವಿಧೇಯಕಕ್ಕೆ ತಿದ್ದುಪಡಿಯನ್ನು ತರುವಂತಹ ಸಂದರ್ಭದಲ್ಲಿ ಈ ಅಂಶಗಳನ್ನು ಅಳವಡಿಸಬೇಕೆನ್ನುವುದು ನನ್ನ ವಿನಂತಿಯಾಗಿದೆ.

ಮತ್ತೊಂದು ವಿಚಾರವೇನೆಂದರೆ, ಒಳ್ಳೆಯ ದೊಡ್ಡ ರಸ್ತೆ ಇರುತ್ತದೆ. ಅದರ ಮಧ್ಯದಲ್ಲಿ ಯಾವುದಾದರೂ ಒಂದು ದೇವರ ಮೂರ್ತಿಯನ್ನು ಕೂಡಿಸಿ, ಸಣ್ಣ ದೇವಸ್ಥಾನವನ್ನು ನಿರ್ಮಾಣ ಮಾಡುತ್ತಾರೆ. ಇದರಿಂದಾಗಿ ಎಲ್ಲಾ ಸಾರ್ವಜನಿಕರಿಗೂ ತೊಂದರೆಯಾಗುತ್ತದೆ. ಅದು ಯಾವುದೇ ದೇವಸ್ಥಾನ, ಚರ್ಚ್ ಅಥವಾ ಮಸೀದಿ ಇರಬಹುದು. ಅದನ್ನು ಒಡೆಯುವ ಹಾಗೆ ಇಲ್ಲ. ಸಾರ್ವಜನಿಕರಿಗೆ ಅನುಕೂಲವಾಗುವಂತಹ ಹೆಚ್ಚು ಜನ ಸಾಂದ್ರತೆಯ ಒಳ್ಳೆಯ ರಸ್ತೆ ಇರುವಲ್ಲಿಯೇ ಆ ರೀತಿ ಮಾಡಿ ಪೂಜೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ದಯಮಾಡಿ ಇಂತಹ ಪ್ರಸಂಗಗಳನ್ನು ಸರ್ಕಾರ ತಡೆಯಬೇಕು. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರತಿ ದಿನ ನಾವು ದೇವರನ್ನು ಪೂಜಿಸುತ್ತೇವೆ ಹಾಗೂ ದೇವಸ್ಥಾನಗಳಿಗೆ ಹೋಗುತ್ತೇವೆ. ಅದು ನಮ್ಮ ವೈಯಕ್ತಿಕ ಧರ್ಮ. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ದೇವಸ್ಥಾನಗಳನ್ನು, ಸಂಘ ಸಂಸ್ಥೆಗಳನ್ನು ನಡೆಸಿದಾಗ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇಂತಹ ಕೃತ್ಯಗಳನ್ನು ಪ್ರತಿಬಂಧ ಮಾಡುವುದಕ್ಕೆ ಸರ್ಕಾರವು ಮುಂದಾಗಬೇಕೆಂದು ವಿನಂತಿಸುತ್ತೇನೆ.

ತಮಗೆ ಗೊತ್ತಿರುವಂತೆ, ದೊಡ್ಡಬಳ್ಳಾಪುರದ ಉಳಕಲ್ ನಟರಾಜ್ ಎಂಬುವವರು ಇದೇ ವಿಚಾರದಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ನಾನು ಒಮ್ಮೊಮ್ಮೆ ಅವುಗಳನ್ನು ಹೇಗೆ ಮಾಡುತ್ತಾರೆ ಎಂದುಕೊಳ್ಳುತ್ತಿದ್ದೆ. ಬೆಂಗಳೂರಿನಲ್ಲಿ ನಮ್ಮ ಶಿಕ್ಷಕರುಗಳನ್ನೆಲ್ಲಾ ಸೇರಿಸಿ ಸದರಿಯವರು ಒಂದೆರಡು ಕಾರ್ಯಕ್ರಮಗಳನ್ನು ಮಾಡಿದರು. ಅವುಗಳನ್ನು ನಾವು ನೋಡಿದರೆ, ಚಾಕು ಎಲ್ಲಿಯೋ ದೇಹದ ಒಂದು ಭಾಗದಲ್ಲಿ ಒಳಗೆ ಹೋಗಿದೆ ಎಂದುಕೊಳ್ಳುತ್ತೇವೆ. ಆದರೆ ನಿಜವಾಗಿಯೂ ಅಲ್ಲಿ ಯಾವುದೇ ರೀತಿಯ ಗಾಯಗಳಾಗಿರುವುದಿಲ್ಲ. ಚುಚ್ಚಿದವರ ದೇಹದೊಳಗೆ ಚಾಕು ಹೋಗಿರುವುದಿಲ್ಲ. ಆ ರೀತಿಯ ರಕ್ಷಾ ಕವಚಗಳನ್ನು ಹಾಕಿಕೊಂಡಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರೀಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಕೆಲವೊಂದು ಪ್ರಸಂಗಗಳಲ್ಲಿ ಕುದಿಯುವ ಎಣ್ಣೆಯಲ್ಲಿ ಕೈ ಅನ್ನು ಅದ್ದಿಸುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇಂತಹ ಎಲ್ಲಾ ಪ್ರಸಂಗಗಳನ್ನೂ ಕೂಡ ಪ್ರತಿಬಂಧ ಮಾಡುವ ಉದ್ದೇಶದಿಂದಲೇ ಪ್ರಸ್ತುತ ವಿಧೇಯಕವನ್ನು ಮಂಡಿಸಲಾಗಿದೆ. ಜನರಿಗೆ ಅರಿವು ಮೂಡಿಸುವಂತಹ ಕೆಲಸಗಳನ್ನು ಮಾಡಬೇಕು. ಇದರ ಜೊತೆಗೆ ನನ್ನ ಸಲಹೆ ಏನೆಂದರೆ, ಇಂತಹ ಕೃತ್ಯಗಳಲ್ಲಿ ಭಾಗಿಯಾಗಿರುವವರಿಗೆ ಕಠಿಣವಾದ ಶಿಕ್ಷೆಯಾಗುವಂತೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ನಾವುಗಳೆಲ್ಲರೂ ನೋಡಿರುವಂತೆ ಆರೋಪಿ 50 ಕೊಲೆಗಳನ್ನು ಮಾಡಿದ್ದರೂ ಸಹ ಸಾಕ್ಷ್ಯಾಧಾರಗಳ ಕೊರತೆಯ ಮೇಲೆ ಅವನನ್ನು ಜೈಲಿನಿಂದ ಬಿಡುಗಡೆ ಮಾಡಲಾಗುತ್ತದೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಯಾವುದೇ ಪ್ರಕರಣಗಳನ್ನು ಗಮನಿಸಿದಾಗ ಅದರಲ್ಲಿ ಆರೋಪಿತರುಗಳು ಖುಲಾಸೆಗೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು? ಇಂತಹ ಸಂದರ್ಭಗಳಲ್ಲಿ ಖುಲಾಸೆ ನಿರ್ಧಾರವನ್ನು ಯಾರು ತೆಗೆದುಕೊಳ್ಳುತ್ತಾರೋ ಅಂತಹವರುಗಳನ್ನೇ ಇದಕ್ಕೆ ಹೊಣೆಗಾರರನ್ನಾಗಿ ಮಾಡಬೇಕು. ಯಾರು ತನಿಖೆಯನ್ನು ನಡೆಸಿರುತ್ತಾರೆ ಅಂತಹವರುಗಳನ್ನೇ ಹೊಣೆಗಾರರನ್ನಾಗಿ ಮಾಡಬೇಕು. ಆರೋಪಿತರು ಖುಲಾಸೆಗೊಂಡರೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸಹ ಈ ವಿಧೇಯಕದಲ್ಲಿ ಉಲ್ಲೇಖಿಸಬೇಕಾಗುತ್ತದೆ. ಜನರ ಪ್ರಾಣಕ್ಕೆ ಬೆಲೆಯಿಲ್ಲವೇ? ಈ ಸಂಗತಿಯನ್ನು ನಾನು ಏಕೆ ಪ್ರಸ್ತಾಪಿಸುತ್ತಿದ್ದೇನೆ ಎಂದರೆ ಕೆಲವೊಂದು ಪ್ರಕರಣಗಳಲ್ಲಿ ದಂಡುಪಾಳ್ಯದಂತಹ ತಂಡವು ಇಡಿ ರಾಜ್ಯದಲ್ಲಿ ಮಾತ್ರವಲ್ಲದೇ ದೇಶದಲ್ಲಿಯೂ ಸಹ ದುಷ್ಕೃತ್ಯಕ್ಕೆ ಹೆಸರುವಾಸಿಯಾಗಿದೆ. ಅವರುಗಳ ವಿರುದ್ಧ ದಾಖಲಾದ ಎಲ್ಲಾ ಪ್ರಕರಣಗಳಲ್ಲಿಯೂ ಸಹ ಎಲ್ಲಾ ಆರೋಪಿತರುಗಳನ್ನು ಇತ್ತೀಚೆಗೆ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಲಾಗಿದೆ. ಇಂತಹ ಆದೇಶಗಳಾದಾಗ ಏನು ಮಾಡಬೇಕು? ಸದರಿ ತಂಡವು ಬಹಳಷ್ಟು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವನ್ನು ನಡೆಸಿ, ಎಷ್ಟೋ ಜನರನ್ನು ಕೊಲೆಗೈದಿದೆ. ಜನಗಳು ಜೀವಂತವಿರುವಾಗಲೇ ಅವರಿಗೆ ಕೊಡಬಾರದಂತಹ ಹಿಂಸೆಗಳನ್ನು ಕೊಟ್ಟು, ಕೊಲೆ ಮಾಡಿರುವಂತಹ ನಿದರ್ಶನ ಹಾಗೂ ಘಟನೆಗಳಿವೆ. ಅಂತಹ ಆರೋಪಿತರುಗಳೆಲ್ಲರೂ ಜೈಲಿನಿಂದ ಬಿಡುಗಡೆಗೊಳ್ಳುತ್ತಿದ್ದಾರೆ. ಮಾಟ- ಮಂತ್ರ ಮಾಡುವಂತಹ ಕೃತ್ಯಗಳಿಗೆ ಸಂಬಂಧಪಟ್ಟಂತೆ ವಿಧೇಯಕದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇಂತಹ ಕೃತ್ಯಗಳನ್ನು ಮೀಡಿಯಾಗಳಲ್ಲಿ ಪ್ರಸಾರ ಮಾಡುವ ಬಗ್ಗೆಯೂ ಕೂಡ ನಿರ್ಬಂಧವನ್ನು ಹೇರಬೇಕಾಗುತ್ತದೆ. ಸಾಮಾನ್ಯ ವ್ಯಕ್ತಿಗಳು ಇರಬಹುದು ಅಥವಾ ಬೇರೆಯವರು ಯಾರೇ ಇರಬಹುದು; ಆದರೆ ಪ್ರಸ್ತುತ ವಿಧೇಯಕದಲ್ಲಿ ಕೆಲವೊಂದು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಉದ್ಧಾಹರಣೆಗೆ ಹೇಳುವುದಾದರೆ, ಭವಿಷ್ಯ ಹೇಳುವುದು, ವಾಸ್ತು ನೋಡುವಂತಹದ್ದು. ಈ ವಿಚಾರದಲ್ಲಿ ಇನ್ನೂ ಮುಂದೆ ಹೋಗಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವಂತಹ ವಿಚಾರದಲ್ಲಿ ನಡೆಯುತ್ತಿರುವ ಕೃತ್ಯ ಅಥವಾ ಘಟನೆಗಳನ್ನು ಸಹ ಪ್ರಸ್ತುತ ವಿಧೇಯಕದಲ್ಲಿ ಸೇರಿಸಿ, ಮೌಢ್ಯವನ್ನು ಹೋಗಲಾಡಿಸುವುದಕ್ಕೆ ಸರ್ಕಾರವು ಮುಂದಾಗಬೇಕು ಎನ್ನುವಂತಹ ಮಾತನ್ನು ಹೇಳಿ, ಮಂಡಿಸಿರುವ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾಕಷ್ಟು ಮೌಢ್ಯ ವಿಚಾರಗಳನ್ನು ಸುಮಾರು ವರ್ಷಗಳಿಂದ ಈ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ. ಅದೇ ರೀತಿಯಾಗಿ ದಿನಬೆಳಗಾದರೆ ನಡೆಯುವಂತಹ ಕೆಲವು ವಾಡಿಕೆಗಳನ್ನು ಮುಂದಿನ ಪೀಳಿಗೆಯವರಿಗಾದರೂ ಕೂಡ ಸರಿ ಮಾಡಿಕೊಡುವಂತಹ ಕೆಲಸಕ್ಕೆ ಒಂದು ರೀತಿಯಾದ ದೂರದೃಷ್ಟಿಯನ್ನು ಹಾಗೂ ಚಿಂತನೆಯನ್ನು ಮಾನ್ಯ ಸಚಿವರು ಮಾಡಿದ್ದಾರೆ ಎನ್ನುವುದು ನನ್ನ ಭಾವನೆಯಾಗಿದೆ. ಕಾರಣ ಏನೇ ಇರಲಿ, ಈ ದೇಶಕ್ಕೆ ತನ್ನದೇ ಆದಂತಹ ಒಂದು ಇತಿಹಾಸವಿದೆ. ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮದೇ ಆದಂತಹ ಕೆಲವು ಮೂಢ ನಂಬಿಕೆಗಳನ್ನು ಇಂದಿಗೂ ಸಹ ಪಾಲಿಸಿಕೊಂಡು ಬರುತ್ತಿದ್ದೇವೆ. ಆ ಪೈಕಿ ಯಾವ ನಂಬಿಕೆಗೆ ಎಷ್ಟರ ಮಟ್ಟಿಗೆ ಆದ್ಯತೆಯನ್ನು ಕೊಡಬೇಕು, ಯಾವ ನಂಬಿಕೆಗಳನ್ನು ಜೀವಂತವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಳಿಸಿಕೊಂಡರೆ ಯಾರಿಗೂ ಸಹ ಹಾನಿಕಾರಕವಲ್ಲ. ಯಾವುದು ಹಾನಿಕರ, ಅದರಿಂದ ಸಾಮಾನ್ಯ ಜನರಿಗೆ ಎಲ್ಲಿಯೋ ಒಂದು ಕಡೆ ಜನರಿಗೆ exploitation ಆಗಿ ತೊಂದರೆಗಳಾಗುತ್ತಿವೆ. ಅಂತಹ ನಂಬಿಕೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದಕ್ಕಾಗಿಯೇ ಪ್ರಸ್ತುತ ವಿಧೇಯಕವನ್ನು ತಂದಿದ್ದಾರೆ ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿದೆ. ಒಂದು ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ನಾನು ಸುಮಾರು ಒಂದೂವರೆ ತಿಂಗಳ ಹಿಂದೆ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿಗೆ ಹೋಗುವಂತಹ ರಸ್ತೆಯ ಮಧ್ಯ ಭಾಗದಲ್ಲಿ ಮುರುಗಮಲೆ ಎನ್ನುವ ಪ್ರದೇಶದಲ್ಲಿರುವ ಮಸೀದಿಗೆ ನಾನು ಹೋಗಿದ್ದೆನು.

(ಮುಂದು)

(1181) 4.50/22.11.2017/ಸಿಎಸ್/ಎಕೆ

**ಶ್ರೀ ವಿ.ಸೋಮಣ್ಣ(ಮುಂದು):-** ನನಗೆ ಬೇಕಾದಂತಹ ಒಬ್ಬ ಸ್ನೇಹಿತರ ತಾಯಿ ಸುಮಾರು ಮೂರು ತಿಂಗಳಿನಿಂದ ಅಲ್ಲಿ ಸೇರಿಕೊಂಡಿದ್ದರು. ಅವರ ಕಾಯಿಲೆ ಏನೆಂದರೆ ಅವರು ಬೆಳಗ್ಗಿನಿಂದ ಸಂಜೆಯವರೆಗೆ ಸುಮ್ಮನೆ ಇರುತ್ತಿದ್ದರು, ಸಾಯಂಕಾಲ ನಾಲ್ಕೂವರೆ ಗಂಟೆ ಸುಮಾರಿಗೆ ದರ್ಗಾಗೆ ಹೋಗುತ್ತಿದ್ದರು. ಅಲ್ಲಿ ನವಿಲು ಗರಿಯನ್ನು ತೆಗೆದುಕೊಂಡು ಆಕೆಗೆ 2-3 ಸಲ ಹೊಡೆದರೆ ಅವರು ಮೈಮೇಲೆ ಅಮ್ಮ ಬಂದವರ ಹಾಗೆ ಆಡುತ್ತಿದ್ದರು. ಕುಣಿದಾಡುತ್ತಿದ್ದರು, ಸುತ್ತಾಡುತ್ತಿದ್ದರು ಒಂದು ರೀತಿ ಅದನ್ನು ನೋಡಿದರೆ ಒಂದು ರೀತಿ ಭಯ ಬರುತ್ತಿತ್ತು. ಭಯಂಕರವಾದ ದೃಶ್ಯ. ನಾನು ಸುಮಾರು ಒಂದೂವರೆ ಗಂಟೆಗಳ ಕಾಲ ಅಲ್ಲಿದ್ದು ಇದನ್ನೆಲ್ಲ ನೋಡಿದೆನು, ಅಲ್ಲಿ ಸ್ನೇಹಿತನ ತಾಯಿಯ ಹಾಗೆ ಸಾವಿರಾರು ಜನರಿದ್ದರು. ಅಲ್ಲಿ ಹಿಂದು ಮುಸಲ್ಮಾನರು ಎಲ್ಲರೂ ಇದ್ದು, ಅವರಲ್ಲಿ ಹಿಂದೂಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದನ್ನೆಲ್ಲ ನೋಡಿದ ನಾನು ನನ್ನ ಸ್ನೇಹಿತನಿಗೆ " ಇದನ್ನೆಲ್ಲ ಮಾಡಿಸುವುದಕ್ಕಿಂತ ನಿಮ್ಮ ತಾಯಿಯನ್ನು ಮನೆಗೆ ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೋ, ಅವರಿಗೆ ಪ್ರೀತಿಯ ಕೊರತೆ ಇದೆ. ನಿಮ್ಮ ಮನೆಯಲ್ಲಿ ಆಕೆಗೆ ಪ್ರೀತಿ ತೋರಿಸುವುದಕ್ಕೆ ಅಡೆ ತಡೆಗಳಿರಬಹುದು, ಅದಕೋಸ್ಕರ ಆಕೆ ಮನೆಯಲ್ಲಿರದೇ ಇಲ್ಲಿಗೆ ಬಂದು ಸೇರಿಕೊಂಡಿದ್ದಾರೆ. ಇಲ್ಲಿ ಎಷ್ಟೇ ವರ್ಷಗಳಿದ್ದರೂ ಸಹ ಅವರು ಸರಿ ಹೋಗುವುದಿಲ್ಲ. ಇದನ್ನೆಲ್ಲ ಸರಿಪಡಿಸಿ ಎಂದು ನಾನು ಆತನಿಗೆ ಸಲಹೆ ನೀಡಿದ ಮೇಲೆ ನನ್ನ ಸ್ನೇಹಿತ ತನ್ನ ತಾಯಿಯನ್ನು ಕರೆದುಕೊಂಡು ಬಂದು ಮನೆಯಲ್ಲಿಟ್ಟುಕೊಂಡು ನೋಡಿಕೊಳ್ಳುತ್ತಿದ್ದಾನೆ. ಅವರ ತಾಯಿ ಈಗ ಚೆನ್ನಾಗಿದ್ದಾರೆ. ಆಕೆಗೆ ಈಗ ಯಾವುದೇ ಕಾಯಿಲೆಗಳು ಇಲ್ಲ.

ಹಿಂದಿನ ಕಾಲದಲ್ಲಿ ಮನೆ ಮನೆಗೆ ಹಚ್ಚೆ ಹಾಕುವುದಕ್ಕೆ ಬರುತ್ತಿದ್ದರು. ಯಾರಿಗೆ ಆರೋಗ್ಯದಲ್ಲಿ ಸ್ವಲ್ಪ ಏರುಪೇರು ಇರುತ್ತದೆ., ಅಂತಹವರಿಗೆ ಎಣ್ಣೆ ದೀಪದಲ್ಲಿ ಬಳೆ ಚೂರನ್ನು ಕಾಯಿಸಿ ಚುಟುಕೆ ಹಾಕುತ್ತಿದ್ದರು, ಇನ್ನೂ ಕೆಲವರಿಗೆ ಕಂಬಿಯನ್ನೇ ಕಾಯಿಸಿ ಬರೆ ಹಾಕುತ್ತಿದ್ದರು. ಇನ್ನೂ ಕೆಲವರಿಗೆ ಬೆಳ್ಳಿ ಕಂಬಿಯನ್ನು ಕಾಯಿಸಿ ಚಿಟಿಕೆ ಹಾಕುತ್ತಿದ್ದರು. ಆದರೆ ಇತ್ತೀಚೆಗೆ ಆ ಪದ್ಧತಿಗಳೆಲ್ಲಾ ತಾನೇ ತಾನಾಗಿ ಸಾಕಷ್ಟು ಕಡಿಮೆ ಆಗಿದೆ. ಇಂತಹ ಪದ್ಧತಿಗಳು ಎಲ್ಲಿಯೂ ಹೆಚ್ಚಾಗಿ ಕಂಡು ಬರುತ್ತಿಲ್ಲ.

ಆದರೆ ಈಗಲೂ ಚಾಲ್ತಿಯಲ್ಲಿರುವ ಒಂದು ಪದ್ಧತಿಗಳೇನೆಂದರೆ ಹೆಣ್ಣುಮಕ್ಕಳು ಯಾವುದೇ ದೇವಸ್ಥಾನಗಳಿಗೆ ಹೋಗಲಿ, ಅದು ಅಣ್ಣಮ್ಮನ ದೇವಸ್ಥಾನ ಆಗಲಿ, ದುರ್ಗಿ ದೇವಸ್ಥಾನ ಆಗಲೀ, ಆಂಜನೇಯ ಸ್ವಾಮಿ ದೇವಸ್ಥಾನ ಆಗಲಿ ಹೋದರೆ ಅಲ್ಲಿ ತಮ್ಮ ಮೊಮ್ಮಕ್ಕಳಿಗೆ ಒಂದು ತಾಯಿತ ಕಟ್ಟಿಸುತ್ತಾರೆ. ನಾವು ತಾಯಿತ ಕಟ್ಟಿಸುವುದು ಬೇಡ ಎಂದರೆ ಸಂಜೆಗೆ ಮನೆಯಲ್ಲಿ ದೊಡ್ಡ ರಂಪ ಆಗುತ್ತದೆ. ಇಂತಹ ವಿಷಯಗಳನ್ನು ಸಹ ಸರ್ಕಾರ ಗಣನೆಗೆ ತೆಗೆದುಕೊಳ್ಳಬೇಕು. ಇಂತಹ ಕೆಲವು ಅಂಶಗಳನ್ನು ಈ ವಿಧೇಯಕದಲ್ಲಿ ಬಿಡಲಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ಏನೆಲ್ಲ ಕಟ್ಟಪ್ಪಣೆಗಳನ್ನು ಮಾಡಿದರೂ ಸಹ ಪೋಲೀಸರಿಗೆ ಅಧಿಕಾರ ಕೊಟ್ಟು, ಈ ರೀತಿ ಶಿಕ್ಷೆ ವಿಧಿಸಬೇಕಾಗುತ್ತದೆ ಎಂದು ಹೇಳಿದರೂ ಸಹ ನಾವು ತರುವ ಕೆಲವು ಕಾಯಿದೆಗಳು ಕಾಯಿದೆಗಳಾಗಿಯೇ ಇರುತ್ತವೆ. ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಜನರಲ್ಲಿ ಜಾಗೃತಿಯನ್ನು ಮೂಡಿಸಿದಾಗ ಮಾತ್ರ ಸಾಧ್ಯವಾಗುತ್ತಗದೆ. ಮೊನ್ನೆಯ ದಿವಸ ನನ್ನ ಮೊಮ್ಮಗನಿಗೆ ಜ್ವರ ಬಂದಿತ್ತು. ಅವನಿಗೆ ಡಾಕ್ಟರ್ ಹತ್ತಿರ ಚಿಕಿತ್ಸೆ ಕೊಡಿಸಿದೆ, ಕಡಿಮೆ ಆಗಿರಲಿಲ್ಲ ಆ ಮೇಲೆ ನನ್ನ ಸೊಸೆ ಆಕೆ ಕೂಡ ಡಾಕ್ಟರ್, ಮಗುವಿಗೆ ಮಸ್ತಾನ್ ಸಾಬರ ದರ್ಗಾಗೆ ಕರೆದುಕೊಂಡು ಹೋಗಿ ಮಂತ್ರ ಹಾಕಿಸಿದ ಮೇಲೆ ಕಡಿಮೆ ಆಯಿತು. ನನ್ನ ಸೊಸೆ ನನಗೆ ಎಲ್ಲಪ್ಪಾ ನಿಮ್ಮ ವೈದ್ಯರ ಔಷಧಿ ಕೆಲಸ ಮಾಡಲಿಲ್ಲ ಎಂದು ಹೇಳಿದಳು. ಇಂತಹ ವ್ಯವಸ್ಥೆ ಮುಂದಿನ ತಲೆಮಾರಿಗೂ ನಡೆದುಕೊಂಡು ಹೋಗುತ್ತಿರುತ್ತದೆ.

ಇನ್ನು ಮಡೆಸ್ನಾನದ ಬಗ್ಗೆ ಹೇಳುವುದಾದರೆ ಅನೇಕ ಸಂದರ್ಭಗಳಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನು 1996ರಲ್ಲಿ ಸಚಿವನಾಗಿದ್ದ ಸಂದರ್ಭದಲ್ಲಿ ಮಡೆಸ್ನಾನ ಆಚರಿಸುತ್ತಿದ್ದ ಸ್ಥಳಕ್ಕೆ ಭೇಟಿಯನ್ನು ನೀಡಿ, ಅಲ್ಲಿಯೇ ಅದನ್ನು ವಿರೋಧಿಸಿ ಬಂದಿದ್ದೆನು. ಆದರೂ ಅದನ್ನು ಕಾರ್ಯರೂಪಕ್ಕೆ ತರುವುದು ಎಷ್ಟು ಕಷ್ಟ. ಈ ವಿಧೇಯಕವನ್ನು ಕೂಡ ಜಾರಿಗೆ ತರುವುದಕ್ಕೆ 3-4 ವರ್ಷಗಳ ಕಾಲ ಸರ್ಕಸ್ ಮಾಡಿದ್ದು ಈಗ ಚುನಾವಣೆ ಹತ್ತಿರ ಬಂದಿರುವ ಹಿನ್ನೆಲೆಯಲ್ಲಿ ನಮ್ಮ ಹಿಂಬಾಲಕರು ನಮ್ಮನ್ನು ಬಿಟ್ಟು ಹೋಗಬಾರದೆನ್ನುವ ಭಯದಲ್ಲಿ ಈ ಬಿಲ್ ತರಲಾಗಿದೆ. ಈ ವಿಧೇಯಕದ ಅವಶ್ಯಕತೆಯ ಜೊತೆಗೆ ಇದರ ಸಾಧಕ-ಬಾಧಕಗಳ ಬಗ್ಗೆ ಕೂಡ ಚರ್ಚೆ ಮಾಡಬೇಕಾಗಿದೆ. ಎರಡೂ ಮನೆಗಳಲ್ಲಿ ಚರ್ಚೆ ಮಾಡಿ ಈ ವಿಧೇಯಕ ಜಾರಿಗೆ ತರುವುದರಿಂದ ಯಾವುದೇ ನಿಯಂತ್ರಣ ಆಗುವುದಿಲ್ಲ. ಇವತ್ತಿಗೂ ಸಹ ಹಳ್ಳಿಗಾಡಿನಲ್ಲಿ ಮಳೆ ಬಂದು ಮಿಂಚುತ್ತಿದ್ದರೆ ದನದ ಕೊಟ್ಟಿಗೆಗೆ ಕಬ್ಬಿಣದ rod ನ್ನು ಕಟ್ಟಲಾಗುವುದು. ಇದು ವೈಜ್ಞಾನಿಕ ವಿಧಾನ ಎನ್ನುವುದು ಹಳ್ಳಿಗಾಡಿನ ಜನರಿಗೆ ಗೊತ್ತಿಲ್ಲ, ಆದರೆ ಇದೊಂದು ವಾಡಿಕೆ. ಇಂತಹ ವಾಡಿಕೆಗಳನ್ನು ಚಾಲನೆಯಲ್ಲಿರುವ ಸಂದರ್ಭಗಳು ಇನ್ನೂ ನಮ್ಮಲ್ಲಿವೆ.

ಈ ವಿಧೇಯಕದಲ್ಲಿ 2-3 ವಿಚಾರಗಳನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. 2(ಎಫ್) ನಲ್ಲಿ “ಪ್ರಚಾರ ಮಾಡುವುದು” ಎಂದರೆ “ಅಮಾನವೀಯ , ದುಷ್ಟ ಪದ್ಧತಿಗಳು ಮತ್ತು ವಾಮಚಾರಗಳಿಗೆ ಸಂಬಂಧಿಸಿದ ಜಾಹಿರಾತು, ಸಾಹಿತ್ಯ ಲೇಖನ ಅಥವಾ ಪುಸ್ತಕವನ್ನು ಹೊರಡಿಸುವುದು ಅಥವಾ ಮುದ್ರಿಸುವುದು ಮತ್ತು ಇದು ಅಮಾನವೀಯ ದುಷ್ಟ ಪದ್ಧತಿಗಳು ಮತ್ತು ವಾಮಚಾರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ನೆರವು , ದುಷ್ಪ್ರೇರಣೆ, ಭಾಗವಹಿಸುವಿಕೆ ಅಥವಾ ಸಹಕಾರ ಇವು ಒಳಗೊಳ್ಳುತ್ತದೆ” ಎಂದು ಹೇಳಿದ್ದಾರೆ. ಇದನ್ನೆಲ್ಲ ನಮ್ಮ ಅಧಿಕಾರಿಗಳು ಕಾರ್ಯರೂಪಕ್ಕೆ ತರುತ್ತಾರೆಯೇ? ಮಾನ್ಯ ಸಭಾಪತಿಯವರೇ, ತಾವು ಕೂಡ ಈ ಸದನವನ್ನು ಇಷ್ಟು ಕಾಲದಿಂದ ನೋಡಿದ್ದೀರಿ, ಎಷ್ಟು ವಿಧೇಯಕಗಳನ್ನು ಈ ಸದನಗಳ ಮೂಲಕ ಜಾರಿಗೆ ತರಲಾಗಿದೆ, ಇಲ್ಲಿ ಜಾರಿಯಾಗುವ ಕಾಯಿದೆಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತಂದಿದ್ದರೆ ನಮ್ಮ ವ್ಯವಸ್ಥೆಗಳಲ್ಲಿ ಏನೆಲ್ಲಾ ಬದಲಾವಣೆಗಳು ಆಗುತ್ತಿತ್ತು. ಇಂತಹ ಕಾಯಿದೆಗಳನ್ನು ತರುವಾಗ ಇದರಲ್ಲಿ ನಮ್ಮ ಅನಿಸಿಕೆಗಳು, awareness ಎಲ್ಲವೂ ಇರುತ್ತದೆ ನಮ್ಮ ಚಿಂತನೆಗಳು ಏನಿರುತ್ತವೆ ಅವು ಬಹುಶಃ ನನಗನಿಸುವ ಮಟ್ಟಿಗೆ ಅವು ನಮ್ಮಲ್ಲಿ ಶಾಶ್ವತವಾಗಿ ಇರುವುದಿಲ್ಲ. ಇವತ್ತು ನಮ್ಮ ಬೆಂಗಳೂರು ದೊಡ್ಡ ನಗರ, ರಾಷ್ಟ್ರದ ಒಂದು ಪ್ರತಿಷ್ಠಿತ ನಗರ, ಅಲ್ಲಿ ಅಮಾವಾಸ್ಯೆ ಮತ್ತು ಪೌರ್ಣಿಮೆಯಲ್ಲಿ ಸ್ಮಶಾನಗಳಿಗೆ ಹೋಗಿ ನೋಡಿ, ಅದು ಹಿಂದೂಗಳ ಸ್ಮಶಾನ ಆಗಲೀ ಅಥವಾ ಮುಸಲ್ಮಾನರ ಸ್ಮಶಾನ ಆಗಲಿ, ಕ್ರಿಶ್ಚಿಯನ್ನರ ಸ್ಮಶಾನ ಆಗಲೀ ಅಲ್ಲಿ ಯಾವ್ಯಾವ ರೀತಿಯ ದುಷ್ಕೃತ್ಯಗಳು ನಡೆಯುತ್ತದೆ ಎನ್ನುವುದು ಕಂಡುಬರುತ್ತದೆ. ಇದಕ್ಕೆಲ್ಲ ಸರ್ಕಾರ ಯಾವ ರೀತಿಯ ಕಡಿವಾಣವನ್ನು ಹಾಕುತ್ತದೆ? ಆ ಸ್ಮಶಾನಗಳು ಎಲ್ಲಿವೆ ಎಂದು ನೋಡುವ ಪರಿಸ್ಥಿತಿಯಲ್ಲಿ ನಾವ್ಯಾರು ಇಲ್ಲ. ಸರ್ಕಾರಗಳಿಗೆ ಕಾಯಿದೆಗಳನ್ನು ರೂಪಿಸುವುದು ಬಹಳ ಸುಲಭ. ಈ ಕಾಯಿದೆಗಳ ಪರಿಣಾಮವನ್ನು ಜನಸಾಮಾನ್ಯರಿಗೆ ಮುಟ್ಟಿಸುವಲ್ಲಿ, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ, ಅದನ್ನು ಸಮರ್ಪಕವಾಗಿ ಜಾರಿಗೆ ತರಬೇಕಾಗುತ್ತದೆ ಮತ್ತು ಅದರ ಆಗುಹೋಗುಗಳ ಬಗ್ಗೆ ಜನರಿಗೆ ತಿಳುವಳಿಕೆಯನ್ನು ನೀಡಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ, ಬೇರೆ ಪಕ್ಷದ ಸರ್ಕಾರಗಳು ಅಧಿಕಾರದಲ್ಲಿದ್ದಾಗಲೆಲ್ಲಾ ನೂರಾರು ಕಾಯಿದೆಗಳನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಈ ಕಾಯಿದೆಗಳು ಕಾಯಿದೆಗಳಾಗಿರುತ್ತವೆಯೇ ವಿನಹ ಯಾವುದೇ ಕಾಯಿದೆಗಳು ಜನಸಾಮಾನ್ಯರಿಗೆ ಬಿಸಿ

ಮುಟ್ಟಿಸುವುದಾಗಲೀ, ಅಥವಾ ಆ ಕಾಯಿದೆಯ ಆಗು ಹೋಗುಗಳ ಬಗ್ಗೆ ಸಾಧಕ-ಬಾಧಕಗಳ ಬಗ್ಗೆ ತಿಳುವಳಿಕೆ ನೀಡುವುದು ಆಗುತ್ತಿಲ್ಲ.

ಮಾನ್ಯ ರಾಮಚಂದ್ರಗೌಡರು ಮಾತನಾಡುತ್ತಾ, ದೇವರು ಇದ್ದಲ್ಲಿ ದೆವ್ವ ಇದ್ದೇ ಇರುತ್ತದೆ ಎನ್ನುವ ಮಾತನ್ನು ಹೇಳಿದರು. ಒಳ್ಳೆಯದರ ಜೊತೆಯಲ್ಲಿ ಕೆಟ್ಟದ್ದು ಸಹ ಇದ್ದೇ ಇರುತ್ತದೆ ಎನ್ನುವ ಮಾತನ್ನು ಹೇಳಿದರು. ಇಂತಹ ಸಂದರ್ಭಗಳಲ್ಲಿ ನಾವು ಯಾವುದಕ್ಕೆ ಆದ್ಯತೆಯನ್ನು ನೀಡಬೇಕು ಎನ್ನುವುದರ ಬಗ್ಗೆ ಜನ ಸಾಮಾನ್ಯರಿಗೆ ಅರಿವು ಮೂಡಿಸಬೇಕು.

ಹಳೆಯ ಕಾಲದಿಂದ ಬಂದಿರುವ ಕೆಲವು ಕಟ್ಟುಪಾಡುಗಳೇನಿವೆ, ಅದರಲ್ಲಿ ಮಾಧ್ವ, ವೈಷ್ಣವ ಸಂಪ್ರದಾಯ, ಗಳ ಆಚರಣೆಗೆ ನಮ್ಮ ಅಡೆತಡೆಗಳೇನು ಇಲ್ಲವೆನ್ನುವ ಮಾತನ್ನು ಈ ವಿಧೇಯಕದಲ್ಲಿ ಹೇಳಲಾಗಿದೆ. ಇದು ಸಂತೋಷ ಪಡುವ ವಿಚಾರ. ಇದನ್ನೆಲ್ಲ ನಾವು ಕೂಡ ಒಪ್ಪುತ್ತೇವೆ.

ಆದರೆ, ಮಕ್ಕಳನ್ನು ಬಲಿ ಕೊಡುವುದು, ಯಾರದ್ದೋ ಮಕ್ಕಳನ್ನು ಕದ್ದು, ಅಥವಾ ಬಡವರ ಮಕ್ಕಳನ್ನು ಕರೆದುಕೊಂಡು ಹೋಗಿ ಬಲಿ ಕೊಡುವುದು ಇಂತಹ ಅನೇಕ ದುಷ್ಕಾರ್ಯಗಳಿಗೆ ಕಡಿವಾಣ ಹಾಕುವುದರ ಜೊತೆಗೆ ಇಂತಹಗಳನ್ನೆಲ್ಲ ಪರಿಶೀಲಿಸುವ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಿದರೆ ಜನರಿಗೆ ಅಲ್ಪಸ್ವಲ್ಪ ಒಳ್ಳೆಯದಾಗುತ್ತದೆ. ಹಳೆಯ ಕಟ್ಟುಪಾಡುಗಳಿಗೆ ಬ್ರೇಕ್ ಹಾಕಿದಂತಾಗುತ್ತದೆ. ಇದನ್ನೆಲ್ಲ ಕಾರ್ಯರೂಪಕ್ಕೆ ತರಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿ, ಅಧಿಕಾರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಅವರನ್ನು ಯಾವ ರೀತಿ ಶಿಕ್ಷೆಗೆ ಒಳಪಡಿಸಬಹುದು ಎನ್ನುವ ನಿಯಮಗಳನ್ನು ತರುವುದು ಕೂಡ ಸಮಂಜಸವಾದುದು ಎನ್ನುವುದು ನನ್ನ ಭಾವನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ 2017 ಅನ್ನು ಮಾನ್ಯ ಕಾನೂನು ಸಚಿವರು ಈ ಸದನದಲ್ಲಿ ಮಂಡನೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಒಂದು ವಿಧೇಯಕದ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈ ಮೂಢ ನಂಬಿಕೆಗಳ ಬಗ್ಗೆ ಮಾತನಾಡುವುದಾದರೆ ಎರಡು ದಿವಸಗಳ ಕಾಲ ಮಾತನಾಡಬಹುದು. ನಾವು ಕೂಡ ಒಮ್ಮೊಮ್ಮೆ ಮೂಢನಂಬಿಕೆಗೆ ಬಲಿಯಾಗಿದ್ದು ಇದೆ. ಹಾಗಾಗಿ ಈ ಕಾಯಿದೆ ಬರಬೇಕೆನ್ನುವುದು ನಮ್ಮೆಲ್ಲರ ಆಶಯವಾಗಿತ್ತು. ನಾನು 2008 ಚುನಾವಣೆಗೆ ಮಂಗಳೂರು ನಗರದಿಂದ ಸ್ಪರ್ಧೆ ಮಾಡಿದ್ದೆನು. ಆಗ ಮತಗಳನ್ನು ಏಣಿಕೆ ಮಾಡುವುದಕ್ಕೆ ಇನ್ನೂ ಸಾಕಷ್ಟು ಸಮಯ ಇತ್ತು. ನನ್ನ ಸ್ನೇಹಿತನೊಬ್ಬ, ನನ್ನ strong worker, ಕೇರಳದಲ್ಲಿ ಒಬ್ಬ ಮಾಂತ್ರಿಕ ಇದ್ದಾರೆ, ಅವರಲ್ಲಿಗೆ ನಾವು ಹೋಗಿ ಕೇಳಿದರೆ, ಅವರು ನೀವು ಈ ಚುನಾವಣೆಯಲ್ಲಿ ಗೆಲ್ಲುತ್ತೀರೋ ಇಲ್ಲವೋ ಎನ್ನುವುದನ್ನು ಹೇಳುತ್ತಾರೆ, ಒಂದು ವೇಳೆ ನೀವು ಸೋಲುವುದಾದರೆ ಗೆಲ್ಲುವುದಕ್ಕೆ ಏನು ಮಾಡಬಹುದು ಎಂದು ಸಹ ಹೇಳುತ್ತಾರೆ ಎನ್ನುವ ಒಂದು ಸಲಹೆ ನೀಡಿದನು. ನನಗೂ ಸಹ ಚುನಾವಣೆಯಲ್ಲಿ ಗೆಲ್ಲಬೇಕೆನ್ನುವ ಆಸೆ ಇದ್ದ ಕಾರಣ, ಆಯಿತು ಎಂದು ಕೇರಳಕ್ಕೆ ಹೋದೆನು. ಅವರು ನನ್ನ ಜೊತೆ ಎಲ್ಲಾ ಮಾತನಾಡಿ, ಕಲ್ಲು ತೆಗೆದು ಹಾಕಿ, ನೀನು ಗೆಲ್ಲುತ್ತಿಯಾ, ಆದರೆ ಅದಕ್ಕೆ ಇಷ್ಟೆಲ್ಲಾ ವಾಮಚಾರಗಳನ್ನು ಮಾಡಬೇಕು ಎಂದು ಹೇಳಿದರು.

(ಮುಂದು)

(1182)/22-11-2017/5-00/ಎಲ್ಎಂ/ಎಕೆ

**ಶ್ರೀ ಐವನ್ ಡಿ'ಸೋಜಾ(ಮುಂದು):-** ನನ್ನ ಜೊತೆಯಲ್ಲಿ ಇರುವವನು ಬಿಡುತ್ತಲೇ ಇಲ್ಲ. ಅವರು ಹೇಳಿದ ಹಾಗೆ ಮಾಡಿಸು ನೀನು ಗೆಲ್ಲುತ್ತಿಯಾ ಎಂದು ಒಂದೇ ಸಮನೇ ಹೇಳುತ್ತಲೇ ಇದ್ದಾನೆ. ಬಾಕ್ಸ್ (Electronic Voting Machine) ಒಳಗೆ ಈಗಾಗಲೇ ಮತಗಳು ಇವೆ. ಗೆಲ್ಲುವುದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಗೆ? ನನಗೆ ಗೆಲ್ಲಬೇಕು ಎನ್ನುವ ಆಸೆ. ಅವರು ಹೇಳಿದ ಹಾಗೆ ಮಾಡಿಸಿದೆ. ಒಂದೂವರೆ ಲಕ್ಷ ರೂ.ಗಳನ್ನು ಖರ್ಚು ಮಾಡಿಸಿದರು. ಆದರೆ ಫಲಿತಾಂಶ ಬಂದಾಗ ಸೋತಿದ್ದೆ. ಚುನಾವಣೆಗೆ ನಿಂತು ಸೋತು ಎಪಿಎಲ್ ಇರುವವನು ಬಿಪಿಎಲ್ ಆಗಿದ್ದೆ, ಬಿಪಿಎಲ್ ಆಗಿರುವವನು ಇವರ ಮಾತು ಕೇಳಿ ಬಿಪಿಎಲ್ ಕಾರ್ಡ್ ಕೂಡಾ ಇಲ್ಲದ ಹಾಗೆ ಆಗುವ ಪರಿಸ್ಥಿತಿ ಬಂದಿತ್ತು. ನನಗೆ ಈ ರೀತಿಯಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಐವನ್‌ರವರೆ, election expenditure ನಲ್ಲಿ ಈ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು declare ಮಾಡಿದ್ದೀರಾ ಇಲ್ಲವೆ? Election expenditure ನಲ್ಲಿ declare ಮಾಡದೆ ಇದ್ದರೆ ಅಪರಾಧವಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಅದನ್ನು ಮಾಡಿ ಸುಮಾರು ವರ್ಷಗಳಾಗಿ ಹೋಯಿತು. ಅವರು ಹೇಳುವುದು ನಿಜ, ಚುನಾವಣೆ ಪ್ರಾರಂಭವಾಗಿ ಫಲತಾಂಶ ಬರುವವರೆಗೆ, ಚುನಾವಣಾ ನೀತಿ ಸಂಹಿತೆ ಇರುವವರೆಗೆ ಮಾಡಿರುವ ಖರ್ಚಿನ ಮಾಹಿತಿ ಕೊಡಬೇಕಾಗುತ್ತದೆ. ನನ್ನಂತಹವನಿಗೇ ಈ ಪರಿಸ್ಥಿತಿ ಬಂದಾಗ, ಎಷ್ಟೇ ಬುದ್ಧಿವಂತರಿದ್ದರೂ ಕೆಲವು ಸಾರಿ ಈ ರೀತಿ ತೊಂದರೆಗೆ ಒಳಗಾಗುತ್ತಾರೆ. ಅದಕ್ಕಾಗಿ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. I would like to draw your attention to Section 3 of this Bill. ಅಮಾನವೀಯ ದುಷ್ಟಪದ್ಧತಿ ಮತ್ತು ವಾಮಾಚಾರದ ಬಗ್ಗೆ ಬಂದಾಗ ನಿರ್ಮೂಲನೆಗೆ Section 3, sub-clause (2) ನಲ್ಲಿ ಇಂತಹ ತೊಂದರೆಗಳೇನಾದರೂ ಮಾಡಿದರೆ, ಅಂದರೆ "ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಯಾವುದೇ ಒಬ್ಬ ವ್ಯಕ್ತಿಯು ತಾನಾಗಿಯೇ ಅಥವಾ ಯಾವುದೇ ಇತರ ವ್ಯಕ್ತಿಯ ಮೂಲಕವಾಗಲಿ ಈ ಅಧಿನಿಯಮಗಳ ಉಪಬಂಧಗಳ ಉಲ್ಲಂಘನೆಯಲ್ಲಿ ಅಮಾನವೀಯ ದುಷ್ಟ ಪದ್ಧತಿಗಳು, ವಾಮಾಚಾರ ಯಾವುದೇ ಕೃತ್ಯ ಮಾಡಿದರೆ ಮತ್ತು ಅಮಾನವೀಯ ದುಷ್ಟ ಪದ್ಧತಿಗಳು, ವಾಮಾಚಾರಗಳ ಬಗ್ಗೆ ಜಾಹೀರಾತನ್ನು ಕೊಟ್ಟರೆ ಅಂತಹ ಕೃತ್ಯವು ಅಧಿನಿಯಮಗಳ ಉಪಬಂಧಗಳ ಅಡಿಯಲ್ಲಿ ಅಪರಾಧವಾಗತಕ್ಕಂದು ಮತ್ತು ಈ ಅಪರಾಧದ ತಪ್ಪಿತಸ್ಥ ವ್ಯಕ್ತಿಯು ಅಪರಾಧ ಸಾಬೀತಾದ ಮೇಲೆ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಏಳು ವರ್ಷದವರೆಗೆ ವಿಧಿಸಬಹುದಾದ ಕಾರಾಗೃಹ ವಾಸ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಮತ್ತು 50,000 ರೂ.ಗಳವರೆಗೆ ವಿಧಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕಂದು" ಎಂದು ಇದೆ. ನಾನು ಹೇಳುವುದು ಇದನ್ನು Magistrate Court ನಿಂದ ಈ jurisdiction ನನ್ನು ತೆಗೆದು ಹಾಕಬೇಕು. ನೇರವಾಗಿ ಈ jurisdiction ನನ್ನು Sessions Court ಗೆ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯ. ಇದನ್ನು special case ಎಂದು ಪರಿಗಣಿಸಬೇಕು. ಕ್ರಿಮಿನಲ್ ಚಟುವಟಿಕೆಗಳಿಗೆ ಏನು ಶಿಕ್ಷೆ ಎನ್ನುವುದು ಇದೆ. ಪ್ರಚೋದನೆಗೊಳಿಸಿದರೆ ಐಪಿಸಿ ಸೆಕ್ಷನ್ 306, ಸತ್ತರೆ ಐಪಿಸಿ ಸೆಕ್ಷನ್ 302, ಕೈಕಾಲು ಮುರಿದರೆ ಬೇರೆ ಸೆಕ್ಷನ್ ಇವೆ.

**ಉಪಸಭಾಪತಿಯವರು:-** ಈಗ ಸೆಕ್ಷನ್‌ಗಳ ಬಗ್ಗೆ ವಿವರಣೆ ಬೇಡ. ಈಗ ಏನು ಮಾಡಬೇಕು ಎನ್ನುವುದನ್ನು ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಇದು ನೇರವಾಗಿ Sessions Court ಗೆ ಹೋಗಬೇಕು. ಜುಲ್ಮಾನೆ 50 ಸಾವಿರ ರೂ.ಗಳಿರುವುದನ್ನು ಕನಿಷ್ಠ 5 ಲಕ್ಷ ರೂ.ಗಳಾಗಿ ಮಾಡಬೇಕು. ಏಕೆಂದರೆ ಶಿಕ್ಷೆಗೆ ಒಳಪಡುವವರೇ ಕಡಿಮೆ. ಶಿಕ್ಷೆಗೆ ಸಿಕ್ಕವರನ್ನು ಬಿಡಬಾರದು. ಜಾಹೀರಾತು ಕೊಡುವುದಕ್ಕೆ ಕೂಡಲೇ ನಿರ್ಬಂಧ ಹಾಕಬೇಕು. ಮಕ್ಕಳಿಲ್ಲ ಎಂದರೆ ಮಕ್ಕಳು ಆಗುವಂತೆ ಮಾಡುತ್ತೇನೆ, ಕಾಲು ಸರಿ ಇಲ್ಲ ಎಂದರೆ ಸರಿ ಮಾಡುತ್ತೇನೆ, ಮದುವೆಯಾಗಿಲ್ಲ ಎಂದರೆ ಮದುವೆ ಆಗುವಂತೆ ಮಾಡುತ್ತೇನೆ ಎಂದು ಹೇಳುವುದು, ಇವನಿಗೆ ಮದುವೆಯಾಗಿರುವುದಿಲ್ಲ ಇನ್ನು ಬೇರೆಯವರಿಗೆ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮದುವೆ ಮಾಡಿಸುವುದು. ಇಂತಹ ಅನೇಕ ಕೃತ್ಯಗಳು ನಡೆಯುತ್ತಿರುವುದರಿಂದ ಇಂತಹ ಬಿಲ್ ತಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಹೆದರಿಕೆಯಾದರೂ ಇರುತ್ತದೆ. ಇಂತಹ ಮಸೂದೆಯನ್ನು ತರುವಂತಹ ಅವಶ್ಯಕತೆ ಇತ್ತು. ಬಹಳ ಸಮಯ ನಂತರ ಬಂದಿದೆ. ನಾವೇ ಅನೇಕ ಸಾರಿ ಮನೆಗೆ ಬಾಗಿಲು ಇಡುವಾಗ ಕೇಳುತ್ತೇವೆ, ಅಧಿವೇಶನವನ್ನು 10ಗಂಟೆಗೆ ಪ್ರಾರಂಭ ಮಾಡುವುದು ಬೇಡ 9-30 ಗಂಟೆಗೆ ಪ್ರಾರಂಭ ಮಾಡಿ ಎಂದು ಹೇಳಲಾಗಿದೆ. ಐದಾರು ವರ್ಷಗಳ ಹಿಂದೆ ವಿಧಾನಮಂಡಲದ ಅಧಿವೇಶನವನ್ನು 9-15 ನಿಮಿಷಕ್ಕೆ ಪ್ರಾರಂಭ ಮಾಡಿರುವುದು ಇದೆ. ಇದನ್ನು ನಾನು ಹಿಂದೆ ಪತ್ರಿಕೆಯಲ್ಲಿ ಓದಿದ್ದೇನೆ. 10-00 ಗಂಟೆಗೆ ಪ್ರಾರಂಭ ಮಾಡಿದರೆ ಸರಿಯಾಗಿ ನಡೆಯುವುದಿಲ್ಲ ಎನ್ನುವ . ಈ ರೀತಿಯ ಅಪನಂಬಿಕೆಗಳಿಂದ ವಿದ್ಯಾವಂತರು ದೂರ ಇರಬೇಕಾದ ಅವಶ್ಯಕತೆ ಇದೆ. ಈ ಮಸೂದೆಯನ್ನು ನಾನು ಹೃದಯಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

***ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-*** ಮಾನ್ಯ ಸಭಾಪತಿಗಳೆ, ಈ ಬಿಲ್‌ಗೆ "ಕರ್ನಾಟಕ ಅಮಾನವೀಯ ದುಷ್ಟಪದ್ಧತಿಗಳು, ದುರಾಚಾರ ಪದ್ಧತಿಗಳು ಹಾಗೂ ವಾಮಾಚಾರ ಪದ್ಧತಿಗಳ ಪ್ರತಿಬಂಧ" ಎಂದು ಹೇಳಿದರೆ ಚೆನ್ನಾಗಿತ್ತು. ಈ ಕಾನೂನು ನಮ್ಮ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿಯೇ ಬಂದಿದೆ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಹೇಳುತ್ತಾರೆ, "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರನ್ನು ನಿಂದಿಸಬೇಡ, ತನ್ನ ಬಣ್ಣಿಸಬೇಡ, ಅದುವೇ ಕೂಡಲಸಂಗಮದೇವ" ಎಂದು ಅನೇಕ ಪ್ರತಿಭಾವಂತರು ನಮ್ಮಲ್ಲಿ ಬಂದಿದ್ದಾರೆ. ಬೆಟ್ಟದ ಮೇಲೆ ಕುಳಿತ್ತಿರುತ್ತಾನೆ. ಒಂದು ಮನೆಯಲ್ಲಿ ಮಗುವಾಗಲಿ, ಯಾರ ಮನೆಯಲ್ಲಾದರೂ ಸಾಯಲಿ, ಯಾರ ಮನೆಯಲ್ಲಿಯಾದರೂ ಮದುವೆಯಾಗಲಿ, ಯಾವುದೇ ಕಾರ್ಯಕ್ರಮವಾಗಲಿ ಅಕ್ಕಿ, ಹಣ್ಣು, ಹಾಲು, ಸಕ್ಕರೆ, ಸೌದೆ ಎಲ್ಲವನ್ನು ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಒಬ್ಬ ಸುಮ್ಮನೆ ಬೆಟ್ಟದ ಮೇಲೆ ಕುಳಿತಿರುತ್ತಾನೆ, ಅವರ ಹತ್ತಿರ ಹೋಗಿ ಇವರು ನನ್ನ ಮನೆಯಲ್ಲಿ ಮಗು ಹುಟ್ಟಿದೆ ಏನು ಹೆಸರನ್ನು ಇಡಬೇಕು ಎಂದು ಕೇಳುತ್ತಾರೆ, ಕೆಲವರು ನನ್ನ ಮಗಳ ಮದುವೆ ಮಾಡಬೇಕು ಮುಹೂರ್ತ ಯಾವಾಗ ಎಂದು ಕೇಳುತ್ತಾರೆ, ಇನ್ನೊಬ್ಬರು ಬಂದು ನಮ್ಮ ಮನೆಯಲ್ಲಿ ತೀರಿ ಹೋಗಿದ್ದಾರೆ ಏಕೆ ಹೀಗೆ ಎಂದು ಕೇಳುತ್ತಾರೆ. ಅವನು ಏನೋ ಹೇಳುತ್ತಾನೆ, ಅದನ್ನೇ ಅನುಸರಿಸಿಕೊಂಡು ಬರುತ್ತಾರೆ. ಮನುಷ್ಯ ಮೊದಲು ಪ್ರಾಣಿ ನಂತರ ಮನುಷ್ಯ. ಶಿಲ್ಪಿಗಳಿಗೆ ವಿಗ್ರಹ ಮಾಡಿ ಎಂದರೆ, ಅವನು ಹೇಗೆ ಇರುತ್ತಾನೆಯೋ ಹಾಗೆ ಮಾಡುತ್ತಾನೆ. I have observed that. ಅನೇಕ ಶಿಲ್ಪಿಗಳನ್ನು ನಾನು ನೋಡಿದ್ದೇನೆ. ಲಕ್ಷ್ಮಿಯ ಮೂರ್ತಿ ಮಾಡು ಎಂದರೆ ಅವನ ಮನೆಯಲ್ಲಿ ಅವನ ಹೆಂಡತಿ ಹೇಗೆ ಇರುತ್ತಾಳೆ ಹಾಗೆ ಮಾಡುತ್ತಾನೆ. ಇನ್ನೊಬ್ಬ ಶಿಲ್ಪಿ ಅವನ ಮನೆಯಲ್ಲಿ ಅವನ ಹೆಂಡತಿ ಹೇಗೆ ಇರುತ್ತಾಳೆ ಹಾಗೆ ಮಾಡುತ್ತಾನೆ. ಇದು ಅಭ್ಯಾಸವಾಗಿ ಬಂದಿದೆ. ದೇವರಿಗೆ ಏನು ನೈವೇದ್ಯ ಇಡಬೇಕು ಎಂದರೆ, ಆ ಪೂಜಾರಿಗೆ ಏನು ಇಷ್ಟ ಅದನ್ನು ನೈವೇದ್ಯ ಇಡಬೇಕು ಎಂದು ಹೇಳುತ್ತಾನೆ. ಮುಂಚೆಯಿಂದಲೂ ಈ ದೇವರಿಗೆ ಈ ನೈವೇದ್ಯ ಎನ್ನುವುದು ಬಂದು ಬಿಟ್ಟಿದೆ. ಆ ಪೂಜಾರಿ ಎರಡು ಮದುವೆ ಮಾಡಿಕೊಂಡಿದ್ದರೆ ದೇವರಿಗೂ ಎರಡು ಮದುವೆಗಳನ್ನು ಮಾಡುತ್ತಾರೆ. ವೆಂಕಟರಮಣನಿಗೆ ಇಬ್ಬರು ಹೆಂಡತಿಯರು ಇದ್ದಾರೆ ಎಂದು ಯಾರು ನೋಡಿದ್ದಾರೆ. ಹೀಗೆ ನಂಬಿಕೆ ಬೆಳೆದುಕೊಂಡು ಬಂದುಬಿಟ್ಟಿದೆ. Be good, do good and spread good. ನಾವು ಒಳ್ಳೆಯರಾಗಿ ಇರಬೇಕು, ಒಳ್ಳೆಯದನ್ನು ಮಾಡಬೇಕು, ಒಳ್ಳೆಯದನ್ನು ಹೇಳಬೇಕು. ಇದು ಬಹಳ ಮೂಲಭೂತವಾಗಿ ಆಗಬೇಕು. ಎಲ್ಲ ಕಡೆಗಳಲ್ಲಿಯೂ ದೇವರಿದ್ದಾನೆ ಎಂದು ಹೇಳುತ್ತೇವೆ. ಆದರೆ ದೇವಸ್ಥಾನಕ್ಕೆ ಹೋಗುತ್ತೇವೆ. ತಪ್ಪೇನು ಅಲ್ಲ, concentration ಮಾಡಬೇಕು ಎಂದು ಹೋಗುತ್ತೇವೆ. ಶಂಕರಾಚಾರ್ಯರು ಒಂದು ಮಾತನ್ನು ಹೇಳುತ್ತಾರೆ " ಲಬ್ಧಾವಿದ್ಯಾ ರಾಜಮಾನ್ಯ ತತಃ ಕಿಂ " ರಾಜರು ಮಾನ್ಯ ಮಾಡುವಂತಹ ವಿದ್ಯೆಯನ್ನು ಗಳಿಸಿದರೆ ಏನು? "ಪ್ರಾಪ್ತಾ ಸಂಪತ್ ಪ್ರಾಭವಾದ್ಯಾ ತತಃ ಕಿಂ " ಅಧಿಕಾರ ಸಂಪತ್ತನ್ನು ಎಂತು ಗಳಿಸಿದರೇನು, "ಭುಕ್ತಾ ನಾರೀ ಸುಂದರಾಂಗೀ ತತಃ ಕಿಂ " ಬಹಳ beautiful ಆಗಿ ಇರುವವಳನ್ನು ಮದುವೆ ಮಾಡಿಕೊಂಡರು ಏನು ಪ್ರಯೋಜನ " ಯೇನ ಸ್ವಾತ್ಮಾನೈವ ಸಾಕ್ಷಾತ್ ಕೃತೋ ಅಭೂತ್ " ಮನುಷ್ಯನಿಗೂ ಪ್ರಾಣಿಗೂ ಇರುವ ವ್ಯತ್ಯಾಸ.. ಪ್ರಾಣಿಗಳು ಬದುಕುತ್ತವೆ, ನೀನು ಹುಟ್ಟಿದಿಯಾ ನಿನಗೆ

ವಿವೇಚನೆ ಇದೆ, ನೀನು ಯಾರು, ನೀನು ಏಕೆ ಹುಟ್ಟಿದಿಯಾ, ಏಕೆ ಬಂದಿದೆಯಾ ಎಂದು ಸ್ವತ: ಪ್ರಶ್ನೆಗಳನ್ನು ಹಾಕಿಕೊಳ್ಳುವುದೇ ಧರ್ಮ. “ಯುದ್ಧದಲರಿಗಳ ರುಂಡಗಳ ಚೆಂಡಾಡಿದರೇನಂತೆ ಬಾಣಗುರಿಯಿಂ ಗೂಳಗಂಗಳ ಭೇದಿಸಿದರೇನಂತೆ ಲೋಹದ ಹಗ್ಗಗಳ ತುಂಡರಿಸಿದರೇನಂತೆ ಕಜ್ಜಾಯದಂದದಿ ಬೆಂಕಿ ಕೆಂಡಗಳನುಂಡರೇನಂತೆ ತನ್ನಂತರಾತ್ಮವನರಿಯದಿರಲು “ ಶಂಕರಾಚಾರ್ಯರೇ ಹೇಳಿರುವುದು ಇದು. ಕನ್ನಡದಲ್ಲಿ ನಾನು ಬರೆದಿದ್ದೇನೆ. ಅವರು ಹೇಳುತ್ತಾರೆ, “ ಚೆಂದಾದಿ ವಿಭೂತಿಯಲ್ಲಿ ದೇಹವನ್ನು ಎಂತು ಶೃಂಗರಿಸಿದರೇನಂತೆ, ಕಠಿಣೋಪಾಸನದಿ ದೇಹವನ್ನು ಎಂತು ಶ್ರಮಿಸಿದರೇನಂತೆ, ಕೋಟಿ-ಕೋಟಿ ಜಪಗಳ ಮಾಡಿದರೇನಂತೆ ತನ್ನ ಅಂತರಾತ್ಮವನ್ನು ಅರಿಯದಿರಲು ...” The ultimate aim of human being is to know what you are, why you have born and what are your responsibilities.

(ಮುಂದು)

(1183)22-11-2017(05-10)ಬಿಎಸ್‌ಡಿ/ಆರ್‌ಎನ್

ಶ್ರೀ ರಾಮಚಂದ್ರಗೌಡ (ಮುಂದು)

You being a Policeman, you must know what you have to do. You being a Politician, you must know what you have to do? You being father of the house, you must know what you have to do? You being a mother of the house, you must know what you have to do. These are all responsibilities. ಕೆಲವು ನಂಬಿಕೆಗಳು ಮೊದಲಿನಿಂದಲೂ ಬಂದಿವೆ. ನಾನು ಹಳ್ಳಿಯಲ್ಲಿರುವಾಗ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಬಯಲು ನಾಟಕ ನೋಡಲು ಸೋದರ ಮಾವ ಮತ್ತು ನಾನು ಬಯಲು ನಾಟಕ ನೋಡಲು ಹೋಗುತ್ತಿದ್ದ ಸಂದರ್ಭದಲ್ಲಿ ಒಂದು ಕಡೆ ಹಳ್ಳವನ್ನು ಇಳಿದು ಮೇಲೆ ಹತ್ತಿ ಹೋಗಬೇಕು. ನನ್ನ ಜೊತೆ ಸುಮ್ಮನೆ ಮಾತನಾಡಿಕೊಂಡು ಬರುತ್ತಿದ್ದ ನನ್ನ ಸೋದರ ಮಾವ ಹಳ್ಳ ಇಳಿದು ಹತ್ತುವಾಗ ಇದ್ದಕ್ಕಿದ್ದ ಹಾಗೆ ‘ಕಲಿಲೆಲೋ ವೈವೆಂಕಟ’ ಎಂದು ಹಾಡಿಕೊಂಡು ಬಂದ. ನಾನು ಏಕೆ ಈ ರೀತಿ ಹಾಡಿದೆ ಎಂದು ಕೇಳಿದಾಗ ಆತನು ‘ ಅಲ್ಲಿ ಪಿಶಾಚಿ ಇದೆ, ಅದರ ಭಯಕ್ಕಾಗಿ ಆ ರೀತಿ ಹಾಡಿದೆ’ ಎಂದು ಹೇಳಿದರು. ಆ ಪಿಶಾಚಿಯನ್ನು ಮರೆಯುವುದಕ್ಕೆ ಕಲಿಯುಗಕ್ಕೆ ವೈಕುಂಠ ವೆಂಕಟೇಶ್ವರ ಎಂದು ಹಾಡಿ ಕುಣಿದುಕೊಂಡು ಬಂದ. ಮನುಷ್ಯನಿಗೆ ಬೇಕಾದಷ್ಟು ನಂಬಿಕೆಗಳಿದ್ದು, ಅದರ ಮೇಲೆ ನಡೆಯುತ್ತಿವೆ. ಆದರೆ ನಂಬಿಕೆಗಳಿಂದ ಇನ್ನೊಬ್ಬರಿಗೆ ಅನ್ಯಾಯವಾಗಬಾರದು, ಮೋಸವಾಗಬಾರದು ಮತ್ತು ದುಷ್ಟಚಾರವಾಗಬಾರದು. ಮಾನ್ಯ ವಿ. ಸೋಮಣ್ಣನವರು ಮಾತನಾಡುತ್ತಾ, ಹಾಗೆ ಹಾರಿಸಿದ ಎಂದು ಹೇಳಿದರು. ಆತ ಹಾರಿಸಲಿ ಬಿಡಿ, ಅದರಿಂದ ಕೊಳ್ಳೆ ಹೋಗುವುದು ಏನು? ಅವನ ನಂಬಿಕೆ ಮಾಡಿದ. ಯಾರೋ ಯಂತ್ರ ಕಟ್ಟುತ್ತಾರೆ, ಅದರಿಂದ ವಾಸಿಯಾಯಿತು ಎನ್ನುತ್ತಾರೆ. ನಾನು ನಿಜ ಹೇಳಬೇಕೆಂದರೆ, ನನಗೆ ಕಾಮಾಲೆ ರೋಗ ಬಂದಿತ್ತು ಎಂದು ಒಟ್ಟು 7 ಬರೆಗಳನ್ನು ಚಿಕ್ಕ ವಯಸ್ಸಿನಲ್ಲಿ ಹಾಕಿದ್ದಾರೆ. ಸುಮಾರು 80 ವರ್ಷಗಳ ಕೆಳಗೆ ನನ್ನನ್ನು ಎತ್ತಿನ ಗಾಡಿಯಲ್ಲಿ ಕರೆದುಕೊಂಡು ಹೋಗಿ ಬರೆ ಹಾಕಿಸಿದ್ದಾರೆ, ಅವು ಈಗಲೂ ಕಾಣಿಸುತ್ತವೆ. ಆಗ ಅದೇ ಇದ್ದುದ್ದರಿಂದ ಏನೂ ಮಾಡುವುದಕ್ಕೆ ಆಗುತ್ತಿರಲಿಲ್ಲ. ನಾವು ಮಾಡಿದ್ದನ್ನು ಮಾಡಿಸಿಕೊಂಡು ಬರಬೇಕು, ಅದರಂತೆ ಮಾಡಿಸಿಕೊಂಡು ಬಂದೆ. ಬರೆ ಹಾಕಿ ಎಣ್ಣೆಯ ಬಟ್ಟೆ ಇಡುತ್ತಾರೆ. I am victim of it. ಅಪ್ಪ-ಅಮ್ಮ ಕರೆದುಕೊಂಡು ಹೋಗಿ ಮಾಡಿಸುತ್ತಾರೆ. What is the philosophy of human being is most- important and human philosophy is quite same at different stages. ವೆಂಕಟೇಶ್ವರನಿಗೆ ಇಬ್ಬರು ಹೆಂಡತಿಯರು!. ಕಂಡಿದ್ದವರು ಯಾರು? ಅದೇ ರೀತಿ ಸುಬ್ರಮಣ್ಯನಿಗೆ ಇಬ್ಬರು ಹೆಂಡತಿಯರು! ನೋಡಿದ್ದವರು ಯಾರು? ನಾನು ದೇವರನ್ನು ನಂಬುತ್ತೇನೆ, ಆದರೆ ಆ ಪ್ರಮಾಣದಲ್ಲಿ ದೇವರನ್ನು ನಂಬುವುದಿಲ್ಲ. ಏಕೆಂದರೆ ಜಗತ್ತನ್ನು ಸೃಷ್ಟಿ ಮಾಡಿದವ ಯಾರೋ ಒಬ್ಬರು ಇರಲೇಬೇಕಲ್ಲವೇ? ಇದ್ದೇ ಇದ್ದಾನೆ. For scientific knowledge, ಸೂರ್ಯ ಕೂಡ

ಚಲಿಸುತ್ತಿದ್ದಾನೆ. ಎಷ್ಟೋ ಕೋಟಿ ವರ್ಷಗಳ ನಂತರ ಸೂರ್ಯ ಮಾಯವಾಗಿ ಬಿಡುತ್ತಾನೆ!, ಇರುವುದಿಲ್ಲ. ನನ್ನ ದೃಷ್ಟಿಯಲ್ಲಿ ಸೂರ್ಯನೇ ದೇವರು. ನನ್ನ ದೃಷ್ಟಿಯಲ್ಲಿ ಬೆಳಗ್ಗೆ ಎದ್ದು ಸೂರ್ಯ ನಮಸ್ಕಾರ ಮಾಡಬೇಕು, ಏಕೆಂದರೆ ಅವನೇ ಜೀವರಕ್ಷಕ!, ಅವನೇ ಪ್ರಾಣರಕ್ಷಕ!, ಅವನೇ ಅನಾಥರಕ್ಷಕ!. ಏಕೆಂದರೆ, every day we see it. ಅವನ ಬೆಳಕು ಬಂದರೆ ಗಿಡಗಳು ಬದುಕುತ್ತವೆ, ಅವನ ಬೆಳಕು ಬಂದರೆ ಒಳ್ಳೆ ನೀರು ಸಿಗುತ್ತದೆ, ಎಲ್ಲವೂ ಸಿಗುತ್ತದೆ. ಅದನ್ನು ದೇವರು ಎಂದು ಹೇಳುವುದರಲ್ಲಿ ಏನೂ ತಪ್ಪಿಲ್ಲ.

ಶ್ರೀ ಕೆ.ಬಿ. ಶಾಣಪ್ಪ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, in an ancient Sanskrit text, ಪ್ರಶ್ನೋಪನಿಷತ್ತಿನಲ್ಲಿ ಪಿಪ್ಪಲಾದ ಋಷಿ ಪ್ರಶ್ನೆ ಬರುತ್ತದೆ. " ನಾನು ಯಾರೆಂಬುದು ನನಗೆ ಗೊತ್ತಿಲ್ಲ!, ನಾನ್ಯಾರೆಂಬುದನ್ನು ಅರಿ, ನೀನು ಸೂರ್ಯನಲ್ಲದ್ದಿ, ಅವನಿಂದ ನೀರು ಆವಿಯಾಗುತ್ತದೆ, ನೀರಾಗುತ್ತದೆ, ಮಳೆಯಾಗುತ್ತದೆ, ಕೊನೆಗೆ ಅನ್ನಂ ಬ್ರಹ್ಮವಾಗುತ್ತದೆ" ಎಂದು ಸೂರ್ಯನೇ ಮೂಲ ಎಂದು ಹೇಳುತ್ತಾನೆ. ಇದನ್ನು ನಾನು ಬಹಳ ವಿಸ್ತಾರವಾಗಿ ಹೇಳುವುದಿಲ್ಲ.

ಉಪ ಸಭಾಪತಿಯವರು:- ಮಾನ್ಯ ರಾಮಚಂದ್ರಗೌಡರೇ, ಬೇಗ ಮುಕ್ತಾಯ ಮಾಡಿ.

ಶ್ರೀ ರಾಮಚಂದ್ರಗೌಡ:- ಮಾನ್ಯ ಸಭಾಪತಿಯವರೇ, ಸಾಕು ಎಂದರೆ ನಿಲ್ಲಿಸುತ್ತೇನೆ. ನಮ್ಮ ಸ್ನೇಹಿತರಿಗೆ ಏನಾದರೂ ಬೆಳಕು ಚೆಲ್ಲಬೇಕು ಎಂದರೆ I am speaking about philosophy. That's all. Philosophy is the main theme of human being. ನಮ್ಮದೇ ಒಂದು ಕಾನೂನು ಇದೆ. ಮಾನ್ಯ ಸೀತಾರಾಂ ರವರ ಅಣ್ಣನಾದ ಶ್ರೀ ಜಯರಾಂ ಎಂಬುವವರು ಮಹಾನ್ ದೈವಭಕ್ತರು. ಅವರು ಶನಿವಾರ ಮತ್ತು ಭಾನುವಾರ ಯಾರಿಗೂ ಸಿಗುವುದೇ ಇಲ್ಲ, ಸ್ವಾಮಿಗಳ ಹತ್ತಿರ ಇರುತ್ತಾರೆ. ಅದು ತಪ್ಪೇನಿಲ್ಲ. ನಮ್ಮ ನಂಬಿಕೆಗಳನ್ನು ನಾವು ಪಾಲನೆ ಮಾಡುತ್ತೇವೆ. ನಮ್ಮ ಮನೆಯಲ್ಲಿ ನನ್ನ ಹೆಂಡತಿ ಲಕ್ಷ್ಮಿ ಪೂಜೆಯನ್ನು ಬಹಳ ದೊಡ್ಡದಾಗಿ ಮಾಡುತ್ತಾಳೆ, ನಾನು ಮಾಡಬೇಡ ಎಂದು ಹೇಳುವುದಿಲ್ಲ, ಮಾಡಿಕೋ ಎಂದು ಹೇಳುತ್ತೇನೆ. ನಾನ್ಯಾಕೆ ಬೇಡ ಎಂದು ಹೇಳಬೇಕು. ಅದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ತೊಂದರೆ ಸ್ವಲ್ಪ ಆದರೆ ನನಗೆ ಮಾತ್ರ. ಆದ್ದರಿಂದ ಈ ವಿಧೇಯಕದ ಅವಶ್ಯಕತೆ ಇರಲಿಲ್ಲ. ಮನುಷ್ಯನಿಗೆ ಸದ್ಗುಣಗಳನ್ನು ಕಲಿಸಬೇಕು. ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ, ಮಕ್ಕಳಿಗೆ ಹೆದರಿಸಲು ಪೋಲೀಸ್ ಬರುತ್ತಾನೆ, ಗುಮ್ಮಣ್ಣ ಬರುತ್ತಾನೆ ಎಂದು ಹೇಳುತ್ತಾರೆ. ಪ್ರಪಂಚದಲ್ಲಿ ಒಂದೇ ಮದುವೆ ಮಾಡಿಕೊಳ್ಳಬೇಕೆಂದು ಕಾನೂನು ಮಾಡಿದರು, ಇನ್ನೊಂದು ಹೆಣ್ಣನ್ನು ನೋಡಬಾರದೆಂದು ಮಾಡಿದರು. ಏಕೆಂದರೆ ನಾವು ಪ್ರಾಣಿಗಳ ತರಹ ಆಗಿಬಿಡುತ್ತೇವೆ, ಆ ರೀತಿ ಆಗಬಾರದೆಂದು ಒಂದು ಕಾನೂನು ಮಾಡಿಕೊಂಡು ಬದುಕಿಗೊಂಡು ಮಾಡಿದ್ದೇವೆ. ಆ ಕಾನೂನಿನ ಪ್ರಕಾರ ಬದುಕುವುದಕ್ಕಾಗಿ ಮಾಡಿದ್ದೇವೆಯೇ ವಿನಃ ಅದೇ ಸರಿ ಎಂದಲ್ಲ. ಅದು ಸರಿಯೂ ಹೌದು, ನಮ್ಮ ತಿಳುವಳಿಕೆಗಾಗಿ, ನಮ್ಮ ಬದುಕಿಗಾಗಿ ಮತ್ತು ತೊಂದರೆಯಾಗದಿರುವ ರೀತಿಯಲ್ಲಿ ಬದುಕುವುದಕ್ಕಾಗಿ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಗಳಲೆಲ್ಲಾ ಬಂದಿದೆ. Philosophy ಜಗತ್ತಿನಲ್ಲಿ ಒಂದೇ ಇದೆ. ಆದರೆ, you must know what you are first. 'Be good, do good and spread good' that's all. ಇದು ಬೇಕೋ, ಬೇಡವೋ ಎಂಬುದನ್ನು ಅವರೇ ತೀರ್ಮಾನ ಮಾಡಿಕೊಳ್ಳಲಿ, ನನ್ನದೇನೂ ವಿರೋಧ ಇಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು ಹೇಳಿದಂತೆ ಅವರವರ ಭಾವನೆಗಳಿಗೆ ಬಿಡುವುದು ಸೂಕ್ತ ಎನ್ನುವುದು ನನ್ನ ಭಾವನೆಯಾಗಿದೆ. ಬಿಲ್ ತಂದು ಕಾನೂನು ಮಾಡುತ್ತೇವೆ ಎನ್ನುವುದು ಸರಿಯಲ್ಲ. ಬಿಲ್‌ನಲ್ಲಿ ಬೇಕಾದಷ್ಟು defect ಗಳನ್ನು ನಾವು ನೋಡಬಹುದು. ನಾನು ಒಂದು ಉದಾಹಣೆಯನ್ನು ಹೇಳಬಯಸುತ್ತೇನೆ. ಪ್ರತಿ ದಿನ ಬೆಳಗ್ಗೆ ಟಿ.ವಿ. ಚಾನೆಲ್‌ಯಲ್ಲಿ ಸ್ವಾಮಿಗಳು ದಿನ ಭವಿಷ್ಯ ಹೇಳುತ್ತಾರೆ. ಆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯಕ್ರಮದಲ್ಲಿ ಒಬ್ಬ ಮುಗ್ಧ ಹೆಣ್ಣು ಮಗಳು ಪ್ರತಿ ದಿನ ಅವರ ಮನೆ ಮುಂದೆ 7 ಗಂಟೆ ಆದ ಕೂಡಲೆ ಸಪ್ಪಳ ಆಗುತ್ತಿದೆ ಎಂದು ಪ್ರಶ್ನೆ ಕೇಳುತ್ತಾಳೆ. ಆ ಸ್ವಾಮಿ ಆ ಹೆಣ್ಣು ಮಗಳ ಅತ್ತೆ-ಮಾವ ಸೇರಿ ಮಾಟ ಮಾಡಿ ನಿಂಬೆಹಣ್ಣು ಮಂತ್ರ ಮಾಡಿ ಹುಗಿದಿದ್ದಾರೆ ಎಂದು ಹೇಳುತ್ತಾನೆ. ಆತನ ಮಾತನ್ನು ಕೇಳಿ ಗುದ್ದಲಿ ತಂದು ಅಗೆದು ನೋಡುತ್ತಾರೆ. ಆದರೆ ಅಲ್ಲಿ ಏನೂ ಇರುವುದಿಲ್ಲ. ಪುನಃ ಮುಂದಿನ ಅವರು ವಾರ ಪ್ರಶ್ನೆ ಕೇಳಿದಾಗ ‘ ನಿಮಗೆ ತ್ರಾಸ ಆಗುತ್ತದೆ ಎಂದು ಹೋಗಿಬಿಟ್ಟಿದೆ’ ಎಂದು ಹೇಳುತ್ತಾನೆ. ಇದು ನಡೆದ ಘಟನೆ. ಇನ್ನೊಂದು ನಡೆದ ಘಟನೆ ಏನೆಂದರೆ ಬೆಂಗಳೂರಿನ ಶ್ರೀ ನೆ.ಲ. ನರೇಂದ್ರಬಾಬು ರವರ ಕ್ಷೇತ್ರದಲ್ಲಿ ಒಬ್ಬ ಸ್ವಾಮಿ ಇದ್ದಾನೆ. ಅವನು ಹೇಳುವುದರಿಂದ ಅತ್ತೆ-ಮಾವನಿಂದ ಸೊಸೆ ಬಾವಿಗೆ ಬೀಳುವುದಕ್ಕೆ ಹೋಗುತ್ತಿದ್ದಳು. ಇಂತಹವುಗಳು ಆಗುತ್ತವೆ. ಆದ್ದರಿಂದ ಮೊದಲು ಟಿ.ವಿ. ಚಾನೆಲ್‌ಗಳಲ್ಲಿ ಭವಿಷ್ಯ ಹೇಳುವುದನ್ನು ಬಂದ್ ಮಾಡಿಸಬೇಕು. ಭವಿಷ್ಯ ಏನು ಬೇಕಾದರೂ ಹೇಳುತ್ತಾರೆ. ಎಲ್ಲವನ್ನು ಇಲ್ಲಿ ಹೇಳಬಾರದು. ಇದರಿಂದ ಮುಗ್ಧ ಹೆಣ್ಣು ಮಕ್ಕಳಿಗೆ ಸಮಸ್ಯೆಯಾಗುತ್ತದೆ.

ಶ್ರೀ ರಾಮಚಂದ್ರ ಗೌಡಃ- “ಉದರನಿಮಿತ್ತಂ ಬಹುಕೃತ ವೇಷಂ” ಎಂಬಂತೆ ಹೊಟ್ಟೆಗಾಗಿ ಅನೇಕ ವೇಷಗಳನ್ನು ಹಾಕಿಕೊಂಡು ಜೀವನ ಮಾಡುತ್ತಿದ್ದಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ಸೂಕ್ಷ್ಮವಾದ ವಿಷಯಗಳು ಇರುವುದರಿಂದ, ಕಾನೂನನ್ನು ಎಷ್ಟರಮಟ್ಟಿಗೆ ಅಳವಡಿಸುವುಕ್ಕೆ ಆಗುತ್ತದೆಯೋ ಬಿಡುತ್ತದೆಯೋ ಎನ್ನುವುದು ಗೊತ್ತಿಲ್ಲ. ದೆವ್ವ ಬಿಡಿಸುವ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಎಲ್ಲಮ್ಮನ ಗುಡ್ಡದಲ್ಲಿ ನೋಡಿ, ರಾಣಿಬೆನ್ನೂರು ತಾಲ್ಲೂಕಿನ ಉಕ್ಕಡಗತ್ರಿ ಎಂಬ ಸ್ಥಳದಲ್ಲಿ ನಾನು ಸಣ್ಣವನಿದ್ದಾಗ ನನ್ನ ತಾಯಿಯವರು ನನಗೆ ಯಾವ ರೋಗಗಳು ಬರಬಾರದು ಎಂದು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಹೆಣ್ಣು ಮಕ್ಕಳನ್ನು ಜಡೆ ಹಿಡಿದುಕೊಂಡು ಹೇಗೆ ಬೇಕೋ ಹಾಗೆ ಹೊಡೆಯುತ್ತಿರುತ್ತಾರೆ. ಈಗ ಕಾನೂನಿನಲ್ಲಿ ತಂದಿರುವುದು ಒಳ್ಳೆಯದು. ಏಕೆಂದರೆ ಕೆಲವು ಅಮಾನುಷ ಘಟನೆಗಳು ತಪ್ಪುತ್ತವೆ. ಆದರೆ ಟಿ.ವಿ. ಚಾನೆಲ್‌ಗಳಲ್ಲಿ ಭವಿಷ್ಯ ಹೇಳುವುದನ್ನು ಮೊದಲು ತಪ್ಪಿಸಬೇಕು. ಅದರಿಂದ ಬಹಳಷ್ಟು ಅನಾಹುತಗಳಾಗಿವೆ. ಇತ್ತೀಚಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಎಲ್ಲರೂ ಬೆಳಗ್ಗೆ ಎದ್ದು ಸ್ನಾನ ಮಾಡಿ ಭವಿಷ್ಯ ನೋಡಲು ಕುಳಿತುಕೊಳ್ಳುತ್ತಾರೆ. ಅಂದರೆ ಸ್ನಾನ ಮಾಡಿ ಕುಳಿತರೆ ಸರಿಯಾದ ಭವಿಷ್ಯ ಹೇಳುತ್ತಾರೆಂದು ಹೇಳುತ್ತಾರೆ. ಈ ರೀತಿ ಹೇಳುವುದನ್ನು ನಾನು ದಿವಸವೂ ಕೇಳುತ್ತೇನೆ.

(ಮುಂದು)

(1184)22.11.2017/5.20/ಹೆಚ್‌ವಿಃಆರ್‌ಎನ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದುವರೆದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, ರಾಮದುರ್ಗ ತಾಲ್ಲೂಕಿನಲ್ಲಿ ನಡೆದಂತಹ ಒಂದು ಘಟನೆಯನ್ನು ನಾನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈ ತಾಲ್ಲೂಕಿನ ಒಬ್ಬ ಹೆಣ್ಣುಮಗಳಿಗೆ ಮದುವೆಯಾಗಿ 3-4 ವರ್ಷಗಳಾದರೂ ಮಕ್ಕಳಾಗುವುದಿಲ್ಲ. ಆಕೆಯ ತಾಯಿ ಬೆಳಗ್ಗೆ ದೂರದರ್ಶನದಲ್ಲಿ ಬರುವ ಜ್ಯೋತಿಷ್ಯ ಕಾರ್ಯಕ್ರಮದ ಒಬ್ಬ ಜ್ಯೋತಿಷಿಯಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದಾಗ ಆತ, ‘ಐದು ಅಮಾವಾಸ್ಯೆ ದಿನ ದೇವಸ್ಥಾನಕ್ಕೆ ಬನ್ನಿ, ನಾನು ಕಾಯಿ ಮಂತ್ರಿಸಿ ಕೊಡುತ್ತೇನೆ’ ಎಂದು ಹೇಳುತ್ತಾನೆ. ಪಾಪ ಇವರುಗಳು ಐದು ಅಮವಾಸ್ಯೆಯ ದಿನ ದೇವಸ್ಥಾನಕ್ಕೆ ಹೋಗುತ್ತಾರೆ. ನಾಲ್ಕು ಅಮಾವಾಸ್ಯೆಗಳು ಆದ ನಂತರ, ‘ಐದನೆಯ ಅಮಾವಾಸ್ಯೆ ದಿನ ನೀವು ಮಡಿಯಿಂದ ಬರಬೇಕು ಬಸ್‌ನಲ್ಲಿ ಬರಬಾರದು, ಮೋಟಾರ್ ಸೈಕಲ್‌ನಲ್ಲಿ ಬರಬಾರದು’ ಎಂದು ಹೇಳಿ ಕಳುಹಿಸುತ್ತಾನೆ. ಅದೇ ರೀತಿ ಆ ಹೆಣ್ಣುಮಗಳು ಮತ್ತು ಆಕೆಯ ಗಂಡ ಅಮಾವಾಸ್ಯೆಯ ದಿನ ದೇವಸ್ಥಾನಕ್ಕೆ ಬಸ್‌ನಲ್ಲಿ ಅಥವಾ ಮೋಟಾರ್ ಸೈಕಲ್‌ನಲ್ಲಿ ಹೋಗದೇ ಚಕ್ಕಡಿ ಹೂಡಿಕೊಂಡು ಹೋಗುತ್ತಾರೆ. ಬಿಸಿಲು ಬಹಳ ಇರುತ್ತದೆ. ದಾರಿಯಲ್ಲಿ ಹೋಗುವಾಗ ಒಬ್ಬ ಗಂಡ ಹೆಂಡತಿ ಮಗುವನ್ನು ಕರೆದುಕೊಂಡು, ನಡೆದುಕೊಂಡು ಹೋಗುತ್ತಿರುತ್ತಾರೆ. ಚಕ್ಕಡಿ ಬರುವುದನ್ನು ನೋಡಿ, ಆ ತಂದೆ ತಾಯಂದಿರು, ‘ಬಿಸಿಲು ಬಹಳವಿದೆ. ಮಗುವನ್ನು ಚಕ್ಕಡಿಯಲ್ಲಿ ಕರೆದುಕೊಂಡು ಹೋಗಿ’ ಎಂದು ಕೇಳಿಕೊಳ್ಳುತ್ತಾರೆ. ಆ ಮಗುವನ್ನು ನೋಡಿ ಕನಿಕರಗೊಂಡ ಗಂಡ, ‘ನಮ್ಮೊಡನೆ ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಗುವನ್ನು ಕರೆದುಕೊಳ್ಳೋಣ' ಎಂದು ಹೇಳುತ್ತಾನೆ. ಆದರೆ, ಮಡಿಯಿಂದ ದೇವಸ್ಥಾನಕ್ಕೆ ಹೋಗಬೇಕಾಗಿರುವುದರಿಂದ ಆ ಮಗುವನ್ನು ಕರೆದುಕೊಂಡರೆ ಮೈಲಿಗೆಯಾಗುತ್ತದೆ ಎನ್ನುವ ಕಾರಣದ ಹಿನ್ನೆಲೆಯಲ್ಲಿ ಹೆಂಡತಿ ಆ ಮಗುವನ್ನು ಕರೆದುಕೊಳ್ಳುವುದಿಲ್ಲ. ಅವರು ದೇವಸ್ಥಾನಕ್ಕೆ ಹೋದರು. ದೇವಸ್ಥಾನದ ಪೂಜಾರಿ 'ಮಡಿಯಿಂದ ಬಂದಿರುವಿರಾ?' ಎಂದು ಕೇಳುತ್ತಾನೆ. ಆಗ ಗಂಡ 'ನಾವು ದೇವಸ್ಥಾನಕ್ಕೆ ಬರುವಾಗ ಬಿಸಿಲಿನಲ್ಲಿ ಒಂದು ಮಗು ನಡೆದುಕೊಂಡು ಬರುತ್ತಿತ್ತು. ಅದನ್ನು ಚಕ್ಕಡಿಯಲ್ಲಿ ಕರೆದುಕೊಂಡು ಬರುವುದಕ್ಕೆ ನನ್ನ ಹೆಂಡತಿ ಒಪ್ಪಲಿಲ್ಲ. ಅಷ್ಟು ಮಡಿಯಿಂದ ಬಂದಿದ್ದೇವೆ. ನೀವು ಹೇಳಿದಂತೆ 5 ಅಮಾವಾಸ್ಯೆ ದೇವಸ್ಥಾನಕ್ಕೆ ಬಂದಿದ್ದೇವೆ, ತಾವು ಹೇಳಿರುವುದನ್ನೆಲ್ಲ ಮಾಡಿದ್ದೇವೆ ಆದರೆ, ಇನ್ನು ನಮಗೆ ಮಕ್ಕಳಾಗಿಲ್ಲ' ಎಂದು ಹೇಳುತ್ತಾನೆ. ಆಗ ಆ ಪೂಜಾರಿ, 'ನಿಮಗೆ ಮಕ್ಕಳಾಗುತ್ತಿತ್ತು. ಆದರೆ, ದಾರಿಯಲ್ಲಿ ಆ ಮಗುವನ್ನು ಬಿಟ್ಟು ಬಂದಿರುವುದರಿಂದ ನಿಮಗೆ ಮಕ್ಕಳಾಗುವುದಿಲ್ಲ' ಎನ್ನುವ ಮಾತನ್ನು ಹೇಳುತ್ತಾನೆ. ಆತನ ಮಾತುಗಳನ್ನು ಕೇಳಿ ಆ ದಂಪತಿಗಳು ಬೆಸ್ತು ಬಿದ್ದರು. ಇದು ಇತ್ತೀಚೆಗೆ ನಡೆದಂತಹ ಸತ್ಯ ಘಟನೆಯಾಗಿದೆ. ಇದು ದೂರದರ್ಶನದಲ್ಲಿ ಪ್ರಸಾರವಾಗುವಂತಹ ಜ್ಯೋತಿಷ್ಯ ಕಾರ್ಯಕ್ರಮದ ಪರಿಣಾಮವಾಗಿದೆ. ಸರ್ಕಾರ ಪ್ರಥಮ ಪ್ರಯತ್ನವಾಗಿ ತಂದಿರುವಂತಹ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತಿದ್ದೇನೆ. ಹಂತಹಂತವಾಗಿ ಇದನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ. ದೂರದರ್ಶನದಲ್ಲಿ ಭವಿಷ್ಯ ಹೇಳುವ ಕಾರ್ಯಕ್ರಮವನ್ನು ಸರ್ಕಾರ ನಿಲ್ಲಿಸಬೇಕಾಗಿದೆ. ಈ ಬಗ್ಗೆ ಮಾನ್ಯ ನೆ.ಲ.ನರೇಂದ್ರಬಾಬು ಅವರನ್ನು ಬೇಕಾದರೆ ಕೇಳಬಹುದು.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಧಾರವಾಡ ನಗರದಲ್ಲಿ ಒಬ್ಬ ಪ್ರೊಫೆಸರ್ ಮನೆಯಲ್ಲಿ ಅವರ ಹೆಂಡತಿ ಅತ್ತೆ ಮಾಮ ಮತ್ತು ಅವರ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಬರದಂತೆ ಮನೆಗೆ ಬೀಗ ಹಾಕುತ್ತಿದ್ದಳು. ಅವರುಗಳು ಎಲ್ಲಿಗೆ ಹೋಗಬೇಕು? ಸುಸಂಸ್ಕೃತ ಮನೆಗಳಲ್ಲಿಯೂ ಸಹ ಇಂತಹ ಘಟನೆಗಳು ನಡೆಯುತ್ತವೆ. ಆದ್ದರಿಂದ ದೂರದರ್ಶನದಲ್ಲಿ ಭವಿಷ್ಯ ಹೇಳುವ ಕಾರ್ಯಕ್ರಮವನ್ನು ನಿಲ್ಲಿಸುವ ಅಂಶವನ್ನು ಈ ವಿಧೇಯಕದಲ್ಲಿ ಸೇರಿಸಬೇಕೆಂದು ಸಲಹೆ ನೀಡುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸಾಕಷ್ಟು ಜನ ಸದಸ್ಯರು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ, ನಾನು ಅದನ್ನು ಪುನರುಚ್ಚರಿಸುವುದಕ್ಕೆ ಹೋಗದೇ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ. ಮೌಢ್ಯಗಳನ್ನು ನಿರ್ಮೂಲನ ಮಾಡುವುದು ಸಾಧ್ಯವಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಿಂದೆ ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಅಂದರೆ 2003ನೇ ಇಸವಿಯಲ್ಲಿ ಬೆಂಗಳೂರು ನಗರಕ್ಕೆ ಫಿಲಿಫೈನ್ಸ್‌ನಿಂದ ಜಾನ್ ಎನ್ನುವ ಒಬ್ಬ spiritual healing person ಬಂದಿದ್ದರು. ಆತ ನೀಡಿದ ಕಾರ್ಯಕ್ರಮಕ್ಕೆ ಸಭಾಧ್ಯಕ್ಷರು, ಬಹಳಷ್ಟು ಜನ ಸಚಿವರು ಮತ್ತು ಶಾಸಕರು ಬಂದಿದ್ದರು. ನಾನು ಮಂತ್ರಿಯಾಗಿದ್ದ ಕಾರಣ ವೇದಿಕೆಯ ಮೇಲೆ ನನ್ನನ್ನು ಕೂರಿಸಿದ್ದರು. ಆ ಸಂದರ್ಭದಲ್ಲಿ ನಮಗೆ ಅದು ಮೌಢ್ಯವೆಂದು ಅನಿಸಲಿಲ್ಲ ಮತ್ತು ಅದನ್ನು ಒಪ್ಪಿಕೊಳ್ಳಲಿಲ್ಲ. 'Let me see' ಎಂದು ಪರೀಕ್ಷೆಗೆ ಒಳಗಾಗಿದ್ದೆವು.

ಸನ್ಮಾನ್ಯ ಸಭಾಪತಿಯವರೇ, ಆ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ನನ್ನನ್ನು ಕೂರಿಸಿದ್ದರು. ನಾನು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು. ಆತ ಯಾವ ರೀತಿಯಲ್ಲಿ ರೋಗವನ್ನು ಗುಣಪಡಿಸುತ್ತಾನೆ, ಆತ ಎಷ್ಟು ಪವರ್‌ಫುಲ್ ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ನಾನು ಮಾನ್ಯ ಸಿಂಧ್ಯಾರವರ ಬಳಿ 'ಸಾರ್ ನಾನು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ. ನನಗೆ ಅವರಿಂದ ಆಶೀರ್ವಾದ ಕೊಡಿಸಿ' ಎಂದು ಕೇಳಿದೆ. ಮಾನ್ಯ ಸಿಂಧ್ಯಾರವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ಇವರು ಮಂತ್ರಿಗಳಾಗಿದ್ದಾರೆ. ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ. ಆದ್ದರಿಂದ ಅವರಿಗೆ ಆಶೀರ್ವಾದ ಕೊಡಿ' ಎಂದು ಹೇಳಿದರು. ನನ್ನ ಸಮಸ್ಯೆ ಏನು ಎಂದು ನಾನು ಅವರಿಗೆ ಹೇಳಿದೆ. ನನಗೆ *Spondylitis* pain ಸಮಸ್ಯೆ ಇತ್ತು. ಅವರು ನನ್ನ ಭುಜಗಳನ್ನು ಒತ್ತಿ 'ಆಶೀರ್ವಾದ ಮಾಡಿದ್ದೇನೆ' ಎಂದು ಹೇಳಿದರು. ನಾನು ಅಲ್ಲಿಂದ ಹೊರಟು ಹೋದೆ. ನಂತರ ನನ್ನ ಕಾಯಿಲೆ ವಾಸಿಯಾಗಲಿಲ್ಲ. ನಂತರ ಯಾವುದೋ ಹೋಟೆಲ್‌ನಲ್ಲಿ ರಕ್ತ ಬರದಂತೆ ಶಸ್ತ್ರ ಚಿಕಿತ್ಸೆ ಮಾಡಿ ರಕ್ತ ಬರದಂತೆ ಮಾಂಸದ ಉಂಡೆಗಳನ್ನು ಹೊರ ತೆಗೆದರು ಎಂದು ಹೇಳುತ್ತಿದ್ದರು. ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು, ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಮತ್ತು ಶ್ರೀ ವಿ.ಸೋಮಣ್ಣನವರು ಅವರಿಂದ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ. ವಿದ್ಯಾವಂತರು, ಬುದ್ಧಿವಂತರು ಮತ್ತು ಸಾಕಷ್ಟು ಜ್ಞಾನವುಳ್ಳ ನಾವುಗಳೇ ಇಂತಹ ಮೌಢ್ಯಗಳ ಪ್ರಭಾವಕ್ಕೆ ಒಳಗಾಗುತ್ತಿದ್ದೇವೆ. ಹೀಗಿರುವಾಗ ಜನಸಾಮಾನ್ಯರನ್ನು ನಾವು ಹೇಗೆ ನಿಗ್ರಹಿಸುವುದಕ್ಕೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಂ.ಆರ್.ಸೀತಾರಾಂಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಧೇಯಕವನ್ನು ತರುವುದು ಬೇಡ ಎನ್ನುವ ಅರ್ಥದಲ್ಲಿ ಮಾತನಾಡುತ್ತಿದ್ದಾರೆ.

**ಶ್ರೀಮತಿ ಮೋಟಮ್ಮಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರುವುದು ಬೇಡವೆಂದು ನಾನು ಹೇಳುತ್ತಿಲ್ಲ. ಮೌಢ್ಯಗಳನ್ನು ಪ್ರತಿಬಂಧಿಸುವುದು ಅಷ್ಟು ಸುಲಭವಲ್ಲ ಎಂದು ಹೇಳುತ್ತಿದ್ದೇನೆ. ಏಡ್ಸ್ ಒಂದು ಮಾರಕ ರೋಗವೆಂದು ಎಲ್ಲರಿಗೂ ಗೊತ್ತಾಗಿದೆ. ಆದರೂ ಸಹ ಇವತ್ತಿಗೂ ಎಷ್ಟೋ ಜನರು ಏಡ್ಸ್ ರೋಗಕ್ಕೆ ತುತ್ತಾಗುತ್ತಿದ್ದಾರೆಂದರೆ ಅರ್ಥವೇನು?

**ಶ್ರೀ ಕೆ.ಬಿ.ಶಾಣಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಏಡ್ಸ್ ಎನ್ನುವುದು ಒಂದು ಕಾಯಿಲೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

**ಶ್ರೀಮತಿ ಮೋಟಮ್ಮಃ–** ಸನ್ಮಾನ್ಯ ಸಭಾಪತಿಯವರೇ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎನ್ನುವುದು ನನಗೆ ಗೊತ್ತಿದೆ. ಆದರೆ, ಜನರ ನಂಬಿಕೆ ಯಾವ ರೀತಿಯಲ್ಲಿ ಇದೆಯೆಂದರೆ, 'ನಾವು ಸತ್ತರೂ ಪರ್ವಾಗಿಲ್ಲ, ಇದನ್ನು ನಾವು ಮಾಡುತ್ತೇವೆ' ಎಂದು ಹೇಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಸತಿ ಸಹಗಮನ ಪದ್ಧತಿ ಮತ್ತು ಬಾಲ್ಯವಿವಾಹಗಳನ್ನು ನಾವು ನಿಷೇಧ ಮಾಡಿದ್ದೇವೆ. ಆದರೂ ಸಹ ಗುಟ್ಟಾಗಿ ಕೆಲವೊಂದು ಕಡೆಗಳಲ್ಲಿ ನಡೆಯುತ್ತಿರುತ್ತದೆ. ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದ ಒಂದು ಪ್ರಸಂಗವನ್ನು ಇಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಮೊನ್ನೆ ನಂಜನಗೂಡಿನಲ್ಲಿ ಸುಮಾರು 35 ವರ್ಷದ ಹೆಣ್ಣುಮಗಳು heart attack ನಿಂದ ನಿಧನ ಹೊಂದಿದ್ದಳು. ಆಕೆಯ ಅಂತ್ಯಸಂಸ್ಕಾರಕ್ಕೆ ನಾನು ಹೋಗಿದ್ದೆ. ಆಕೆಯ ಗಂಡ ಎಂಜಿನಿಯರ್ ಆಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾನೆ. ಸತ್ತ ಹೆಣದ ಪಕ್ಕದಲ್ಲಿ ಆಕೆಯ ಗಂಡನಿಗೆ ಹೊಸ ಬಟ್ಟೆಯನ್ನು ತೊಡಿಸಿ, ಹೂವಿನ ಮಾಲೆ ಹಾಕಿ ಹೆಣದ ಜೊತೆಗೆ ಪೂಜೆ ಮಾಡುತ್ತಿದ್ದರು. ಇದನ್ನು ಮೌಢ್ಯ ಎನ್ನಬೇಕೇ ಅಥವಾ ಮನುಷ್ಯನ ನಂಬಿಕೆ ಎಂದು ಕರೆಯಬೇಕೇ ಎನ್ನುವುದರ ಬಗ್ಗೆ ಮಾನ್ಯ ಕಾನೂನು ಸಚಿವರು ತಿಳಿಸಬೇಕಾಗಿದೆ. ಅದೇ ರೀತಿಯಲ್ಲಿ ಗಂಡ ಸತ್ತರೆ ಹೆಂಡತಿಗೆ ಹೊಸ ಸೀರೆ ಉಡಿಸಿ, ತಲೆಯ ತುಂಬ ಹೂ ಮುಡಿಸಿ, ಕೈ ತುಂಬ ಬಳೆ ತೊಡಸಿ, ಹೆಣದ ಜೊತೆಗೆ ಕಳಸ ಹಿಡಿಸಿಕೊಂಡು ಹೋಗುತ್ತಾರೆ. ಗಂಡ ಸತ್ತ 11 ಅಥವಾ 12ನೇ ದಿನಕ್ಕೆ ಆತನ ಸಮಾಧಿಯ ಬಳಿ ಆಕೆಯನ್ನು ಕರೆದುಕೊಂಡು ಹೋಗಿ ಬಳೆ ಹೊಡೆದು, ಕುಂಕುಮ ಅಳಿಸಿ ಬರುತ್ತಾರೆ. ಇದು ಮೌಢ್ಯವೇ ಸರಿ. ಆದರೆ, ಇದನ್ನು ಹೇಗೆ ತಡೆಗಟ್ಟುವುದು? ಜನರು ಇಂತಹ ಮೌಢ್ಯಗಳನ್ನು ನಂಬಿಕೊಂಡು ಆಚರಣೆಯಲ್ಲಿಟ್ಟುಕೊಂಡು ಬಂದಿದ್ದಾರೆ. ನಮ್ಮಲ್ಲಿ ತುಂಬಾ ಮುಂದುವರೆದ ವರ್ಗ ಎಂದರೆ, ಇಲ್ಲಿ ಜಾತಿ ಹೆಸರನ್ನು ಹೇಳಿದರೆ ತಪ್ಪಾಗುತ್ತದೆಯೋ ಏನೋ, ಬ್ರಾಹ್ಮಣರಲ್ಲಿ ಗಂಡ ಸತ್ತರೆ ಆತನ ಹೆಂಡತಿಯ ತಲೆ ಬೋಳಿಸುತ್ತಾರೆ. ಸಣ್ಣ ವಯಸ್ಸಿನಲ್ಲಿ ಗಂಡ ಸತ್ತರೆ ಆಕೆ ತಲೆ ಬೋಳಿಸಿಕೊಂಡು ಬದುಕುವುದು ಹೇಗೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಕೆ ಜೀವಿಸುವುದು ಹೇಗೆ? ಇದನ್ನು ಮೌಢ್ಯವೆಂದು ಕರೆಯಬೇಕೆ ಅಥವಾ ನಂಬಿಕೆಯೆಂದು ಕರೆಯಬೇಕೆ?

**ಶ್ರೀ ಕೆ.ಬಿ.ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ಈಗ ಅಂತಹ ಪದ್ಧತಿ ಆಚರಣೆಯಲ್ಲಿ ಇಲ್ಲ.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಈಗ ಆ ಪದ್ಧತಿ ಆಚರಣೆಯಲ್ಲಿ ಇಲ್ಲ. ಆದರೆ, ಸಂಪ್ರದಾಯ ಕುಟುಂಬಗಳಲ್ಲಿ ಈಗಲೂ ಆಚರಣೆಯಲ್ಲಿದೆ. ಮೌಢ್ಯಗಳನ್ನು ಜನರ ನಂಬಿಕೆಗಳನ್ನು ತೊಡೆದು ಹಾಕುವುದು ಕಷ್ಟವೆಂದು ನನಗನ್ನಿಸುತ್ತಿದೆ. ಇಂತಹ ಸನ್ನಿವೇಶಗಳಲ್ಲಿ ವಿಚಕ್ಷಣ ದಳ ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತದೆ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಮಾಟ-ಮಂತ್ರ, ವಾಮಾಚಾರ ಮುಂತಾದವುಗಳು ನಡೆದಂತಹ ಸಂದರ್ಭದಲ್ಲಿ ಇವರು ಅದನ್ನು ಗಮನಿಸಿ ಅವರುಗಳನ್ನು ಹೇಗೆ ಹಿಡಿಯುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಕಾನೂನು ಸಚಿವರು ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕವನ್ನು ನಾನು ವಿರೋಧಿಸುತ್ತಿದ್ದೇನೆ. ಯಾವುದೇ ಧಾರ್ಮಿಕ ಭಾವನೆಗಳನ್ನು ಕಾನೂನಿನ ಮೂಲಕ ನಿಯಂತ್ರಣ ಮಾಡುವಂತಹ ಪ್ರಕ್ರಿಯೆ ಈ ದೇಶದಲ್ಲಿ ಎಂದಿಗೂ ಯಶಸ್ವಿಯಾಗಿಲ್ಲ. ನಾವು ಎಷ್ಟೇ ಕಾನೂನುಗಳನ್ನು ರಚನೆ ಮಾಡಿದರೂ ಅದರಿಂದ ಭ್ರಷ್ಟಾಚಾರ ಹೆಚ್ಚಾಗುತ್ತದೆಯೇ ಹೊರತು ಪರಿಹಾರ ಸಿಗುವುದಿಲ್ಲ. ಒಂದು ಕಡೆ ನಂಬಿಕೆ ಇದೆ. ಮತ್ತೊಂದು ಕಡೆ ಮೂಢನಂಬಿಕೆ ಇದೆ. ನಾನು ಮೂಢನಂಬಿಕೆಯನ್ನು ಸಮರ್ಥನೆ ಮಾಡುವುದಿಲ್ಲ. ಆದರೆ, ನಂಬಿಕೆಯನ್ನು ಮಾತ್ರ ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಈ ಸದನದಲ್ಲಿ ಕುಳಿತಿರುವಂತಹ ಶೇಕಡಾ 90ರಷ್ಟು ಜನರು ನಾಮಪತ್ರ ಸಲ್ಲಿಸುವಂತಹ ಸಂದರ್ಭದಲ್ಲಿ ರಾಹುಕಾಲ, ಗುಳಿಕಕಾಲ ನೋಡದೇ ರಾಹುಕಾಲದಲ್ಲಿ ನಾಮಪತ್ರವನ್ನು ಸಲ್ಲಿಸುವಂತಹವರು ಎಷ್ಟು ಜನರಿದ್ದಾರೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ರಾಹುಕಾಲದಲ್ಲಿ ನಾಮಪತ್ರವನ್ನು ಸಲ್ಲಿಸಿ ಅತಿ ಹೆಚ್ಚು ಮತಗಳ ಅಂತರಗಳಿಂದ ಗೆದ್ದು ಬಂದಿದ್ದಾರೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು, 'ಮಾನ್ಯ ಹೊರಟ್ಟಿಯವರು ರಾಹುಕಾಲದಲ್ಲಿ ನಾಮಪತ್ರ ಸಲ್ಲಿಸಿ ಅತಿ ಹೆಚ್ಚು ಮತಗಳ ಅಂತರದಿಂದ ಗೆದ್ದು ಬಂದಿದ್ದಾರೆ' ಎಂದು ಹೇಳುತ್ತಿದ್ದಾರೆ. ಆದರೆ, ಅವರ ಪಕ್ಷದ ಮುಖಂಡರು ರಾಹುಕಾಲ ಗುಳಿಕಕಾಲವನ್ನು ನೋಡದೇ ಯಾವ ಕೆಲಸವನ್ನು ಮಾಡುವುದಿಲ್ಲ.

(ಮುಂದುವರಿದಿದೆ)

(1185)22.11.2017-5.30-ಪಿಕೆ-ವಿಕೆ

**ಶ್ರೀ ಬಸನಗೌಡ ರಾ.ಪಾಟೀಲ್(ಯತ್ನಾಳ್)** (ಮುಂದುವರೆದಿದೆ)

ನಾವೂ ಕೂಡ ಅವರನ್ನೇ ಕೇಳುತ್ತಿರುತ್ತೇವೆ. ಅದನ್ನು ನಾನು ಕೆಟ್ಟದ್ದು ಎಂದು ಹೇಳುತ್ತಿಲ್ಲ. ಕೆಲವು ನಾಯಕರು ಗೋಹತ್ಯೆ ನಿಷೇಧಕ್ಕೆ ನಮ್ಮ ವಿರೋಧ ಇದೆ ಎಂದು ದೇಶಾದ್ಯಂತ ಚರ್ಚೆ ಮಾಡುತ್ತಿರುತ್ತಾರೆ. ಆದರೆ, ಅಂತಹ ನಾಯಕರ ಮನೆಯಲ್ಲಿ ಪ್ರತಿ ದಿನವೂ ಕೂಡ ಗೋಪೂಜೆಯನ್ನು ಮಾಡುತ್ತಿರುತ್ತಾರೆ. ಆಗುತ್ತಿರುತ್ತದೆ. ನಾನು ಇದನ್ನು ನನ್ನ ಕಣ್ಣಿನಿಂದ ನೋಡಿದ್ದೇನೆ. ಸೂರ್ಯನ ಪೂಜೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆ. ಬೆಳಗ್ಗೆ 1 ತಾಸು ಸೂರ್ಯನ ಪೂಜೆ ಮಾಡುತ್ತಾರೆ, 1 ತಾಸು ಗೋಪೂಜೆಯನ್ನು ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ನನಗೊಂದು ಕಥೆ ನೆನಪಾಗುತ್ತಿದೆ. ಜಗತ್ತಿನ ಒಬ್ಬ ಶ್ರೇಷ್ಠ ತತ್ವಜ್ಞಾನಿ ದೇವರು ಇಲ್ಲ ಎನ್ನುವ ವಾದವನ್ನು ಮಂಡನೆ ಮಾಡುವ ಸಲುವಾಗಿ ಇಡೀ ವಿಶ್ವದಲ್ಲಿರುವ ಬುದ್ಧಿ ಜೀವಿಗಳನ್ನು ಕರೆಯುತ್ತಾನೆ. ಬಹಳ ಗಟ್ಟಿಯಾಗಿ, ದೇವರು ಇಲ್ಲ, ದೇವರು ಎನ್ನುವುದು ಸುಳ್ಳು ಎಂದು ಆತ ವಾದ ಮಾಡಬೇಕಾಗಿತ್ತು. ಜಗತ್ತಿನ ಸಾವಿರಾರು ತತ್ವಜ್ಞಾನಿಗಳು ಒಂದು ಕಡೆ ಕೂಡಿದರು. ಈ ತತ್ವಜ್ಞಾನಿ ತನ್ನ ಮನೆ ಬಿಡುವ ಮೊದಲು ಮನೆಯಲ್ಲಿರುವ ದೇವರ ಮುಂದೆ ಹೋಗಿ, ಭಗವಂತ, ಇವತ್ತು ನಾನು ದೇವರು ಇಲ್ಲ ಎನ್ನುವ ವಾದವನ್ನು ಮಂಡನೆ ಮಾಡುತ್ತಿದ್ದೇನೆ, ನಿನ್ನ ಸಂಪೂರ್ಣ ಆಶೀರ್ವಾದ ನನಗೆ ಬೇಕು, ನನಗೆ ಯಶಸ್ಸು ತರಬೇಕು ಎಂದು ಪ್ರಾರ್ಥನೆ ಮಾಡಿಕೊಂಡ. ನಂತರ ಸಭಾಂಗಣಕ್ಕೆ ಬಂದ. ಅಲ್ಲಿ ಸಾವಿರಾರು ಜನ ಈತನ ವಾದವನ್ನು ಕೇಳುವುದಕ್ಕೆ ಕುಳಿತಿದ್ದರು. ಬಹಳ ಸಮರ್ಥವಾಗಿ, ಅತ್ಯಂತ ಯಶಸ್ವಿಯಾಗಿ ದೇವರು ಇಲ್ಲ ಎನ್ನುವ ವಾದವನ್ನು ಮಂಡನೆ ಮಾಡಿದಾಗ ಸಭೆಯಲ್ಲಿ ಭಾಗವಹಿಸಿದ್ದ ಜಗತ್ತಿನ ಎಲ್ಲಾ ಬುದ್ಧಿ ಜೀವಿಗಳು ಎದ್ದು ನಿಂತು ಚಪ್ಪಾಳೆ ಹೊಡೆದರು. ಆತನಿಗೆ ಭಯಂಕರ ಸಂತೋಷವಾಯಿತು. ಓ ದೇವರೇ, ನನ್ನ ಯಶಸ್ಸಿಗೆ ನೀನೇ ಕಾರಣ ಎಂದು ಹೇಳಿದ. ಸಭೆಯಲ್ಲಿದ್ದವರು ಚಪ್ಪಾಳೆಯನ್ನು ನಿಲ್ಲಿಸಿ ಆತನನ್ನು ಬೈಯಲ್ಲಿಕ್ಕೆ ಶುರು ಮಾಡಿದರು. ಮಾನ್ಯ ಸಭಾಪತಿಯವರೇ, ವಿಶ್ವಗುರು ಬಸವಣ್ಣನವರ ಬಗ್ಗೆ ಮಾನ್ಯ ರಾಮಚಂದ್ರಗೌಡರು ಹೇಳಿದರು. ಮಾನ್ಯ ಬಸವಣ್ಣನವರು ಮೂಢ ನಂಬಿಕೆಗಳ ವಿರುದ್ಧ ಹೋರಾಟ ಮಾಡಿದರು. ಜಾತಿ ನಿರ್ಮೂಲನೆ ಆಗಬೇಕೆಂದು ಹೋರಾಟ ಮಾಡಿದರು. ಅಸ್ಪೃಶ್ಯತೆ ವಿರುದ್ಧ ಹೋರಾಟ ಮಾಡಿದರು. ದಲಿತ ಹೆಣ್ಣು ಮಗಳನ್ನು ಬ್ರಾಹ್ಮಣನ ಮನೆಗೆ ಕೊಡುವುದರ ಮೂಲಕ ಒಂದು ಕ್ರಾಂತಿಯನ್ನು ಮಾಡಿದರು. ಅಂತಹ ಒಂದು ವೈದಿಕ ವ್ಯವಸ್ಥೆ ಇದ್ದ ಕಾಲದಲ್ಲಿ ಕ್ರಾಂತಿಯಾಯಿತು. ರಾಜಾರಾಂ ಮೋಹನ್‌ರಾಯ್ ರವರು ಸತಿ ಸಹಗಮನ ಪದ್ಧತಿ ಮತ್ತು ಬಾಲ್ಯ ವಿವಾಹದ ಕೆಡಕುಗಳ ಬಗ್ಗೆ ಜನ ಜಾಗೃತಿ ಮಾಡಿದರು. ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿರಾವ್ ಪುಲೆ, ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ಹೀಗೆ ಅನೇಕ ಸತ್ಪುರುಷರು ಈ ದೇಶದಲ್ಲಿ ಬದಲಾವಣೆಯನ್ನು ತರಲು, ಜನರಲ್ಲಿ ಜಾಗೃತಿ ಮಾಡಿಸುವ ಕೆಲಸ ಮಾಡಿದರು, ಅಂಥವರಿಗೆ ಶಿಕ್ಷಣ ಕೊಡುವ ನಿಟ್ಟನಲ್ಲಿ ಪ್ರಯತ್ನಪಟ್ಟರು. ಮಹಾತ್ಮ ಪುಲೆ, ಸಾವಿತ್ರಿಬಾಯಿ ಪುಲೆ ಇವರು ದೇಶದ ದಲಿತ ಮಕ್ಕಳಿಗೆ ಶಿಕ್ಷಣ ಕೊಡುವುದರ ಮೂಲಕ ಅವರಲ್ಲಿ ಬದಲಾವಣೆ ತರುವುದಕ್ಕೆ ಪ್ರಯತ್ನ ಮಾಡಿದರು. ಎಲ್ಲಿ ಶಿಕ್ಷಣ ಇರುತ್ತದೆಯೋ ಅಲ್ಲಿ ಮೂಢ ನಂಬಿಕೆ ಸಹಜವಾಗಿ ಹೋಗಿಬಿಡುತ್ತದೆ. ನಾವು ಶಿಕ್ಷಣಕ್ಕೆ ಮಹತ್ವ ಕೊಡಬೇಕು. ಅದಕ್ಕೋಸ್ಕರ ಡಾ: ಅಂಬೇಡ್ಕರ್‌ರವರು ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಬಗ್ಗೆ ಮಾತನಾಡಿದ್ದರು. ಮಾನ್ಯ ಮುಖ್ಯ ಸಚೇತಕರು ಒಂದು ಘಟನೆ ಹೇಳಿದರು. ಉತ್ತರ ಕರ್ನಾಟಕದ ಕಡೆ, "ಎಲ್ಲಮ್ಮನ ಗುಡ್ಡದಾಗೆ ಮುಲ್ಲಾನ ಕೆಲಸ ಏನು" ಎನ್ನುವ ಗಾದೆ ಮಾತಿದೆ. ಮಾನ್ಯ ಐವನ್ ಡಿ'ಸೋಜಾರವರಿಗೂ ಮತ್ತು ಯಜ್ಞ-ಪಜ್ಞ, ಹೋಮ ಇವುಗಳಿಗೆ ಏನು ಸಂಬಂಧ? ಇದಕ್ಕೆ ಒಂದೂವರೆ ಲಕ್ಷ ರೂಪಾಯಿಗಳನ್ನು ಏಕೆ ಖರ್ಚು ಮಾಡಿದರು? ಮಾನ್ಯ ಸಭಾಪತಿಯವರೇ, ನಮ್ಮ ತಲೆಯಲ್ಲಿ ಹುಚ್ಚು ಇರುತ್ತದೆ. ನಾನು ಸೋತಾಗ ಎಲ್ಲರೂ ಒಂದೊಂದು ದೇವರ ಹೆಸರುಗಳನ್ನು ಹೇಳುತ್ತಿದ್ದರು. ನಾವು ಅಲ್ಲಿಗೆ ಹೋಗುತ್ತಿದ್ದೆವು. ಕಾಳಸರ್ಪ ದೋಷ ಇದೆ ಹೇಳಿದಾಗ ಅದರ ನಿವಾರಣೆಗಾಗಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿದ್ದೆ. ಮೂರು ದಿವಸ ಅಲ್ಲೇ ಇರಬೇಕಾಗುತ್ತದೆ. ಅಲ್ಲಿರುವ ನದಿಯಲ್ಲಿ ಸ್ನಾನ ಮಾಡಬೇಕು, ಮುಂಜಾನೆ ಎಲ್ಲಾ ರೀತಿಯ ವಿಧಿ-ವಿಧಾನಗಳನ್ನು ಪೂರೈಸಬೇಕು ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಅಸಿಸ್ಟೆಂಟ್ ಕಮಿಷನರ್‌ರವರು ಆ ದೇವಸ್ಥಾನದ ಆಡಳಿತ ಅಧಿಕಾರಿಗಳು. ನಾನು ಒಬ್ಬ ಮಾಜಿ ಕೇಂದ್ರ ಸಚಿವ ಎಂದು ನಮ್ಮನ್ನು ಸ್ವಾಗತ ಮಾಡಿ, ರೂ.5001 ಹಣ ಕಟ್ಟಿಸಿಕೊಂಡು ಶಾಸ್ತ್ರೋಕ್ತವಾಗಿ ಎಲ್ಲಾ ಮಾಡಿಸಿದರು. ನಾನು ಅವರಿಗೆ, ಇಲ್ಲಿಗೆ ಯಾರ್ಯಾರು ಬಂದು ಹೋಗಿದ್ದಾರೆ ಎಂದು ಕೇಳಿದೆ. ಆಗ ಅವರು, ಮೊನ್ನೆ ಸಚಿನ್ ತೆಂಡೂಲ್ಕರ್ ಬಂದಿದ್ದರು, ಮಾನ್ಯ ಎಸ್.ಎಂ.ಕೃಷ್ಣರವರು ಬಂದಿದ್ದರು, ಶ್ರೀಮತಿ ಐಶ್ವರ್ಯರೈ ಅವರು ಬಂದಿದ್ದರು, ಶ್ರೀ ರವಿಶಾಸ್ತ್ರಿಯವರು ಬಂದಿದ್ದರು ಎಂದು ಹೇಳಿದರು. ಇನ್ನೂ ಆಶ್ಚರ್ಯದ ವಿಷಯ ಎಂದರೆ, ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. ಸೌದಿ ಅರೇಬಿಯಾದಿಂದ ಮುಸ್ಲಿಂ ಜನ ಬೇರೆ ವೇಷದಲ್ಲಿ ಬಂದು ಅಲ್ಲಿ ಪೂಜೆ ಮಾಡಿಕೊಂಡು ಹೋಗಿರುವುದು ಗೊತ್ತಾಯಿತು. ಇದಕ್ಕೆ ನೀವು ಏನು ಕಾನೂನು ಮಾಡುತ್ತೀರಿ? ಮುಸ್ಲಿಮರೂ ಸಹಿತ ಅಲ್ಲಿಗೆ ಬಂದು ಪೂಜೆ ಮಾಡುತ್ತಾರೆ. ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ ಜನಜಾಗೃತಿ ಮಾಡಬೇಕು. ಮಾನ್ಯ ಸೋಮಣ್ಣನವರು ಶ್ರೀ ಹುಲಿಕಲ್ ನಟರಾಜ್ ಬಗ್ಗೆ ಹೇಳಿದರು. ಮೂಢ ನಂಬಿಕೆಗಳ ವಿರುದ್ಧ ಇಂಥವರನ್ನು ಸರ್ಕಾರದ ರಾಯಭಾರಿಯಾಗಿ ಮಾಡಬೇಕು. ಇವತ್ತು ಶ್ರೀ ಅಮಿತಾಬ್ ಬಚನ್‌ರವರನ್ನು ಗುಜರಾತ್‌ನ ಪ್ರವಾಸೋದ್ಯಮದ ರಾಯಭಾರಿಯನ್ನಾಗಿ ಮಾಡಿದ್ದಾರೆ. ಗುಜರಾತ್‌ನಲ್ಲಿ ಉಸುಕು ಬಿಟ್ಟು ಬೇರೆ ಏನೂ ಇಲ್ಲ, ಒಂದೆರಡು ಒಂಟೆಗಳು ಬಿಟ್ಟು ಬೇರೆ ಸುಡುಗಾಡು ಕೂಡ ಇಲ್ಲ. ಇದನ್ನೇ ಟೂರಿಸಂ ಎಂದು, ಅಮಿತಾಬ್ ಬಚನ್‌ರವರು ಜಾಹೀರಾತಿನಲ್ಲಿ ಬಂದು, "ಭಾಯಿಯೋ ಔರ್ ಬಹನೋ ಗುಜರಾತ್ ಕೋ ಆವೋ" ಎಂದು ಹೇಳಿಬಿಡುತ್ತಾರೆ. ಅಲ್ಲಿ ಹೋದರೆ ಸುಡುಗಾಡು ಕೂಡ ಇಲ್ಲ. ದೊಡ್ಡ ಮರುಳು ಗಾಡು, ಅಲ್ಲಲ್ಲಿ ಜಿಂಕೆಗಳು ಕಂಡುಬರುತ್ತವೆ. ನಮ್ಮಲ್ಲಿ ಜಿಂಕೆಗಳಿಲ್ಲವೇ? ಹುಲಿಗಳಿಲ್ಲವೇ? ಇದು ಕೇವಲ ಜನರನ್ನು ಆಕರ್ಷಿಸುವ ಪರಿ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಮೂಢ ನಂಬಿಕೆಗಳನ್ನು ದೂರ ಮಾಡುವಂತಹ ಒಂದು ಅಭಿಯಾನವನ್ನು ಇವತ್ತು ಮಾಡಬೇಕಾಗಿದೆ. ಈ ದೇಶದಲ್ಲಿ ಒಂದು ದೊಡ್ಡ ತಪ್ಪು ನಡೆಯುತ್ತಿದೆ. ಪ್ರಗತಿಪರರು, ಬುದ್ಧಿ ಜೀವಿಗಳು ಮತ್ತು ಹಿಂದೂ ಧರ್ಮವನ್ನು ವಿರೋಧ ಮಾಡುವಂತಹ ಸಾಹಿತಿಗಳ ಮಾತುಗಳನ್ನು ಕೇಳಿ ನೀವು ಹಾಳಾಗುತ್ತಿದ್ದೀರಿ. ಪಶ್ಚಿಮ ಬಂಗಾಳದಿಂದ ಕಮ್ಯುನಿಸ್ಟರು ಹೋಗಿಬಿಟ್ಟರು. ಅವರ ಕಂಪನಿಯೇ ಕಿತ್ತುಕೊಂಡು ಹೋಯಿತು. 30 ವರ್ಷ ಜ್ಯೋತಿಬಸುರವರು ಮುಖ್ಯ ಮಂತ್ರಿಯಾಗಿ ಇದ್ದಂಥ ರಾಜ್ಯದಲ್ಲಿ ಇವತ್ತು ಮಮತಾ ಬ್ಯಾನರ್ಜಿಯವರು ಬಂದು ಕುಳಿತಿದ್ದಾರೆ. ಈ ಮಮತಾ ಬ್ಯಾನರ್ಜಿಯವರೂ ಕೂಡ, ನೀವು ಇಲ್ಲಿ ಹೇಗೆ ಮಾಡುತ್ತಿದ್ದೀರೋ ಹಾಗೆಯೇ ಮಾಡುತ್ತಿದ್ದಾರೆ. ದುರ್ಗಾ ದೇವಿಯ ಮೂರ್ತಿಯನ್ನು ಇಂತಿಷ್ಟು ಅವಧಿಯ ಒಳಗೆಯೇ ಎತ್ತಬೇಕು, ಏಕೆಂದರೆ ಮೊಹರಂ ಬರುತ್ತಿದೆ ಎನ್ನುವ ಧೋರಣೆ ತಾಳಿದ್ದನ್ನು ಅಲ್ಲಿ ನೋಡಿದ್ದೇವೆ. ಈ ರೀತಿ ಮಾಡಿ, ನೀವು ಎಲ್ಲೋ ಒಂದು ಕಡೆ ಹಿಂದೂಗಳ ಭಾವನೆಗಳನ್ನು ಅವಮಾನ ಮಾಡುತ್ತಿದ್ದೀರಿ. ನಾನು ಎರಡು ಸಲ ಲೋಕಸಭಾ ಸದಸ್ಯನಾಗಿದ್ದೆ. ಪಾರ್ಲಿಮೆಂಟ್‌ನ ಸೆಂಟ್ರಲ್ ಹಾಲ್‌ನಲ್ಲಿ ಅನೇಕ ಪಕ್ಷದ ಎಂ.ಪಿ.ಗಳು ಮತ್ತು ಮಾಜಿ ಎಂ.ಪಿಗಳು ಕುಳಿತುಕೊಂಡು, ಈ ದೇಶದಲ್ಲಿ ಇನ್ನೂ 20-25 ವರ್ಷಗಳ ಕಾಲ ಸಿಂಗಲ್ ಪಾರ್ಟಿ ಮೆಜಾರಿಟಿ ಬರುವುದಿಲ್ಲ, ಮಿಲಿ-ಜುಲಿ ಸರ್ಕಾರ್ ಆಯೇಗಾ ಎಂದು ಮಾತನಾಡಿಕೊಳ್ಳುತ್ತಿದ್ದೆವು. 23 ಪಕ್ಷಗಳನ್ನು ಒಟ್ಟುಗೂಡಿಸಿಕೊಂಡು ಮಾನ್ಯ ವಾಜಪೇಯಿಯವರು ಸರ್ಕಾರ ಮಾಡಲಿ, 18 ಪಕ್ಷಗಳನ್ನು ಒಟ್ಟುಗೂಡಿಸಿಕೊಂಡು ಯುಪಿಎ ಸರ್ಕಾರ ಮಾಡಲಿ ಎಂದು ಮಾತನಾಡಿಕೊಳ್ಳುತ್ತಿದ್ದೆವು. ಕಾಂಗ್ರೆಸ್‌ನದ್ದೇ ಬಹುಮತ ಬರಲಿ ಅಥವಾ ಬಿಜೆಪಿಯದ್ದೇ ಬಹುಮತ ಬರಲಿ, ಒಟ್ಟಿನಲ್ಲಿ ದೇಶಕ್ಕೆ ಒಳ್ಳೆಯದಾಗಬೇಕಾದರೆ ಸಿಂಗಲ್ ಪಾರ್ಟಿ ಮೆಜಾರಿಟಿ ಬರಬೇಕು ಎಂದು ನಾವು ಚಿಂತನೆ ಮಾಡುತ್ತಿದ್ದೆವು.

ಮಾನ್ಯ ಸಭಾಪತಿಯವರೇ, ಈ ದೇಶದ ಪ್ರಧಾನ ಮಂತ್ರಿಗಳು ಮುಂಜಾನೆ ಶಿವಮಂದಿರಕ್ಕೆ ಹೋಗದೆಯೇ ತಮ್ಮ ದಿನಚರಿಯನ್ನು ಪ್ರಾರಂಭ ಮಾಡುವುದಿಲ್ಲ. ಗುಜರಾತ್‌ನಲ್ಲಿ ಚುನಾವಣೆ ಇರುವುದರಿಂದ ಅಲ್ಲಿ ಮಾನ್ಯ ರಾಹುಲ್‌ಗಾಂಧಿಯವರು ಏನು ಮಾಡುತ್ತಿದ್ದಾರೆ? ಎಲ್ಲಾ ಕಡೆ ಭಜನೆ ಮಾಡುತ್ತಿದ್ದಾರೆ. ಅದು ಮೂಢ ನಂಬಿಕೆ ಅಲ್ಲವೇ? ಇಷ್ಟು ದಿವಸ ನಂಬಲಾರದವರು ಈಗ ದೇವರನ್ನು ಏಕೆ ನಂಬುತ್ತಿದ್ದೀರಿ?

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ದಯವಿಟ್ಟು ತಾವು ವಿಧೇಯಕದಲ್ಲಿ ಏನಿದೆ ಎನ್ನುವುದನ್ನು ಓದಿ.

**ಶ್ರೀ ಎಂ.ನಾರಾಯಣಸ್ವಾಮಿ:-** ದೇವಸ್ಥಾನಕ್ಕೆ ಹೋಗುವುದು ಮೂಢ ನಂಬಿಕೆಯೇ?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ರಮಾನಾಥ್ ರೈ**:- ಭಜನೆ ಮಾಡುವುದು ಮೂಢ ನಂಬಿಕೆಯೇ?

(ಗೊಂದಲ)

**ಉಪಸಭಾಪತಿಯವರು**:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಮುಂದು . . .)

(1186)22-11-2017 5.40 ಡಿಎಸ್-ವಿಕೆ

(ಗೊಂದಲ)

**ಶ್ರೀ ಪುಟ್ಟಣ್ಣ**:- ಭಜನೆ ಮಾಡುವುದು ತಪ್ಪೇ?

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ**:- ಪತ್ರಿಕೆಯಲ್ಲಿ ಬರುತ್ತದೆ, ಟಿ.ವಿ.ಯಲ್ಲಿ ಬರುತ್ತದೆ, ಭಜನೆ ಮಾಡುವುದು ಸುಳ್ಳೇ?

**ಶ್ರೀ ಪುಟ್ಟಣ್ಣ**:- ನೀವು ಹೇಳುವುದು ಮಾತ್ರ ಕೇಳಬೇಕು, ಅವರು ಹೇಳುವುದನ್ನು ಕೇಳುವುದು ಬೇಡವೇ?

(ಗೊಂದಲ)

**ಉಪ ಸಭಾಪತಿಯವರು**:- ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಯತ್ನಾಳ್‌ರವರೇ, ಎರಡು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ರಾಹುಲ್ ಗಾಂಧಿಯವರು ದೇವಸ್ಥಾನಕ್ಕೆ ಹೋಗುವುದು ತಪ್ಪು ಎಂದು ಹೇಳಲಿಲ್ಲ. ಹಿಂದೂಗಳ ದೇವಸ್ಥಾನಕ್ಕೆ ಹೋಗಬೇಕು, ನನಗೆ ಒಳ್ಳೆಯದಾಗುತ್ತದೆ ಎನ್ನುವ ಭಾವನೆ ಅವರಿಗೆ ಬರುತ್ತಿದೆ. ರಾಹುಲ್ ಗಾಂಧಿಯವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು**:- ರಾಹುಲ್ ಗಾಂಧಿ ಯಾವ caste? ಮಮತಾ ಬ್ಯಾನರ್ಜಿ ಯಾವ caste?

**ಶ್ರೀ ಆರ್.ಪ್ರಸನ್ನ ಕುಮಾರ್**:- ಅವರು ಧರ್ಮಸ್ಥಳಕ್ಕೆ ಹತ್ತು ವರ್ಷಗಳ ಹಿಂದೆಯೇ ಹೋಗಿದ್ದಾರೆ. ಇವತ್ತೇನು ಅವರು ಹೊಸದಾಗಿ ಹೋಗಿಲ್ಲ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಯತ್ನಾಳ್‌ರವರೇ, ಈ ವಿಧೇಯಕದ ಬಗ್ಗೆ ಇನ್ನು ಎರಡು ನಿಮಿಷದಲ್ಲಿ conclude ಮಾಡಬೇಕು. ನೀವು ಬೇರೆ ಮಾತನಾಡಿದರೆ ಅವಕಾಶ ಕೊಡುವುದಿಲ್ಲ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಡುವಂಥದ್ದು ನನ್ನ ಭಾವನೆಯನ್ನು ವ್ಯಕ್ತಪಡಿಸುವಂಥದ್ದು ಸಂವಿಧಾನಾತ್ಮಕವಾದದ್ದು. ನಾನು ಈ ಮೇಲ್ಮನೆಗೆ ಜನರ ಆಶೀರ್ವಾದದಿಂದ ಆಯ್ಕೆಯಾಗಿ ಬಂದಿರುವಂಥವನು. ನನ್ನ ಭಾವನೆಯನ್ನು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. ಅದನ್ನು ಯಾರು ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಪ್ರಜಾತಂತ್ರವೆಂದರೆ ನೀವು ಹೀಗೆ ಮಾತನಾಡಬೇಕು ಎಂದೇನೂ ಇಲ್ಲ. ಯಾರೋ ಬರೆದುಕೊಟ್ಟಿರುವುದನ್ನು ನಾನು ಓದುವುದಕ್ಕೆ ಬಂದಿಲ್ಲ.

(ಗೊಂದಲ)

**ಶ್ರೀ ಬಿ.ರಮಾನಾಥ ರೈ:-** ನಾವೆಲ್ಲರೂ ಚುನಾವಣೆಯಿಂದ ಗೆದ್ದು ಬಂದಿದ್ದೇವೆ. ನೀವೊಬ್ಬರೇ ಅಲ್ಲ.

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ ಕುಳಿತುಕೊಳ್ಳಿ. ಮಾನ್ಯ ಯತ್ನಾಳ್‌ರವರೇ, ದಯವಿಟ್ಟು ನೀವು conclude ಮಾಡಿ, ಸಮಯವಿಲ್ಲ

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಇವತ್ತು ವೈಷ್ಣವರು ಮುದ್ರೆ ಹಾಕಿಕೊಳ್ಳುವಂತಹ ಸಂಪ್ರದಾಯವಿದೆ. ನಮ್ಮ ಲಿಂಗಾಯಿತರಲ್ಲಿ ವೀರಭದ್ರೇಶ್ವರ ಶಿವನ ಅವತಾರ. ಅವರಲ್ಲಿ ಚಡಿ ಹಾಕುವಂಥದ್ದು, ನಾಲಿಗೆಗೆ ಹಾಕುವಂಥದ್ದು, ದೇವರ ನಾಮ ಹಾಕಿಕೊಂಡು ಬೆಂಕಿ ಮೇಲೆ ಹೋಗುವಂಥದ್ದು. ತೇರನ್ನು ಎಳೆಯುವಂಥದ್ದು, ಇವೆಲ್ಲವೂ ಸಾವಿರಾರು ವರ್ಷಗಳಿಂದ ಬಂದಂತಹ ಸಂಪ್ರದಾಯಗಳು. ಬೆಂಕಿ ಮೇಲೆ ಹೋಗುವಾಗ ಅನಾಹುತಗಳಾಗಿ ಬಹಳಷ್ಟು ಜನ ಸತ್ತಿದ್ದಾರೆ, ಅದಕ್ಕೆ ವೈಜ್ಞಾನಿಕ ಕಾರಣಗಳೇನು ಕೊಡುತ್ತಾರೆ? ಇವತ್ತು ಬ್ರಾಹ್ಮಣರು ಎಲ್ಲಾ ಕಡೆ ತಮ್ಮ ದೊಡ್ಡ ಸ್ವಾಮೀಜಿಗಳು ಬಂದಾಗ ಪ್ರತಿವರ್ಷ ಮುದ್ರೆಗಳನ್ನು ಹಾಕಿಕೊಳ್ಳುತ್ತಾರೆ. ಬಹುಶಃ ಜೈನ ಧರ್ಮ ಬಹಳ ಕಠಿಣ ಮತ್ತು ಪವಿತ್ರವಾದಂತಹ ಧರ್ಮ. ಅವರು ಸಾಯಂಕಾಲವಾದರೆ ಏನು ತಿನ್ನಬಾರದು, ಮಳೆಯಾದರೆ ರಸ್ತೆಗಳ ಮೇಲೆ ಹೋಗಬಾರದು, ಇಂತಹ ಕಠಿಣವಾದ ವ್ರತವನ್ನು ಅವರು ಮಾಡುತ್ತಾರೆ. ಇವತ್ತು ಕಂಬಳವನ್ನು ನಿಷೇಧ ಮಾಡಿರುವಂಥದ್ದನ್ನು ವಾಪಸ್ ತೆಗೆದುಕೊಂಡಿದ್ದಾರೆ. ಜಲ್ಲಿಕಟ್ಟಿನ ಬಗ್ಗೆ ತಮಿಳುನಾಡಿನಲ್ಲಿ ಲಕ್ಷಗಟ್ಟಲೆ ಜನರು ಅದನ್ನು ವಿರೋಧ ಮಾಡಿ ಕೋರ್ಟ್‌ಗೆ ಹೋಗಿದ್ದರು. ನಾನು ಕಾನೂನು ಸಚಿವರಿಗೆ ಹೇಳುವುದೇನೆಂದರೆ, ಇಂತಹ ಕಾನೂನುಗಳನ್ನು ತರುವುದರಲ್ಲಿ ಸಮಯ ವ್ಯರ್ಥ ಮಾಡಬೇಡಿ. ಜನಜಾಗ್ರತೆ ಮಾಡಿ ಜನರಲ್ಲಿ ಮೂಢನಂಬಿಕೆಗಳ ಬಗ್ಗೆ ವ್ಯಾಪಕವಾದ ಪ್ರಚಾರ ಮಾಡಿ. ಯಾವುದೇ ಆಗಲಿ ವೈಜ್ಞಾನಿಕ ಆಧಾರದ ಮೇಲೆ ಆಗಬೇಕು. ಇವತ್ತು ಗೋಪೂಜೆ ಮಾಡುವುದರಿಂದ ಗೋಮೂತ್ರ ಕುಡಿಯುವುದರಿಂದ, ನಾನು ದಿನಾ ಗೋಮೂತ್ರ ಕುಡಿಯುತ್ತೇನೆ. ಅದರಿಂದ ಕ್ಯಾನ್ಸರ್‌ನ್ನು ತಡೆಗಟ್ಟಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಬೇಡ ಎಂದು ಹೇಳಿದವರು ಯಾರು?

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಅದು ನನ್ನ ನಂಬಿಕೆಯ ಪ್ರಶ್ನೆ. ಗೋಹತ್ಯೆ ನಿಷೇಧ ಮಾಡುವುದಕ್ಕೆ ವಿರೋಧ ಮಾಡುತ್ತಿದ್ದಾರೆ. ಇವತ್ತು ಗುಜರಾತಿನ ಜುನಾಗಡ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಿದಾಗ ಗೋಮೂತ್ರದಲ್ಲಿ ಬಂಗಾರ ಇದೆ ಎನ್ನುವುದು ವೈಜ್ಞಾನಿಕವಾಗಿ ಗೊತ್ತಾಗಿದೆ. ಇವತ್ತು ನಾವು ಯಜ್ಞಯಾಗಾದಿಗಳನ್ನು ಮಾಡುತ್ತೇವೆ. ಎಷ್ಟೋ ರಾಜಕಾರಣಿಗಳು ಯಾರನ್ನೋ ಮುಗಿಸಬೇಕೆಂದು ಶತೃ ಸಂಹಾರ ಯಜ್ಞಯಾಗಾದಿಗಳಿಗೆ ಕೋಟಿಗಟ್ಟಲೆ ಖರ್ಚು ಮಾಡುತ್ತಾರೆ. ಸರ್ಕಾರ ಮಾಧ್ಯಮಗಳ ಮೇಲೂ ನಿಯಂತ್ರಣ ಮಾಡಬೇಕು. ಅವರು ಮೂಢನಂಬಿಕೆಗಳನ್ನು ಪ್ರಚೋದನೆ ಮಾಡುವಂತಹ ‘ಹೀಗೂ ಉಂಟೆ’ ಎಂದು ಅನೇಕ ವಿಚಾರಗಳು ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಬರುತ್ತವೆ. ನಾನು ಎರಡು ತಿಂಗಳ ಹಿಂದೆ ಮಾಧ್ಯಮದಲ್ಲಿ ನೋಡಿದೆ. ಇಂತಹ ಕಡೆ ಹೋಗಿ ಪೂಜೆಯನ್ನು ಮಾಡಿದರೆ ರಾಜಕೀಯದಲ್ಲಿ ಬಹಳಷ್ಟು ಉನ್ನತಿಯಾಗುತ್ತದೆ, ಮುಖ್ಯಮಂತ್ರಿಯಾಗುತ್ತೀರಿ ಎಂದು ಹೇಳುವುದನ್ನು ನಾನು ಮಾಧ್ಯಮದಲ್ಲಿ ನೋಡಿದೆ. ನಾನು ಅಲ್ಲಿಗೆ ಹೋದೆ, ಅಲ್ಲಿ ಹೋಗಿ ನೋಡಿದರೆ ಫೋಟೋಗಳು, ಕೆಲವು ರಾಜಕಾರಣಿಗಳ ಹೆಸರುಗಳನ್ನು ಹೇಳಿದರು, ಇವರು ಇಲ್ಲಿಗೆ ಬಂದು ಪೂಜೆ ಮಾಡಿದ್ದಾರೆ, ಅವರು

ಮಾಡಿದ್ದಾರೆ, ಇವರು ಮಾಡಿದ್ದಾರೆ ಎಂದು ಹೇಳಿದರು. ನಾನು ಹೋಗಿದ್ದೆ, ನನಗೂ ಮುಂದೆ ಸರ್ಕಾರದಲ್ಲಿ ಮಂತ್ರಿಯಾಗಬೇಕೆನ್ನುವ ಆಸೆ, ಸ್ವಾರ್ಥ ಇದ್ದೇ ಇರುತ್ತದೆ. ನಾನು ಅಲ್ಲಿಗೆ ಹೋದರೆ, ಏನೋ ಒಂದು ಹಾಳು ಬಿದ್ದ ಗುಡಿ ಇದೆ.

**ಉಪ ಸಭಾಪತಿಯವರು:-** ಮಾನ್ಯ ಯತ್ನಾಳ್‌ರವರೇ, ಬೇಗ ಮುಗಿಸಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆಯನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಅಲ್ಲಿ ದೇವಸ್ಥಾನದ ಒಳಗೆ ಹೋದೆವು. ಅರ್ಧ ಗಂಟೆ ಪೂಜೆ ಮಾಡಿದರು. ಅವರು ನನಗೆ ಕೇಳಿದರು, ಇವತ್ತು ನಿಮ್ಮ ಸಲುವಾಗಿ ದೇವರ ಹೇಳಿಕೆಯನ್ನು ಮಾಡಿಸುತ್ತೇವೆ, ವಿಶೇಷವಾಗಿ ನಾವು ಎಂದೂ ಸಾಯಂಕಾಲದ ಸಮಯದಲ್ಲಿ ಮಾಡುವುದಿಲ್ಲ. ಆದರೆ, ನೀವು ಅಷ್ಟು ದೂರದಿಂದ ಬಂದಿದ್ದೀರಿ ಎಂದ ಮೇಲೆ ಒಂದು ಪೂಜೆ ಮಾಡುತ್ತೇವೆ. ತಾವು ಅನುಮತಿ ಕೊಟ್ಟರೆ ಪೂಜೆ ಮಾಡುತ್ತೇವೆಂದು ಹೇಳಿದರು. ಆಯಿತು ಎಂದು ನಿಂತಿದ್ದೇವೆ. ಪೂಜೆ ಮಾಡಿದರು, 2000 ರೂಪಾಯಿ ನೋಟು ತಟ್ಟೆಯಲ್ಲಿ ಹಾಕಿದೆ. ಇದು ಒಳ್ಳೆಯ ಗಿರಾಕಿ ಎಂದು ಆ ಸ್ವಾಮಿಗೆ ಗೊತ್ತಾಯಿತು. ತೊಟ್ಟಿಲ ರೀತಿಯಲ್ಲಿತ್ತು, ಅದಕ್ಕೊಂದು ಪೆನ್ನು ರೀತಿ ಒಂದು ಕಡೆ ಇತ್ತು, ಅದನ್ನು ಎತ್ತಿಹಿಡಿದರು, ನೀವು ನಾನು ಹೇಳಿದಕ್ಕೆಲ್ಲಾ ಒಪ್ಪುತ್ತೀರಾ, ಅಯಿತು ಎಂದು ಹೇಳಿದೆ, ನಿಮಗೆ ಈ ಸಿದ್ಧೇಶ್ವರನ ಮೇಲೆ ನಂಬಿಕೆ ಇದೆಯೇ, ಇದೆ ಎಂದು ಹೇಳಿದೆ. ಎಲ್ಲಾ ಆದಮೇಲೆ ಅದು ಬರೆಯುವುದಕ್ಕೆ ಪ್ರಾರಂಭ ಮಾಡಿತು, ನೀನು ಮುಂದಿನ ಚುನಾವಣೆಯಲ್ಲಿ ಯಶಸ್ವಿಯಾಗುತ್ತೀಯ, ಮಂತ್ರಿಯಾಗುವಂತಹ ಯೋಗ ಇದೆ, ಆದರೆ ನನ್ನ ಕೆಲವೊಂದು ಅಪ್ಪಣೆಯನ್ನು ಪಾಲಿಸುತ್ತೀಯಾ ಎಂದು ಮೂರನೇ ಪ್ರಶ್ನೆ ಕೇಳಿದರು. ಆಯಿತು ಎಂದು ಹೇಳಿದೆ. ಎಲ್ಲಾ ಪೂಜೆ ಆಯಿತು. ಯಾವುದೋ ಒಂದು ಯಜ್ಞ ಮಾಡಬೇಕೆಂದು ಹೇಳಿದರು. ಅವರ ಮನೆಗೆ ಕರೆದುಕೊಂಡು ಹೋದರು. ತಿಂಡಿಯನ್ನು ಮಾಡಿಸಿದರು. ಎಲ್ಲರ ಕಥೆಯನ್ನು ಹೇಳಿದರು, ಇವರು ಮುಖ್ಯಮಂತ್ರಿ ಇದ್ದಾಗ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರು, ಇವರು ಇಂಧನ ಸಚಿವರಾಗಿದ್ದಾಗ ಇಷ್ಟು ಕೊಟ್ಟರು ಎಂದು ಎಲ್ಲರ ಕಥೆಯನ್ನು ಹೇಳಿದರು. ಮುಂದಿನ ಸೋಮವಾರ ನಿಮ್ಮ ಮನೆಯಲ್ಲಿ ಯಾಗವನ್ನು ಮಾಡಲೇಬೇಕು, ನಿಮಗೆ ಬಹಳ ಭಯಂಕರ ಕಷ್ಟ ಇದೆ, ತಕ್ಷಣ ಮಾಡಿಬಿಟ್ಟರೆ ಪರಿಹಾರ ಸಿಗುತ್ತದೆಂದು ಎಂದು ಹೇಳಿದರು. ನನಗೆ ಎದೆ ಡವ ಡವ ಎನ್ನುತ್ತಿದೆ.

(ಮುಂದು)

1187/22-11-2017/5-50/bkp-bns

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಮುಂದು. . )**

ಇನ್ನು ಎಷ್ಟು ಹೇಳುತ್ತಾರೋ ಎಂದು ನನಗೆ ಭಯ. ನಂತರ, ಅವರು "ನಾನು ಈಗ ಹೇಳುವುದಿಲ್ಲ, ಅದು ಸ್ವಲ್ಪ ಸಾಧಾರಣವಾಗಿ ಮಧ್ಯಮ ರೀತಿಯಲ್ಲಿ ಖರ್ಚು ಬರುತ್ತದೆ ಎಂದು ಹೇಳಿದರು. ನಾನು ಆಗ "ಆಯಿತು ಸ್ವಾಮಿ, ಎಂದಾಗ, ನನಗೆ ನಿಮ್ಮ ಪರ್ಸನಲ್ ಪೋನ್ ನಂಬರ್ ಕೊಡಿ, ನಾನು ನಿಮಗೆ ಪೋನ್ ಮಾಡುತ್ತೇನೆ" ಎಂದು ಹೇಳಿದರು. ಆಯಿತು, ಎಂದು ಹೇಳಿ ನಾನು ಆ ಊರಿನಿಂದ 20 ಕಿ.ಮೀ ದಾಟಿದ ಮೇಲೆ ಅವರು ನನಗೆ ಪೋನ್ ಮಾಡಿದರು. ಏನಿಲ್ಲಾ, ಇದು ಬಹಳ ದೊಡ್ಡ ಕಂಟಕ ಇರುವುದರಿಂದ ನೀವು ಪೂಜೆ ಮಾಡಲೇಬೇಕು, ಇಲ್ಲವೆಂದರೆ, ನಿಮಗೆ ರಾಜಕೀಯದಲ್ಲಿ ಬಹಳ ತೊಂದರೆಯಾಗುತ್ತದೆ ಎಂದಾಗ, ಆಯಿತು ಸ್ವಾಮಿ, ಇದಕ್ಕೆ ಎಷ್ಟು ಖರ್ಚು ಬರುತ್ತದೆ ಎಂದು ಅವರಿಗೆ ಕೇಳಿದೆ. ಆಗ 7 ರಿಂದ 8 ಲಕ್ಷ ರೂಪಾಯಿಗಳ ಖರ್ಚು ಬರಬಹುದು ಎಂದವರು ಹೇಳಿದರು. ಆಗ "ನಾನು ಏನೂ ಮಂತ್ರಿಯಾಗುವುದು ಬೇಡ, ಎಂ.ಎಲ್.ಎ. ಆಗುವುದೂ ಬೇಡ, ಸಾಕು ಸ್ವಾಮೀಜಿ, ಧನ್ಯವಾದಗಳು" ಎಂದು ಹೇಳಿ ಆ ವಿಷಯವನ್ನು ಅಲ್ಲಿಗೆ ಮುಗಿಸಿಬಿಟ್ಟೆ. ಈ ರೀತಿಯಲ್ಲಿ ನಂಬಿಕೆಗಳನ್ನು ದುರಪಯೋಗ ಮಾಡಿಕೊಳ್ಳುವಂಥದ್ದನ್ನು ಬಹಳಷ್ಟು ಜನರು ನಡೆಸುತ್ತಿದ್ದಾರೆ. ಅದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಮೂಢ ನಂಬಿಕೆಗಳು ಎಂದರೇನು ಎನ್ನುವಂತಹದ್ದು ವ್ಯಾಖ್ಯಾನವಾಗಬೇಕು. ನಂಬಿಕೆಗಳು ಬೇರೆ, ಮೂಢನಂಬಿಕೆಗಳು ಬೇರೆ.

ಆದ್ದರಿಂದ, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರದವರು ಯಾವುದು ನಂಬಿಕೆಗಳು, ಯಾವುದು ಮೂಢ ನಂಬಿಕೆಗಳು, ಇವುಗಳನ್ನು ನೀವು ವರ್ಗೀಕರಣ ಮಾಡಿ. ಇದಕ್ಕೆ ಸೂಕ್ತವಾದಂತಹ ತಿದ್ದುಪಡಿಯನ್ನು ತಂದು ಈ ವಿಧೇಯಕವನ್ನು ಪಾಸ್ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಈಗ ಡಾ|| ಜಯಮಾಲ ರಾಮಚಂದ್ರರವರು 2 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು. ಏಕೆಂದರೆ, ಎಲ್ಲರೂ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಈಗಾಗಲೇ ಎರಡೂವರೆ ತಾಸು ಆಗಿದೆ.

**ಡಾ|| ಜಯಮಾಲ ರಾಮಚಂದ್ರ(ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲಿಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾತನಾಡಲಿಕ್ಕೆ ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. ಆದರೆ, ಎರಡೆರಡು ನಿಮಿಷಗಳಲ್ಲಿ ತಮ್ಮ ವಿಷಯವನ್ನು ಹೇಳಿ ಮುಗಿಸಬೇಕು. ಏಕೆಂದರೆ, ಈಗಾಗಲೇ ಒಂದು ವಿಧೇಯಕದ ಮೇಲೆ ಎರಡೂವರೆ ಗಂಟೆ ಚರ್ಚೆಯಾಗಿದೆ. ಈ ರೀತಿಯಾದರೆ ಹೇಗೆ? ರಾತ್ರಿ 12-೦೦ ಗಂಟೆಯಾದರೂ ನಾವು ಸದನವನ್ನು ನಡೆಸುತ್ತೇವೆ. ನಮಗೇನೂ ತೊಂದರೆಯಿಲ್ಲ. ಆದರೆ, ನೀವು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ, ಪ್ರತಿಯೊಬ್ಬರು ಎರಡೆರಡು ನಿಮಿಷಗಳಲ್ಲಿ ನಿಮ್ಮ ಮಾತುಗಳನ್ನು ಮುಗಿಸಬೇಕು.

**ಡಾ|| ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ ತಮಗೆ ಧನ್ಯವಾದಗಳು. ಇದೊಂದು ಐತಿಹಾಸಿಕವಾದಂತಹ ವಿಧೇಯಕವಾಗಿದೆ. ಚರಿತ್ರೆಯಲ್ಲಿ ನಾವೆಲ್ಲರೂ ರಾಜರಾಮ್ ಮೋಹನ್ ರಾಯ್‌ರವರನ್ನು, ಜ್ಯೋತಿಬಾಫುಲೆ, ಮತ್ತೆ, ದಯಾನಂದ ಸರಸ್ವತಿಯವರನ್ನು, ಡಾ|| ಅಂಬೇಡ್ಕರ್‌ರವರನ್ನು ಹಾಗೂ ಮಹಾತ್ಮ ಗಾಂಧೀಜಿಯವರನ್ನು ನಾವು ನೋಡಿಲ್ಲ, ಮತ್ತೆ ಬಸವಣ್ಣನವರನ್ನೂ ಸಹ ನಾವು ನೋಡಿಲ್ಲ. ಅವರೆಲ್ಲರೂ ಕೂಡ ಸಮಾಜ ಸುಧಾರಕರಾಗಿ ಎಂತೆಂಥಹ ಅನಿಷ್ಟ ಪದ್ಧತಿಯ ವಿರುದ್ಧ ಹೋರಾಟ ಮಾಡಿದರು. ಇವತ್ತು ಅಂತಹ ಒಂದು ದೊಡ್ಡ ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಎಲ್ಲರನ್ನೂ ಕೇಳಿಕೊಂಡು, ಒಗ್ಗೂಡಿಸಿ, ಒಂದು ಧರ್ಮವನ್ನು, ಕಂದಾಚಾರವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಮೂಢ ನಂಬಿಕೆಗಳ ನಿರ್ಮೂಲನೆಯ ಕಡೆ ಏನು ಹೋಗುತ್ತಿದೆ, ಅದಕ್ಕಾಗಿ ನಾನು ಈ ಒಂದು ವಿಧೇಯಕವನ್ನು ನಾನು ಅತ್ಯಂತ ಗೌರವಪೂರಕವಾಗಿ ಸ್ವಾಗತಿಸುತ್ತೇನೆ. ಮಹಿಳೆಯ ದೃಷ್ಟಿಯಿಂದ ನೋಡುವಾಗ ಇವತ್ತು **ಪರದಾ ಪದ್ಧತಿ** ಇರಬಹುದು, **ಸತಿ ಸಹಗಮನ ಪದ್ಧತಿ** ಇರಬಹುದು, **ಬಾಲ್ಯ ವಿವಾಹ ಪದ್ಧತಿ** ಇರಬಹುದು ಈ ರೀತಿ ಅನಿಷ್ಟ ಪದ್ಧತಿಗಳೆಲ್ಲವೂ ಕೂಡ ಹೀಗೆಯೇ ಹೋರಾಟ ಮಾಡಿದ್ದರ ಫಲದಿಂದಲೇ ನಿರ್ಮೂಲನೆಯಾಗಿದೆಯೇ ವಿನಃ ತಾನಾಗಿಯೇ ಹೋಗಿಲ್ಲ. ಇವತ್ತು ಹಲವಾರು ಬದಲಾವಣೆಗಳಾಗಿವೆ ಎನ್ನುವುದನ್ನು ಮಾನ್ಯ ಸಭಾಪತಿಯವರ ಮುಖಾಂತರ ತಮ್ಮೆಲ್ಲರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಇನ್ನೊಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಸಿನಿಮಾದವರು ಮತ್ತು ರಾಜಕಾರಣಿಗಳು ಮಾತ್ರ ಈ ಕಂದಾಚಾರ, ಈ ಅನಿಷ್ಟ ಪದ್ಧತಿಗಳನ್ನು ನಂಬಬಹುದೆಂದು ಸಾಧಾರಣವಾಗಿ ನಾವೆಲ್ಲರೂ ಹೇಳಿಕೊಳ್ಳುತ್ತೇವೆ. ಈ ವಿಚಾರವಾಗಿ ಮಾನ್ಯ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಐವನ್ ಡಿ'ಸೋಜಾರವರು ಮಾನ್ಯ ಸದಸ್ಯರುಗಳಾದ ಶ್ರೀ ಬಸನಗೌಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರ್. ಪಾಟೀಲ್ (ಯತ್ನಾಳ್) ರವರು ಮತ್ತು ಶ್ರೀಮತಿ ಮೋಟಮ್ಮನವರು ಇವತ್ತು ಪ್ರಾಮಾಣಿಕವಾಗಿ ಹೇಳಿದರು. ಅವರುಗಳ ಆತ್ಮಾವಲೋಕನವನ್ನು ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಈ ವಿಚಾರವಾಗಿ ನಾವು ಸಿನಿಮಾಗಳಲ್ಲಿಯೂ ನೋಡಿದ್ದೇವೆ. ಈ ರೀತಿಯಾದಂತಹ ಮೂಢನಂಬಿಕೆ, ಕಂದಾಚಾರಗಳ ಹಿಂದೆ ಓಡಿದಂತಹವರು, ಈರ್ಷ್ಯೆಯಿಂದ ಕುಟುಂಬ-ಕುಟುಂಬಗಳು ನಾಶವಾಗಿವೆ. ಒಬ್ಬರಿಂದ, ಒಬ್ಬರಿಗೆ ಎತ್ತಿಕಟ್ಟಿ ಕುಟುಂಬಗಳೆಲ್ಲವೂ ನಾಶವಾಗಿರುವುದನ್ನೂ ಕೂಡ ನಾವು ಕಣ್ಣಾರೆ ಕಂಡಿದ್ದೇವೆ. ಆದರೆ, ಅದರ ವಿರುದ್ಧವಾಗಿ ತಂದಿರುವಂತಹ ಈ ಒಂದು ಐತಿಹಾಸಿಕವಾದಂತಹ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದರಲ್ಲಿ ಒಂದು ವಿಚಾರವನ್ನು ಬದಲಾವಣೆ ತರಬೇಕಾಗುತ್ತದೆ. ಇದರಲ್ಲಿ ಅದನ್ನು ಸೇರ್ಪಡೆ ಮಾಡಿಕೊಳ್ಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಲಿಂಗತ್ವ ಅಲ್ಪಸಂಖ್ಯಾತರ ವಿಚಾರವಾಗಿ ಹೇಳಬೇಕೆಂದರೆ, ಲಿಂಗತ್ವ ಬದಲಾವಣೆಯಾಗಬೇಕಾದರೆ, ಅವರ ಮೇಲೆ ಆಗುವಂತಹ ಆ ಒಂದು ಘೋರ ಕ್ರೌರ್ಯ, torture ಏನಿದೆ, ಅದೂ ಕೂಡ ಮೌಢ್ಯವೇ. ಅದು ಅವೈಜ್ಞಾನಿಕವಾಗಿ ಮಾಡುವಂತಹದ್ದಾಗಿದೆ. ಒಂದು ರೀತಿಯಲ್ಲಿ ಮೂಢನಂಬಿಕೆಗಳ ಮೂಲಕ ಒಂದು ಮಾನಸಿಕ ಒತ್ತಡವನ್ನು ತಂದು ಅವರ ಮೇಲೆ ಹೇರುವಂತಹದ್ದಾಗಿದೆ. ಅದೂ ಕೂಡ ಅವೈಜ್ಞಾನಿಕವಾಗಿ ಮಾಡುವಂತಹ ಲಿಂಗ ಪರಿವರ್ತನೆಯ ವಿಷಯವೂ ಕೂಡ ಇದರಲ್ಲಿ ಖಂಡಿತವಾಗಿ ಸೇರ್ಪಡೆಯಾಗಬೇಕು. ಏಕೆಂದರೆ, ಅದು ಹಿಂಸೆ, ಅದು ಕ್ರೌರ್ಯ, ಅವರ ಮೇಲೆ ಬಲಾತ್ಕಾರವಾಗಿ ಆಗುವಂಥದ್ದನ್ನು ತಡೆಯಬೇಕು. ಅದು ಅರಣ್ಯರೋಧನವಾಗಿದೆ. ಈ ವಿಚಾರದಲ್ಲಿ ಒಂದು ಕೆಲಸ ಮಾಡಬಹುದಾಗಿದೆ. ಅದನ್ನು ಮುಂದೆ ತರುತ್ತಾರೋ ಅಥವಾ ಅದನ್ನು ಇದರಲ್ಲಿಯೇ ಸೇರಿಸುತ್ತಾರೋ ನನಗೆ ಗೊತ್ತಿಲ್ಲ. ಆದರೆ, ಅದು ಕೂಡ ಸೇರ್ಪಡೆಯಾಗಬೇಕು. ಏಕೆಂದರೆ, ಇವತ್ತು ಅದು ವೈಜ್ಞಾನಿಕವಾಗಿ ಆಗಬೇಕಾಗಿದೆ. ಇವತ್ತು ಡಾಕ್ಟರ್‌ಗಳಿದ್ದಾರೆ, ಇದರಲ್ಲಿ ಬೇಕಾದಷ್ಟನ್ನು ಸೇರ್ಪಡೆ ಮಾಡಿಕೊಂಡಿದ್ದಾರೆ. ಮತ್ತೆ ಈ ವಿಷಯವಾಗಿ ಮತ್ತೊಂದು ಅಂಶವನ್ನು ಹೇಳಬೇಕಾಗಿದೆ. ಇಲ್ಲಿ "ಪರಂತು", ಎಂದು ಹೇಳಿ ಅಪರಾಧದ ಶಿಕ್ಷೆಗಳನ್ನು ಸರಿಯಾದ ರೀತಿಯಲ್ಲಿ ಹೇಳಲಿಲ್ಲ. ಶಿಕ್ಷೆಗಳನ್ನು ನೀವು ಖಡಾಖಂಡಿತವಾಗಿ ನಮೂದಿಸಿ ಹೇಳಬೇಕಾಗುತ್ತದೆ. ನಮ್ಮ ದೇಶ ಇವತ್ತು ಏನಾದರೂ ಹಾಳಾಗಿದೆ ಎಂದು ಹೇಳಿದರೆ, ಅದಕ್ಕೆ ಮೂಲ ಕಾರಣ ಶಿಕ್ಷೆಗಳನ್ನು ಪರಿಪಾಲನೆ ಮಾಡದೇ ಇರುವುದೇ ಕಾರಣವಾಗಿದೆ. ಈ ದೇಶದಲ್ಲಿ ಭಯ ಇಲ್ಲದೇ ಇರುವುದೇ ಕಾರಣವಾಗಿದೆ. ಆದ್ದರಿಂದ, ಶಿಕ್ಷೆಗಳನ್ನು ನಮೂದಿಸಬೇಕೆಂದು ಹೇಳುತ್ತಾ, ಈ ವಿಧೇಯಕವನ್ನು ಅತ್ಯಂತ ಗೌರವಪೂರ್ವಕವಾಗಿ ನಾನು ಸ್ವಾಗತಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ)**:- ಮಾನ್ಯ ಸಭಾಪತಿಯವರೇ, "ವ್ಯಕ್ತಿ" ಎಂದರೆ, ಒಬ್ಬ ಗಂಡು ಅಥವಾ ಹೆಣ್ಣು ಅಥವಾ ಉಭಯಲಿಂಗಿ (Transgender) ಅಥವಾ ನಿಗಮಿತವಾಗಿರುವ ಅಥವಾ ಆಗಿರದ ವ್ಯಕ್ತಿಗಳ ಕಂಪನಿ ಅಥವಾ ಸಂಸ್ಥೆ ಅಥವಾ ನಿಕಾಯ ಇವುಗಳನ್ನು ಒಳಗೊಳ್ಳುತ್ತದೆ;" ಇವುಗಳನ್ನು ಸಹ ಇದರಲ್ಲಿ include ಮಾಡಿದ್ದಾರೆ.

**ಡಾ॥ ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, ಇವುಗಳನ್ನು ಸಹ ಇದರಲ್ಲಿ include ಮಾಡಿದ್ದಾರೆ. ಆದರೆ, ಅವರನ್ನು ಲಿಂಗ ಪರಿವರ್ತನೆ ಮಾಡುವಾಗ ಅರಣ್ಯಕ್ಕೆ ಕರೆದುಕೊಂಡು ಹೋಗಿ ಮಾಡುವಂತಹ ಕ್ರಿಯೆ ಏನಿದೆ, ಅದು ಕ್ರೌರ್ಯ, ಅದು ಹಿಂಸೆ. ಅದನ್ನು ನಾವು ಗಮನಿಸಬೇಕಾಗುತ್ತದೆ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ)**: - ಮಾನ್ಯ ಸಭಾಪತಿಯವರೇ, ನನ್ನದು ಒಂದೇ ವಿಷಯ ಇದೆ. ನಾನು ವಿಧೇಯಕದ ಮೇಲೆ ಮಾತನಾಡುವುದಿಲ್ಲ. ಡಾ॥ ಜಯಮಾಲ ರಾಮಚಂದ್ರ ರವರು ಒಂದು ಸಲಹೆಯನ್ನು ಕೊಟ್ಟರು. ಅವರು ಇಷ್ಟೊಂದು ಮಾತನಾಡುವ ಬದಲು ಡಾ॥ ಜಯಮಾಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಮಚಂದ್ರರವರು ಕೊಟ್ಟಿರುವಂತಹ ವರದಿಯನ್ನು ಜಾರಿಗೆ ತಂದರೆ ಅವರು ಹೇಳಿದ್ದು ಎಲ್ಲವೂ ಬರುತ್ತದೆ. ಕಾನೂನು ಸಚಿವರಿಗೆ ಈ ವಿಚಾರವನ್ನು ಹೇಳಿದರೆ ಸಾಕು.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಈ ವಿಚಾರವನ್ನು ಖಂಡಿತವಾಗಿಯೂ ಕೇಳುತ್ತೇನೆ. ಇವತ್ತು ಬಾಲ್ಯವಿವಾಹ ಇಲ್ಲವೆಂದು ಹೇಳುತ್ತಿದ್ದೀರಿ. ಈ ರಾಜ್ಯದಲ್ಲಿ 70% ರಷ್ಟು ಬಾಲ್ಯವಿವಾಹವೇ ಇದೆ. ಈ ಭಾಗದಲ್ಲಿ ಆ ಭಾಗದಲ್ಲಿ ಇದೆ ಎಂದು ಹೇಳುತ್ತಿಲ್ಲ. ಎಲ್ಲಿ ಬಡತನ ಇದೆಯೋ ಅಲ್ಲಿ ಬಾಲ್ಯವಿವಾಹ ಇದೆ. ನಾನು ಸರ್ಕಾರಕ್ಕೆ ಎರಡು ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ನಾನು ಕೊಟ್ಟಿರುವಂತಹ ವರದಿಯನ್ನು ಧೂಳು ಹಿಡಿಸಬೇಡಿ, ದಯವಿಟ್ಟು ಅದನ್ನು ಜಾರಿಗೆ ತನ್ನಿ, ಆ ಮೂಲಕ ಈ ಭಾಗದ ಹೆಣ್ಣು ಮಕ್ಕಳಿಗೆ ಒಳ್ಳೆಯದಾಗುತ್ತದೆ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಡಾ॥ ಜಯಮಾಲ ರಾಮಚಂದ್ರರವರು ಕೊಟ್ಟಿರುವ ವರದಿಗೆ ಸಂಬಂಧಪಟ್ಟಂತೆ ಒಂದೇ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಡಾ॥ ಜಯಮಾಲ ರಾಮಚಂದ್ರವರ ಅಧ್ಯಕ್ಷತೆಯಲ್ಲಿ ಏನು ನಾವು ಒಂದು ಸಮಿತಿಯನ್ನು ಮಾಡಿದ್ದೇವೆ. ಅವರು ಈ ಬಗ್ಗೆ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆ ವರದಿಯ ವಿಚಾರವಾಗಿ ಈಗಾಗಲೇ ನಾವು ಅಧಿಕಾರಿಗಳ ಜೊತೆಯಲ್ಲಿ ಸಭೆಗಳನ್ನು ಮಾಡಿದ್ದೇವೆ. ಆದರೆ, ವರದಿಯನ್ನು ಕೊಟ್ಟಕೂಡಲೇ ಅದನ್ನು ಜಾರಿಗೆ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಇದು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತಹ ವಿಷಯಗಳು ಕೂಡ ಇದರಲ್ಲಿ ಅಡಕವಾಗಿರುತ್ತದೆ. ಆ ಇಲಾಖೆಯ ಅಧಿಕಾರಿಗಳೊಂದಿಗೂ ಸಹಾ ಚರ್ಚೆಗಳನ್ನು ಮಾಡಿ, ಯಾವ್ಯಾವ ಅಂಶಗಳನ್ನು ನಾವು ಕೈಗೆತ್ತಿಕೊಳ್ಳಬಹುದು, ಅಂಥದ್ದರ ಬಗ್ಗೆ ಕ್ರಮ ವಹಿಸಲಿಕ್ಕೆ ಮುಂದೆ ನಡೆದಿದ್ದೇವೆ. ಆದ್ದರಿಂದ, ಏನೂ ಆಗಿಲ್ಲ, ಧೂಳು ಹಿಡಿದಿದೆ, ಇದೆಲ್ಲವೂ ಕೂಡ ಸತ್ಯಕ್ಕೆ ದೂರವಾದ ವಿಚಾರ. ನಮ್ಮ ಸರ್ಕಾರದ ಕಾಳಜಿಯಿಂದ, ಬದ್ಧತೆಯಿಂದಲೇ ದೇಶದಲ್ಲಿ ಎಲ್ಲಿಯೂ ಕೂಡ ಇಂತಹದ್ದು ಪ್ರಯತ್ನ ಆಗದೇ ಇರುವುದನ್ನು ನಮ್ಮ ಸರ್ಕಾರ ಮಾಡಿದೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, I am not obstructing her (Minister). ಇದನ್ನು ಯಾವಾಗ ಮಾಡುತ್ತೀರಿ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಇಡೀ ವರದಿಯನ್ನು ಒಂದು ವರ್ಷದಲ್ಲಿಯೇ ಯಾರೂ ಸಹ ಜಾರಿ ಮಾಡಲಿಕ್ಕೆ ಆಗುವುದಿಲ್ಲ. ಅದು ಹಂತ-ಹಂತವಾಗಿ ಜಾರಿಯಾಗುತ್ತದೆ. ಬೇರೆ ಬೇರೆ ಇಲಾಖೆಯೊಂದಿಗೆ ನಾವು ಸಂಪರ್ಕ ಮಾಡಿಕೊಂಡು ಚರ್ಚೆಗಳನ್ನು ಮಾಡುತ್ತಿದ್ದೇವೆ, ಅದಕ್ಕೆ ಅನುಗುಣವಾಗಿ ನಾವು ಪ್ರತಿಯೊಂದನ್ನೂ ಸಹ ಹಂತ-ಹಂತವಾಗಿ ಜಾರಿ ಮಾಡಿಕೊಂಡು ಹೋಗುತ್ತೇವೆ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**ಉಪ ಸಭಾಪತಿಯವರು:-** ಶ್ರೀಯುತ ರಮೇಶ್ ಬಾಬು ರವರೇ, ದಯವಿಟ್ಟು ಕುಳಿತುಕೊಳ್ಳಿ. ಇಲ್ಲಿ ಬೇರೆ ವಿಚಾರ ಬೇಡ ಕುಳಿತುಕೊಳ್ಳಿ. ಕಾಯಿದೆ ಬಗ್ಗೆ ಮಾತ್ರ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ 10 ನಿಮಿಷಗಳ ಅವಕಾಶವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಎರಡು ನಿಮಿಷದ ಮೇಲೆ ಯಾರಿಗೂ ಹೆಚ್ಚಿಗೆ ಸಮಯ ಕೊಡುವುದಿಲ್ಲ. ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳು ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ, ಅವರು ಮಾತನಾಡಿದ್ದನ್ನು ಬಿಟ್ಟು, ಬೇರೆ ವಿಚಾರಗಳನ್ನು ಹೇಳಿ. ನಿಮಗೆ ಎಷ್ಟು ಸಮಯ ಬೇಕಾದರೂ ಕೊಡೋಣ. ಆದರೆ, ಇಲ್ಲಿ ಒಂದು ಬಿಲ್ ಪಾಸ್ ಮಾಡಲಿಕ್ಕೆ ಎರಡೂವರೆ ಗಂಟೆಯಾದರೂ ನಾವು ಇನ್ನೂ ಚರ್ಚೆ ಮಾಡುತ್ತೇವೆಂದರೆ ಸಭೆಯನ್ನು ನಾವು ನಡೆಸುವುದು ಹೇಗೆ?

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ನಾನು ವಿಜ್ಞಾನ ಪರಿಷತ್ತಿನ ಅಧ್ಯಕ್ಷನಾಗಿ ನಾನು ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ?

ಮುಂದು. . .

(1188)22.11.2017/06.00/ಎಸ್‌ವಿ-ಬಿಎನ್‌ಎಸ್

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ದಿವಂಗತ ಡಾ.ಎಚ್.ನರಸಿಂಹಯ್ಯ, ಲಕ್ಷ್ಮಣರಾವ್, ಸೀತಾರಾಮ್ ಇಂತಹ ಮಹನೀಯರಿಂದ ಕರ್ನಾಟಕ ವಿಜ್ಞಾನ ಪರಿಷತ್ತು ಸ್ಥಾಪಿತವಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಸಂಕನೂರರವರೇ, ಇದುವರೆವಿಗೂ ಅವರ ಹೆಸರುಗಳನ್ನು 10 ಜನ ಹೇಳಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಈ ವಿಜ್ಞಾನ ಪರಿಷತ್ತು ಕಳೆದ 35 ವರ್ಷಗಳಿಂದ ಈ ರಾಜ್ಯದೊಳಗೆ ಮೂಢ ನಂಬಿಕೆಗಳನ್ನು ಕಂದಾಚಾರಗಳನ್ನು ಹೊಡೆದೋಡಿಸಲಿಕ್ಕೆ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ.

**ಸಭಾಪತಿಯವರು:-** ಮಾನ್ಯ ಸಂಕನೂರರವರೇ, ಮೂಢನಂಬಿಕೆಯ ಬಗ್ಗೆ ಭಾಷಣ ಮಾಡಬೇಡಿ. ಏನಾದರೂ incorporate ಮಾಡುವುದಿದ್ದರೆ ಹೇಳಿ. ಅಥವಾ ಇನ್ನೇನಾದರೂ ಸಲಹೆ ಇದ್ದರೆ ಕೊಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡುವುದಕ್ಕೆ ಬಿಡಿ.

**ಉಪ ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ತಾವು ಹಿರಿಯರಿದ್ದೀರಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದೈದು ನಿಮಿಷ ಅವರಿಗೆ ಮಾತನಾಡಲು ಅವಕಾಶ ಕೊಟ್ಟುಬಿಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನನಗೆ ಹೀಗೇಕೆ ಮಾಡುತ್ತೀರಿ? ನಿನ್ನೆಯೂ ನನಗೆ ಅವಕಾಶ ಕೊಡಲಿಲ್ಲ. ದಯಮಾಡಿ ನನಗೆ 10 ನಿಮಿಷಗಳ ಕಾಲಾವಕಾಶ ಕೊಡಿ. ಅದಕ್ಕಿಂತ ಹೆಚ್ಚಿಗೆ ನಾನು ಮಾತನಾಡುವುದಿಲ್ಲ.

**ಉಪ ಸಭಾಪತಿಯವರು:-** ಆ ರೀತಿ ಅವಕಾಶ ಕೊಡುತ್ತಾ ಹೋದರೆ ವಿಧೇಯಕಗಳು ಪಾಸ್ ಆಗಬೇಕೆಂದರೆ ಹೇಗೆ? ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕೆಂದರೆ ಹೇಗೆ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮೂಢನಂಬಿಕೆಗಳನ್ನು ನಮ್ಮ ಸಮಾಜದಿಂದ ಹೊಡೆದೋಡಿಸಲಿಕ್ಕೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳಾಯಿತು. ಮೂಢನಂಬಿಕೆಗಳ ವಿರುದ್ಧ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೋಟಿಗಟ್ಟಲೆ ಹಣವನ್ನು

ಖರ್ಚು ಮಾಡಿದರೂ ಕೂಡ ಇನ್ನೂ ಮೂಢನಂಬಿಕೆ ಹೋಗಿರುವುದಿಲ್ಲ. ಈ ವಿಧೇಯಕವನ್ನು ತರುವುದು ಇಂದು ಅನಿವಾರ್ಯವಾಗಿದೆ. ಜನರಿಗೆ ಭಯವಿಲ್ಲ. ಭಯ ಬರಬೇಕೆಂದು ಅನಿವಾರ್ಯವಾಗಿ ಇಂದು ಈ ವಿಧೇಯಕವನ್ನು ತಂದಿದ್ದಾರೆ, ಮಸೂದೆಯನ್ನು ಮಂಡಿಸಿದ್ದಾರೆ. ಮಾನ್ಯ ಬಸನಗೌಡ ಪಾಟೀಲ್ (ಯತ್ನಾಳ್)ರವರು ಹೇಳಿದಂತೆ ಇದನ್ನು ಕಾನೂನಿನಿಂದ ತರಲಿಕ್ಕೆ ಸಾಧ್ಯವಿಲ್ಲ. ಸ್ವಾತಂತ್ರ್ಯಾನಂತರ 70 ವರ್ಷಗಳು ಕಳೆದಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೂಢನಂಬಿಕೆಗಳ ನಿಯಂತ್ರಣಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದರೂ ಸಹ ಇದನ್ನು ನಿಯಂತ್ರಿಸಲಾಗಲಿಲ್ಲ. ಮಹಿಳೆಯರು ಮತ್ತು ಮಕ್ಕಳ ಮೇಲೆ ಅನ್ಯಾಯವಾಗುತ್ತದೆ, ಶೋಷಣೆ ಆಗುತ್ತಲೇ ಇದೆ. ಆದ್ದರಿಂದ ಅನಿವಾರ್ಯವಾಗಿ ರಾಜ್ಯ ಸರ್ಕಾರದವರು ಮಸೂದೆಯನ್ನು ಮಂಡನೆ ಮಾಡಿದ್ದು, ನಾನು ಕರ್ನಾಟಕ ವಿಜ್ಞಾನ ಪರಿಷತ್ತಿನ ಅಧ್ಯಕ್ಷನಾಗಿ ಮತ್ತು ವಿಜ್ಞಾನದ ಪ್ರಾಧ್ಯಾಪಕನಾಗಿ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತ ಪಡಿಸಿದರು.)**

ಈ ವಿಧೇಯಕಕ್ಕೆ ‘ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ, 2017’ ಎಂಬ ಹೆಸರನ್ನು ಬಹಳ ಚಿಂತನೆಯನ್ನು ಮಾಡಿ ಕೊಡಲಾಗಿದೆ. ವಿಧೇಯಕದ ಹೆಸರಿನಲ್ಲಿ ಮೂಢನಂಬಿಕೆ ಎಂಬ ಶಬ್ದವನ್ನು ಬಳಸಿಯೇ ಇಲ್ಲ. ಮೂಢನಂಬಿಕೆ ಎಂದ ಕೂಡಲೇ ಜನರು ವಿರೋಧಿಸುತ್ತಾರೆಂದು ಬಹಳ ಚಿಂತನೆ ಮಾಡಿ, ವಿಚಾರ ಮಾಡಿ ಹೆಸರನ್ನು ನೀಡಿದ್ದಾರೆ. ಈ ಮಸೂದೆಯ ಕರಡನ್ನು ಸಿದ್ಧಪಡಿಸಿದವರನ್ನು ನಾನು ಅಭಿನಂದಿಸುತ್ತೇನೆ. ಅದರ title ಹಾಗಿದೆ. ‘ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ’ ಎಂಬ ಹೆಸರನ್ನು ನೀಡಿದವರನ್ನು ನಾನು ಏತಕ್ಕಾಗಿ ಅಭಿನಂದಿಸುತ್ತೇನೆಂದರೆ, ಯಾವುದು ನಂಬಿಕೆ, ಯಾವುದು ಮೂಢನಂಬಿಕೆ ಮತ್ತು ಅದರ ಸರಿ ತಪ್ಪುಗಳನ್ನು ವಿಶ್ಲೇಷಿಸುವುದು ಬಹಳ ಕಷ್ಟವಾಗುತ್ತದೆ. ಇಂದು ನಮ್ಮ ಹಿಂದೂ ಧರ್ಮದ ಪ್ರಕಾರ ನಾವು ವಿಭೂತಿ ಹಚ್ಚಿಕೊಳ್ಳುತ್ತೇವೆ. ಗಂಧವನ್ನು ಹಚ್ಚಿಕೊಳ್ಳುತ್ತೇವೆ. ಮಹಿಳೆಯರು ಹಣೆಗೆ ಕುಂಕುಮವನ್ನು ಹಚ್ಚಿಕೊಳ್ಳುತ್ತಾರೆ, ಬಳೆ ತೊಟ್ಟುಕೊಳ್ಳುತ್ತಾರೆ. ಮಕ್ಕಳಿಗೆ ಕಿವಿಯೋಲೆ ಹಾಕುತ್ತಾರೆ. ಹೆಣ್ಣುಮಕ್ಕಳಿಗೆ ಮೂಗಿಗೆ ಮೂಗುತಿ ಹಾಕುತ್ತಾರೆ. ಹಿಂದೂ ಸಂಸ್ಕೃತಿಯಲ್ಲಿರುವ ಈ ಪದ್ಧತಿಗಳನ್ನು ಸರಿ ಅಥವಾ ತಪ್ಪೆಂದು ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವೇ; ಇವು ಅವೈಜ್ಞಾನಿಕ ಎಂದು ಹೇಳುವುದಕ್ಕೆ ಸಾಧ್ಯವೇ? ಹಿಂದೂ ಧರ್ಮದಲ್ಲಿ ಹೆಣ್ಣುಮಕ್ಕಳು ಬೆಳಗ್ಗೆ ಎದ್ದು ತುಳಸಿ ಪೂಜೆಯನ್ನು ಮಾಡಿ ಪ್ರದಕ್ಷಿಣೆ ಹಾಕುತ್ತಾರೆ. ಅರಳಿ ಮರವನ್ನು ಸುತ್ತುತ್ತಾರೆ. ಹಿಂದೂ ಧರ್ಮದಲ್ಲಿ ಪ್ರತಿಯೊಂದು ಪದ್ಧತಿಗೂ, ಸಂಸ್ಕೃತಿಗೂ ವೈಜ್ಞಾನಿಕ ಹಿನ್ನೆಲೆಯಿದೆ. ಅರಳಿ ಮರವನ್ನು ಏಕೆ ಸುತ್ತುತ್ತಾರೆಂದರೆ ಅದು ಗರಿಷ್ಠ ಮಟ್ಟದ ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ತುಳಸಿ ಗಿಡಕ್ಕೆ ಔಷಧೀಯ ಗುಣವಿದೆ. ಮಲಗುವಾಗ ದಕ್ಷಿಣ-ಉತ್ತರಕ್ಕೆ ಮಲಗಬಾರದೆಂದು ಹೇಳುತ್ತಾರೆ. ಏಕೆಂದರೆ ಅಲ್ಲಿ ಆಯಸ್ಕಾಂತೀಯ ಕ್ಷೇತ್ರವಿದೆ. ಹಿಂದೂ ಸಂಸ್ಕೃತಿ ಮಾತ್ರವಲ್ಲ, ಇನ್ನು ಬೇರೆ ಯಾವುದೇ ಧರ್ಮದಲ್ಲಿಯಾದರೂ ಸಹ ಏನೇನು ಆಚರಣೆಗಳು ಇವೆಯೋ, ಅವುಗಳನ್ನು ಅವೈಜ್ಞಾನಿಕ ಎಂದು ಹೇಳುವುದು ಬಹಳ ಕಷ್ಟವಾಗುತ್ತದೆ. ಆದರೆ ಇಂದು ಈ ವಿಧೇಯಕದಲ್ಲಿ ಯಾವುದು ಅವೈಜ್ಞಾನಿಕ ಎಂದು ಹೇಳಲ್ಪಡಲಾಗುವುದೋ, ಅವುಗಳನ್ನು ಅಮಾನವೀಯ ಎಂದು ಪಟ್ಟಿ ಮಾಡಿ ಯಾವುದಕ್ಕೆ ರಿಯಾಯಿತಿ ಕೊಡಬೇಕೋ ಅವುಗಳಿಗೆ ರಿಯಾಯಿತಿ ಕೊಡುವ ಮೂಲಕ ಒಳ್ಳೆಯ ಕೆಲಸವನ್ನು ಮಾಡಲಾಗಿದೆ.

ಬೆಂಗಳೂರಿನಲ್ಲಿರತಕ್ಕಂಥ National Law School of India University, ಹುಬ್ಬಳ್ಳಿಯಲ್ಲಿರತಕ್ಕಂಥ ಕಾನೂನು ವಿಶ್ವವಿದ್ಯಾಲಯದವರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮತ್ತು ಸರ್ಕಾರ ಸೇರಿ ಈ ಕೆಲಸವನ್ನು ಮಾಡಿದೆ ಎಂದು ಮಾನ್ಯ ಕಾನೂನು ಸಚಿವರು ಹೇಳಿದರು. ಈ ಕರಡನ್ನು ಹಾಗೂ ಪಟ್ಟಿಯನ್ನು ಬಹಳ ಚೆನ್ನಾಗಿ ಸಿದ್ಧ ಪಡಿಸಲಾಗಿದೆ. ಹಿಂದೂ ಧರ್ಮದಲ್ಲಿ ಪೂಜೆ ಮಾಡುವುದಕ್ಕೆ, ಹರಿಕಥೆ, ಕೀರ್ತನೆ, ಭಜನೆ ಮಾಡುವುದನ್ನು ನಿಷೇಧಿಸಿಲ್ಲ.

ಜ್ಯೋತಿಷ್ಯ ಕಾರ್ಯಕ್ರಮಗಳ ಬಗ್ಗೆ ಎಲ್ಲಾ ಹಿರಿಯ ಸದಸ್ಯರೂ ಮಾತನಾಡಿದ್ದಾರೆ. ಜನರು ಮುಂಜಾನೆ ಎದ್ದು ಟಿ.ವಿ. ಮುಂದೆ ಕುಳಿತುಕೊಂಡು ಜ್ಯೋತಿಷ್ಯ ಕಾರ್ಯಕ್ರಮ ನೋಡುತ್ತಾರೆ. ಎಲ್ಲಾ ಚಾನೆಲ್‌ಗಳಲ್ಲಿ ಬರುವ ಈ ಜ್ಯೋತಿಷ್ಯ ಕಾರ್ಯಕ್ರಮಗಳನ್ನು ಬಂದ್ ಮಾಡುವುದಕ್ಕಾಗಿ ಒಂದು ಕಾನೂನನ್ನು ರಚಿಸಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇದರ ಜೊತೆಗೆ ಕೆಲವೊಂದು ಸೇರ್ಪಡೆಯಾಗಬೇಕಿದೆ. ವಿಧೇಯಕದ ಪುಟ ಸಂಖ್ಯೆ 10ರ ಕ್ರಮ ಸಂಖ್ಯೆ 9ರಲ್ಲಿ "ಮಕ್ಕಳಿಗೆ ಚಿಕಿತ್ಸೆ ನೀಡುವ ಹೆಸರಿನಲ್ಲಿ ಅವರಿಗೆ ಹಾನಿಯುಂಟು ಮಾಡುವ ಎಂದರೆ, ಅವರನ್ನು ಮುಳ್ಳುಗಳ ಮೇಲೆ ಅಥವಾ ಎತ್ತರದಿಂದ ಎಸೆಯುವುದು ಇಂಥವುಗಳನ್ನು ಒಳಗೊಳ್ಳುವ ಆಚರಣೆಗಳನ್ನು ಮಾಡುವಂತೆ ಮನವೊಲಿಸುವುದು, ಪ್ರಸಾರ ಮಾಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು" ಎಂದು ತಿಳಿಸಲಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಣ್ಣ ಮಕ್ಕಳನ್ನು ಖಗ್ರಾಸ ಅಮಾವಾಸ್ಯೆ ದಿನ ತಿಪ್ಪೆಯೊಳಗೆ ಕುತ್ತಿಗೆ ಮಟ್ಟದವರೆಗೆ ಹುಗಿಯುತ್ತಾರೆ. ಒಂದು ರಾತ್ರಿಯಿಡೀ ಕುತ್ತಿಗೆ ಮಟ್ಟದವರೆಗೆ ಹುಗಿದು ಬಿಟ್ಟರೆ ಯಾವುದೇ ರೋಗ ಬರುವುದಿಲ್ಲ, ಇರುವ ರೋಗವೂ ಹೋಗುತ್ತದೆ ಎನ್ನುವ ಮೂಢ ನಂಬಿಕೆಯಿದೆ. ಇಂತಹ ಆಚರಣೆಗಳೂ ಸಹ ಈ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು. ಇದರ ಜೊತೆಗೆ ಮಾಟ-ಮಂತ್ರ, ದೆವ್ವ ಬಿಡಿಸುವುದು, ಅರೆ ಬೆತ್ತಲೆ ಸೇವೆ, ಗುಪ್ತ-ನಿಧಿನಿಕ್ಷೇಪಗಳ ಶೋಧನೆಗೆ ಮಕ್ಕಳನ್ನು ಕೊಲ್ಲುವುದು ಇವುಗಳನ್ನು ನಿಷೇಧಿಸಲಾಗಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ನಿಧಿಶೋಧನೆಗಾಗಿ ಯಾರ್ಯಾರ ಮಕ್ಕಳನ್ನೋ ಕೊಲ್ಲುತ್ತಾರೆ. ಇಂತಹ ಅಮಾನವೀಯ ಕೃತ್ಯಗಳನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಬಹಳ ಒಳ್ಳೆಯ ಕೆಲಸವನ್ನು ಈ ಸಮಿತಿಯು ಮಾಡಿದೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ನಮ್ಮ ವೀರಶೈವ-ಲಿಂಗಾಯತ ಧರ್ಮದಲ್ಲಿ ಶ್ರೀ ವೀರಭದ್ರ ದೇವರೆಂದರೆ ನಮಗೆ ಬಹಳ ಭಯ-ಭಕ್ತಿ. ಆ ವೀರಭದ್ರ ದೇವರ ಜಾತ್ರೆಯೊಳಗೆ ಶಸ್ತ್ರ ಹಾಕುತ್ತಾರೆ. ವಿಧೇಯಕದ ಪುಟ ಸಂಖ್ಯೆ 11 ಕ್ರಮ ಸಂಖ್ಯೆ: 14ರಲ್ಲಿ 'ಬಾಯಿಬೀಗ' ಪದ್ಧತಿ ಎಂದರೆ ನಾಲಿಗೆಯೂ ಸೇರಿದಂತೆ ಒಂದು ದವಡೆಯಿಂದ ಇನ್ನೊಂದು ದವಡೆಗೆ ಕಬ್ಬಿಣದ ಸಲಾಕೆಗಳನ್ನು ತೂರಿಸುವ ಪದ್ಧತಿ ಎಂದು ಹೇಳಿದ್ದು, ಇದನ್ನು ನಿಷೇಧಿಸಲಾಗಿದೆ. ಅದರ ಮೇಲೆಯೇ ಕ್ರಮ ಸಂಖ್ಯೆ 13ರಲ್ಲಿ ಜಾತ್ರೆಗಳು ಮತ್ತು ಧಾರ್ಮಿಕ ಹಬ್ಬಗಳ ಸಮಯದಲ್ಲಿ ದೈಹಿಕವಾಗಿ ಗಾಯವನ್ನು ಉಂಟು ಮಾಡುವಂತಹ ಕೆಂಡ ಹಾಯುವ ಪದ್ಧತಿಯನ್ನು ಮಾಡುವಂತೆ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಬಲವಂತ ಮಾಡುವುದು ಎಂದು ಹೇಳಲಾಗಿದೆ. ಅಂದರೆ ಯಾರು ಕೆಂಡದ ಮೇಲೆ ಹಾಯುವಂತೆ ಬಲವಂತ ಮಾಡುತ್ತಾರೆಯೋ ಅವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ, ವೀರಶೈವ ಲಿಂಗಾಯತ ಧರ್ಮದಲ್ಲಿ ಶ್ರೀ ವೀರಭದ್ರ ದೇವರ ಜಾತ್ರೆಯೊಳಗೆ ಶಸ್ತ್ರ ಹಾಕಿಕೊಳ್ಳುವುದಕ್ಕೆ ಯಾರು ಬಲವಂತ ಮಾಡುವರೋ ಅವರನ್ನು ಮಾತ್ರ ಶಿಕ್ಷೆಗೆ ಒಳಪಡಿಸಬೇಕು. ಅದು ನಮ್ಮ ಆಚರಣೆಯಾಗಿದ್ದು, ಅದನ್ನು ನಿಷೇಧ ಮಾಡುವುದಕ್ಕೆ ಸರ್ಕಾರ ಹೊರಟಿದೆ. ಅದನ್ನು ಏಕೆ ನಿಷೇಧ ಮಾಡಬೇಕು? ದಯವಿಟ್ಟು ಇದನ್ನು ವಿಧೇಯಕದಿಂದ ತೆಗೆದು ಹಾಕಬೇಕು. ಅದೇ ರೀತಿ ಕೆಂಡ ಹಾಯುವುದಕ್ಕೆ ಯಾರು ಬಲವಂತ ಮಾಡುತ್ತಾರೆಯೋ, ಪ್ರೇರಣೆ ಮಾಡುತ್ತಾರೆಯೋ ಅವರಿಗೆ ಮಾತ್ರ ಶಿಕ್ಷೆಯಾಗಬೇಕು. Voluntarily ಮಾಡಿದರೆ ತಪ್ಪೇನು? ಕೆಂಡ ಹಾಯುವುದಕ್ಕೂ ವೈಜ್ಞಾನಿಕ ಹಿನ್ನೆಲೆಯಿದೆ. ಶ್ರೀ ಬಸನಗೌಡ ಪಾಟೀಲ್ (ಯತ್ನಾಳ್)ರವರು ಹೇಳದಂತೆ ಕೆಂಡ ಹಾಯುವುದರಿಂದ ಯಾರಿಗೇನೂ ಆಗಿಲ್ಲ. ಯಾವುದೇ ವ್ಯಕ್ತಿ ಕೆಂಡದ ಮೇಲೆ 4 ಸೆಕೆಂಡ್‌ಗಿಂತಲೂ ಹೆಚ್ಚಿಗೆ ನಿಂತರೆ ಮಾತ್ರ ಪಾದ ಬಿಸಿಯಾಗುತ್ತದೆ. ಆದರೆ, ಕೆಂಡ ಹಾಯುವವರು ನಾಲ್ಕು ಸೆಕೆಂಡ್ ನಿಲ್ಲುವುದೇ ಇಲ್ಲ, ಒಂದು ಸೆಕೆಂಡ್ ಒಳಗೆ ಹೆಜ್ಜೆಯನ್ನು ಮುಂದಿಟ್ಟಿರುತ್ತಾರೆ. ಅದರಿಂದ ಏನೂ ಆಗುವುದಿಲ್ಲ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಇಂತಹ ಪ್ರಕರಣಗಳನ್ನು ತಾವು ಪತ್ರಿಕೆಗಳಲ್ಲಿ ಓದಿರುತ್ತೀರಿ. ಕೆಂಡ ಹಾಯಬೇಕಾದರೆ ಕೆಂಡದಲ್ಲಿಯೇ ಬಿದ್ದು, ಅವರು hospitalize ಆದ ಪ್ರಕರಣವೊಂದರಲ್ಲಿ ಅವರಿಗೆ diabetes ಇದ್ದುದರಿಂದ ಅವರ ಜೀವಕ್ಕೆ ಬಹಳಷ್ಟು ಹಾನಿಯಾಗಿದೆ.

**ಶ್ರೀ ಬಸನಗೌಡ ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ರಸ್ತೆಯಲ್ಲಿ ಹೋಗುವಾಗ ಅಪಘಾತ ಸಂಭವಿಸುವುದಿಲ್ಲವೇ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧಪಕ್ಷದ ನಾಯಕರು ಈ ಮಸೂದೆಯಲ್ಲಿರತಕ್ಕಂತಹ ಹಲವು ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಇದನ್ನೆಲ್ಲಾ ನಾವು ಗಮನಿಸಿದಾಗ ಸರ್ಕಾರ ಹಿಂದೂ ಧರ್ಮದ ಪದ್ಧತಿಗಳನ್ನಷ್ಟೇ ನಿಷೇಧಿಸಲು ಹೊರಟಂತಿದೆ ಎಂದೆನಿಸುತ್ತದೆ. ಉಳಿದ ಧರ್ಮಗಳಲ್ಲಿರುವ ಕೆಟ್ಟ ಪದ್ಧತಿಗಳನ್ನು ಏಕೆ ಪಟ್ಟಿ ಮಾಡಿಲ್ಲ? ಸರ್ಕಾರ ಕಾನೂನನ್ನು ಜಾರಿಗೆ ತರುವುದಾದರೆ ಎಲ್ಲಾ ಧರ್ಮದೊಳಗೆ ಇರುವ ಅನಿಷ್ಟ ಪದ್ಧತಿಗಳನ್ನು ಪಟ್ಟಿಗೆ ಸೇರಿಸಬೇಕು. ಹಿಂದೂ ಧರ್ಮದ ಪದ್ಧತಿಗಳನ್ನು ಪಟ್ಟಿ ಮಾಡಿ ಉಳಿದ ಧರ್ಮದ ಪದ್ಧತಿಗಳನ್ನು ಬಿಟ್ಟು ಬಿಟ್ಟರೆ ಏನಾಗುತ್ತದೆಯೆಂದು ಈಗಾಗಲೇ ಎಲ್ಲಾ ಮಾನ್ಯ ಸದಸ್ಯರೂ ಹೇಳಿದ್ದಾರೆ. ನಾನು ಅದನ್ನು ಪುನರಾವರ್ತನೆ ಮಾಡಬಯಸುವುದಿಲ್ಲ. ಆ ರೀತಿ ಆಗಬಾರದು. ಎಲ್ಲಾ ಧರ್ಮದೊಳಗಿರುವ ಅವೈಜ್ಞಾನಿಕ ಪದ್ಧತಿಗಳನ್ನು ನಿಷೇಧ ಮಾಡಬೇಕೆಂದು ಕೋರುತ್ತೇನೆ. ಸರ್ಕಾರ ಆದೇಶ ಹೊರಡಿಸಬೇಕಾದರೆ ಅವನ್ನೆಲ್ಲಾ ಸೇರಿಸುವುದಾಗಿ ಹೇಳಿದ್ದಾರೆ. ಹಾಗಾಗಿ ಅದನ್ನೆಲ್ಲಾ ಸೇರಿಸಬೇಕು.

(...ಮುಂದು)

(1189)22.11.2017/6.10.ಕೆಜಿ-ಕೆಎಸ್

ಶ್ರೀ **ಎಸ್.ವ್ಹಿ.ಸಂಕನೂರ (ಮುಂದು):-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಇದಕ್ಕೆ ಒಬ್ಬ vigilance officer ರವರನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಆ vigilance officer ಯಾವುದು ನಂಬಿಕೆ, ಯಾವುದು ಅಪನಂಬಿಕೆ ಅಥವಾ ಮೂಢನಂಬಿಕೆ ಎಂದು ವಿಶ್ಲೇಷಣೆ ಮಾಡುವಲ್ಲಿ ಅವರು ತಪ್ಪು ಮಾಡಿದರೆ, ಅವರು power ಅನ್ನು misuse ಮಾಡಿಕೊಂಡರೆ, ಅದಕ್ಕೆ ನಿಯಂತ್ರಣ ಬೇಕು ಅಲ್ಲವೇ, ಅದನ್ನು ನಿರ್ಧಾರ ಮಾಡುವವರು ಒಬ್ಬರು ಬೇಕು ಅಲ್ಲವೇ? ಆ ಅಧಿಕಾರಿಗೆ ಇವರು ಮಾಡುತ್ತಿರುವುದು ಮೂಢನಂಬಿಕೆ ಎಂದು ಅನ್ನಿಸಿ ಅದು ಮೂಢನಂಬಿಕೆ ನಿನಗೆ ಶಿಕ್ಷೆ ಕೊಡುತ್ತೇನೆಂದು ಹೇಳಿದರೆ ಏನು ಮಾಡುವುದು? ಅದು ಯಾವುದೋ ಒಂದು ಧರ್ಮದಲ್ಲಿ ಇರುತ್ತದೆ, power misuse ಆಗಬಾರದು. ಅದರ ನಿಯಂತ್ರಣಕ್ಕೆ ಈ ಕಾನೂನಿನಲ್ಲಿ ಜಾರಿಗೆ ತರಬೇಕೆಂದು ಹಾಗೂ ಕೆಲವೊಂದು ತಿದ್ದುಪಡಿಗಳ ಜೊತೆಗೆ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರುವಂತಹ ವಿಧೇಯಕವನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಬಹುಶಃ ಮಾನ್ಯ ಸಿದ್ಧರಾಮಯ್ಯನವರು ಮುಖ್ಯ ಮಂತ್ರಿಗಳು ಆಗದೆ ಇದಿದ್ದರೆ, ಈ ತರಹದ ಒಂದು ಕಾಂತ್ರಿಕಾರಕ ವಿಧೇಯಕ ಮಂಡನೆ ಆಗುತ್ತಿರಲಿಲ್ಲ. ಮಾನ್ಯ ದಿವಂಗತ ಜೆ.ಹೆಚ್.ಪಟೇಲ್‌ರವರು ಇದ್ದಿದರೆ ಆಗುತ್ತಿತ್ತೋ ಏನೋ, ಆದರೆ ಅವರು ಇಂದು ಇಲ್ಲ. ಮುಖ್ಯ ಮಂತ್ರಿಗಳು ಮಾನ್ಯ ಸಿದ್ಧರಾಮಯ್ಯನವರು ಆಗಿರುವುದರಿಂದ ಇಂತಹ ಒಂದು ವಿಧೇಯಕವನ್ನು ತಂದಿದ್ದಾರೆ. ಅದನ್ನು ನಾನು ಅವರನ್ನು ಮತ್ತೊಮ್ಮೆ ಸ್ವಾಗತ್ತಿಸುತ್ತೇನೆ ಮತ್ತು ಅವರನ್ನು ಅಭಿನಂದಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ತಮ್ಮ ಹರ್ಷವನ್ನು ವ್ಯಕ್ತ ಪಡಿಸಿದರು)**

ಇಲ್ಲಿ ಮೌಢ್ಯ ಎಂದು ಏನಿದೆಯೋ, ಅದು ಬಹುಶಃ ಮನುಷ್ಯ ಹುಟ್ಟಿದಾಗಿನಿಂದ ಬಂದಿರುವಂಥದ್ದು. ಶೋಷಣೆ ಇದರಿಂದಲೇ ಹುಟ್ಟಿರುವುದು. ಶೋಷಣೆ ಮಾಡುವುದು ಸಹ ಈ ಮೌಢ್ಯ ಪದ್ಧತಿಗಳಿಂದ ಹುಟ್ಟಿರುತ್ತದೆ. ಅನಕ್ಷರಸ್ಥರನ್ನು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರನ್ನು ಮತ್ತು ಹಿಂದುಳಿದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಗಗಳನ್ನು ದಡ್ಡರು ಶೋಷಿತರು. ಈ ಸಂಖ್ಯೆ ಈಗ ಬಹುಸಂಖ್ಯೆ ಆಗಿದೆ. ಶೋಷಣೆ ಮಾಡುವವರ ಸಂಖ್ಯೆ ಈಗ ಕಡಿಮೆ ಇದೆ. ಆದರೂ ಸಹ, ಅವರು ಶೋಷಣೆ ಮಾಡುವಂತಹ ಎತ್ತರ ಇದೆಯಲ್ಲ ಅದು ಬಹಳ ಜಾಸ್ತಿಯಾಗಿದೆ. ನಾವು ಇದಕ್ಕೆ ಒಂದು ಅಂತ್ಯ ಆಡಬೇಕಾಗಿತ್ತು. ಆದರೆ, ಇವತ್ತು ಇಂತಹ ಒಂದು ಆರಂಭವನ್ನು ಮಾಡಿದ್ದೇವೆ. ಇದು ಆರಂಭ. ಇದು ಎಷ್ಟರ ಮಟ್ಟಿಗೆ ಫಲಿತಾಂಶ ಕೊಡುತ್ತದೆ ಎನ್ನುವುದು ಗೊತ್ತಿಲ್ಲ. ಒಟ್ಟಿನಲ್ಲಿ ಇದರಿಂದ ಸ್ವಲ್ಪವಾದರೂ ಫಲಿತಾಂಶ ಸಿಗುತ್ತದೆ. ಇದರಿಂದ ಸ್ವಲ್ಪ ಭಯ ಹುಟ್ಟುತ್ತದೆ. ಈ ಶೋಷಣೆ ಮಾಡುವಂಥದ್ದು ಕಡಿಮೆ ಆಗುತ್ತದೆ. ಗೌತಮ ಬುದ್ಧ ಸಹ ಈ ಮೂಢನಂಬಿಕೆ ವಿರುದ್ಧ ನಿಂತು ಕೊಚ್ಚಿಹೋದರು. ಅದೇರೀತಿ ಶ್ರೀ ಬಸವಣ್ಣನವರು ಹೋದರು. ಡಾ॥ಅಂಬೇಡ್ಕರ್‌ರವರನ್ನು ಸಹ ದಿಕ್ಕು ತಪ್ಪಿಸಿದರು. ಅದರಿಂದ ಇದು ಎಷ್ಟು ಆಳವಾಗಿ ಹೋಗಿದೆ ಎಂದರೆ, ಜೀವನವೇ ಪೂರ್ತಿ ಅದರ ಬೇರುಗಳಲ್ಲಿ ಬದುಕುತ್ತಿದೆ. ಇದಕ್ಕೊಂದು ಕೊಡಲಿ ಏಟು ಪ್ರಾರಂಭ ಮಾಡಿದ್ದೀರಿ. ಇದು ಎಂದಾದರೂ ಒಂದು ದಿವಸ ಈ ಮೌಢ್ಯದ ಮರ ಕೆಳಗೆ ಬೀಳುತ್ತದೆ. ಇವತ್ತು ಅಲ್ಲದೆ ಇದ್ದರೂ ಸಹ, ಒಂದು 50-60 ವರ್ಷಗಳಾದರೂ ಫಲ ಕೊಡುತ್ತದೆ. ನಾನು ನಿನ್ನೆ ಒಂದು ಜ್ಯೋತಿಷ್ಯವನ್ನು ಟಿವಿಯಲ್ಲಿ ನೋಡಿದೆ. ಅದರಲ್ಲಿ ಒಬ್ಬ ಮಹಿಳೆ ನನ್ನ ಅಳಿಯ ಮತ್ತು ಮಗಳು ಇಬ್ಬರು ಸಂತೋಷದಿಂದ ಇಲ್ಲ. ಅದಕ್ಕೆ ಏನು ಮಾಡುವುದೆಂದು ಜ್ಯೋತಿಷಿಯನ್ನು ಆಕೆ ಕೇಳಿದರೆ, ಅದಕ್ಕೆ ಜ್ಯೋತಿಷ್ಯ ನಿಮ್ಮ ಮಗಳಿಗೆ ಯಾವ ವಾರ ಮದುವೆ ಮಾಡಿದ್ದೀರಿ ಎಂದು ಕೇಳುತ್ತಾನೆ. ಅದಕ್ಕೆ ಆಕೆ ಭಾನುವಾರ ಮಾಡಿದೆ ಎಂದು ಹೇಳುತ್ತಾಳೆ. ಅದಕ್ಕೆ ಆ ಜ್ಯೋತಿಷಿ ನೀನು ಭಾನುವಾರ ಏಕೆ ಮದುವೆ ಮಾಡಿದೆ ಎಂದು ಹೇಳುತ್ತಾನೆ. ಈ ತರಹದ instances ಬಹಳ ಇವೆ. ಮೊನ್ನೆ ಕೋಲಾರದಲ್ಲಿ ಒಂದು ಘಟನೆ ನಡೆಯಿತು. ಯಾರೋ ಒಬ್ಬ ಜ್ಯೋತಿಷಿ ಒಬ್ಬನಿಗೆ ನಿಮ್ಮ ಮನೆಯಲ್ಲಿ ಒಂದು ಕೊಪ್ಪರಿಗೆಷ್ಟು ನಿಧಿ ಇದೆ ಎಂದು ಹೇಳಿದ್ದಾನೆ. ಆತ ಆ ನಿಧಿಗಾಗಿ 50 ಅಡಿಗಳಷ್ಟು ಆಳಕ್ಕೆ ಅಗೆದ. ಆದರೆ, ಅತನಿಗೆ ಆ ನಿಧಿ ಸಿಗಲಿಲ್ಲ. ಮತ್ತೆ ಹೋಗಿ ಕೇಳಿದ. ಆಗ ಜ್ಯೋತಿಷಿ ನಿನ್ನ ಹೆಂಡತಿಯನ್ನು ಬಲಿ ಕೊಟ್ಟುಬಿಡು ಆಗ ಆ ನಿಧಿ ಸಿಗುತ್ತದೆಂದು ಹೇಳಿದ, ಇದು ಪತ್ರಿಕೆಯಲ್ಲಿಯೂ ಸಹ ಬಂದಿದೆ. ಅದರಂತೆ ಆತನ ಹೆಂಡತಿಯನ್ನು ಸಹ ಬಲಿ ಕೊಟ್ಟುಬಿಟ್ಟ. ಆದರೆ ಆತನಿಗೆ ನಿಧಿ ಸಿಗಲಿಲ್ಲ. ಈ ತರಹದ ಬಹಳ ಕ್ರೂರವಾದಂತಹ ಮೌಢ್ಯಗಳು ನಡೆಯುತ್ತಿರುತ್ತವೆ. ಮತ್ತೆ ದೇವರು ಬರುತ್ತಾನೆಂದು pretend ಮಾಡುತ್ತಾರೆ ಅದನ್ನು ಸಹ ತಪ್ಪಿಸಬೇಕು. ನನಗೆ ಇದರ ಬಗ್ಗೆ ಒಂದು ಉದಾಹರಣೆ ಗೊತ್ತಿದೆ. ಒಬ್ಬ ಹುಡುಗ ಎಸ್.ಎಸ್.ಎಲ್.ಸಿ.ನಲ್ಲಿ ಮೂರು ಬಾರಿ ಅನುತ್ತೀರ್ಣನಾಗಿರುತ್ತಾನೆ ಆ ಹುಡುಗನ ತಂದೆ ಮಗನ ಬಗ್ಗೆ ದೇವರ ಹತ್ತಿರ ಹೋಗಿ ನನ್ನ ಮಗ ಮೂರು ಬಾರಿ ಎಸ್.ಎಸ್.ಎಲ್.ಸಿ.ನಲ್ಲಿ ಅನುತ್ತೀರ್ಣನಾಗಿದ್ದಾನೆ ಪಾಸ್ ಮಾಡಿಸು ಎಂದು ಕೇಳಿಕೊಳ್ಳುತ್ತಾನೆ. ಅಲ್ಲಿ ಪ್ರತಿ ವಾರ ಒಬ್ಬನಿಗೆ ದೇವರು ಮೈಮೇಲೆ ಬರುತ್ತದೆ. ಆ ದೇವರು ನಿನ್ನ ಮಗನನ್ನು ಪಾಸ್ ಮಾಡಿಸುತ್ತೇನೆಂದು ಹೇಳುತ್ತಾನೆ. ಆ paper valuation ಯಾರೂ ಮಾಡುತ್ತಾರೋ, ಅವನ ಒಳಗೆ ನಾನು ಹೋಗಬೇಕು, ನೀನು ತಪ್ಪು ಮಾಡಿದ್ದರೂ ಸಹ, ಅದು ಸರಿ ಎಂದು ಅವನನ್ನು ನಾನು ತಿದ್ದಬೇಕು ಆಗ ನಿನ್ನ ಮಗ ಪಾಸ್ ಆಗುತ್ತಾನೆ, ನೀನು ನನಗೆ ಏನು ಕೊಡುತ್ತೀಯಾ ಎಂದು ಕೇಳುತ್ತಾನೆ. ಆಗ ಆತ ಹೇಳುತ್ತಾನೆ. ಅವನು ಬಹಳ ಬುದ್ಧಿವಂತ. ನನ್ನ ಬಳಿ ಏನು ಇಲ್ಲ. ನನ್ನ ಬಳಿ ಉಳಿದಿರುವ ಮೂರು ಹುಲ್ಲು ಕಂತೆಗಳು ಇವೆ, ಅದನ್ನು ಕೊಡುತ್ತೇನೆಂದು ಹೇಳುತ್ತಾನೆ. ತಕ್ಷಣವೇ ಆ ದೇವರಿಗೆ ಕೋಪ ಬಂದು ಏನಯ್ಯ ನಾನು ದನ ಎಂದು ತಿಳಿದುಕೊಂಡು ಇದ್ದೀಯಾ, ನಾನು ಹುಲ್ಲು ತಿನ್ನುವುದಕ್ಕೆ ಎಂದು ಬೈಯುತ್ತಾನೆ. ಅಂದರೆ, ಆತ ಮನುಷ್ಯ, ದೇವರು ಬಂದಿದೆ ಎಂದು pretend ಮಾಡುತ್ತಿರುತ್ತಾನೆ. ಆತನಿಗೆ ಬೇಕಾಗಿದ್ದು ಆತನಿಗೆ ಸಿಕ್ಕಲಿಲ್ಲವೆಂದರೆ, ಆ ದೇವರು ಬಿಟ್ಟು ಹೋಗುತ್ತದೆ. ಹಾಗಾಗಿ, ಇಂತಹವುಗಳನ್ನು ನಿಷೇಧ ಮಾಡಬೇಕು.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಒಬ್ಬ ಮನುಷ್ಯನಿಗೆ ಮೈಯೆಲ್ಲಾ ಕೊದಲು ಇರುತ್ತದೆ. ಆ ವ್ಯಕ್ತಿ ಸ್ಮಶಾನದಲ್ಲಿರುವ ಒಬ್ಬ ಸ್ವಾಮೀಜಿಯ ಹತ್ತಿರ ಹೋಗಿ ಸ್ವಾಮಿ ನಾನು ಕುರೂಪಿ ಆಗಿದ್ದೇನೆ, ಇದಕ್ಕೆ ಏನಾದರೂ ಮಾಡಿ ಎಂದು ಕೇಳುತ್ತಾನೆ. ಆಗ ಸ್ವಾಮೀಜಿ ಇದಕ್ಕೆ ಒಂದು ಉಪಾಯವನ್ನು ಕಂಡು ಹಿಡಿಯುತ್ತೇನೆ. ಸ್ವಲ್ಪ ಹೊತ್ತು ಕುಳಿತುಕೊಳ್ಳಬೇಕೆಂದು ಹೇಳುತ್ತಾನೆ. ನಂತರ ಆ ವ್ಯಕ್ತಿಗೆ ಯಾವ ರೀತಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಂತುಕೊಳ್ಳಬೇಕು. ಯಾವ ರೀತಿ ಕುಳಿತು ಕೊಳ್ಳಬೇಕು ಎಂಬುದನ್ನು ಹೇಳಿಕೊಡುತ್ತಾನೆ. ನಂತರ ಆ ವ್ಯಕ್ತಿಯನ್ನು ಒಂದು ಊರಿನಲ್ಲಿ ಜಾತ್ರೆ ನಡೆಯುತ್ತಿರುತ್ತದೆ ಅಲ್ಲಿಗೆ ಈ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಆ ಊರಿನ ಎತ್ತರದ ಪ್ರದೇಶದಲ್ಲಿ ನಿಲ್ಲಿಸಿ ಊರಿಗೆಲ್ಲ ಪ್ರಚಾರ ಮಾಡುತ್ತಾನೆ. ಈತ ಹಿಮಾಲಯ ಪರ್ವತದಿಂದ ಬಂದಿದ್ದಾನೆ. ಈ ಸ್ವಾಮೀಜಿ ದೇಹದಲ್ಲಿರುವ ಒಂದು ಕೂದಲನ್ನು ಯಾರಾದರೂ ಕಿತ್ತುಕೊಂಡು ಹೋದರೆ, ಮನೆ ಬಿಟ್ಟು ಹೋಗಿರುವಂತಹ ಮಗ ವಾಪಸ್ಸು ಬರುತ್ತಾನೆ. ದನಕರು ಕಳೆದು ಹೋಗಿದ್ದರೆ ಅದು ವಾಪಸ್ಸು ಬರುತ್ತವೆ. ಮನೆಗಳಲ್ಲಿ ಏನಾದರೂ ಕಳವು ಆಗಿದ್ದರೆ, ಆ ಕಳ್ಳನೆ ಅದನ್ನು ತಂದು ಕೊಡುತ್ತಾನೆ, ಮಕ್ಕಳು ಆಗದೆ ಇದ್ದರೆ ಮಕ್ಕಳು ಆಗುತ್ತವೆ ಎಂದು ಪ್ರಚಾರ ಮಾಡುತ್ತಾನೆ. ಮಾರನೆ ದಿವಸ ಜಾತ್ರೆ ಬಂದು ನೋಡಿದರೆ, 10 ಕಿಲೋಮೀಟರ್ ಸಾಲು ಇರುತ್ತದೆ. ಏಕೆಂದರೆ, ಪ್ರತಿಯೊಂದು ಕುಟುಂಬದಲ್ಲೂ ಈ ಸಮಸ್ಯೆಗಳು ಇವೆ ಎನ್ನುವುದು ಅವನಿಗೆ ಗೊತ್ತು. ಅಲ್ಲ ಎಲ್ಲರೂ ಬರುವುದು ಒಂದು ಕೂದಲನ್ನು ಕಿತ್ತುಕೊಳ್ಳುವುದು 10 ರೂಪಾಯಿ ಹಾಕುವುದು ಹೀಗೆ ಮಾಡುತ್ತಿದ್ದರು. ಒಂದು ದಿವಸಕ್ಕೆ ಒಂದು, ಎರಡು, ಮೂರು ಮೂಟೆ ಹಣ ಸಂಗ್ರಹಣೆ ಆಗುತಿತ್ತು. 15 ದಿವಸಗಳ ಜಾತ್ರೆ ಅದು. ಆ ಜಾತ್ರೆ ಇನ್ನೂ 5 ದಿವಸ ಇದ್ದಾಗಲೇ ಆ ಸ್ವಾಮೀಜಿಯ ಕೂದಲು ಖಾಲಿ ಆಗಿಬಿಡುತ್ತದೆ. ಆ ಕೂದಲನ್ನು ಕಿತ್ತಾಗಗೆಲ್ಲಾ ಬಹಳ ನೋವು ಆಗುತ್ತಿರುತ್ತದೆ. ಆ ಸ್ವಾಮೀಜಿ ಆಯ್ಯೋ ಎನ್ನುತ್ತಾನೆ. ಆತನ ಪಕ್ಕದಲ್ಲಿರುವವನು ಈ ರೀತಿ ಎಲ್ಲಾ ತೋರಿಸಿಕೊಳ್ಳಬೇಡ ಸುಮ್ಮನೆ ನಿಂತುಕೋ ತಡಕೋ ಎಂದು ಹೇಳುತ್ತಾನೆ. ಕೊನೆಗೆ ಕೂದಲು ಖಾಲಿ ಆದಾಗ ದುರಾಸೆ ಹುಟ್ಟುತ್ತದೆ, ಆ ಸ್ವಾಮೀಜಿ ಮತ್ತೆ ಹಿಮಾಲಯಾಕ್ಕೆ ಹೋಗುತ್ತೇನೆ, ಇನ್ನೊಂದು ರೀತಿಯ ವರವನ್ನು ಪಡೆದುಕೊಂಡು ಬರುತ್ತೇನೆ, ಮತ್ತೆ ನೀವು ಕೂದಲನ್ನು ಕೀಳಬಹುದೆಂದು ಹೇಳುತ್ತಾನೆ. ನಂತರ ಸ್ವಾಮೀಜಿ barber shop ಗೆ ಹೋಗಿ ಕೂದಲನ್ನು ಅಂಟಿಸಿಕೊಂಡು ಬರುತ್ತಾನೆ. ಹಣ ಮಾಡುವಂತಹ ಆಸೆ ಹೇಗಿದೆ ನೋಡಿ. ನಂತರ ಬಂದು ಅಲ್ಲಿಯೇ ನಿಂತುಕೊಳ್ಳುತ್ತಾನೆ. ಆತನ ಪಕ್ಕದಲ್ಲಿ ಇದ್ದವನಿಗೆ ದುರಾಸೆ ಪ್ರಾರಂಭವಾಗುತ್ತದೆ. ಈಗಲೇ ಇಷ್ಟು ಹಣ ಸಂಗ್ರಹಣೆ ಆಗಿದೆ. ಇದರಲ್ಲಿ ನನ್ನ ಪಾಲು ಎಷ್ಟು? ನಿನ್ನ ಪಾಲು ಎಷ್ಟು ಹೇಳು? ಇಲ್ಲವೆಂದರೆ, ನಾನು ಇರುವ ವಿಚಾರವನ್ನು ಹೇಳುಬಿಡುತ್ತೇನೆಂದು ಹೇಳುತ್ತಾನೆ. ಕೂದಲಿನ ಸ್ವಾಮಿ ಹೇಳುತ್ತಾನೆ ನನ್ನ ಕೂದಲನ್ನು ಕಿತ್ತುಕೊಂಡು ಹಣ ಕೊಟ್ಟಿದ್ದಾರೆ, ನನಗೆ ಭಾಗ ಜಾಸ್ತಿ ಬೇಕೆಂದು ಕೇಳುತ್ತಾನೆ. ಅವನ ಪಕ್ಕದಲ್ಲಿ ಇದ್ದವನ್ನು ಕೇಳುತ್ತಾನೆ ಈ plan ಕೊಟ್ಟಿದ್ದೆ ನಾನು, ನನಗೆ 75% ಭಾಗ ಬೇಕು ಎಂದು ಹೇಳುತ್ತಾನೆ. ಅಲ್ಲದೇ ನಿನ್ನ ಕೂದಲು ಖಾಲಿ ಆಗಿ ನೀನು ಸುಂದರವಾಗಿ ಕಾಣುತ್ತಿದ್ದಿಯಾ ಸುಮ್ಮನೆ ಇರಬೇಕು ಎಂದು ಹೇಳುತ್ತಾನೆ, ಕೊನೆಯದಾಗಿ, ಇಬ್ಬರಿಗೂ ಗಲಾಟೆ ಆಗುತ್ತದೆ. ಸತ್ಯ ಹೊರಗಡೆ ಬರುತ್ತದೆ. ಆದರೆ, ಇಬ್ಬರು ಅಲ್ಲಿಂದ ಜಾಗ ಖಾಲಿ ಮಾಡುತ್ತಾರೆ. ಇದು ಅಲ್ಲಿನ ಜನಕ್ಕೆ ಗೊತ್ತಾಗುವುದಿಲ್ಲ. ಅದಕ್ಕೆ ಜನ ಮರಳೋ ಜಾತ್ರೆ ಮರಳೋ ಎಂಬ ಗಾದೆ ಮಾತಿದೆ. ಒಬ್ಬ ಕೂದಲ ಸ್ವಾಮಿ 100 ಹಳ್ಳಿಗಳ ಜನರನ್ನು mesmerize ಮಾಡುತ್ತಾರೆ, ದೇವರು ಬರುತ್ತದೆಂದು ನಾಟಕ ಮಾಡಿ ವಂಚನೆ ಮಾಡುವುದು ಇದೆಯೆಲ್ಲಾ ಇದನ್ನು ನಿಷೇಧ ಮಾಡಿ. ಇದನ್ನು ಕೂಡ ಇದರಲ್ಲಿ ಸೇರಿಸಿ. ಮತ್ತೆ ಜ್ಯೋತಿಷ್ಯ ನೆಪದಲ್ಲಿ ಗಂಡ ಹೆಂಡತಿಯರನ್ನು ದೂರ ಮಾಡುತ್ತಾರೆ. ನೀವು ಭಾನುವಾರ ಮದುವೆ ಆಗಿದ್ದೀರಿ. ನೀವು ಇನ್ನು ಮುಂದೆ ಸೇರುವುದೇ ಇಲ್ಲವೆಂದು ಹೇಳುತ್ತಾರೆ. ಆ ಮೇಲೆ ನೀನು ಸರ್ಪ, ನಿನ್ನ ಗಂಡ ಸಹ ಸರ್ಪ, ನಿಮ್ಮದು ಸರ್ಪಕೂಟವೆಂದು ಹೇಳುತ್ತಾರೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಸಿನಿಮಾದಲ್ಲಿ ಬರುವಂತಹ ದೇವರುಗಳಿಗೆ ಏನು ಮಾಡುವುದು?

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಈಗಲೂ ಇದೆ. ಬೆಂಗಳೂರಿನ ಕಬ್ಬನ್‌ಪೇಟೆಯಲ್ಲಿ ಎರಡು ದೇವಸ್ಥಾನಗಳು ಇವೆ. ಮಕ್ಕಳಿಗೆ ಬೇಧಿ ಆದರೆ ಅದಕ್ಕೆ ತಾಯಿತ ಕಟ್ಟಿಸಿಕೊಳ್ಳುವುದಕ್ಕೆ ಹೋಗುತ್ತಾರೆ. ಬಹುಶಃ ಇಡೀ ಬೆಂಗಳೂರಿನಲ್ಲಿ ಎಷ್ಟು ವೈದ್ಯರ ಶಾಪ್‌ಗಳಿವೆ ಅಷ್ಟೂ ಜನರು ಸಹ ಅಲ್ಲಿ ನಿಂತಿರುತ್ತಾರೆ. ಅದರ ಬಗ್ಗೆ ಜನರಿಗೆ ಒಂದು ರೀತಿಯಲ್ಲಿ ನಂಬಿಕೆ. ಬೇಧಿ ಆಗುವಂತಹ ಮಕ್ಕಳನ್ನು ಆಸ್ಪತ್ರಗೆ ಕರೆದುಕೊಂಡು ಹೋಗಬೇಕು. ಆದರೆ, ಇಲ್ಲಿ ಬಂದು ತಾಯಿತ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಟ್ಟಿಸಿಕೊಳ್ಳುತ್ತಾರೆ. ಅಂತಹ ಮಕ್ಕಳು ಬದುಕುವುದಿಲ್ಲ ಸತ್ತು ಹೋಗುತ್ತಾರೆ. ಎರಡು ಸಾರಿ ಬೇಧಿಯಾದ ಮೇಲೆ ಕರೆದುಕೊಂಡು ಬಂದಿರುತ್ತಾರೆ. ಸಂಜೆ ಹೊತ್ತಿಗೆ ಇನ್ನು 5 ಬಾರಿ ಬೇಧಿಯಾಗಿ ಆ ಮಗು ಸತ್ತುಹೋಗುತ್ತದೆ. ಆದರೆ, ಆ ತಾಯಿತವನ್ನು ಕಟ್ಟಿಸಿಬಿಟ್ಟರೆ ಬೇಧಿ ನಿಂತು ಹೋಗಿಬಿಡುತ್ತದೆ ಎನ್ನುವಂತಹ ನಂಬಿಕೆ. ಇಂತಹ ಶೋಷಣೆಗಳು ಸಹ ನಡೆಯುತ್ತಿವೆ. ಅದಕ್ಕೆ ನಾನು ಹೇಳುವುದು ಮೂಢನಂಬಿಕೆ ಏನಿದೆ ಇದು ಶೋಷಣೆಯ ಪರಮಾವಧಿ, ಎಲ್ಲಿಯವರೆಗೆ ಶೋಷಣೆ ಮಾಡುವವರು ಇರುತ್ತಾರೆಯೋ, ಅಲ್ಲಿಯವರೆಗೆ ಶೋಷಿತರ ಸಂಖ್ಯೆಯು ಸಹ ಜಾಸ್ತಿ ಇರುತ್ತದೆ. ಇದಕ್ಕೆ ವಿದ್ಯಾವಂತರು, ಬಡವರು ಮತ್ತೆ ಅತಿ ಹೆಚ್ಚು ನಂಬಿಕೆ ಇಟ್ಟುಕೊಂಡಿರುವಂತಹವರು ಬಲಿಯಾಗುತ್ತಾರೆ. ಅದರಿಂದ, ದೇವರು ಬರುತ್ತದೆಂದು ಹೇಳಿ ಮೋಸ ಮಾಡುವಂಥದ್ದು, ದಿನ ನಿತ್ಯ ಗಂಡ-ಹೆಂಡತಿಯರ ಬದುಕು ನೆಮ್ಮದಿಯಾಗಿ ಇರುವುದಿಲ್ಲವೆಂದು ಹೇಳುವಂಥದ್ದನ್ನು ಹಾಗೂ ನಿಧಿಗಾಗಿ ಹೆಂಡತಿ ಮಕ್ಕಳನ್ನು ಬಲಿ ಕೊಡುವಂಥದ್ದನ್ನು ಇಷ್ಟನ್ನಾದರೂ ಈ ವಿಧೇಯಕದ ಮೂಲಕ ನಿಲ್ಲಿಸಬೇಕು. ಈ ರೀತಿ ಮಾಡಿದ್ದೇ ಆದಲ್ಲಿ, ಈ ವಿಧೇಯಕವನ್ನು ತಂದಿದ್ದಕ್ಕೆ ಸಾರ್ಥಕವಾಗುತ್ತದೆ. ಮತ್ತೊಮ್ಮೆ ಈ ವಿಧೇಯಕವನ್ನು ಸ್ವಾಗತ ಮಾಡಿ ಅಭಿನಂದಿಸುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಸಚಿವರು ತಂದಿರುವಂತಹ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಹಾಗೆಯೇ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಮಾನ್ಯ ಸಚಿವರು ಇವತ್ತು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಮುಂದು...)

(1190)22.11.2017-6.20-ಎಂವಿ-ಕೆಎಸ್

**ಶ್ರೀ ಟಿ.ಎ.ಶರವಣ (ಮುಂದು...):-**

ಇದರಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. "ಯದ್ಭಾವಂ ತದ್ಭವತಿ" ಎಂದು ಹೇಳುತ್ತೇವೆ. ಯಾರನ್ನು ಕೂಡ ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಅವರವರ ವಿವೇಚನೆ ಮತ್ತು ಭಾವನೆಗಳಿಗೆ, ನಂಬಿಕೆ ಮತ್ತು ಅಪನಂಬಿಕೆ ಇವುಗಳಲ್ಲಿ ಯಾವುದೇ ಇರಲಿ. ಇವತ್ತಿನ ದಿವಸ ಈ ಮೂಢನಂಬಿಕೆಯ ವಿಚಾರ ಬಂದಾಗ ಬಹಳಷ್ಟು ಸದಸ್ಯರು ಇದರ ಬಗ್ಗೆ ಮಾತನಾಡುತ್ತಿದ್ದರು. ಈ ಮೂಢನಂಬಿಕೆಯಿಂದ ದೇವಸ್ಥಾನಗಳಲ್ಲಿ ಬಹಳಷ್ಟು ಘಟನೆಗಳನ್ನು ನಾವು ನೋಡುತ್ತಿರುತ್ತೇವೆ, ಸಣ್ಣ ಮಕ್ಕಳನ್ನು ಮೇಲಿನಿಂದ ಕೆಳಗಡೆ ಬಿಸಾಡುವುದು, ಆಗ ಮಗುವನ್ನು ಕಂಬಳಿಯಲ್ಲಿ ಹಿಡಿದುಕೊಳ್ಳುತ್ತಾರೆ. ಅವರು ಆ ರೀತಿ ಮಾಡುವುದು ಮಗು ಆರೋಗ್ಯವಾಗಿರಬೇಕು ಮತ್ತು ಅದು ಯಾವುದೇ ನೋವಿನಲ್ಲಿ ಬೆಳೆಯಬಾರದು ಎಂಬ ಉದ್ದೇಶದಿಂದ. ಇಂತಹ ಬಹಳಷ್ಟು ಘಟನೆಗಳನ್ನು ನಾವು ನೋಡುತ್ತಿರುತ್ತೇವೆ. ಇವತ್ತಿನ ದಿವಸ ಈ ವಿಚಾರ ಬಂದಾಗ, ನಮ್ಮ ಆಚರಣೆಗಳು ಏನಿವೆ, ಹಿಂದೂ ಸನಾತನ ಧರ್ಮದಲ್ಲಿ ಇರತಕ್ಕಂಥ ಆಚರಣೆಗಳ ಬಗ್ಗೆ ಬಹಳಷ್ಟು ವಿವರಣೆಯನ್ನು ಕೊಟ್ಟಿದ್ದಾರೆ. ಆ ತರಹ ಸರ್ವ ಧರ್ಮಕ್ಕೂ, ಅಂದರೆ ಅವರು ಹಿಂದೂ ಧರ್ಮದವರು ಇರಬಹುದು, ಮುಸಲ್ಮಾನ ಧರ್ಮದವರು ಇರಬಹುದು, ಕ್ರಿಶ್ಚಿಯನ್ ಧರ್ಮದವರು ಇರಬಹುದು ಅಥವಾ ಜೈನ ಧರ್ಮದವರು ಇರಬಹುದು, ಈ ಎಲ್ಲಾ ಧರ್ಮಗಳಿಗೂ ಕೂಡ ಅನ್ವಯಿಸುವಂತಹ, ಕೆಲವು ಕಾನೂನು ಮತ್ತು ವಿಚಾರಗಳ ಬಗ್ಗೆ ತಾವು ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಬೇಕು. ಇವತ್ತಿನ ದಿವಸ ಕೆಲವು ಜನರಿಗೆ ಕೆಲವು ನಂಬಿಕೆಗಳು ಇರುತ್ತವೆ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡ ಸಾಹೇಬರು, ಅವರು ಬೆಳಗ್ಗೆ ಎದ್ದು, ಯಾವುದೇ ದೇವಸ್ಥಾನಕ್ಕೆ ಹೋಗುವುದಾದರೆ ಅಥವಾ ಯಾವುದಾದರೂ ಕೆಲಸವನ್ನು ಮಾಡಬೇಕಾದರೆ, ಅವರು ಒಂದು ಲೋಟ ನೀರನ್ನೂ ಸಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕುಡಿಯುವುದಿಲ್ಲ. ಮೊದಲನೆಯದಾಗಿ ಸ್ನಾನ ಮಾಡಿ, ಮನಸ್ಸಿಗೆ ಧ್ಯಾನ, ಅಂದರೆ ಶರೀರಕ್ಕೆ ಹೇಗೆ ಸ್ನಾನ ಮಾಡುತ್ತೇವೆಯೋ ಅದೇ ರೀತಿ ಮನಸ್ಸಿಗೆ ಸ್ನಾನ ಮಾಡಬೇಕು. ಮನಸ್ಸಿಗೆ ಸ್ನಾನ ಎಂದರೆ, ದೇವರನಾಮ ಓದುವುದು, ಧ್ಯಾನ ಮಾಡುವುದು, ಅವುಗಳೆಲ್ಲಾ ಆದ ನಂತರ ಅವರು ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುತ್ತಾರೆ. ಆಮೇಲೆ ದೇವಸ್ಥಾನಕ್ಕೆ ಇರಬಹುದು ಅಥವಾ ಯಾವುದೇ ರೀತಿಯ ಕೆಲಸ ಇರಬಹುದು ಅದನ್ನು ಪ್ರಾರಂಭ ಮಾಡುತ್ತಾರೆ, ಅಂದರೆ ಇಂತಹ ಇಳಿ ವಯಸ್ಸಿನಲ್ಲೂ ಕೂಡ. ಅಂತಹವರು ಸಹ ಈಗಿನ ಕಾಲದಲ್ಲಿ ಇದ್ದಾರೆ. ಇವತ್ತಿನ ಮುಖ್ಯಮಂತ್ರಿಗಳು ಅದನ್ನು ತಾವು ನೋಡಿದ್ದೀರಿ, ನಾನು ಕೂಡ ನೋಡಿದ್ದೇನೆ, ಅವರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿಯ ದರ್ಶನ ಮಾಡಿದಾಗ ಹೇಳಿದರು ನಾನು ಮೀನು ತಿಂದು ಹೋಗಬಾರದೆ, ಮೀನು ತಿಂದು ಬರಬಾರದೆಂದು ಎಲ್ಲಾದರೂ ದೇವರು ಹೇಳಿದ್ದಾರಾ, ಅದು ನನ್ನ ನಂಬಿಕೆ ಎಂದು ಹೇಳಿದ್ದಾರೆ. ಬಹುಶಃ ಅವರವರ ನಂಬಿಕೆಗಳಿಗೆ ಅವರು ಹೇಳಿದ್ದಾರೆ. ನಾನು ತಮ್ಮ ಜೊತೆಯಲ್ಲೂ ಕೂಡ ನನ್ನ ಅನುಭವವನ್ನು ಹಂಚಿಕೊಂಡಿದ್ದೇನೆ. ಬಹುಶಃ ತಾವು (ಮಾನ್ಯ ಕಾನೂನು ಸಚಿವರು) ಮುಜರಾಯಿ ಖಾತೆ ಸಚಿವರಾಗಿದ್ದಾಗ, ಬಸವನಗುಡಿಯ ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬಂದಾಗ ತಾವು ಮಂಗಳಾರತಿಯನ್ನು ತೆಗೆದುಕೊಂಡ ನಂತರ, ಅಲ್ಲಿ ತೀರ್ಥವನ್ನು ಕೊಟ್ಟರು, ಆಗ ತಾವು ಆ ತೀರ್ಥವನ್ನು ತೆಗೆದುಕೊಳ್ಳಲಿಲ್ಲ. ನಾನು ಅದನ್ನು ಗಮನಿಸಿದ್ದೇನೆ. ಅದು ನಿಮ್ಮ ನಂಬಿಕೆ. ಅದಕ್ಕೆ ನಾನು ಏನನ್ನು ಮಾಡುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ಯಾರ ಭಾವನೆಗಳಿಗೆ ಸಹ ಧಕ್ಕೆ ಬರಬಾರದು. ಅವರವರ ವಿವೇಚನೆಗಳಿಗೆ ಧರ್ಮಗಳನ್ನು ಕಾಪಾಡುವಂತಹ ಕೆಲಸಗಳನ್ನು ಮಾಡಬೇಕು. ಟಿ.ವಿ.ಯಲ್ಲಿ ಬರುವಂತಹ ಜ್ಯೋತಿಷಿಗಳ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದರು. ಜ್ಯೋತಿಷಿಯವರು ಬಂದು ಹಲವಾರು ಕುಟುಂಬಗಳು ಒಡೆದು ಹೋಗುತ್ತಿವೆ ಎಂದು. ಮಕ್ಕಳಿಲ್ಲದವರಿಗೆ ಮಕ್ಕಳು ಆಗುವ ರೀತಿಯಲ್ಲಿ ಮಾಡುತ್ತೇವೆ, ನಾವು ಆಕಾಶವನ್ನು ತೋರಿಸಿಬಿಡುತ್ತೇವೆ, ನಿಮ್ಮನ್ನು ಸ್ವರ್ಗಕ್ಕೆ ಕಳುಹಿಸಿಬಿಡುತ್ತೇವೆಂದು. ಈ ತರಹ ಹಲವಾರು ಸುಳ್ಳು ವಿಚಾರಗಳನ್ನು ಮಾಡಿ, ಜನರನ್ನು ತಪ್ಪು ದಾರಿಗೆ ತರುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ತಾವು ಇದರಲ್ಲಿ ವಿನಾಯಿತಿಯನ್ನು ಕೊಟ್ಟಿದ್ದೀರಿ, ದಯಮಾಡಿ ನಾನು ತಮಗೆ ವಿನಂತಿಸುತ್ತೇನೆ, ಈ ವಿನಾಯಿತಿಯನ್ನು ಕೂಡ ತಾವು ಪರಿಗಣನೆಗೆ ತೆಗೆದುಕೊಳ್ಳಬೇಕು. ಈ ತರಹ ತಪ್ಪು ಸಂದೇಶವನ್ನು ಕೊಡುತ್ತಾರೆ, ಯಾರು ಸಮಾಜವನ್ನು ಒಡೆಯುವಂತಹ ಕೆಲಸವನ್ನು ಮಾಡುತ್ತಾರೆ, ಅಂತಹವರಿಗೂ ಸಹ ಶಿಕ್ಷೆಯಾಗಬೇಕು. ಹಾಗೆಂದು ಎಲ್ಲರೂ ಒಂದೇ ರೀತಿಯಲ್ಲಿ ಇದ್ದಾರೆಂದು ನಾನು ಹೇಳುವುದಿಲ್ಲ. ಯಾರು ತಪ್ಪು ಮಾಡುತ್ತಾರೆ ಅಂತಹವರಿಗೆ ಖಂಡಿತವಾಗಿ ಶಿಕ್ಷೆಯಾಗಬೇಕು, ಆ ಹಾದಿಯಲ್ಲಿ ತಾವು ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಸಲಹೆ ನೀಡುತ್ತಿದ್ದೇನೆ. ಏಕೆಂದರೆ, ಈಗ ಎಲ್ಲರೂ ಹೇಳಿದರು, ಹೀಗೂ ಉಂಟೆ? ಜನ್ಮಾಂತರ ಮತ್ತು ಜ್ಯೋತಿಷ್ಯ ಈ ತರಹ ಹಲವಾರು ಕಾರ್ಯಕ್ರಮಗಳು ಬರುತ್ತವೆ. ಇಂತಹ ಕಾರ್ಯಕ್ರಮಗಳನ್ನು ವಿಶೇಷವಾಗಿ ಹೆಣ್ಣುಮಕ್ಕಳು ಹೆಚ್ಚಾಗಿ ನೋಡುತ್ತಾರೆ. ಅವರಿಗೆ ಒಂದು ಎಲೆಯನ್ನು ತಂದು ಪೂಜೆ ಮಾಡು ಎಂದು ಹೇಳುತ್ತಾರೆ, ಅವತ್ತಿನ ದಿವಸ ಆ ಎಲೆಗೆ ಸಿಕ್ಕಾಪಟ್ಟೆ ಬೇಡಿಕೆ ಆಗುತ್ತದೆ. ಟಿ.ವಿ.ಯಲ್ಲಿ ಜ್ಯೋತಿಷ್ಯದವರು ಹೇಳಿಬಿಟ್ಟರೆ, ಅದು ಅವರಿಗೆ ವೇದವಾಕ್ಯವಿದ್ದಂತೆ, ಅದನ್ನು ಎಲ್ಲರೂ ಕೂಡ ಪಾಲನೆ ಮಾಡುತ್ತಾರೆ. ನನಗೆ ಸಾಕಷ್ಟು ಅನುಭವವಾಗಿದೆ. ಆದುದರಿಂದ ನಾನು ತಮಗೆ ಮನವಿ ಮಾಡುವುದೇನೆಂದರೆ, ಈ ಜ್ಯೋತಿಷಿಗಳ ಬಗ್ಗೆ ಈ ವಿನಾಯಿತಿಯನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ, ಯಾರು ತಪ್ಪು ಮಾಡುತ್ತಾರೊ, ಅಂತಹವರಿಗೆ ಶಿಕ್ಷೆಯಾಗುವಂತೆ ಮಾಡಿ ಇದನ್ನು ನಿಯಂತ್ರಣಕ್ಕೆ ತರಬೇಕು. ಈಗ ಮಾನ್ಯ ಸದಸ್ಯರಾದ ಎಸ್.ವಿ.ಸಂಕನೂರರವರು ಹೇಳುತ್ತಿದ್ದರು. ಅದನ್ನು ಕಂಡು ಹಿಡಿಯುವವರು ಯಾರು? ಅದನ್ನು ದುರುಪಯೋಗಪಡಿಸಿಕೊಳ್ಳುವಂತಹ ವ್ಯವಸ್ಥೆ ಇರುತ್ತದೆ. ಅದನ್ನು ತಾವು ಪರಿಗಣನೆಗೆ ತೆಗೆದುಕೊಳ್ಳಬೇಕು. ಯಾವುದಾದರು ಆಯೋಗದ ರೀತಿ ಮಾಡಿ, ಅವರಿಗೆ ಒಂದು ಪರಮಾಧಿಕಾರವನ್ನು ಕೊಟ್ಟು, ಕೆಲಸವನ್ನು ಮಾಡಬೇಕೆಂದು ಹೇಳಿ. ನಮ್ಮ ಆಚಾರ-ವಿಚಾರಗಳಿಗೆ ಯಾವುದೇ ರೀತಿಯ ಧಕ್ಕೆ ಆಗದೆ, ತಮ್ಮ ಸರ್ಕಾರ ಬಹಳ ನಿಧಾನವಾಗಿಯಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ತಮಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಹಾಗೂ ಇನ್ನು ಇಬ್ಬರು ಸದಸ್ಯರು ಮಾತನಾಡುವವರು ಇದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಸ್. ರವಿಯವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ವಿ.ಎಸ್.ಉಗ್ರಪ್ಪನವರು ಮಾತನಾಡುವುದು, ಈಗ ತಮಗೆ ಎಲ್ಲಾ ಅರ್ಥವಾಗಿದೆ, ದಯವಿಟ್ಟು ತಾವು ಸಮಯಕ್ಕೆ ಕಡಿವಾಣ ಹಾಕಿಕೊಳ್ಳಬೇಕು. ಈ ಕಡೆ ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್ ಮತ್ತೆ ಇನ್ನು ಇಬ್ಬರು ಸದಸ್ಯರು ಮಾತನಾಡಬೇಕಾಗಿದೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಆ ಪೀಠದಲ್ಲಿ ಇದ್ದಂತಹವರು, ನನ್ನನ್ನು ಮಧ್ಯಾಹ್ನ ಮಾತನಾಡಿ ಎಂದು ಹೇಳಿದರು, ಈಗ ತಾವು ಕೊನೆಗೆ ಎಂದು ಆದೇಶ ಮಾಡಿದ್ದೀರಿ. ಆದಷ್ಟು ಕಡಿಮೆ ಸಮಯದಲ್ಲಿ ನನ್ನ ಮಾತನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಉಪ ಸಭಾಪತಿಯವರು:–** ಈ ವಿಷಯದ ಬಗ್ಗೆ ಮೂರು ಗಂಟೆಗಳ ಚರ್ಚೆಯಾಗಿದೆ. ಈಗ ತಾವು ಸಮಯವನ್ನು ನೋಡಿಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರೆಲ್ಲರೂ ಅವರ ಸಮಯವನ್ನು ನನಗೆ ಬಿಟ್ಟುಕೊಡುತ್ತೇವೆಂದು ಹೇಳುತ್ತಿದ್ದಾರೆ. ದಯಮಾಡಿ ಸ್ವಲ್ಪ ಹೊತ್ತು ಬಿಡಿ. ಬಹಳ ಸಮಾಜಮುಖಿಯಾದಂತಹ, ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ, ಅತ್ಯಂತ ಪ್ರಗತಿಪರವಾದ ಚಿಂತನೆಯನ್ನು ಹೊಂದಿ. ಏನು ಈ ಒಂದು ವಿಧೇಯಕವನ್ನು ಸರ್ಕಾರ ತಂದಿದೆ. ಇದನ್ನು ನಾನು ಅತ್ಯಂತ ಮುಕ್ತ ಮನಸ್ಸಿನಿಂದ ಸ್ವಾಗತ ಮಾಡುವುದಕ್ಕೆ ಬಯಸುತ್ತೇನೆ. ನೋಡಿ ನಮ್ಮ ಮುಂದೆ Religious sentiments ಬೇರೆ, Sinister ಬೇರೆ. ಧಾರ್ಮಿಕ ಭಾವನೆಗಳು ಒಂದು ರೀತಿಯಾದರೆ, ವಾಮಾಚಾರಗಳು ಇನ್ನೊಂದು ರೀತಿ. ಇದು ಅವರಿಗೆ, ಇವರಿಗೆ ಎನ್ನುವಂಥದ್ದಲ್ಲ. ಈ ಧಾರ್ಮಿಕ ಭಾವನೆಗಳ ಹಿನ್ನೆಲೆಯಲ್ಲಿ, ಏನು ಅನೇಕರು, “ಗಂಗಾ ಸಿಂಧೂಸ್ಯ ಕಾವೇರಿ ಯಮುನಾಚೆ ಸರಸ್ವತಿ” ಎಂದು ಹೇಳಿ, ಬೆಳಗ್ಗೆ ಪ್ರಾರ್ಥನೆ ಮಾಡುತ್ತಾರೆ. ಆ ಗಂಗೆಯನ್ನು ಸ್ವಚ್ಛ ಮಾಡುವುದಕ್ಕೆ ೩೦೦ ಕೋಟಿ ರೂಪಾಯಿಗಳ ಹಣವನ್ನು ಪ್ರಪ್ರಥಮವಾಗಿ ಈ ದೇಶದ ಮಾನ್ಯ ಪ್ರಧಾನ ಮಂತ್ರಿಗಳಾಗಿದ್ದಂತಹ ದಿವಂಗತ ರಾಜೀವಗಾಂಧಿಯವರು ಕೊಟ್ಟರು. ಪ್ರಪ್ರಥಮವಾಗಿ ಈ ದೇಶದಲ್ಲಿ ಬಾಬ್ರಿ ಮಸೀದಿಯ ರಾಮಮಂದಿರದ ಆ ರಾಮಲಲ್ಲಾ ಪೂಜೆಗೆ ಬಾಗಿಲನ್ನು ಪ್ರಪ್ರಥಮವಾಗಿ ತರಿಸಿದ್ದಂತಹವರು ದಿವಂಗತ ರಾಜೀವಗಾಂಧಿಯವರು. ನಾನು ಇದನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಎಲ್ಲೂ ಸಹ ಈ Religious sentiments ಅಥವಾ Religious freedom ಹಿನ್ನೆಲೆಯಲ್ಲಿ ಕೆಲವು ಸಂದರ್ಭಗಳಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ. ಆದರೆ, ಯಾವುವು ಈ ವಾಮಾಚಾರಗಳು ಇವೆಯಲ್ಲಾ, ಈ ವಾಮಾಚಾರಗಳು ಯಾವುದೋ ಒಂದು ಪಕ್ಷಕ್ಕೆ ಅಥವಾ ಯಾವುದೋ ಒಂದು ಜಾತಿಗೆ ಅಥವಾ ಯಾವುದೋ ಒಂದು ಧರ್ಮಕ್ಕೆ ಸೀಮಿತವಾಗಿರುವಂಥದ್ದಲ್ಲ. ಈ ವಾಮಾಚಾರಗಳನ್ನು ತಡೆಯುವಂತಹ ದೃಷ್ಟಿಯಿಂದ, ಈ ರೀತಿಯ ವಾಮಾಚಾರಗಳು ಮತ್ತು ಕೆಟ್ಟ ಪದ್ಧತಿಗಳು ಸಮಾಜದಲ್ಲಿ ವಿಶೇಷವಾಗಿ ಯಾರ ಮೇಲೆ ಹೆಚ್ಚು ಪ್ರಭಾವ ಬೀರುವಂತದ್ದು. ಈ ಶ್ರೇಣಿಕೃತ ಜಾತಿ ವ್ಯವಸ್ಥೆಯಲ್ಲಿ ಮೊದಲನೆಯ ಮೂರು ವರ್ಗಗಳು ಏನಿವೆ, ಅವರುಗಳ ಮೇಲೆ ಅಷ್ಟೊಂದು ಹೇಳಿಕೊಳ್ಳುವಂತಹ ರೀತಿಯಲ್ಲಿ ಪ್ರಭಾವ ಬೀರುವುದಿಲ್ಲ. ಆ ನಾಲ್ಕನೇ ವರ್ಗ ಇದೆಯಲ್ಲಾ, ಅಂದರೆ ಶೂದ್ರ ವರ್ಗ. ಆ ಶೂದ್ರ ವರ್ಗದಲ್ಲಿರುವಂತಹ ಯಾರು ಹೆಚ್ಚು ಶೋಷಿತರು ಇದ್ದಾರೆ, they are more particularly from Schedule Castes, Schedule Tribes and Other Backward

Classes. ಇವರುಗಳ ಮೇಲೆ ಹೆಚ್ಚು ಪ್ರಭಾವ ಬೀರುವಂತಹ ಹಿನ್ನೆಲೆಯಲ್ಲಿ, ಇದನ್ನು ತಡೆಯುವಂಥದ್ದಕ್ಕೆ ಸಂವಿಧಾನದ Article 17ರ ಕೆಳಗಡೆ, ಡಾ:ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನವನ್ನು ರೂಪಿಸಿದಂತಹವರು. ಈ Untouchability ಅನ್ನು practice ಮಾಡುವಂಥದ್ದು ಕಾನೂನುಬಾಹಿರವೆಂದು ಮಾಡಿದರು. ನಂತರದ ದಿನಗಳಲ್ಲಿ Article 51A Fundamental Duties of a Citizen, ಅದನ್ನು ಜನವರಿ 3, 1977ರಂದು ಅದನ್ನು ಜಾರಿಗೆ ತರುವುದರ ಮೂಲಕ Article 51A (h) ನಲ್ಲಿ ಏನು ಹೇಳುತ್ತಾರೆಂದರೆ;

***"to develop the scientific temper, humanism and the spirit of inquiry and reform;"***

**(ಮುಂದು...)**

(1191)22.11.2017-06.30-ಎಲ್‌ಎಲ್-ಜಿಆರ್

**ಶ್ರೀ ವಿ.ಎಸ್. ಉಗ್ರಪ್ಪ:- (ಮುಂದುವರೆದಿದ್ದು...)**

ಆದುದರಿಂದ, ಇದರ ಮೇಲೆ 2002 ರಲ್ಲಿ ಸುಪ್ರೀಂ ಕೋರ್ಟ್‌ನವರು ಈ ರೀತಿಯ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆಯನ್ನು ಕೇವಲ ಯಾವುದೋ ಒಂದು ಹೇಳಿಕೆಗಳ ಮೂಲಕ ತಡೆಯಲಿಕ್ಕೆ ಆಗುವುದಿಲ್ಲ. ಅದನ್ನು constitutional provisions ಮೂಲಕ ನಿವಾರಣೆ ಮಾಡತಕ್ಕಂಥದ್ದಕ್ಕೆ ಸರ್ಕಾರಗಳು ಪ್ರಯತ್ನ ಮಾಡಬೇಕೆಂದು **"N. *Adithayan v/s* The *Travancore Devaswom Board' [AIR 2002 SC 3538]"*** ಪ್ರಕರಣದ ತೀರ್ಪಿನಲ್ಲಿ ಮಾನ್ಯ ಸುಪ್ರೀಂ ಕೋರ್ಟ್‌ನವರು "The religious freedom is subject to the public order, health, morality and other provisions of part-III of the Constitution of India including Article 17." ಎಂದು ಹೇಳಿದ್ದಾರೆ. ಅಂದರೆ, ಮೂಲಭೂತ ಹಕ್ಕುಗಳು ಎನ್ನುವುದನ್ನು ಹೇಳುತ್ತಾರೆ. ಸಂವಿಧಾನದ ಆರ್ಟಿಕಲ್ 180 ಮೇರೆಗೆ ಸಂವಿಧಾನ ಆಶಯಗಳ ರೀತ್ಯಾ ನಾವು ನಡೆದುಕೊಳ್ಳುತ್ತೇವೆಂದು ಪ್ರಮಾಣವನ್ನು ಸ್ವೀಕರಿಸಿದ್ದೇವೆ. ಬಹುಶಃ ಆ ಆಶಯಗಳ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಸರ್ಕಾರ ಒಂದು ಹೊಸ ಸಮಾಜವನ್ನು ಕಾಣುವಂತಹ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದಾರೆ ಎಂದು ನಾನಂತು ಭಾವಿಸಿದ್ದೇನೆ. ಈ ವಿಧೇಯಕವನ್ನು ಯಾವುದೇ ಮೇಲ್ವರ್ಗ ಅಥವಾ ಸ್ಥಿತಿವಂತರ ಮೇಲೆ ಅಲ್ಲದೇ, ಯಾವ ಸಮಾಜದಲ್ಲಿ ದುಷ್ಟ ಮತ್ತು ದುರಾಚಾರ ಪದ್ಧತಿಗಳಿವೆ, ಅವುಗಳು ಜನಸಾಮಾನ್ಯರ ಮೇಲೆ ಬೀರತಕ್ಕಂತಹ ಪರಿಣಾಮಗಳನ್ನು ತಡೆಯುವಂತಹ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದೇವೆಂದು ಪ್ರಸ್ತಾಪ ಮಾಡುತ್ತಾರೆ. ಇಲ್ಲಿ ಅತ್ಯಂತ ಪ್ರಮುಖವಾಗಿ Clause 2(1)(g) and 2(1)(c) ಎಂಬ ಎರಡು Clause ಗಳಿವೆ. Clause 2(1)(g) has to be read with Clause 2(1)(c). Clause 2(1)(g) ನಲ್ಲಿ ಏನು ಹೇಳುತ್ತಾರೆಂದರೆ, ಅಮಾನವೀಯ, ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಎಂದರೆ, ಅನುಸೂಚಿಯಲ್ಲಿ ಹೇಳಿರತಕ್ಕಂಥದ್ದನ್ನು list out ಮಾಡಿದ್ದಾರೆ. ಯಾವೆಲ್ಲಾ ವಾಮಾಚಾರಗಳು ಮತ್ತು ಇನ್ನಿತರ ದುಷ್ಟ ಪದ್ಧತಿಗಳು ಸಮಾಜಕ್ಕೆ ಮಾರಕವಾಗಿವೆ ಎನ್ನುವುದು ಅದರಲ್ಲಿ ತಿಳಿಸಲಾಗಿದೆ.

ಎರಡನೆಯದಾಗಿ, Clause 15 ಕೆಳಗಡೆ religious sentiment ಅನ್ನುವಂತಥದ್ದರ ಹಿನ್ನೆಲೆಯಲ್ಲಿ ಯಾವುದೇ ಧರ್ಮಕ್ಕಾಗಲೀ ಅಥವಾ ಯಾವುದೇ ಒಂದು ವರ್ಗಕ್ಕಾಗಲೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋವಾಗಬಾರದೆಂದು ಈ ವಿಧೇಯಕದಲ್ಲಿ ಯಾವ ಪದ್ಧತಿಯನ್ನು ನಾವು ಬಿಡಬಹುದು, ಅದನ್ನು ನಾವು ಮುಟ್ಟುವುದಿಲ್ಲವೆಂದು 'Savings' ಗಳಲ್ಲಿ ತೋರಿಸಿದ್ದಾರೆ. ಈ ವಿಧೇಯಕದಲ್ಲಿ ನನಗನ್ನಿಸುವುದು, Clause 15 (1)(vii) ವಾಸ್ತುಶಾಸ್ತ್ರದ ಕುರಿತು ಸಲಹೆ, ಜ್ಯೋತಿಷ್ಯ ಮತ್ತು ಇತರ ಜ್ಯೋತಿಷಿಗಳಿಂದ ಸಲಹೆ, ವಾಸ್ತುಶಾಸ್ತ್ರದವೆಂದರೆ ಬೆಳಕು ಹೇಗಿರಬೇಕು, ಗಾಳಿ ಹೇಗಿರಬೇಕು ಮತ್ತು ಬೆಂಕಿ ಹೇಗಿರಬೇಕು ಇದು ವೈಜ್ಞಾನಿಕವಾಗಿ ಸ್ವಲ್ಪ ಮಟ್ಟಿಗೆ ಇರುತ್ತದೆಯೆಂದು ಕೆಲವರು ಹೇಳುತ್ತಾರೆ. ಜ್ಯೋತಿಷ್ಯ ಮತ್ತು ಜ್ಯೋತಿಷಿಗಳಿಂದ ಯಾರು ಸಲಹೆಯನ್ನು ಪಡೆಯುತ್ತಿದ್ದಾರೆ, ಸಮಾಜಕ್ಕೆ ಇದರಷ್ಟು ಮಾರಕವಾಗತಕ್ಕಂಥದ್ದು ಮತ್ತೊಂದು ಪದ್ಧತಿ ಇರುವುದಿಲ್ಲ, ಇದನ್ನು ಈ 'ನಿರ್ಬಂಧದ ಕ್ಲಾಸ್' ಕೆಳಗಡೆ ತರುವುದಕ್ಕೆ ಸರ್ಕಾರ ಗಮನಹರಿಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಇದರ ಜೊತೆಗೆ, Clause 2(1)(c) read with Clause 2(1)(g) ಬಗ್ಗೆ ಈಗಾಗಲೇ ಕೆಲವರು ಹೇಳಿದ್ದಾರೆ. ಜಾತ್ರೆಗಳು ಮತ್ತು ಧಾರ್ಮಿಕ ಹಬ್ಬಗಳ ಸಮಯದಲ್ಲಿ ದೈಹಿಕವಾಗಿ ಗಾಯವನ್ನು ಉಂಟುಮಾಡುವಂತಹ ಕೆಂಡ ಹಾಯುವ ಪದ್ಧತಿಯನ್ನು ಯಾರು ಪ್ರೇರೇಪಣೆ ಮಾಡುತ್ತಾರೆ, ಇಲ್ಲಿ ಕೆಂಡ ಇದ್ದರೆ ತಾನೇ ಪ್ರೇರೇಪಣೆ ಮಾಡತಕ್ಕಂಥದ್ದು, ಈ ಕೆಂಡದ ಪದ್ಧತಿಯಿಂದ ಎಷ್ಟೆಲ್ಲಾ ಸಾವುಗಳಾಗಿವೆಂದು ಮಾನ್ಯ ಕಾನೂನು ಸಚಿವರು ನಮ್ಮ ಜಿಲ್ಲೆಯಲ್ಲಿಯೇ ಇತ್ತೀಚೆಗೆ ನಡೆದಿರತಕ್ಕಂತಹ ಘಟನೆ ಅವರಿಗೆ ಗೊತ್ತಿರತಕ್ಕಂತಹ ಹಿನ್ನೆಲೆಯಲ್ಲಿ 'ಉಳಿಸುವಿಕೆಗಳು' ಕ್ಲಾಸ್‌ನಲ್ಲಿ ಅಥವಾ 'punishment clause' ನಲ್ಲಿ ಈ ಕೆಂಡ ಹಾಯುವ ಪದ್ಧತಿಯನ್ನು ನಿಷೇಧ ಮಾಡುವುದರಲ್ಲಿ ಸಮಂಜಸವಿದೆಯೆಂಬ ಮಾತನ್ನು ಹೇಳುತ್ತಾರೆ.

ಇದರ ಜೊತೆಗೆ, ನನಗನ್ನಿಸುವುದು ವಿಶೇಷವಾಗಿ ಈ ಮಂಗಳಮುಖಿಯರು ದುಷ್ಟ ಪದ್ಧತಿಯಿಂದ ಅತ್ಯಂತ ಅಮಾನವೀಯವಾಗಿರತಕ್ಕಂತಹ ಘಟನೆಗಳನ್ನು ಮಾಡುವುದನ್ನು ನಾನು ಒಂದು ಸಮಿತಿಯ ಅಧ್ಯಕ್ಷನಾಗಿ ನೋಡಿದ್ದೇನೆ. ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ದೇಶದಲ್ಲಿರುವಂತಹ ಮಂಗಳಮುಖಿಯರಲ್ಲಿ 3 ರೀತಿಯ ಮಂಗಳಮುಖಿಯರು ಇದ್ದಾರೆ. ಮೊದಲನೆಯದು, ಅವರು ಹುಟ್ಟುತ್ತಲೇ ಮಂಗಳಮುಖಿಯರು. ಅಂದರೆ, ಅವರು ಹುಟ್ಟುತ್ತಲೇ ನಪುಂಸಕರಾಗಿ ಹುಟ್ಟಿರುತ್ತಾರೆ. ಶೇಕಡ 100 ರಲ್ಲಿ ಉಳಿದ ಶೇಕಡ 99 ರಷ್ಟು ತಮ್ಮ ಬದುಕಿನಲ್ಲಿ ಲಿಂಗ ಪರಿವರ್ತನೆ ಮಾಡಿಕೊಳ್ಳುವಂಥದ್ದು. ಈ ಲಿಂಗ ಪರಿವರ್ತನೆ ಮಾಡಿಕೊಳ್ಳುವಂಥದ್ದರಲ್ಲಿ ಎರಡು ವಿಧ ಇದೆ. ಅದರಲ್ಲಿ ಒಂದನೆಯದು, ದಾಯಮ್ಮ ಚಿಕಿತ್ಸೆ ಮೂಲಕ, ಮತ್ತೊಂದು ವೈದ್ಯರುಗಳ ಹತ್ತಿರ ಹೋಗಿ, ಉದಾಹರಣೆಗೆ ಗೋವಾ, ಬಾಂಬೆ, ಅಥವಾ ಬೆಂಗಳೂರಿನಲ್ಲಿರುವ ಕೆಲವೇ ಕೆಲವು ಆಯ್ದ ವೈದ್ಯರುಗಳು ಇದನ್ನು ಆಪರೇಟ್ ಮಾಡಿ ಲಿಂಗ ಪರಿವರ್ತನೆ ಮಾಡತಕ್ಕಂಥದ್ದು ಆಗುತ್ತಿದೆ. ತಮಗೆಲ್ಲರೂ ಈ ವಿಚಾರ ಕೇಳಿದರೆ ಆಶ್ಚರ್ಯವಾಗಬಹುದು. ಇತ್ತೀಚೆಗೆ 8-10 ತಿಂಗಳುಗಳ ಹಿಂದೆ ವಿಶೇಷವಾಗಿ ಟಿವಿ 9 ಮಾಧ್ಯಮದಲ್ಲಿ ಒಂದು ದೊಡ್ಡ ಒತ್ತನ್ನು ಕೊಟ್ಟು ಒಂದು ಸುದ್ದಿ ಪ್ರಸಾರ ಮಾಡಿದರು. ಅದೇನೆಂದರೆ, ಸನ್ಮಾನ್ಯ ಲಿಂಗಪ್ಪನವರ ಬಿಡದಿ ಕ್ಷೇತ್ರದಲ್ಲಿ ಒಬ್ಬ ಹುಡುಗ, ಆತನ ಹೆಸರು ಕಿಶನ್ ಎಂದು ಇದೆ. ಆತ ಪಿಯುಸಿ ಓದುತ್ತಿರಬೇಕಾದರೆ, ಶಿವಾಜಿ ನಗರದಲ್ಲಿರತಕ್ಕಂಥ ಮಂಗಳಮುಖಿಯರು ಆತನನ್ನು ಹಿಡಿದುಕೊಂಡು ಯಶವಂತಪುರಕ್ಕೆ ಕರೆದುಕೊಂಡು ಹೋಗಿ ಆತ ಯೂರಿನ್ ಪಾಸ್ ಮಾಡುವ ಕೆಳಗಡೆ ಆತ ಯೂರಿನ್ ಪಾಸ್ ಮಾಡಬಾರದೆಂದು ಒಂದು ಬ್ಯಾಗ್‌ನ್ನು ಬಿಗಿಯಾಗಿ ಕಟ್ಟುತ್ತಾರೆ. ಅದನ್ನು ಏತಕ್ಕೆ ಮಾಡುತ್ತಾರೆಂದರೆ, ಆತನ ಮರ್ಮಾಂಗ ಊದಿಕೊಳ್ಳಬೇಕು, ನೇರವಾಗಿ ನಿಲ್ಲಬೇಕು, ನಂತರ ಮಂಗಳಮುಖಿಯರು ಹೊಸದಾದ ಚಾಕುವಿನಿಂದ ಆತನ ಮರ್ಮಾಂಗವನ್ನು ಕತ್ತರಿಸಿ ಬಿಸಾಕುತ್ತಾರೆ. ಆ ಕತ್ತರಿಸಿ ಬಿಸಾಕಿದಂತಹ ಜಾಗದ ಮೇಲೆ ಕಾದ ಎಣ್ಣೆಯನ್ನು ಹಾಕುತ್ತಾರೆ. ಆ ನಂತರ ವೀಳ್ಯದೆಲೆಯನ್ನು ಹಾಕುತ್ತಾರೆ. ನಂತರ, ಅವನಿಗೆ ಇನ್ನಿಲ್ಲದೇ ಚಿತ್ರಹಿಂಸೆಯನ್ನು ಕೊಟ್ಟು ಆತನ ಲಿಂಗ ಪರಿವರ್ತನೆಯನ್ನು ಮಾಡಿರತಕ್ಕಂಥದ್ದು ಮತ್ತು ಅದರ ಹಿನ್ನೆಲೆಯಲ್ಲಿ ಇದರ ಬಗ್ಗೆ ನನ್ನ ಸಮಿತಿ ತನಿಖೆಯನ್ನು ಮಾಡಿ, ಅವರ ವಿರುದ್ಧ ಪ್ರಕರಣ ದಾಖಲು ಮಾಡಿಸಿ ಅವರನ್ನು ಜೈಲಿಗೆ ಕಳುಹಿಸಿರುವಂಥದ್ದು ಇದೆ. ಆಗ ನಾನು ಆ ಮಂಗಳಮುಖಿಯರಿಗೆ ಈ ದಾಯಮ್ಮ ಚಿಕಿತ್ಸೆ ಏತಕ್ಕೆ ಮಾಡುತ್ತೀರೆಂದು ಕೇಳಿದರೆ, ಅವರು ಇದು ನಮ್ಮ ಸಂಪ್ರದಾಯ, ನಮ್ಮ ದೇವರು ಹೇಳುವಂಥದ್ದು ಮತ್ತು ಇದರಿಂದ ನಮಗೆ ಹೆಚ್ಚು ಶಕ್ತಿ ಬರುತ್ತದೆ ಎನ್ನುವ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನೆಲೆಯಲ್ಲಿ ಶೇಕಡ 100 ರಷ್ಟರಲ್ಲಿ ಶೇಕಡ 98 ರಷ್ಟು ಯಾರು ಮಂಗಳಮುಖಿಯರು ಇದ್ದಾರೆ ಅವರು ಈ ದಾಯಮ್ಮ ಚಿಕಿತ್ಸೆಯನ್ನು ಮಾಡುವ ಮೂಲಕ ಅನೇಕ ಜನ ಮುಗ್ಧ ಗಂಡು ಮಕ್ಕಳ ಲಿಂಗ ಪರಿವರ್ತನೆ ಮಾಡಿ ಅವರನ್ನು ಮಂಗಳಮುಖಿಯರನ್ನಾಗಿ ಮಾಡುತ್ತಿದ್ದಾರೆ. ಆದುದರಿಂದ, ಈ ವಿಧೇಯಕದಲ್ಲಿ ಕೆಲವು ದುಷ್ಟ ಪದ್ಧತಿಗಳಿಗೆ ನಿರ್ದಿಷ್ಟವಾಗಿ ನಿಷೇಧಿತ ಅವಕಾಶಗಳಿವೆ, ಅದರಲ್ಲಿ ಸ್ಪಷ್ಟವಾಗಿ ಈ ರೀತಿ ಯಾವುದೇ ವ್ಯಕ್ತಿಗೆ ಲಿಂಗ ಪರಿವರ್ತನೆ ಮಾಡುವಂಥದ್ದು ನಿಷೇಧ ಮಾಡಬೇಕು. ಒಂದು ವೇಳೆ ಅದನ್ನು ಮಾಡಿದರೆ ಅವರಿಗೆ ಈ ರೀತಿ ಶಿಕ್ಷೆ ಎನ್ನುವಂಥದ್ದನ್ನು ಮಾಡುವುದು ಸೂಕ್ತವೆಂದು ಹೇಳುತ್ತೇನೆ. ಈಗ ಎಲ್ಲವನ್ನೂ ಸಹ ಹೇಳಿದ್ದೇನೆ. ನಾನು ಅನೇಕ ಸಂದರ್ಭಗಳಲ್ಲಿ ಯಾವಾಗಲಾದರೂ ಬೇಸರವಾದರೆ, 10-20 ನಿಮಿಷಗಳ ಕಾಲ ಕೆಲವು ಧಾರವಾಹಿಗಳನ್ನು ಅಥವಾ ಯಾವುದಾದರೂ ಸಿನಿಮಾ ನೋಡುತ್ತೇನೆ. ಈಗ ಏನಾಗಿದೆಯೆಂದರೆ, ಶಕ್ತಿಯನ್ನು ಮೈಗೂಡಿಸಿಕೊಳ್ಳುವುದಕ್ಕೆ ಅಥವಾ ನಿಧಿಯನ್ನು ಪಡೆಯುವಂಥದ್ದಕ್ಕೆ ಧಾರವಾಹಿಗಳಲ್ಲಿ ಈ ರೀತಿಯ ಘಟನೆಗಳನ್ನು ತೋರಿಸುತ್ತಿದ್ದಾರೆ. ಬಹುಶಃ ಸಿನಿಮಾಗಳಲ್ಲಿ ಅಥವಾ ಧಾರವಾಹಿಗಳಲ್ಲಿ ಬರತಕ್ಕಂಥದ್ದನ್ನು ಇಲ್ಲಿ ಸ್ಪಷ್ಟವಾಗಿ ನಿಷೇಧಿಸುವಂತಹ ಕಾನೂನಿನಲ್ಲಿ ಅವಕಾಶವನ್ನು ತರುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಇದರ ಜೊತೆಗೆ ಪುರ್ನಜನ್ಮ ಎಂಬ ಧಾರವಾಹಿಯ ಬಗ್ಗೆ ಹೇಳುತ್ತೇನೆ. ಉದಾಹರಣೆಗೆ, ಜಯನಗರದಲ್ಲಿ ಒಬ್ಬ ಗಡ್ಡದ ಸ್ವಾಮಿ ಇದ್ದಾರೆ, ಅವರನ್ನು ನೋಡಲು ಜನ ಸರದಿಯಲ್ಲಿ ನಿಲ್ಲುತ್ತಾರೆ. 10 ಸಾವಿರ, 20 ಸಾವಿರ, 50 ಸಾವಿರ ರೂಪಾಯಿಗಳ ಹಣ ಕೊಟ್ಟು ಅವರ appointment ಪಡೆಯುತ್ತಾರೆ. ಈ ರೀತಿ ವಿಶೇಷವಾಗಿ ಮಾಧ್ಯಮಗಳಲ್ಲಿ ಕೆಲವು ಧಾರವಾಹಿಗಳನ್ನು ಹಾಕುವುದರ ಜೊತೆಗೆ ಇದರಲ್ಲಿ ಕೊನೆಯದಾಗಿ Clause 3 ನಲ್ಲಿ ಶಿಕ್ಷೆ ಏನಿದೆ '**ಅಮಾನವೀಯ, ದುಷ್ಟ ಪದ್ಧತಿಗಳು ಹಾಗೂ ವಾಮಾಚಾರದ ಪ್ರತಿಬಂಧ ಮತ್ತು ನಿರ್ಮೂಲನೆ**' ಇದರಲ್ಲಿ ಹೇಳತಕ್ಕಂಥದ್ದು, ಒಂದು ರೀತಿ ಈ Clause 2(1)(c) ಇರುವಂತಹದ್ದನ್ನು ಯಾರು ಮಾಡುತ್ತಾರೆ, ಅವರಿಗೆ 7 ವರ್ಷಗಳ ಶಿಕ್ಷೆ ಮತ್ತು 5 ಸಾವಿರ ದಂಡ ಎಂದು ಇದೆ. ಇದು ಮುಂದುವರೆದು, ಇದರಲ್ಲಿ ಸಾವು ಸಂಭವಿಸಿದರೆ 'ಸೆಕ್ಷನ್ 302 ಭಾರತೀಯ ದಂಡ ಸಂಹಿತೆ ಅಥವಾ ಅವರಿಗೆ ಸಾವು ಅನ್ನು ಮಾಡುವಂತಹ ಉದ್ದೇಶ ಇದ್ದರೆ attempt to murder ಎಂದು ಹೇಳಿ ಸೆಕ್ಷನ್ 307, ಭಾರತೀಯ ದಂಡ ಸಂಹಿತೆ, ಅವರಿಗೆ ಈ ರೀತಿಯ ಬಲಿಪಶು ಆತ್ಮಹತ್ಯೆ ಮಾಡಿಕೊಳ್ಳುವಂಥದ್ದಕ್ಕೆ ಪ್ರೇರಪಣೆ ಮಾಡಿದರೆ ಸೆಕ್ಷನ್ 306, ಭಾರತೀಯ ದಂಡ ಸಂಹಿತೆ ಎಂದು ಏನು ಹೇಳಿದ್ದಾರೆ, ಇದೆಲ್ಲದರ ಹಿನ್ನೆಲೆಯಲ್ಲಿ instead of seven years, life imprisonment ಅನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಇದೆ. ಅಲ್ಲಿ ಕಾನೂನಿನಲ್ಲಿರತಕ್ಕಂತಹ ಶಿಕ್ಷೆಗಳನ್ನು ಈ ವಿಧೇಯಕದಲ್ಲಿ ಉಲ್ಲೇಖಿಸುತ್ತಾರೆ. ಆದರೆ, ಈ ದಂಡವನ್ನು 5 ಸಾವಿರ ರೂಪಾಯಿಯಲ್ಲಿ ಹಾಕಬಾರದು. ಏಕೆಂದರೆ, ಇವರೆಲ್ಲರೂ ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡುವುದರಿಂದ 5 ಲಕ್ಷ ದಂಡ ವಿಧಿಸುವುದು ಸೂಕ್ತವೆಂದು ನಾನು ಹೇಳುತ್ತೇನೆ.

(ಮುಂದುವರೆದಿದೆ...)

(1192)22.11.2017/6.40/ವೈಎಲ್-ಜಿಆರ್

ಶ್ರೀ ಎಸ್.ವಿ.ಉಗ್ರಪ್ಪ(ಮುಂದು):-

Clause 6 ನಲ್ಲಿರುವಂತೆ Vigilance Officer ತನ್ನ ಕೆಲಸವನ್ನು ಮಾಡುವಂತಹ ಸಂದರ್ಭದಲ್ಲಿ ಯಾರಾದರೂ ಅದಕ್ಕೆ ತೊಂದರೆಯನ್ನು ಮಾಡಿದ್ದರೆ, Clause 6 (3) ನಲ್ಲಿ "*...shall on conviction be punished with imprisonment for a term which may extended to three months or with fine which may be extended to five thousand rupees or with both.*" ಎಂದು ಮಾಡಿದ್ದಾರೆ. ಬಹುಶಃ ಜಾಗೃತ ಅಧಿಕಾರಿ ಯಾರಿದ್ದಾರೆ, ಅಂದರೆ ಸರ್ಕಲ್ ಇನ್ಸ್‌ಪೆಕ್ಟರ್ ಎಂದು ಹೇಳುವಂತಹ

ಹಿನ್ನೆಲೆಯಲ್ಲಿ ಅವನಿಗೆ ಹೆಚ್ಚು ತೊಂದರೆ ಕೊಡತಕ್ಕಂಥದರಲ್ಲಿ instead of three months conviction three years conviction ಮತ್ತು fifty thousand rupees fine ಮಾಡತಕ್ಕಂಥದ್ದು ಸೂಕ್ತವೆಂದು ಹೇಳುತ್ತೇನೆ. Clause 4 ನಲ್ಲಿ ಕಂಪನಿಗಳ ಅಪರಾಧಗಳು ಎಂದು ಈ ವಿಧೇಯಕದಲ್ಲಿದೆ. ಕಂಪನಿಗಳ ಅಪರಾಧಗಳು ಎಂದರೆ, ಕಂಪನಿಗಳ ಹೆಸರು ಇರುತ್ತದೆ. ಆದರೆ, ultimately ಸನ್ಯಾಸಿಯೋ, ಪೂಜಾರಿಯೋ ಅಥವಾ ಮತ್ಯಾರೋ ವಾಮಾಚಾರ ಮಾಡತಕ್ಕಂಥದ್ದು ಇದೆ. ಅದಕ್ಕಾಗಿ ಎಲ್ಲೋ ಒಂದು ಕಡೆ ಕಂಪನಿ ಅಪರಾಧ ಎನ್ನುವುದರ ಮೇಲೆ ಅಂತಹ ಒತ್ತು ಬರುವುದಕ್ಕೆ ಸಾಧ್ಯತೆ ಇಲ್ಲ. ಯಾವುದೇ ಹೆಸರಿನಲ್ಲಿ ಯಾರೇ ವಾಮಾಚಾರ ಮಾಡತಕ್ಕಂಥದ್ದು ಏನಿದೆ, ಆತನಿಗೆ ಶಿಕ್ಷೆಯಾಗುವ ರೀತಿಯಲ್ಲಿರಬೇಕು. ಬಹುಶ: ವಿಧೇಯಕದಲ್ಲಿರತಕ್ಕಂಥ Clause 4ನ್ನು ತೆಗೆದರೂ ಸಹ ದೊಡ್ಡ ದುಷ್ಪರಿಣಾಮವಾಗುತ್ತದೆಂದು ನನಗೆ ಅನ್ನಿಸುತ್ತಿಲ್ಲ. ಏಕೆಂದರೆ ಯಾರು ಮಾಡುತ್ತಾರೆಯೋ ಅವರಿಗೆ he will be liable for punishment ಎಂಬುದು ಈ ವಿಧೇಯಕದಲ್ಲಿದೆ. ಹಾಗಾಗಿ ಇಷ್ಟೆಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಮತ್ತೊಮ್ಮೆ ಒಂದು ಹಂತದಲ್ಲಿ ಈಗಾಗಲೇ ಅನೇಕರ ಹೆಸರುಗಳನ್ನು ಹೇಳಿದಂತಹ ಡಾ॥ ಬಿ.ಆರ್.ಅಂಬೇಡ್ಕರ್‌ರವರು, ಪೆರಿಯಾ ರಾಮಸ್ವಾಮಿಯವರು, ನಾರಾಯಣ ಗುರುರವರು ಇವರೆಲ್ಲರೂ ಅನೇಕ ರೀತಿಯಲ್ಲಿ ಮೂಢಾಚಾರ ಅಥವಾ ಕಂದಾಚಾರದ ವಿರುದ್ಧ ಹೋರಾಟ ಮಾಡಿದಂತಹ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಇದರ ಕಾನೂನನ್ನು ಯಥಾವತ್ತಾಗಿ ಜಾರಿಗೆ ತರಬೇಕೆನ್ನುವ ಹಾಗೆ ಇದ್ದರೆ ರಾಜಕಾರಣಿಗಳಾದ ನಾವು ಸಹ ವೈಯಕ್ತಿಕ religious sentiment ನ್ನು ಮನೆಗೆ ಸೀಮಿತ ಮಾಡಿಕೊಂಡು, ಹೊರಗಡೆ ಹೋದಾಗ ದೇವರ ದಯೆಯಿಂದ ಅಥವಾ ಯಾವುದಾದರೂ ಶಾಸ್ತ್ರದಿಂದ ಸ್ಥಾನಮಾನಗಳನ್ನು ಪಡೆದಿದ್ದೇವೆ ಎನ್ನುವುದನ್ನು ಕಡಿಮೆ ಮಾಡಿಕೊಂಡರೆ, ಬಹುಶ: ಜನಸಾಮಾನ್ಯರು scientific temperament ರೂಢಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ರಾಜಕಾರಣಿಗಳಾಗಬಹುದು, ಅಧಿಕಾರಿಗಳಾಗಬಹುದು, ಮಾಧ್ಯಮ ಸ್ನೇಹಿತರಿರಬಹುದು ಅಥವಾ ಇನ್ನಿತರ ದೂರದರ್ಶನ ಚಾನಲ್ಸ್‌ನವರೆಲ್ಲರೂ ಪ್ರಯತ್ನ ಮಾಡಿದರೆ, ಸಮಾಜದಲ್ಲಿ ಸುಧಾರಣೆಯಾಗುತ್ತದೆ. ಈಗಾಗಲೇ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದಲ್ಲಿಯೂ ಈ ರೀತಿಯ ಕಾನೂನು ತಂದು ಬಹಳ ದಿನಗಳಾಗಿವೆ. ಬಹುಶಃ ನನಗೆ ತಿಳಿದಿರುವಂತೆ ಈ ಅನಿಷ್ಠ ಪದ್ಧತಿಗಳನ್ನು ನಾವೇನ್ನಾದರೂ ಕಿತ್ತು ಹಾಕದಿದ್ದರೆ, ನಾವು ಹೇಳುವ ಹಾಗೆ ಸಂವಿಧಾನದ ಪೀಠಿಕೆ ಹೇಳತಕ್ಕಂಥ ಜಾತಿ ರಹಿತ, ವರ್ಗ ರಹಿತ, ಶೋಷಣೆ ರಹಿತ, ಸಮಪಾಲು-ಸಮಬಾಳು, ಸಮಾನ ಅವಕಾಶ ಎನ್ನುವ ಹಾಗೆ ಗಾಂಧಿಜೀಯವರು ಹೇಳಿದಂತೆ ರಾಮ ರಾಜ್ಯದ ಪರಿಕಲ್ಪನೆಯನ್ನು ಅಥವಾ ರಾಮ ರಾಜ್ಯದ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಹಿನ್ನೆಲೆಯಲ್ಲಿ ತಂದಿರತಕ್ಕಂಥ ಕಾನೂನಿಗೆ ನಾವೆಲ್ಲರೂ ಸಹ ಒತ್ತು ನೀಡೋಣ. ಇದರ ಮೂಲಕ ಒಂದು ಹೊಸ ಸಮಾಜವನ್ನು ಕಾಣುವುದಕ್ಕೆ ಪ್ರಯತ್ನವನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು**:- ಮಾನ್ಯ ಭಾನುಪ್ರಕಾಶ್‌ರವರೆ,....

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)**:- ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳಷ್ಟು ಸಮಯವಾಗಿದೆ.

**ಉಪ ಸಭಾಪತಿಯವರು**:- ಅವರು ಎರಡು ನಿಮಿಷ ಮಾತನಾಡಲಿ. ನೀವು ತಂದಿರತಕ್ಕಂಥ ಈ ಪ್ರಮುಖ ವಿಧೇಯಕದ ಮೇಲೆ ಎಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ. ಮಾನ್ಯ ಸಚಿವರೆ ಏನು ಮಾಡಬೇಕು? ಈ ಸದನವನ್ನು ನಡೆಸುವಾಗ ಆಗುವಂತಹ ಕಷ್ಟ ನಮಗೆ ಗೊತ್ತು. ಆದರೆ, ಸದಸ್ಯರ ಅಳಲನ್ನು ಕೇಳಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೆ ವಿಧಾನಸಭೆಯಲ್ಲಿ ಈ ವಿಧೇಯಕವನ್ನು ಪಾಸ್ ಮಾಡಿಕೊಂಡು ಬಂದ ಮೇಲೆ ಪಾಸ್ ಆಗಿಯೇ ಆಗುತ್ತದೆ. ನೀವು ಏಕೆ ಚಿಂತೆಯನ್ನು ಮಾಡುತ್ತೀರಿ. ಹಾಗಾದರೆ, ಈ ವಿಧೇಯಕದ ಮೇಲೆ ಯಾವ ಚರ್ಚೆಯನ್ನು ಮಾಡುವುದೇ ಬೇಡ ಬಿಟ್ಟುಬಿಡಿ.

**ಉಪ ಸಭಾಪತಿಯವರು:-** ಚರ್ಚೆ ಬೇಡ ಮಾತನಾಡಿ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಧೇಯಕದ ಬಗ್ಗೆ ಪೂರ್ಣ ಚಿಂತನೆ ಮತ್ತು ಯೋಚನೆ ಮಾಡದೇ ತಂದಿರತಕ್ಕಂಥ ವಿಧೇಯಕವಾಗಿದೆ. ಇದನ್ನು ಒಂದು ರೀತಿಯಲ್ಲಿ ಸಮರ್ಥನೆಯನ್ನು ಮಾಡುವುದಕ್ಕೂ ಆಗುವುದಿಲ್ಲ, ವಿರೋಧ ಮಾಡುವುದಕ್ಕೂ ಆಗುವುದಿಲ್ಲ. ಪರಿಸ್ಥಿತಿ ಹೇಗೆ ಇದೆ ಎಂದರೆ ಮಾಧ್ಯಮದವರು ನಮ್ಮ ಹತ್ತಿರ ಬಂದು 'ಹೆಂಡತಿಗೆ ಒಡೆಯುವುದನ್ನು ಬಿಟ್ಟಿದ್ದೀರಾ ಎಂದು ಪ್ರಶ್ನೆ ಕೇಳಿದರೆ, 'ಇಲ್ಲ' ಎನ್ನುವ ಹಾಗೆಯೂ ಇಲ್ಲ. 'ಹೌದು' ಎನ್ನುವ ಹಾಗೆಯೂ ಇಲ್ಲ. 'ಇಲ್ಲ' ಎಂದರೆ, ಮುಂಚೆ ಒಡೆಯುತ್ತಿದ್ದೆವು ಎನ್ನುವ ಹಾಗೆ ಆಗುತ್ತದೆ. 'ಹೌದು' ಎಂದರೆ ಈಗಲೂ ಒಡೆಯುತ್ತಿದ್ದೇವೆ ಎನ್ನುವ ಹಾಗೆ ಆಗುತ್ತದೆ. ಹಾಗೆಯೇ ಬಹಳ ಬುದ್ಧಿವಂತಿಕೆಯಿಂದ ಈ ಶಬ್ದಗಳನ್ನು ಪ್ರಯೋಗ ಮಾಡಿದ್ದಾರೆ. ಅದಕ್ಕೆ ಬದ್ಧತೆ ತೋರಿಸುವಂತಹ ವಿನಂತಿಯನ್ನು ಮಾತ್ರ ನಾನು ಮಾಡುತ್ತೇನೆ. ಅಮಾನವೀಯ ದುಷ್ಟ ಪದ್ಧತಿಗಳು ಇರಬೇಕೆಂದು ಯಾವುದೇ ನಾಗರೀಕ ಮನುಷ್ಯ ಹೇಳುವುದಕ್ಕೆ ಸಾಧ್ಯವಿಲ್ಲ. ವಾಮಾಚಾರದ ಬಗ್ಗೆ ನಾನು ವಿಶೇಷವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸನ್ಮಿತ್ರರಾದಂತಹ ಉಗ್ರಪ್ಪನವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುವುದೇನೆಂದರೆ, ಜೀವನ ನಡೆಯುತ್ತಿರುವುದು ನಂಬಿಕೆಯ ಆಧಾರದ ಮೇಲೆ. ಇಲ್ಲದಿದ್ದರೆ alarm ಇಟ್ಟುಕೊಂಡು ಯಾರು ಮಲಗುವುದಿಲ್ಲ. ಒಂದೇ ದಿವಸದಲ್ಲಿ ಸಾಯಬಹುದು ಎನ್ನುವವರು ಕೂಡ alarm ಇಟ್ಟುಕೊಂಡೇ ಮಲಗುತ್ತಾರೆ. ನಾಳೆ ಯಾವ್ಯಾವ ಕಾರ್ಯಕ್ರಮಕ್ಕೆ ಹೋಗಬೇಕೆಂದು ತಿಳಿದುಕೊಂಡೇ ಮಲಗುತ್ತಾರೆ. ಬೆಳಗ್ಗೆ ಎದ್ದ ಮೇಲೆ ಮುಂದಿನ ಚಟುವಟಿಕೆಗಳನ್ನು ಮಾಡುತ್ತಾರೆ. ಯಾರಾದರೂ ಸತ್ತಾಗ ಅವರ ಮನೆಗೆ ಹೋದಾಗ 'ಜೀವನ ನಶ್ವರ' ಎಂದು ತಿಳಿದುಕೊಳ್ಳುತ್ತಾರೆ. ಆದರೆ ಯಾರು ಸಹ ನಾವು ನಾಳೆಯೇ ಸಾಯುತ್ತೇವೆ, ಮುಂದಿನ ಘಳಿಗೆಯಲ್ಲಿ ಸಾಯುತ್ತೇವೆಂದು ಯಾರು ಭಾವಿಸುವುದಿಲ್ಲ. ಇದೊಂದು ಅಗಾಧವಾಗಿ ನಂಬಿಕೊಂಡು ಬಂದಂತಹ ಪದ್ಧತಿಯಾಗಿದೆ. ಪ್ರಶ್ನೆ ಬರತಕ್ಕಂಥದ್ದು ಎಲ್ಲಿ ಎಂದರೆ, ಮನಸ್ಥಿತಿ ಮತ್ತು ಪರಿಸ್ಥಿತಿಯ ಮೇಲೆ ಬರುತ್ತದೆ. ಪರಿಸ್ಥಿತಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಮನಸ್ಥಿತಿ ಹೇಗಿದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ನಾವು ಕೆಂಡಾ ಹಾಯಬಾರದು, ಚಂದ್ರಗುತ್ತಿಯ ಬೆತ್ತಲ ಮೆರವಣಿಗೆಯನ್ನು ನಮ್ಮ ತಾಯಂದಿರು ಮಾಡಬಾರದೆಂದು ಏನು ಈ ವಿಧೇಯಕದಲ್ಲಿ ತಂದಿದ್ದೇವೆಯೋ ಅದು 100% ನಿಜ. ಆ ರೀತಿ ಮಾಡಿದರೆ ಒಳ್ಳೆಯದೆಂದು ಒಪ್ಪಿಕೊಳ್ಳುವಂಥವರು ಮನುಷ್ಯನೇ ಅಲ್ಲ. ಯಾರಾದರೂ ವಾಮಾಚಾರ ಪದ್ಧತಿ ಸರಿ ಇದೆ ಎಂದು ಹೇಳಿದರೆ ಆತನು ಮನುಷ್ಯನೇ ಅಲ್ಲ. ಅದರ ಬಗ್ಗೆ ಏನು ಪ್ರಶ್ನೆ ಇಲ್ಲ. ಆದರೆ, ಇದು ಕೇವಲ ಸರ್ಕಾರದ ಕೆಲಸವೇ? ಶ್ರೀ ಬಸವಣ್ಣನವರು, ಶ್ರೀ ಶಂಕರಾಚಾರ್ಯರು ಯಾರೇ ಇರಬಹುದು. ಮಾನ್ಯ ಪೂಜನೀಯರಾದಂತಹ ಡಾ|| ಅಂಬೇಡ್ಕರವರನ್ನು ಬಿಟ್ಟರೆ ಬೇರೆ ಯಾರು ಸಹ ಸಂವಿಧಾನದ ರೀತಿಯಲ್ಲಿ ಕಾನೂನನ್ನು ಅಳವಡಿಸಲಿಲ್ಲ. ಇವರೆಲ್ಲರೂ ತಂದಿರತಕ್ಕಂಥದ್ದು ತಮ್ಮ ಜೀವನದ ಆಚರಣೆ ಮತ್ತು ಸಮಾಜದ ಪರಿವರ್ತನೆಗಾಗಿ. ಸರ್ಕಾರದ ಉದ್ದೇಶವೂ ಸಹ ನಮ್ಮ ರಾಜ್ಯದಲ್ಲಿ ಈ ರೀತಿಯ ವಾಮಾಚಾರ ಪದ್ಧತಿಯನ್ನು ಹೋಗಲಾಡಿಸಬೇಕೆಂಬುದಾಗಿದೆ. ಆದರೆ, ಎಲ್ಲಾ ಅಧಿಕಾರವನ್ನು ಯಾರಿಗೆ ನೀಡುತ್ತಿದ್ದಾರೆ? ಎಲ್ಲವನ್ನೂ ಪೋಲೀಸ್ ಅಧಿಕಾರಿಗಳಿಗೆ ನೀಡುತ್ತಿದ್ದಾರೆಲ್ಲಾದರೆ ನಮ್ಮ ಪೋಲೀಸ್ ಇಲಾಖೆಯು ಸಮಾಜ ಸುಧಾರಣೆ ಮಾಡುವ ನಿಟ್ಟಿನಲ್ಲಿ ಸಿದ್ಧವಾಗಿದೆಯೇ? ನಾವು ಆ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆಯೇ? ಸರ್ಕಾರದಲ್ಲಿರತಕ್ಕಂಥ ಅನೇಕರು ವಿದೇಶಕ್ಕೆ ಹೋಗಿರತಕ್ಕಂಥವರು ಪೋಲೀಸ್‌ನವರು ವಿದೇಶದಲ್ಲಿ ಯಾವ ರೀತಿ ಇದ್ದಾರೆ, "ವೀಸಾ ಇಲ್ಲದೇ ಇರತಕ್ಕಂಥ ಒಬ್ಬ ಮನುಷ್ಯನನ್ನು ಎಷ್ಟು ಗೌರವದಿಂದ ನೋಡುತ್ತಾರೆ" ಎಂದು ನನಗೆ ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ, ನಮ್ಮ ದೇಶದಲ್ಲಿ ಚಾಲನಾ ಪರವಾನಗಿ ಇಲ್ಲದೇ ಇರತಕ್ಕಂಥ ವ್ಯಕ್ತಿಯನ್ನು ಯಾವ ರೀತಿ ನೋಡುತ್ತಾರೆಂಬುದು ನಮಗೆ ಗೊತ್ತಿದೆ. 70 ವರ್ಷಗಳಾದರೂ ಸಹ ಪೋಲೀಸ್‌ರವರನ್ನು ನಾವು ಇನ್ನೂ ಸಿದ್ಧ ಮಾಡಲಿಲ್ಲ. ಬ್ರಿಟೀಷ್‌ರವರು ಬೆಳೆದು ಬಂದಂತಹ ರೀತಿಯಲ್ಲಿಯೇ ಪೋಲೀಸ್‌ರವರನ್ನು ಬೆಳೆಸಿ ಬಿಟ್ಟಿದ್ದೇವೆ. ಹಾಗಾಗಿ ಈಗ ಸಮಾಜದಲ್ಲಿರತಕ್ಕಂಥ ಅನೇಕ ಸಂಗತಿಗಳಿಗೆ ಏಕ್‌ದಮ್ ಪೋಲೀಸ್ ಪ್ರವೇಶ ಮಾಡುವುದಕ್ಕೆ ಈ ವಿಧೇಯಕದಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಲ್ಲಾ, ಇದರಿಂದ ಸಮಾಜದಲ್ಲಿ ಸುಧಾರಣೆ ಆಗುತ್ತದೆಯೇ ಅಥವಾ ಇದರಿಂದಾಗಿ ತುಂಬಾ ಕಾನೂನಿನ ಸಮಸ್ಯೆಗಳಾಗುತ್ತದೆಯೇ ಎಂಬುದನ್ನು ನಾನು ನೋಡಬೇಕಾಗುತ್ತದೆ. ಉದಾಹರಣೆಗೆ  ತಂದೆ-ತಾಯಿ, ಅಪ್ಪ-ಅಮ್ಮ, ಬಂದು-ಬಳಗದವರೆಲ್ಲರೂ ತಮಟೆ ಬಡಿದುಕೊಂಡು ಹರೋ-ಹರ ಜಾತ್ರೆಯಲ್ಲಿ ತೇರನ್ನು ಎಳೆದುಕೊಂಡು ಹೋಗುವುದನ್ನು ನೀವು ನೋಡಿರಬಹುದು. ಯಾರಾದರೂ ಪೋಲೀಸ್‌ನವರು ಇದನ್ನು ಗಮನಿಸಿ, ಮೊಕದ್ದಮೆ ಹೂಡಿದರೆ ಆ ಮನೆಯ ಪರಿಸ್ಥಿತಿ ಏನಾಗಬೇಕು? ಅದಕ್ಕಾಗಿ ಒಂದು ಲಿಮಿಟ್ ಮಾಡಿ. ಯಾರು ಕೊಕ್ಕೆ ಹಾಕಿಕೊಂಡಿರುತ್ತಾರೆಯೋ ಆತನು ತನ್ನ ಸ್ವಂತ ಇಚ್ಛೆಯಿಂದ ಧರಿಸಿಕೊಂಡಿರುತ್ತಾನೆಯೋ ಅಥವಾ ಅವರ ಮನೆಯ ತಂದೆ-ತಾಯಿ ಯಾರದರೊಬ್ಬರನ್ನು ಕೊಕ್ಕೆ ಹಾಕಿಕೊಳ್ಳುವುದಕ್ಕೆ ಫಿಕ್ಸ್ ಮಾಡಿ. ಇಲ್ಲದಿದರೆ ಇವತ್ತಿನ ದಿನ ಮಹಿಳೆಯರ ಮೇಲೆ ಆಗತಕ್ಕಂಥ ದೌರ್ಜನ್ಯವನ್ನು ತಪ್ಪಿಸಬೇಕೆಂದು ತಂದಿರತಕ್ಕಂಥ ಕಾನೂನನ್ನು ದುರುಪಯೋಗ ಮಾಡಿಕೊಂಡು ವರದಕ್ಷಿಣೆ ಪ್ರಕರಣದಲ್ಲಿ ನಿರಾಪರಾಧಿಗಳೆಲ್ಲರೂ ಜೈಲಿಗೆ ಹೋಗುವ ಪರಿಸ್ಥಿತಿ ಇದೆ. ಮಹಿಳೆಯರ ಮೇಲೆ ಆಗತಕ್ಕಂಥ ದೌರ್ಜನ್ಯ ತಪ್ಪಬೇಕು. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಆ ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳದೇ ಇರತಕ್ಕಂಥ ಯಾವ ಕಾನೂನನ್ನು ಇದರಲ್ಲಿ ಅಳವಡಿಸುತ್ತೀರಿ? ಯಾರು ದೂರು ನೀಡುತ್ತಾರೆಯೋ, ಇದಕ್ಕೆ ಯಾರ್‍ಯಾರು ಕಾರಣರೋ, ಯಾರನ್ನು ಇದರಲ್ಲಿ ತರುತ್ತೀರಿ. ಎರಡನೆಯದಾಗಿ ನಾವು ಎಲ್ಲವನ್ನು ಏನು ಸುಧಾರಣೆ ಮಾಡುವುದಕ್ಕೆ ಹೊರಟ್ಟಿದ್ದೇವೆ. ಅದಕ್ಕಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದೇನೆಂದರೆ, ಇಂತಹ ಲೋಹದ ಉಂಗುರ ಹಾಕಿದರೆ ಇಂತಹ ಮಂತ್ರಿಗಳಾಗುತ್ತೀರಿ, ಪಚ್ಚೆ ಕಲ್ಲಿನ ಉಂಗುರವನ್ನು ಹಾಕಿದರೆ ಇಂತಹ ಅಧಿಕಾರಕ್ಕೆ ಬರುತ್ತೇವೆಂದು ಹಾಕಿಕೊಳ್ಳುತ್ತೇವೆ.  ನಮಗೆ ಇದೆಲ್ಲವನ್ನು ನಿಷೇಧ ಮಾಡುವಂತಹ ನೈತಿಕ ಅಧಿಕಾರವೇನಾದರೂ ಇದೆಯೇ? ದಯವಿಟ್ಟು ಹೇಳಿ. ನಾನು ಯಾರನ್ನು ಹೋಲಿಕೆ ಮಾಡಿ ಹೇಳುತ್ತಿಲ್ಲ. ಏಕೆಂದರೆ, ಕಬೀರ ಹೇಳುವ ಹಾಗೆ ಜೀವನದ ಉದ್ದೇಶವೇನು? ಅವರು ಹೇಳುವುದು ಒಂದೇ, 'ಮಜ್ಜಿಗೆಯ ಒಳಗಿನ ಬೆಣ್ಣೆ, ಬೀಜದೊಳಗೆ ಇದೆ ಎಣ್ಣೆ, ನಿನ್ನಯ ದೇವರು ನಿನ್ನೊಳಗಿರುವನು ಕೈಲಾದರೆ ನೋಡಯ್ಯ,' ಎಂದು ಜೀವನದ ಉದ್ದೇಶವನ್ನು ಹೇಳಿದ್ದಾರೆ. ಜೀವನದ ಸದುದ್ದೇಶವನ್ನು ಎಲ್ಲರೂ ದೇವರನ್ನು ನೋಡುವುದಕ್ಕಾಗಿ ಗುಡಿಗೆ ಏನು ಹೋಗಬೇಕಾಗಿಲ್ಲ. ನಮ್ಮಲ್ಲಿಯೇ ದೇವರು ಇದ್ದಾನೆ, ಅದನ್ನು ಹುಡುಕಿಕೋ ಎಂದು ಸಂತ ಕಬೀರರು ಹೇಳುತ್ತಾರೆ. ಇದು ಸಮಾಜದ ಸುಧಾರಣೆಯಾಗಿದೆ.

ಮಾನ್ಯ ಸಿದ್ದರಾಮಯ್ಯನವರು ಇವತ್ತು ಬಹಳ expression ಮಾಡಿದರು. ಅದರಿಂದ ನನಗೂ ಬಹಳ ಸಂತೋಷವಾಯಿತು. ರಾಜ್ಯದ ಒಬ್ಬ ಮುಖ್ಯಮಂತ್ರಿ ನಾಸ್ತಿಕನಾಗಿ ಇರುವುದಕ್ಕೆ ಸಾಧ್ಯವೇ ಇಲ್ಲ. ರಾಜ್ಯ ನಡೆಸಬೇಕಲ್ಲವೇ? ಕಾಲಕಾಲಕ್ಕೆ ಮಳೆಯಾಗಬೇಕಲ್ಲವೇ? ನಾಸ್ತಿಕ ಮುಖ್ಯಮಂತ್ರಿಯಾದರೆ ಮೊದಲು ಮುಜರಾಯಿ ಇಲಾಖೆಯನ್ನು ತೆಗೆದು ಹಾಕಬೇಕು. ಆಮೇಲೆ ವಕ್ಫ್ ಮಂಡಳಿಯನ್ನು ತೆಗೆದು ಹಾಕಬೇಕು.  ಆದರೆ ಆ ರೀತಿ ಮಾಡಲಿಲ್ಲ. ಮಳೆ ಬರದೇ ಇದ್ದರೆ ಪ್ರಾರ್ಥನೆ ಮಾಡಲೇಬೇಕು. ಅಗೋಚರವಾದಂತಹ ಒಂದು ಶಕ್ತಿ ಇದೆ. ನಾನು ಕೇಳುವುದೇನೆಂದರೆ; ಎಲ್ಲವೂ ಸರಿ, ಈ ವಿಧೇಯಕವನ್ನು ಓದುತ್ತಾ ಹೋದರೆ, ಈ ವಿಧೇಯಕದಲ್ಲಿ ಕೇವಲ ಹಿಂದೂ ಸಮಾಜದಲ್ಲಿರುವ ಪದ್ಧತಿಗಳನ್ನು ಮಾತ್ರ ಹೇಳಲಾಗಿದೆ. ಹಾಗಾದರೆ ಬೇರೆ ಸಮಾಜದಲ್ಲಿ ಯಾವುದೇ ದುಷ್ಟ ಪದ್ಧತಿಗಳು ಇಲ್ಲವೇ? ಅಥವಾ ಅದು ನಮಗೂ ಗೊತ್ತಿಲ್ಲ. ಏಕೆಂದರೆ ನೀವು ಬಹಳ ಬುದ್ಧಿವಂತರು, ಹಿರಿಯರು. ನಮ್ಮ ಹಿಂದೂ ಸಮಾಜವನ್ನು ಚೆನ್ನಾಗಿ ಸುಧಾರಣೆ ಮಾಡಿ, ನಂತರ ಮುಸ್ಲಿಂ, ಕ್ರಿಶ್ಚಿಯನ್ ಸಮಾಜಗಳೆಲ್ಲವನ್ನು ಸುಧಾರಣೆ ಮಾಡೋಣ ಎನ್ನುವಂಥದ್ದು ಏನಾದರೂ ತಮ್ಮ ವಿಚಾರ ಇದ್ದರೆ, ನನ್ನ ತಕರಾರು ಏನು ಇಲ್ಲ. ಆದರೆ, ಹೊರಗಡೆ ಹೋಗತಕ್ಕಂಥ ಸಂದೇಶದಲ್ಲಿ ಹಿಂದೂ ಸಮಾಜದ ಮೇಲೆ ಮಾತ್ರ ಆಕ್ರಮಣ ನಡೆಯುತ್ತದೆ,.....

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು**:- ದಯವಿಟ್ಟು ಸಾಕು ನಿಲ್ಲಿಸಿ.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ,.....

**ಶ್ರೀ ಭಾನುಪ್ರಕಾಶ**:- ಮಾನ್ಯ ಸಭಾಪತಿಯವರೇ, I am not yielding. ನಾನು yield ಆಗಿಲ್ಲ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಡಿಸೋಜಾರವರೆ, ಮಾನ್ಯ ಪುಟ್ಟಣ್ಣನವರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಭಾನುಪ್ರಕಾಶ**:- ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಈ ರಾಜ್ಯದಲ್ಲಿರತಕ್ಕಂಥ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನರಿಗೆ, ಬೌದ್ಧರಿಗೆ ಎಲ್ಲರಿಗೂ ಇರತಕ್ಕಂಥದ್ದು ಒಂದೇ ಸರ್ಕಾರ. ಈ ಸರ್ಕಾರದ ಯೋಜನೆಯೂ ಎಲ್ಲಾ ಸುಧಾರಣೆಗಳನ್ನು ಹಿಂದೂ ಸಮಾಜದಲ್ಲಿ ಪರಿಪಕ್ವವಾಗಿ ಮಾಡಿ, ಆದಾದ ನಂತರ ಬೇರೆ ಸಮಾಜಗಳಲ್ಲಿಯೂ ಮಾಡಬೇಕೆನ್ನುವ ಆಸೆ ಇದ್ದರೆ, ನನ್ನ ತಕರಾರು ಏನು ಇಲ್ಲ.

(ಮುಂದು) . . .

(1193)/22.11.2017/6.50/ಎಸ್‌ಕೆ-ಎಂಡಿ

**ಶ್ರೀ ಭಾನುಪ್ರಕಾಶ (ವಿಧಾನಸಭಾಕ್ಷೇತ್ರ) ಮುಂದು**:-

ನಿಮಗೆ ಅಷ್ಟು ಅವಧಿ ಸಿಗಲಿ, ಯಾವುದೇ ಒಂದು ತೋರಿಸಬೇಡಿ ಮಾನ್ಯ ಸೀತಾರಂರವರೇ, ನಾನು ಯಾರ ಭಾವನೆಗೂ ತೊಂದರೆ ಕೊಡುತ್ತಿಲ್ಲ. ನಾನು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಹಿಂದೂ ಸಮಾಜದಲ್ಲಿರುವಂತಹ ದೋಷಗಳನ್ನು ಮಾತ್ರ ಎತ್ತಿ ಹೇಳುತ್ತಿದ್ದಾರೆ. ಉಳಿದ ಸಮಾಜದ ಪ್ರಸ್ತಾಪ ಮಾಡುವುದು ಬಗ್ಗೆ ಬೇಡವೇ? 'ತ್ರಿವಳಿ ತಲಾಕ್' ಪದ್ಧತಿಯನ್ನು ತೆಗೆದು ಹಾಕುವುದಕ್ಕೆ ಕೇಂದ್ರ ಸರ್ಕಾರ ಮಾಡಿತು. ಆ ತರಹ ಯೋಜನೆ ಏನು ಇಲ್ಲವೇ?

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ, ಅವರು ಯಾವುದು ಹೇಳಲಿ.

**ಶ್ರೀ ಭಾನುಪ್ರಕಾಶ (ವಿಧಾನಸಭಾಕ್ಷೇತ್ರ)**:-ಮಾನ್ಯ ಸಭಾಪತಿಯವರೆ, ನಾನು ಸಲಹೆ ಕೊಡುವುದಿಲ್ಲ, ಅದನ್ನು ಅವರೇ ಹೇಳಲಿ. ಹಿಂದೂ ಸಮಾಜದಲ್ಲಿರುವಂತಹ ಯಾವ್ಯಾವುದು ಅಮಾನವೀಯ ಪದ್ಧತಿಗಳೆಂಬುದು ಸರ್ಕಾರಕ್ಕೆ ಗೊತ್ತಾಗುತ್ತದೆ. ಮಾನ್ಯ ಸಭಾಪತಿಯವರೆ, ನಾನು ಕೇಳುತ್ತೇನೆ. "ಸಾರ್ವಜನಿಕರಿಗೆ ಪೀಡೆಯುಂಟು ಮಾಡುವ, ಪ್ರಾಣಿಯನ್ನು ಅದರ ಕುತ್ತಿಗೆಯನ್ನು ಕಚ್ಚುವ ಮೂಲಕ ಕೊಲ್ಲುವಂಥ (ಗಾವು) ಬಲಿ ದುಷ್ಟ ಪದ್ಧತಿಗಳನ್ನು ನಡೆಸುವಂತೆ ಯಾವೊಬ್ಬ ವ್ಯಕ್ತಿಯನ್ನು ಒತ್ತಾಯಪಡಿಸುವುದಲ್ಲ." ಎನ್ನುತ್ತಾರೆ. ನಾನು ಮಾರಿಹಬ್ಬವನ್ನು ನಮ್ಮ ಊರಿನಲ್ಲಿ ಮಾಡುತ್ತಾರೆ. ಗಾವು ಬಲಿ ಎಂದರೆ ಬಾಯಿಯಲ್ಲಿ ಕಚ್ಚಿ ತೆಗೆಯುತ್ತಾರೆ. ಅವರಿಗೂ ಮತ್ತು ನಿಮಗೂ ಇದೆಲ್ಲಾ ಗೊತ್ತಿದೆ. ನಾನು ವಿವರಕ್ಕೆ ಹೋಗುವುದಿಲ್ಲ. ನಾನು ಮಾಂಸಹಾರಿ ಅಲ್ಲದೇ ಇದ್ದರೂ, ನನಗೆ ಅನೇಕ ನನ್ನ ಜನ ಮಾಂಸಹಾರಿ ಸ್ನೇಹಿತರಿದ್ದಾರೆ. ನಾನು ಇವತ್ತು ಇವರಿಗೆ ಕೇಳಿದೆ. ಮುಸಲ್ಮಾನರವರಿಗೆ ಒಂದು ಪದ್ಧತಿಯಿದೆ. ಅವರು ಪ್ರಾಣಿಯನ್ನು ಕತ್ತರಿಸುವುದಿಲ್ಲ. ಅವರು ಒಂದು ಬ್ಲೇಡ್‌ನಲ್ಲಿ ಕೊಯುತ್ತಾರೆ. ಆ ನರದಲ್ಲಿ ರಕ್ತ ಹೋದ ಮೇಲೆ, ಅವರು ಅದನ್ನು ತಿನ್ನುತ್ತಾರೆ. ಅದು ತಪ್ಪಿಲ್ಲ. ಅದು ಅವರ ವೈಯಕ್ತಿಕ ಇದಕ್ಕೆ ನಾನು comment ಮಾಡುವುದಿಲ್ಲ. ಹಿಂದೂಗಳಲ್ಲಿ ಪ್ರಾಣಿಯನ್ನು ಕತ್ತರಿಸಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿನ್ನುವುದು ಇದೆ. ಮುಸಲ್ಮಾನರ ಪದ್ಧತಿಯಲ್ಲಿ ಈ ಒಂದು ಪದ್ಧತಿಯಿದೆ. ಆದರೆ ಕ್ರಿಶ್ಚಿಯನ್ನರ ಪದ್ಧತಿ ನನಗೆ ಗೊತ್ತಿಲ್ಲ. ಎರಡು ಗುಂಪು ಇದೆ. 'ಹಲಾಲ್' ಮಾಡುವುದು ಎಂದು ಹೇಳುತ್ತಾರೆ. ನಾನು ಮುಸಲ್ಮಾನ ಸ್ನೇಹಿತರು ಮತ್ತು ರಘುನಾಥರಾವ್ ಮಲ್ಕಾಪೂರೆಯವರ ಬಳಿ ಕೇಳಿದೆ. ಆ ರೀತಿ ಮಾಡುವುದೇ ವೈಜ್ಞಾನಿಕವಾದುದೆಂದು ಅವರು ಹೇಳಿದರು. ಅವರು ವಿವರದ ಬಗ್ಗೆ ಹೇಳಿದರು. ನಾನು ಆ ವಿವರಕ್ಕೆ ಹೋಗುವುದಿಲ್ಲ. ನಾನು ಏತಕ್ಕೆ ವಿವರಕ್ಕೆ ಹೋಗಲಿ. ಪ್ರಾಣಿಯ ಕುತ್ತಿಯ ನರವನ್ನು ಕತ್ತರಿಸಿದಂಥ ಸಂದರ್ಭದಲ್ಲಿ ಪ್ರಾಣಿಯ ದೇಹದಲ್ಲಿ ರಕ್ತ ಸಂಚಲನೆಯಾಗಿ, ರಕ್ತವೆಲ್ಲಾ ಹೊರಗಡೆ ಹೋಗಿ ಮಾಂಸ ಮಾತ್ರ ಉಳಿಯುತ್ತದೆ. ಆ ಪದ್ಧತಿ ಇರಬಹುದು. ಗಾವು ಬಲಿ ಮಾಡಬೇಕಾದರೆ, ಏನಾದರೂ ಒಂದು ಕಾರಣ ಇರಬೇಕಲ್ಲವೇ? ನನ್ನ ಮೂಲ ಪ್ರಶ್ನೆ ಏನೆಂದರೆ, ಎಲ್ಲಾ ಸುಧಾರಣೆಗೂ ವೈಜ್ಞಾನಿಕ ಆಧಾರ ಇರಬೇಕೆಂದು ಹೇಳಿದ್ದಾರೆ. ಯಾವುದು ಆ ವಿಜ್ಞಾನ ಎಂದು ಹೇಳಬೇಕಲ್ಲವೇ. ವಿಜ್ಞಾನ ಆಧಾರ ಇರಬೇಕು.

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರಿಗೆ ಒಪ್ಪೇದ್ ಹೇಗೆ ಎಂಬುದು ಗೊತ್ತಿರಬೇಕು.

**ಶ್ರೀ ಭಾನುಪ್ರಕಾಶ (ವಿಧಾನಸಭಾಕ್ಷೇತ್ರ):-**ಮಾನ್ಯ ಸಭಾಪತಿಯವರೆ, ಒಪ್ಪೇದ್ ಗೊತ್ತಿದೆ. ಯಜ್ಞ-ಯಾಗಾದಿಗಳ ಬಗ್ಗೆ ಹೇಳುತ್ತೇನೆ. ಅದನ್ನು ನಿಷೇಧ ಮಾಡದೇ ಇರುವುದರಿಂದ, ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಿಲ್ಲ. ಗಾವು ಬಲಿಯನ್ನು ಬ್ಯಾನ್ ಮಾಡುವಂತಹ ಸಂದರ್ಭದಲ್ಲಿ, ಅದನ್ನು ಕಚ್ಚಿ ತಿನ್ನುವುದು ತಪ್ಪು. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಬದಲಾವಣೆ ಮಾಡಬೇಕು ಎನ್ನುವುದು ಸರಿ. ಇದನ್ನು ನಾನು ಹೇಳಿದ್ದೇನೆ. ದಯವಿಟ್ಟು ತಾವು ನೋಡಿ ಇದರಲ್ಲಿ ಎಷ್ಟು ಮಾನವೀಯವಾಗಿದೆಂದು ಹೇಳಿದರೆ, ಗರ್ಭಿಣಿಯಾದ ಸ್ತ್ರೀಯನ್ನು ಒಂಟಿಯಾಗಿರುವಂತೆ ಮಾಡುವುದು ಎಂಬುದು ಇದೆ. ಅದು ಸ್ವಲ್ಪ correction ಆಗಬೇಕು. ಸಾಮಾನ್ಯವಾಗಿ ಬಾಣಂತಿ ಸ್ತ್ರೀಯರನ್ನು ಹೊರಗಡೆ ಇಡುವಂತಹ ಪದ್ಧತಿ ಇದೆ. ಗರ್ಭಿಣಿ ಸ್ತ್ರೀಯನ್ನು ಊರಿನಿಂದ ಹೊರಗಡೆ ಇಡುವಂತಹ ಪದ್ಧತಿಯನ್ನು ಎಲ್ಲಿಯೂ ನಾನು ಕೇಳಿಲ್ಲ. ಬಾಣಂತಿ ಸ್ತ್ರೀಯರನ್ನು, ಮಗು ಹೆತ್ತಂಥ ಸಂದರ್ಭದಲ್ಲಿ ಊರಿನಿಂದ ಹೊರಗಡೆ ಇಡುವಂತಹ ಪದ್ಧತಿಯನ್ನು ನಾನು ನೋಡಿದೆ. ಇದು ಅತ್ಯಂತ ಅಮಾನವೀಯ. ಋತುಮಾತಿಯಾದಂತಹ ಕನ್ಯೆಯನ್ನು ಊರಿನಿಂದ ಹೊರಗಡೆ ಗುಡಿಸಲಿನಲ್ಲಿ ಕೂರಿಸಿ, ಕೂಡಿ ಹಾಕಿ ಹೆದರಿಸುವಂತಹ ಒಂದು ಪದ್ಧತಿ ಇದೆ. ನೀವು ಅದಕ್ಕೆ ಇದನ್ನು ಮಾಡಿ. ಗರ್ಭಿಣಿ ಸ್ತ್ರೀ ಎಂಬುದನ್ನು ಬದಲಾವಣೆ ಮಾಡಿ. ಇದರ ಬಗ್ಗೆ ಯಾರಾದರೂ ಮಹಿಳಾ ಪ್ರಮುಖರ ಬಳಿ ಕೇಳಿಕೊಳ್ಳಿ. ನನಗೆ ಸೀಮಿತ ಇರುವಂತಹ ಜ್ಞಾನದಲ್ಲಿ ಹೇಳಿದ್ದೇನೆ.

ಮಾನ್ಯ ಸಭಾಪತಿಯವರೆ, ನಾನು ಕೇಳುವುದೇನೆಂದರೆ, ಈಗ ಇರುವಂತಹ ಕಾನೂನುಗಳು ಮತ್ತು ಅದಕ್ಕೆ ಬೇಕಾದಷ್ಟು ಕಾನೂನುಗಳನ್ನು ಅನೇಕರು ಉಲ್ಲೇಖ ಮಾಡಿದ್ದಾರೆ. ಈ ಕಾನೂನು ನಮಗೆ ಸಾಕಾಗುವುದಿಲ್ಲ. ಪರಿವರ್ತನೆ ಮಾಡುವುದಕ್ಕೆ ಈ ವಿಧೇಯಕ ನಮಗೆ ಬೇಕಾ ಬೇಕೇ. ಇದು ಬೇಕೇ ಬೇಕೆನ್ನುವುದು ಎನ್ನುವುದಾದರೆ ಇದನ್ನು ಮಾಡಿ. ಆದರೆ ಪೂರ್ಣವಾದಂತಹ ಯೋಜನೆ ಮತ್ತು ಚಿಂತನೆಯಿಲ್ಲ ಎನ್ನುವಂತಹದಷ್ಟೆ ನನ್ನ ಅಭಿಪ್ರಾಯ. ಎರಡನೆಯದಾಗಿ, ನಾನು ಮನಸ್ಸು ಸ್ಥಿತಿಯ ಬಗ್ಗೆ ಹೇಳಿದೆ. ನಂಬಿಕೆ, ಮೂಢ ನಂಬಿಕೆ, ಅಪನಂಬಿಕೆ ಆಗುವುದು ಯಾವಾಗ? ನಾವು ಯಾವ ಜಾಗದಲ್ಲಿ ನಿಂತಿದ್ದೇವೆ. ಅದರ ಆಧಾರದ ಮೇಲೆ ಮಾತನಾಡುತ್ತೇವೆ. ನಾವು ಆ (ಆಡಳಿತ ಪಕ್ಷದಲ್ಲಿ) ಕಡೆ ಕುಳಿತಾಗ, ಅವರು ನಮಗೆ ಹೇಳುವುದೆಲ್ಲಾ, ನಮಗೆ ವಿರೋಧವಾಗಿ ಕಾಣುತ್ತದೆ. ಅವರ ಬಗ್ಗೆ ಅಪನಂಬಿಕೆ ಬರುತ್ತದೆ. ನಾವು ಈ ಕಡೆ (ವಿರೋಧ ಪಕ್ಷದಲ್ಲಿ) ಕುಳಿತಾಗ, ಅವರಿಗೆ ನಮ್ಮ ಬಗ್ಗೆ ಅಪನಂಬಿಕೆ ಬರುತ್ತದೆ. ಅದಕ್ಕಿಂತ ಜಾಸ್ತಿ ಮನೆಯಲ್ಲಿ ಆರೋಗ್ಯ ಮತ್ತೊಂದು ಸರಿಯಿಲ್ಲದೇ ಇದ್ದಾಗ, ಮಕ್ಕಳಿಗೆ ಅದು ಬಹಳ ಪ್ರೀತಿ ಪಾತ್ರವಾದಂತಹ, ಯಾರಿಗೋ ಏನೋ ಏನಾದರೂ ಆದರೆ ನಾವು ಸಲಹೆ ಕೊಡಬಹುದು. ನಮ್ಮಲ್ಲಿ ನಮ್ಮ ಮಗನಿಗೋ ಮತ್ತು ನಮ್ಮ ಮಗಳಿಗೋ, ಅಳಿಯನಿಗೋ, ನಮ್ಮ ಮನೆಯಲ್ಲಿರುವಂತಹ ಬಹಳ ಪ್ರೀತಿ ಮಾಡುವಂತಹ ಜನರಿಗೆ ಹುಷಾರಿಲ್ಲದೇ ಇದ್ದಾಗ, ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈದ್ಯಕೀಯ ವ್ಯವಸ್ಥೆ ಮಾಡುತ್ತೇವೆ. ಅದರ ಜೊತೆಗೆ ಇನ್ನು ಏನೇನು ಬೇಕೋ? ಯಾರು ಏನು ಹೇಳಿದರೂ ಮಾಡುವ ಸ್ಥಿತಿಯಲ್ಲಿರುತ್ತೇವೋ ಇಲ್ಲವೋ? ಹಾಗಾಗಿ ಯಾವ ಜಾಗದಲ್ಲಿ ನಿಂತಿರುತ್ತೇವೋ, ಆಗ ಅದು ನಂಬಿಕೆಯೋ ಅಥವಾ ಮೂಢ ನಂಬಿಕೆ ಎಂದಾಗುತ್ತದೆ. ಇಡೀ ಸಮಾಜದಲ್ಲಿ ಕೆಲವು ಪದ್ಧತಿಗಳು ನಡೆದುಕೊಂಡು ಬಂದಿದೆ. ಇವುಗಳು ಸ್ವಲ್ಪ ಸುಧಾರಣೆಯಾಗಬೇಕು. ನೀವು ಏನು ಕಾನೂನು ಮಾಡುತ್ತಿದ್ದೀರಿ. ನಾನು ಆ ಕಾನೂನನ್ನು ವಿರೋಧ ಮಾಡುವುದಿಲ್ಲ. ಆದರೆ, ನನ್ನದು ಒಂದೇ ಹೆದರಿಕೆ ಇರುವುದು, ಈ ನಿಟ್ಟಿನಲ್ಲಿ ಇನ್ನು ಸಮಾಜದಲ್ಲಿ ಸಿದ್ಧತೆಯಾಗುತ್ತಿಲ್ಲ. ಇನ್ನು ಸಾಕಷ್ಟು ಜನರನ್ನು ಇದಕ್ಕೆ ತೆಗೆದುಕೊಳ್ಳಬೇಕಾಗಿತ್ತು. ನೀವು ದೇವರ ದಯೆದಿಂದ, ಇನ್ನೂ ಸುಧಾರಣೆಯನ್ನು ಮಾಡಿ ನಿಮಗೆ ದೇವರು ಒಳ್ಳೆಯ ಬುದ್ಧಿ ಕೊಟ್ಟಿದ್ದಾನೆ. ಇಲ್ಲದೇ ಇದ್ದರೆ ನಂಬಿಕೆ, ಮೂಢನಂಬಿಕೆ ಎನ್ನುವಂತಹ ಕಾಯಿದೆಯನ್ನು ಸದನದ ಮುಂದೆ ಇಟ್ಟಿದ್ದರೆ ಇನ್ನೂ ಈ ಬಗ್ಗೆ ಜೋರಾಗಿ ಚರ್ಚೆಯಾಗುತ್ತಿತ್ತು. ದೇವರ ದಯದಿಂದ “ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ” ಇದನ್ನು ಯಾರೂ ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಸಮರ್ಥನೆ ಮಾಡುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ, ನೀವು ಕಾಂಗ್ರೆಸ್ ಪಕ್ಷದವರಾದ ತಾವು ಈ ವಿಧೇಯಕವನ್ನು ಮಾಡುತ್ತಿರಬೇಕಾದರೆ, ಪೋಲೀಸ್‌ನವರಿಗೆ ಜಾಸ್ತಿ ಅಧಿಕಾರ ಕೊಟ್ಟು, ಕಾನೂನಿಂದ ಎಲ್ಲವನ್ನೂ ಪರಿವರ್ತನೆ ಮಾಡುವುದಕ್ಕೆ ಹೊರಟ್ಟಿದ್ದೀರಿ. ಕಾನೂನಿನಿಂದ ಎಲ್ಲವನ್ನೂ ಪರಿವರ್ತನೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ, ಈ ವಿಧೇಯಕದ ಬಗ್ಗೆ ಪರಿಶೀಲನೆ ಮಾಡಿ, ಯಾವುದೇ ಕಾರಣಕ್ಕೂ ಪೋಲೀಸ್‌ನವರಿಗೆ ತುಂಬಾ ಅಧಿಕಾರವನ್ನು ಕೊಟ್ಟು, ಸಮಾಜವನ್ನು ತಿದ್ದುವಂತಹ ಕೆಲಸವನ್ನು ಮಾಡಬೇಡಿ. ಅದಕ್ಕೆ ಸಾಧುಗಳು, ಸನ್ಯಾಸಿಗಳು, ಹಿಂದೂ ಸಮಾಜದ ಮುಖಂಡರಿದ್ದಾರೆ. ಮುಸಲ್ಮಾನ ಸಮಾಜದಲ್ಲಿಯಾದರೆ ನೀವು ಅದಕ್ಕೆ ಕೈ ಹಾಕಿಲ್ಲವಲ್ಲ, ಏನು ತೊಂದರೆ ಇಲ್ಲ. ಅವರ ಮೌಲ್ವಿಗಳು ಚೆನ್ನಾಗಿ ಮಾಡುತ್ತಾರೆ. ಕ್ರಿಶ್ಚಿಯನ್ ಪಾದ್ರಿಗಳು ಅವರ ಸಮಾಜವನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ. ನಮ್ಮ ಸಮಾಜ ಮಾತ್ರ ತಾನೇ ಬಹಳ ದುರಾಚರ ಮತ್ತು ಅನಾಚಾರದಲ್ಲಿರುವುದು, ಬಹಳ ಮಾನವೀಯ ಪದ್ಧತಿಗಳನ್ನು ಬಿಟ್ಟಿರುವುದು. ನಮಗೆ ತಿದ್ದಿ, ಕಾನೂನುಗಳನ್ನು ಅನ್ವಯ ಮಾಡಿ, ಸಾಧ್ಯವಾದರೆ, ಅದೇ ರೀತಿಯ ಕಾನೂನುಗಳನ್ನು ಅವರಲ್ಲೂ ಏನಾದರೂ ದೋಷವಿದ್ದರೆ, ಮುಂದಿನ ಅಧಿವೇಶನದಲ್ಲಿ ತೆಗೆದುಕೊಂಡು ಬರಬೇಕೆಂಬ ವಿನಂತಿಯನ್ನು ಮಾಡಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಾ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಉಪ ಸಭಾಪತಿಯವರು:-** ಎರಡು ನಿಮಿಷಗಳಲ್ಲಿ ಮಾನ್ಯ ಪ್ರಾಣೇಶ್‌ರವರು ಮಾತನ್ನು ಮುಗಿಸಿ.

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎರಡೇ ನಿಮಿಷ. ನಾನು ಹೆಚ್ಚು ಮಾತನಾಡುವುದಕ್ಕೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧಕ ವಿಧೇಯಕವನ್ನು ತಾವು ಇದನ್ನು ಮಂಡಿಸಿದ್ದೀರಿ. ಇದನ್ನು ಬೆಂಬಲಿಸುವುದು ಹೇಗೆಂಬುದು ಸಾಮಾನ್ಯವಾಗಿ ಇದು ಗೊಂದಲದಲ್ಲಿದೆ. ಖಂಡಿತವಾಗಿಯೂ ಹೇಳಬೇಕೆಂದರೆ, ಇದು ಗೊಂದಲವಿದೆ ಎಂದು ನನಗೆ ಅನಿಸುತ್ತಿದೆ. ಇದರಲ್ಲಿ ಯಾವುದೂ clear cut ಆಗಿ ಇಲ್ಲ. ದಯಮಾಡಿ, ಮಾನ್ಯ ಮಂತ್ರಿಗಳು ಇರಬೇಕು. ಈ ವಿಧೇಯಕ ಪರಿಭಾಷೆಯಲ್ಲಿ ಮೂಢನಂಬಿಕೆ ಮತ್ತು ನಂಬಿಕೆ ಎಂದರೆ ಏನು ಎಂದು ಅದರಲ್ಲಿ ಸ್ಪಷ್ಟಪಡಿಸಿಲ್ಲ. ನಾಳೆ ವಿಜಿಲೆನ್ಸ್ ಅಧಿಕಾರಿಗಳು ಬಂದು, ಮೂಢ ನಂಬಿಕೆ ಮತ್ತು ನಂಬಿಕೆ ಯಾವುದು ಎಂದು ಯಾರಾದರೂ ಮೇಲೆ ಕೇಸ್ ಹಾಕಿದರೆ, ನಾವು ಅದನ್ನು ಯಾವ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುವಂಥದ್ದು. ಖಂಡಿತವಾಗಿಯೂ, ಇದು ಭಾರಿ ಸೂಕ್ಷ್ಮವಾದಂತಹ ವಿಚಾರ. ಇದರೊಳಗೆ ಸಂಘರ್ಷವೇರ್ಪಡುತ್ತದೆ. ಅದು ಧರ್ಮೀಯ ಸಂಘರ್ಷ ಏರ್ಪಡುವಂತಹ ಸಾಧ್ಯತೆಗಳಿವೆ. ಹಾಗಾಗಿ, ನಾನು ಏಕೆ ಈ ವಿಚಾರಗಳನ್ನು ನಾನು ಉಲ್ಲೇಖ ಮಾಡುತ್ತಿದ್ದೇನೆಂದು ಹೇಳಿದರೆ, ಮಾನ್ಯ ಮುಖ್ಯ ಸಚೇತಕರು ಮಾತಾಡಬೇಕಾದರೆ, ಯಾವ್ಯಾವ ಧರ್ಮಗಳಲ್ಲಿ ಏನೇನು ಇದೆ ಎಂಬ ಮಾತನ್ನು ಹೇಳಿದರು. ಇದನ್ನು ಮೇಲ್ನೋಟಕ್ಕೆ ಖಂಡಿತವಾಗಿಯೂ, ಮಾನ್ಯ ಭಾನುಪ್ರಕಾಶ್‌ರವರು ಉಲ್ಲೇಖ ಮಾಡಿದರು. ಇದನ್ನು ಮೇಲ್ನೋಟಕ್ಕೆ ಹಿಂದೂ ಧರ್ಮವನ್ನೇ ಗುರಿಯಾಗಿಟ್ಟುಕೊಂಡು, ಮಾಡಿದ ರೀತಿಯಲ್ಲಿ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕವಿದೆ. ನಾನು ಇದರ ಬಗ್ಗೆ ಗೊಂದಲ ಸೃಷ್ಟಿ ಮಾಡುವುದಕ್ಕೆ ಹೋಗುತ್ತಿಲ್ಲ. ನಾಳೆ ನಡೆಯುವಂತಹ ಸಂಘರ್ಷಗಳಿಗೆ ನಾವೇ ಹೊಣೆಗಾರವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದರೆ, ನಮ್ಮ ದೇಶ ಮತ್ತು ರಾಜ್ಯದ ಪರಿಸ್ಥಿತಿ ಹಾಗೇ ಇದೆ. ಏನಿದೆ ಎಂದು ಹೇಳಿದರೆ, ಎಲ್ಲಾ ವಿದ್ಯಾವಂತರಿಲ್ಲ. ಇನ್ನೂ ಕೂಡ ಅವಿದ್ಯಾವಂತರು ಸಾಕಷ್ಟು ಜನರು ಇದ್ದಾರೆ. ಅವರಿಗೆ ತಿಳುವಳಿಕೆ ಮೂಡಿಸುವಂತಹ ಜವಾಬ್ದಾರಿ ನಮ್ಮ ಮೇಲೆ ಇದೆ. ಏಕಾಏಕಿ ಆ ವಿಧೇಯಕವನ್ನು ತಂದು, ಅವರ ಮೇಲೆ ಹೇರುವಂತಹ ಪ್ರಯತ್ನವನ್ನು ಮಾಡಿದರೆ, ಅವರು ಈ ಮಾರ್ಗಕ್ಕೆ ಬರುವುದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಹಾಗಾಗಿ, ಸಮಾಜದಲ್ಲಿ ಇರುವಂತಹ ಶಾಂತಿಯನ್ನು ಕದಲಿಸಿ ಅಶಾಂತಿ ನಿರ್ಮಾಣವಾಗುತ್ತದೆ ಈ ವಿಧೇಯಕದಿಂದ ಎಂದು ನನಗೆ ಅನಿಸುತ್ತದೆ. ಹಾಗಾಗಿ ಕಾಲಾವಕಾಶವನ್ನು ತೆಗೆದುಕೊಳ್ಳಬೇಕಾಗುತ್ತದೆಂಬುದು ನನಗೆ ಅನಿಸಿದೆ. ನಮ್ಮ ಮಾನ್ಯ ಮುಖ್ಯ ಸಚೇತರು ಯಾವ್ಯಾವ ಧರ್ಮಗಳಲ್ಲಿ ಏನಿದೆ ಎಂದು ಒಂದು ಮಾತನ್ನು ಹೇಳಿದರು. ಮಾನ್ಯ ಭಾನುಪ್ರಕಾಶ್‌ರವರು ಒಂದನ್ನು ಉಲ್ಲೇಖ ಮಾಡಿದರು. ಕ್ರೈಸ್ತ ಧರ್ಮದಲ್ಲಿಯೂ ಕೂಡ ಇದೆ. ಅದು ಏನಿದೆ ಎಂದರೆ ಈ ಒಂದು ಕ್ರೈಸ್ತ ಪಾದ್ರಿಗಳ ಪ್ರಾರ್ಥನಾ ಸಭೆಗಳನ್ನು ಮಾಡಿ, ಅತೀಂದ್ರಿಯ ಶಕ್ತಿಗಳ ಮೂಲಕ ಕ್ಯಾನ್ಸರ್‌ನ್ನು ಗುಣಪಡಿಸುತ್ತೇವೆಂಬ ಮಾತನ್ನು ಹೇಳುತ್ತಾರೆ. ಅದು ಮೂಢ ನಂಬಿಕೆ ಅಲ್ಲವೇ, ಇದನ್ನು ನಾವು ಯೋಚನೆ ಮಾಡಬೇಕು. ಇದನ್ನು ನಾನು ಹೇಳುತ್ತಿದ್ದೇನೆಂದರೆ, ಹೀಗೆ ಎಲ್ಲಾ ಗುರುತು ಮಾಡುವಂತಹ ಕೆಲಸವಾದರೆ, ಖಂಡಿತ. ರೋಗ ಗುಣಪಡಿಸುವಂತಹ ನೆಪದಲ್ಲಿ holy water ಕೊಡುವ ಬಗ್ಗೆ ಉಲ್ಲೇಖವಿಲ್ಲ. ಈ holy water ನ್ನು ಕುಡಿಸಿದರೆ, ಕಾಯಿಲೆ ವಾಸಿಯಾಗುತ್ತದೆ ಎಂದು holy water ನ್ನು ಕುಡಿಸಿ ಆಸ್ಪತ್ರೆಗೆ ಹೋಗದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಇದು ಕೂಡ ಮೂಢನಂಬಿಕೆಗಳು. ಇವೆಲ್ಲವನ್ನು ಈ ವಿಧೇಯಕದೊಳಗಡೆ ಸೇರಿಸಿದರೆ, ಎಲ್ಲಾ ಜನಸಾಮಾನ್ಯರಿಗೂ ಅರ್ಥವಾಗುತ್ತದೆ. ಇದು ಯಾರನ್ನು ಗುರಿಯಾಗಿಟ್ಟುಕೊಂಡು ಮಾಡಲಿಲ್ಲ. ಇಲ್ಲವಾದಲ್ಲಿ ಇವರು ಹೇಳಿದ ಹಾಗೇ ರಾಜಕಾರಣ ಪ್ರವೇಶ ಖಂಡಿತವಾಗಿಯೂ ಆಗುತ್ತದೆ. ಅದನ್ನು ಬಿಡುವುದಿಲ್ಲ. ಏಕೆ ಎಂದು ಹೇಳಿದರೆ ನಿಮ್ಮ ಗುರಿ ಆ ರೀತಿ ಇದೆ ಎಂದು ತೋರ್ಪಡಿಸುವಂತಹ ವ್ಯವಸ್ಥೆ ಆ ವಿಧೇಯಕದಲ್ಲಿದೆ. ಇದನ್ನು ಸಹಜವಾಗಿಯೂ ನೋಡಿದರೆ, ಹಿಂದೂ ಧರ್ಮವನ್ನು ಗುರಿಯಾಗಿಟ್ಟುಕೊಂಡು ಮಾಡಿದ್ದಾರೆ. ಮುಸಲ್ಮಾನರು ಮತ್ತು ಕ್ರಿಶ್ಚಿಯನ್ ಧರ್ಮೀಯರನ್ನು ಕೈಬಿಟ್ಟಿದ್ದಾರೆ ಎನ್ನುವಂತಹ ಒಂದು ಕಿಡಿ ಹತ್ತಿದರೆ, ಇಡೀ ರಾಜ್ಯದಲ್ಲಿ ಅಶಾಂತಿ ನಿರ್ಮಾಣವಾಗುತ್ತದೆ. ಅದನ್ನು ಮತ್ತೆ ಸರಿಪಡಿಸುವಂತಹ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಇದು ಸರ್ಕಾರಕ್ಕೆ ದೊಡ್ಡ ಸಮಸ್ಯೆಯಾಗಿ ನಿರ್ಮಾಣವಾಗುತ್ತದೆ. ಹಾಗಾಗಿ, ಇದರಿಂದ ತುಂಬಾ ಜಾಗರೂಕತರಾಗಿರಿ. ಜನರನ್ನು ತುಂಬಾ ಜಾಗರೂಕತೆಯಿಂದ ಜಾಗೃತಿ ಮಾಡಿ. ಒಂದು ಎನ್.ಜಿ.ಓ ಸಂಸ್ಥೆಯಿಂದ ಜನರಿಗೆ ಒಂದು ಅರಿವು ಮೂಡಿಸುವಂತಹ ಕೆಲಸವನ್ನು ಮಾಡಿ ಎಂದು ಹೇಳಿ. ಅದಕ್ಕೆ ನಾಲ್ಕು ವರ್ಷಗಳಿಂದ ಪ್ರಯತ್ನ ಮಾಡಿದ್ದೀರಿ. ಈ ಪ್ರಯತ್ನಗಳು ಏಕೆ ಆಗಲಿಲ್ಲ. ಇದರ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವಂತಹ ಕೆಲಸವಾಗಬೇಕಿತ್ತು ಅಲ್ಲವೇ. ಈ ಜಾಗೃತಿ ಮೂಡಿಸುವಂತಹ ಕೆಲಸ ಇನ್ನು ಮುಂದೆ ಮಾಡುತ್ತೇವೆಂದು ಹೇಳಿದರೆ ಕಾಲ ಮೀರಿ ಹೋಗುತ್ತದೆ. ದಯಮಾಡಿ, ನಾನು ಸರ್ಕಾರಕ್ಕೆ ಇದನ್ನು ಇನ್ನೊಮ್ಮೆ ಪುನರ್ ಪರಿಶೀಲನೆಯನ್ನು ಮಾಡಿ ಎಂದು ಹೇಳಬಯಸುತ್ತೇನೆ. ಕೆಲವೊಂದು ವಿಚಾರಗಳು ಎಲ್ಲೋ ಒಂದು ಧರ್ಮಕ್ಕೆ ನೋವಾಗದೇ ರೀತಿಯಲ್ಲಿ ಈ ವಿಧೇಯಕ ಇರಬಾರದು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಲ್ಲರೂ ಈ ರಾಜ್ಯದ ಪ್ರಜೆಗಳು. ಹಾಗಾಗಿ, ಕೇವಲ ಇದು ಒಂದು ವರ್ಗಕ್ಕೆ ಮಾತ್ರ ಸೀಮಿತ ಮತ್ತೊಂದು ವರ್ಗಕ್ಕೆ ಆಗಲಿಲ್ಲ ಎನ್ನುವ ಭಾವನೆಗಳು ಬರುವುದು ಬೇಡ. ನಾನು ಮತ್ತೊಂದು ಕೊನೆಯ ಮಾತನ್ನು ಹೇಳುತ್ತೇನೆ. ನಾನು ಒಂದು ಕಥೆಯನ್ನು ಹೇಳಿ ಮಾತನ್ನು ಮುಗಿಸುತ್ತೇನೆ. ನಂಬಿಕೆಗಳು ಯಾವ ರೀತಿ ಇರುತ್ತದೆಂದು ಹೇಳಿದರೆ, ನಾನು ಮೊನ್ನೆ WhatsApp ನಲ್ಲಿ ನೋಡುತ್ತಿದ್ದೆ. ಒಂದು ಗಂಡ-ಹೆಂಡತಿ ಇರುತ್ತಾರೆ. ಗಂಡ-ಹೆಂಡತಿ ಇರಬೇಕಾದರೆ, ಹೆಂಡತಿ ಹೇಳುತ್ತಾಳೆ, ಏನು ನೀವು ಯಾವಾಗಲೂ ಬಾರ್‌ಗೆ ಹೋಗಿ, ಆ ಬಾರ್, ಈ ಬಾರ್ ಅಲ್ಲಿ ಹೋಗಿ ಕುಡಿದುಕೊಂಡು ಬರುತ್ತೀರಲ್ಲಾ ಅದರ ಬದಲು ಮನೆಗೆ ಒಂದು

quarter ತೆಗೆದುಕೊಂಡು ಬಂದು ಕುಡಿದು ಮಲಗುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಅಹಾ ನೀನು ಹೇಳುತ್ತಿರುವುದು ಸರಿಯಿದೆ. ಆದರೆ ನಿನಗೊಂದು ಮಾತನ್ನು ಹೇಳುತ್ತೇನೆ.

(ಮುಂದು...)

(1194)22.11.2017/7.00/ ಟಿಸಿಹೆಚ್/ಎಂಡಿ

**ಶ್ರೀ ಪ್ರಾಣೇಶ್ ಎಂ.ಕೆ (ಮುಂದು)**

ನಮ್ಮ ಮನೆಯಲ್ಲಿ ತಿರುಪತಿ ವೆಂಕಟರಮಣನ ಫೋಟೋ ಇಲ್ಲವೇ? ಶ್ರೀ ಮಂಜುನಾಥ ಸ್ವಾಮಿಯ ಫೋಟೋ ಇಲ್ಲವೇ? ಕಟೀಲು ದುರ್ಗಾ ಪರಮೇಶ್ವರಿಯ ಫೋಟೋ ಇಲ್ಲವೇ? ಹಾಗಾದರೆ ನೀನ್ಯಾಕೆ ಧರ್ಮಸ್ಥಳಕ್ಕೆ ಹೋಗುತ್ತೀಯಾ? ನೀನ್ಯಾಕೆ ತಿರುಪತಿಗೆ ಹೋಗುತ್ತೀಯಾ? ಅಲ್ಲಿಯೇ ಆದಂತಹ, ಅಲ್ಲಿಯ ಮಹಾತ್ಮೆಗಳು ಇವೆ. ಹಾಗಾಗಿ ಅಲ್ಲಿಗೆ ಹೋಗುತ್ತೇನೆ ಎಂದು ಹೇಳುತ್ತಾರೆ. ಆಗ ಇವನು ಹೇಳುತ್ತಾನೆ, ಅದೇ ರೀತಿ ಆ ಬ್ರಾಂದಿ ಶಾಪ್‌ಗಳಿಗೆ ಹೋಗುವುದು ಅವರವರ ನಂಬಿಕೆ. ಆ ಒಂದೊಂದು ಬ್ರಾಂದಿ ಶಾಪ್‌ನಲ್ಲೂ ಒಂದೊಂದು ತರಹದ ವಿಚಾರಗಳಿವೆ, ಅಲ್ಲಿಗೆ ಹೋಗುತ್ತೇನೆ. ಹಾಗಾಗಿ, ನಮ್ಮ ನಂಬಿಕೆಗಳ ಮೇಲೆ ನಮ್ಮ ವಿಶ್ವಾಸದಿಂದ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನಂಬಿಕೆಗಳು ಇದ್ದಾಗ, ಆ ನಂಬಿಕೆಗಳಿಗೆ ಚ್ಯುತಿ ಬಾರದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನನಗೆ ಸರ್ಕಾರದ ಮೇಲೆ ಅಪನಂಬಿಕೆಗಳು ಇದೆ, ಅದಕ್ಕೆ ಕಾರಣ ಇಷ್ಟೆ, ಮೊನ್ನೆ ಇತ್ತೀಚೆಗೆ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದವರು ಕೂಡ ತಮ್ಮ ಕಾರಿನ ಮೇಲೆ ಕಾಗೆ ಕುಳಿತ ತಕ್ಷಣ ಕಾರ್‌ನ್ನು ಬದಲಾವಣೆ ಮಾಡಿದಂತಹವರು, ಮೌಢ್ಯದ ಬಗ್ಗೆ ಯಾವ ರೀತಿಯಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನನಗೆ ಅನುಮಾನವಿದೆ. ಹಾಗಾಗಿ, ಮೌಢ್ಯದಿಂದ ಎಲ್ಲರೂ ಹೊರ ಬರಬೇಕು. ಆದರೆ, ಜಾಗೃತಿಯಾಗಿ ಈ ವರದಿಯನ್ನು ಮಂಡಿಸಬೇಕೆಂದು ಹೇಳಿ, ಈ ಒಂದು ವಿಧೇಯಕವನ್ನು ತರಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)** :- ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಧೇಯಕದ ಮೇಲೆ ಸದನದಲ್ಲಿ ಮೂರುವರೆ ಗಂಟೆ ಚರ್ಚೆ ಆಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ವಿಧೇಯಕಗಳು ಬಂದಾಗ ಸಾಕಷ್ಟು ಚರ್ಚೆ ಮಾಡಬೇಕಾಗುತ್ತದೆ, ಆದ್ದರಿಂದ ಮಾನ್ಯ ಸಚಿವರೇ, ತಮ್ಮ ಅನಿಸಿಕೆಯನ್ನು ಹೇಳಿಬಿಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಿಜವಾಗಲೂ ನಾನು ಏಕೆ ಮೂರುವರೆ ಗಂಟೆ ಆಯಿತೆಂದು ಅಷ್ಟೇ ಹೇಳಿದೆ. ಅದನ್ನು ಬಿಟ್ಟು ಮುಂದೆ ಏನೂ ಹೇಳಲ್ಲ. ಇದರಿಂದ ನನಗೆ ಹೆಚ್ಚು ಲಾಭ ಆಯಿತು. ಇದು ಕೆಳಮನೆಯಲ್ಲಿ ಇಷ್ಟೊಂದು ವ್ಯಾಪಕವಾಗಿ ಚರ್ಚೆ ಆಗಿರಲಿಲ್ಲ. ಕೆಳಮನೆಯಲ್ಲಿ ಸದಸ್ಯರೆಲ್ಲರೂ ಕೂಡ ಸ್ವಾಗತ ಮಾಡಿದರು. ಆದರೆ ಈ ಸದನದಲ್ಲಿ ವಿಧೇಯಕವನ್ನು ನೇರವಾಗಿ ಮತ್ತು ಪರೋಕ್ಷವಾಗಿ ಸ್ವಾಗತ ಮಾಡಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಾರ್ವತ್ರಿಕವಾಗಿ ಸ್ವಾಗತ ಮಾಡಿದ್ದಾರೆ, ಆದರೆ ಒಂದೆರಡನ್ನು ಬಿಟ್ಟು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಸುಮ್ಮನೆ ಜನರಿಗೆ ತಪ್ಪು ಸಂದೇಶ ಹೋಗುವುದಕ್ಕೆ ಸಾಧ್ಯವಿಲ್ಲ, ಅದು ಹೋಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾನು ಕೇಳಿದ್ದಕ್ಕೆ ಉತ್ತರ ಹೇಳಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಹೇಳುತ್ತೇನೆ ಆದ್ದರಿಂದ ನಾನು ಬಹುಶಃ ನಮ್ಮ ಕಾಯ್ದೆಯಲ್ಲಿರತಕ್ಕಂಥದ್ದನ್ನು ನೀವು. . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಶೋಷಣೆ ಮಾಡುವಂಥವರಿಗೆ ಮಾತ್ರ ತೊಂದರೆಯಾಗುತ್ತದೆ ಎಂದರೆ ನಮ್ಮದೇನು ಸಮಸ್ಯೆ ಇಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಯಾವುದನ್ನು ರಕ್ಷಣೆ ಮಾಡಿದ್ದೇವೆ ಮತ್ತು ಯಾವುದನ್ನು ನಿಷೇಧ ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ನೋಡಿದರೆ, ಬಹುಶಃ ಹೆಚ್ಚು ಚರ್ಚೆ ಮಾಡುವಂತಹ ಅವಶ್ಯಕತೆ ಇರುವುದಿಲ್ಲವೆಂದು ನಾನು ಭಾವಿಸುತ್ತೇನೆ. ತಾವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಿಮ್ಮ ಜೀವನದಲ್ಲಿ ಮತ್ತು ನಿಮ್ಮ ಅವಧಿಯಲ್ಲಿ ಆಗಿರತಕ್ಕಂಥ ದೃಷ್ಟಾಂತಗಳನ್ನು ಮತ್ತು ವಿಚಾರಗಳನ್ನು ಹೇಳುವಂತಹ ಮುಖೇನ ಮೌಢ್ಯ ಹೇಗೆ ಇರುತ್ತದೆ, ಮೌಢ್ಯವನ್ನು ಯಾವ ರೀತಿಯಾಗಿ ನಿಯಂತ್ರಿಸಬೇಕೆಂದು ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದೀರಿ. ಆದರೆ, ನಾವು ಇದನ್ನು ಕಾನೂನು ಮಾಡಬೇಕಾದರೆ, ಎಲ್ಲಾ ರೀತಿಯಾದಂತಹ ಎಚ್ಚರಿಕೆಯನ್ನು, ಕೊಟ್ಟಂತಹ ಸಲಹೆಯನ್ನು, ಹಾಗೂ ನ್ಯಾಯಾಧೀಶರನ್ನು ಸಹ consult ಮಾಡಿ, ನಾವು ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಬಹುಶಃ ಮಹಾರಾಷ್ಟ್ರ, ಗೋವ ಮತ್ತು ಕೇರಳದಲ್ಲಿ ತಂದಿರುವಂತಹ ಕಾನೂನಿನಲ್ಲಿ ಏನಿದೆ ಎನ್ನುವುದನ್ನು ನೋಡಿ, ಸ್ವಲ್ಪ ವಿಭಿನ್ನವಾಗಿ ನಾವು ಯಾವುದು saving ಮತ್ತು ಯಾವುದನ್ನು objectionable ಎಂದು ಎರಡನ್ನು ಮಾಡಿದ್ದೇವೆ. ಬಹುಶಃ ಅದು ಬೇರೆ ಕಾಯ್ದೆಗಳಲ್ಲಿ ಇಲ್ಲ. ಆದರೆ, ನಾವು ಇದನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಏಕೆಂದರೆ, ಜನರಿಗೆ ಎಲ್ಲೋ ಒಂದು ತಪ್ಪು ಸಂದೇಶ ಹೋಗಬಾರದು ಎನ್ನುವ ಕಾರಣಕ್ಕೋಸ್ಕರ ಈ ವಿಧೇಯಕವನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಆದರೆ, ನಾವು ಎಲ್ಲರ ಸಲಹೆಗಳನ್ನು ಕೇಳಿದ್ದೇವೆ. ಈ ಸಲಹೆಯನ್ನು ಕೇಳುವುದರ ಜೊತೆಗೆ, ಇದು ಪ್ರಾರಂಭ. ನಿಜವಾಗಿಯೂ ಮೌಢ್ಯದಿಂದ ಜೀವನ ಮಾಡುತ್ತಿರುವವರು ಯಾರು? ಬಹುಶಃ ಇದರಿಂದ ಯಾರಿಗೂ ಕೂಡ ತೊಂದರೆಯಾಗುತ್ತಿರಲಿಲ್ಲ. ಇಲ್ಲೇನು ಕೆಲವು ದೃಷ್ಟಾಂತಗಳನ್ನು ಹೇಳಿದ್ದೀರಲ್ಲಾ ಅದು ಇವತ್ತು ಕೂಡ ಹಳ್ಳಿಗಳಲ್ಲಿ ಜೀವಂತವಾಗಿದೆ ಎನ್ನತಕ್ಕಂಥದ್ದನ್ನು ಯಾರೂ ಕೂಡ ಮರೆಯಬಾರದು. ಹಳ್ಳಿಗಳಲ್ಲಿ ಅದರಲ್ಲಿಯೂ ಕೆಳವರ್ಗದ ಜನರಾದ ಎಸ್‌ಸಿ/ಎಸ್‌ಟಿ ಇರಬಹುದು ಮತ್ತು ಹಿಂದುಳಿದ ವರ್ಗಗಳು ಇರಬಹುದು ಅವರು ಅವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಇರುವಂತಹ ಸಂದರ್ಭದಲ್ಲಿ ಶೋಷಣೆಗೆ ಒಳಗಾಗುತ್ತಾರೆ. ಅವರು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗಿ, ಮನೆಗಳು ಹಾಳಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವು ಅದಕ್ಕೆ ಒಂದು ಕಾನೂನನ್ನು ತರಬೇಕೆಂದು ತಂದು ಪ್ರಾರಂಭ ಮಾಡಿ, ಕೆಲವು ದಿವಸಗಳ ಕಾಲ ಚರ್ಚೆಗೆ ಬಿಟ್ಟಂತಹ ಸಂದರ್ಭದಲ್ಲಿ ಸರ್ವೇ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ನಾನು ಎಲ್ಲಿಗೆ ಹೋದರೂ ಕೂಡ ನಾವು ಶೋಷಣೆಗೆ ಒಳಗಾಗುತ್ತಿದ್ದೇವೆ, ಇದರ ಬಗ್ಗೆ ನೀವು ಏಕೆ ಕಾನೂನು ತರಬಾರದು ಎಂದು ಜನರು ಪ್ರಶ್ನೆ ಕೇಳುತ್ತಾರೆ. ಇದರ ಜೊತೆಗೆ ಟಿ.ವಿ ಮಾಧ್ಯಮದಲ್ಲಿ "ಹೀಗೂ ಉಂಟೆ" ಕಾರ್ಯಕ್ರಮ ಬರತಕ್ಕಂಥದ್ದನ್ನು ನೋಡಿದ್ದೇವೆ. "ಹೀಗೂ ಉಂಟೆ" ಕಾರ್ಯಕ್ರಮದಲ್ಲಿ ಯಾವಾಗ ನನ್ನ ಕ್ಷೇತ್ರದಲ್ಲಿಯ ದೇವಸ್ಥಾನಗಳು ಪ್ರಸ್ತಾಪವಾದವೋ ಅದನ್ನು ಕಂಡು ಬಹಳಷ್ಟು ಜನ ಅಲ್ಲಿಗೆ ಬಸ್‌ಗಳಲ್ಲಿ ಹಾಗೂ ಕಾರುಗಳಲ್ಲಿ ಬರುವವರು ಹೆಚ್ಚಾದರು, ನೀವು ಇಲ್ಲಿಗೆ ಏಕೆ ಬರುತ್ತೀರಿ ಎಂದು ನಾನು ಅವರನ್ನು ಕೇಳಿದಾಗ, ಅದಕ್ಕೆ ಅವರು, ನಾವು ಈ ದೇವಸ್ಥಾನಕ್ಕೆ ದೇವರ ದರ್ಶನಕ್ಕೆ ಬಂದಿದ್ದೇವೆ, ಈ ದೇವಸ್ಥಾನದಲ್ಲಿರುವ ದೇವರ ದರ್ಶನ ಮಾಡಿದರೆ ನಮಗೆ ಒಳ್ಳೆಯದಾಗುತ್ತದಂತೆ, ಟಿ.ವಿಯಲ್ಲಿ ಪ್ರಸಾರವಾಗಿದೆ ಎಂದು ಹೇಳುತ್ತಿದ್ದರು. ಸರಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ ಎಂದು ಅವರಿಗೆ ಏನು ಕೇಳುವುದಕ್ಕೆ ಹೋಗಲಿಲ್ಲ. ಅವರೇನು ಹೇಳಿದರೂ ನಾನು ನಂಬುತ್ತಿರಲಿಲ್ಲ. ಈ ರೀತಿಯಾಗಿರುವುದನ್ನು ನೋಡಿ, ಎಲ್ಲೋ ಒಂದು ಕಡೆ ವಿದ್ಯಾವಂತರು, ಅವಿದ್ಯಾವಂತರು ಮತ್ತು ಅರೆಬರೆ ಜ್ಞಾನ ಇರುವಂತಹವರು ಈ ರೀತಿಯಾಗಿ ಈ ತರಹ ಶೋಷಣೆಗೆ ಒಳಗಾಗುತ್ತಾರೆ. ಈ ತರಹ ಪ್ರಭಾವಕ್ಕೆ ಒಳಗಾಗುತ್ತಾರೆ. ಇಂತಹವುಗಳಿಗೆ ಮುಕ್ತಿ ಕಾಣಿಸಬೇಕಾದಾಗ ನಾವು ಬಹಳ ಜನರಿಗೆ

ತೊಂದರೆಯಾಗಿರುವುದು ಈ ಟಿ.ವಿಗಳಲ್ಲಿ ಕಾರ್ಯಕ್ರಮಗಳು ಬರುತ್ತಿರುವುದರಿಂದ. ನೀವು ಯಾರದೇ ಮನೆಗೆ ಹೋಗಿ, ಸರ್ವೇಸಾಮಾನ್ಯವಾಗಿ ಮಾತನಾಡಬೇಕಾದರೆ, ಈ ಮೌಢ್ಯ ನಿಷೇಧ ಕಾಯ್ದೆ ಜಾರಿಗೆ ತರಲು ಹೊರಟಾಗ ಸ್ವಲ್ಪ ಎಡವಟ್ಟು ಆಯಿತು. ಆ ಸಂದರ್ಭದಲ್ಲಿ ಇದನ್ನು ಯಾವಾಗ ಜಾರಿಗೆ ತರುತ್ತೀರಿ, ಈ ಟಿ.ವಿಗಳಲ್ಲಿ ಬರುವುದನ್ನು ಯಾವಾಗ ನಿಷೇಧ ಮಾಡುತ್ತೀರಿ ಎಂದು ಎಲ್ಲರೂ ಕೇಳುತ್ತಿದ್ದರು. ನೂರಕ್ಕೆ ನೂರು ಜನ ಇದನ್ನು ಪ್ರಸ್ತಾಪ ಮಾಡಿದರೂ ಸಹ, ಇದನ್ನು ನಿಷೇಧ ಮಾಡಿ ಎಂದು ಹೇಳುತ್ತಾರೆ. ಅದನ್ನು ನಿಷೇಧ ಮಾಡುವುದಕ್ಕೆ ಹೊರಟರೆ, ದೊಡ್ಡ ಗೊಂದಲ ಆಗುತ್ತದೆ ಎನ್ನುವ ಕಾರಣಕ್ಕೋಸ್ಕರ, ನಾವು ವಾಸ್ತು ಮತ್ತು ಜ್ಯೋತಿಷ್ಯಕ್ಕೆ ಕೈ ಹಾಕುವುದಕ್ಕೆ ಹೋಗಿಲ್ಲ. ಇದು ಇನ್ನೂ ಪ್ರಾರಂಭ. ಇದು ಇನ್ನೂ ಕಾನೂನು ಮಾಡುವಂತಹ ಪ್ರಾರಂಭದಲ್ಲಿಯೇ ಕೆಲವೊಂದು steps ನ್ನು ತೆಗೆದುಕೊಂಡಿದ್ದೇವೆ. ಅದರ ಮುಂದುವರೆದ ಭಾಗವಾಗಿ ಕೆಲವನ್ನು ತರಬೇಕಾಗುತ್ತದೆ. ಬಹುಶಃ ಇವತ್ತಿನ ದಿವಸ ಎಲ್ಲೋ ಒಂದು ಕಡೆ younger generation ಯಾವುದೇ ಜಾತಿ ಮತ್ತು ಯಾವುದೇ ವರ್ಗ ಇರಲಿ, ಕೆಲವೊಂದು ಅಲ್ಲಿ ಇರತಕ್ಕಂಥದ್ದರಲ್ಲಿ ಅವರಿಗೆ awareness ಇದೆ, ಇದರ ಬಗ್ಗೆ ಮಾತನಾಡುತ್ತಾರೆ, ಒಂದು ಕಾನೂನು ತರುವುದರ ಮುಖೇನ ಈ ರೀತಿಯಾಗಿರತಕ್ಕಂಥ ಒಂದು awareness ತರುವುದಕ್ಕೆ ಸಹ ಕಾರಣವಾಗುತ್ತದೆ. ಒಂದು ಕಾನೂನು ಜಾರಿಗೆ ಬಂದಾಗ, ಆ ಕಾನೂನಿನ ಬಲ ಇದೆ ಎನ್ನತಕ್ಕಂಥ ದೃಷ್ಟಿಯಿಂದಲಾದರೂ ಕೂಡ ಅದಕ್ಕೆ ಶಕ್ತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಾರೆ. ಈಗ ಖಚಿಖ ಂಛಿಣ ಜಾರಿಗೆ ಬರುವುದಕ್ಕಿಂತ ಮುಂಚೆ, ಬಹುಶಃ RTI activists ಹೇಗೆ ಆಗಿದ್ದರೋ ಆ ರೀತಿಯಾಗಿ ಇಂತಹ ಒಂದು ಕಾನೂನು ಬಂದಂತಹ ಸಂದರ್ಭದಲ್ಲಿ ಕಾನೂನಿನ ಲಾಭವನ್ನು ಪಡೆದುಕೊಂಡು, ಅದು ಸರಿಯಾಗುತ್ತದೆಯೋ ಶೋಷಣೆಯಾಗುತ್ತದೆಯೋ ಅಥವಾ ಮತ್ತೊಂದು ಆಗುತ್ತದೆಯೋ ಬೇರೆ. ಒಂದು awareness ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ತಾವೆಲ್ಲರೂ ಕೂಡ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ, ಆದರೆ ಇದರಲ್ಲಿ ಬಹಳ ಮುಖ್ಯವಾಗಿ ‘ಗರ್ಭಿಣಿ ಸ್ತ್ರೀ’ ಎನ್ನತಕ್ಕಂಥದ್ದನ್ನು ‘ಬಾಣಂತಿ’ ಎಂದು ಬದಲಾವಣೆಯನ್ನು ಕೂಡ ನಾವು ಮಾಡುತ್ತೇವೆ. ಈ Vigilance Officer: ಎಂದು ಹೇಳಬೇಕಾದಾಗ, ಅದರಲ್ಲಿ “Revenue, Social Welfare along with Police” ಎಂದು ಈ ರೀತಿಯಾಗಿ ಬದಲಾವಣೆಯನ್ನು ಕೂಡ ಮಾಡಲಾಗುವುದು ಎಂದು ನಾನು ಒಪ್ಪಿದ್ದೇನೆ. ‘ಬಾಣಂತಿ’ ಎಂದು ಅಧಿಸೂಚನೆಯಲ್ಲಿ ಮಾಡಿಕೊಡುತ್ತೇವೆ. ಅದರಲ್ಲಿ ಬಾಣಂತಿ ಮತ್ತು ಮಗು ಸಹ ಇರುತ್ತದೆ. ಏಕೆಂದರೆ, ಇದು ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿಯೇ ನನ್ನ ಕ್ಷೇತ್ರದಲ್ಲಿಯೇ ಜಾಸ್ತಿಯಾಗಿರತಕ್ಕಂಥದ್ದು. ಇದು ಪಾವಗಡ, ಶಿರಾ, ಚಿಕ್ಕನಾಯಕನಹಳ್ಳಿ, ಅರಸೀಕೆರೆಯಲ್ಲಿ ಜಾಸ್ತಿಯಾಗಿ ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಧಾರ್ಮಿಕ ಸಂಪ್ರದಾಯಗಳಲ್ಲಿರುವ ಅನಿಷ್ಟ ಪದ್ಧತಿಗಳ ಬಗ್ಗೆ ಉಲ್ಲೇಖ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಇದನ್ನು ನಿರ್ದಿಷ್ಟವಾಗಿ ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಆಚರಣೆಗಳ ಬಗ್ಗೆ ಮಾತ್ರ ಪಟ್ಟಿ ಮಾಡಿದ್ದೀರಿ. ತಾವು ಎಲ್ಲರನ್ನು ಸಮಗ್ರವಾಗಿ ಸಂಪರ್ಕ ಮಾಡುವಾಗ ಕೇವಲ ಇವರನ್ನು ಮಾತ್ರ ಸಂಪರ್ಕ ಮಾಡಿದ್ದೀರಿ. ಅದನ್ನು ಸೇರಿಸಿಕೊಳ್ಳುತ್ತೀರಾ ಅಥವಾ ಇಲ್ಲವೇ ಎಂದು ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಎಲ್ಲಾ ಧರ್ಮದಲ್ಲೂ ಒಬ್ಬೊಬ್ಬರು ದೇವರು ಇರುತ್ತಾರೆ. ನಮ್ಮ ಹಿಂದೂ ಧರ್ಮದಲ್ಲಿ ಎಷ್ಟು ದೇವರು ಇದ್ದಾರೆ ಗೊತ್ತೇ? ಸುಮಾರು 16000 ದೇವರುಗಳು ಇದ್ದಾರೆ.

**ಶ್ರೀ ವಿ.ಸೋಮಣ್ಣ (ವಿಧಾನ ಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ತಾವು ಹೇಳಿದ್ದನ್ನೆಲ್ಲವನ್ನೂ ಕೇಳಿದೆವು. ಅದರಲ್ಲಿ ಎರಡನೇ ಮಾತಿಲ್ಲ. ಇದರ ಬಗ್ಗೆ ಒಂದು ಕಾಯ್ದೆಯನ್ನು ತಂದಿದ್ದೀರಿ, ಈ ಕಾಯ್ದೆ ಬಗ್ಗೆ ನಮಗೇನು ಅಪನಂಬಿಕೆ ಇಲ್ಲ. ಆದರೆ, ಕಾಯ್ದೆಯಲ್ಲಿ ಬರುವಂತಹ

ಪ್ರತಿಯೊಂದು ಅಂಶವೂ ಕೂಡ ಒಂದು ವರ್ಗಕ್ಕೆ ಸೀಮಿತವಾಗಿರತಕ್ಕಂಥ ಒಂದು ಅಂಶ ತಮ್ಮ ಕಾಯ್ದೆಯಲ್ಲಿ ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಈ ರಾಜ್ಯದಲ್ಲಿ ವಾಸಿಸುವಂತಹ ಹಿಂದೂಗಳು ಇರಬಹುದು, ಮುಸಲ್ಮಾನರು ಇರಬಹುದು, ಕ್ರಿಶ್ಚಿಯನ್, ಸಿಖ್, ಜೈನ ಮತ್ತು ಪಾರ್ಸಿ ಇರಬಹುದು ಇವರೆಲ್ಲರಿಗೂ ಅನ್ವಯವಾಗುತ್ತದೆ ಎನ್ನುವ ತಿದ್ದುಪಡಿಯನ್ನು ಮಾಡಿ, ಇದನ್ನು ಒಪ್ಪಿಗೆ ಮಾಡಬೇಕೆಂದು ಕೇಳುತ್ತಿದ್ದೇನೆ, ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಏಕೆಂದರೆ ಇದು ಒಂದೇ ಒಂದು ವರ್ಗಕ್ಕೆ ಸೀಮಿತವಾಗಬಾರದು. ಆದ್ದರಿಂದ ತಾವು ದಯಮಾಡಿ ಇದನ್ನು ತಿದ್ದುಪಡಿಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇದನ್ನು ನಾವು ಹೇಳಬೇಕಾಗುತ್ತದೆ ಅದನ್ನು ಸೇರಿಸಿ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಆ ಅನುಮಾನಕ್ಕೆ ಕಾರಣವೇ ಇಲ್ಲ. ಇದು ಒಂದು ಯಾವುದೇ ಧರ್ಮದ ವಿರುದ್ಧ ಇರುವುದು ಅಲ್ಲ ಅಥವಾ ಯಾವುದೇ ಧರ್ಮದ ಪರವಾಗಿಯೂ ಅಲ್ಲ, ಇದ್ಯಾವುದೂ ಅಲ್ಲ,

(ಗೊಂದಲ)

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಈ ಕಾಯ್ದೆ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ತಾವು ಇಷ್ಟೇ ಮಾಡಬೇಕಾಗಿದೆ, ಇದು ಈ ರಾಜ್ಯದಲ್ಲಿ ವಾಸಮಾಡುವಂತಹ ಎಲ್ಲಾ ಧರ್ಮೀಯರಿಗೂ ಕೂಡ ಅನ್ವಯವಾಗುತ್ತದೆ ಎಂದು ಮಾಡಿ.

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಹೌದು ಎಲ್ಲಾ ಧರ್ಮೀಯರಿಗೂ ಇದು ಅನ್ವಯವಾಗುತ್ತದೆ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಂತ್ರಿಗಳು ಹೇಳುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ನಾನು ಹೇಳುವುದನ್ನು ಕೇಳಿ, ಮನೆ, ದೇವಾಲಯ, ದರ್ಗಾ, ಗುರುದ್ವಾರ, ಪಗೋಡ, ಚರ್ಚ್ ಮತ್ತು ಅಂತಹ ಇತರ ಧಾರ್ಮಿಕ ಸ್ಥಳಗಳಲ್ಲಿ ದೈಹಿಕವಾಗಿ ಹಾನಿಯುಂಟು ಮಾಡದಿರುವ ಪ್ರಾರ್ಥನೆ, ಉಪಾಸನೆ ಮತ್ತು ಎಲ್ಲಾ ಧಾರ್ಮಿಕ ಆಚರಣೆಗಳನ್ನು ನಡೆಸುವುದು;

**ಉಪ ಸಭಾಪತಿಯವರು**:- ಮಾನ್ಯ ವಿ.ಸೋಮಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ(ವಿಧಾನ ಸಭಾಕ್ಷೇತ್ರ)**:- ಜನರನ್ನು ಓಲೈಸುವಂತಹ ಕೆಲಸ ಆಗಬಾರದು.

**ಶ್ರೀ ಟಿ.ಎ.ಶರವಣ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳುತ್ತಾರೋ ಕೇಳಿರಿ. ಆನಂತರ ನೀವು ಪ್ರತಿಕ್ರಿಯೆ ಮಾಡಿ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಬಿಡಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಅವರು ಅನಾವಶ್ಯಕವಾಗಿ ಅನುಮಾನ ಪಡುವಂಥ ಅವಶ್ಯಕತೆ ಇಲ್ಲ. ನಾನು ಯಾರ ಪರವಾಗಿಯೂ ಇಲ್ಲ ಮತ್ತು ಯಾರ ವಿರೋಧವಾಗಿಯೂ ಇಲ್ಲ. ಯಾರೋ ಒಂದು ಕಡೆ ವಾಮಾಚಾರದ ಹೆಸರಿನಲ್ಲಿ ಜನರನ್ನು ಶೋಷಣೆ ಮಾಡುತ್ತಾರಲ್ಲಾ, ಅವರನ್ನು ನಿಯಂತ್ರಿಸುವುದಕ್ಕೆ ತಂದಿರುವಂತಹ ಒಂದು ಕಾನೂನು ಬಿಟ್ಟರೆ, ಬೇರೆ ಯಾವ ಉದ್ದೇಶವೂ ಇಲ್ಲ. ಈಗ ತಾವು ಹೇಳುರುವುದನ್ನು ಕೂಡ ನಾನು ಗಮನಿಸಿದ್ದೇನೆ.

**(ಮುಂದು...)**

**(1195)/22.11.2017/7.10/ಎಂ.ಎಂ/ಎ.ಕೆ**

**ಶ್ರೀ ಟಿ.ಬಿ. ಜಯಚಂದ್ರ (ಮುಂದು. .)**

ನಾವು ಏನು ಹೇಳುತ್ತೇವೆಂದರೆ, ಅನುಸೂಚಿ ಕಲಂ 14ರಲ್ಲಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಮಾರ್ಪಡಿಸಬಹುದು. ಈ ಅಧಿಕಾರ ಸರ್ಕಾರಕ್ಕೆ ಇದೆ. ಹಾಗಾಗಿ ಯಾವುದೇ ಇದ್ದರೂ ಅದನ್ನು ಲಿಖಿತ ರೂಪದಲ್ಲಿ ಕೊಟ್ಟರೆ, ಪ್ರಸ್ತಾಪ ಮಾಡಿರುವುದನ್ನೆಲ್ಲ ನಾನು ಗಮನಿಸುತ್ತೇನೆ.

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೀವು ಹೇಳುರುವುದಕ್ಕೆ ಲಿಖಿತವಾಗಿ ಬೇಕಾಗಿಲ್ಲ. ಈಗಾಗಲೇ ಅದನ್ನು ಮಾರ್ಪಾಡು ಮಾಡಿಸಿಕೊಳ್ಳಬಹುದು ಎಂದು ತಾವು ಹೇಳುರುವುದು binding ಆಗಲಿ.

**ಉಪ ಸಭಾಪತಿಯವರು:–** ಮಾನ್ಯ ಸೋಮಣ್ಣರವರೇ, ಇದು ಮಂಡನೆಯಾಗಲು ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಇದು ವಿಧಾನಸಭೆಯಲ್ಲಿ ಮಂಡನೆಯಾದ ಮೇಲೆ ಈಗಾಗಲೇ ನಮಗೆ ಇಂಥದ್ದೆಲ್ಲಾ ನಿಷೇಧ ಮಾಡಬೇಕೆಂದು ಅನೇಕ ಮನವಿಗಳು ಬಂದಿವೆ. ಅದರಲ್ಲಿ ಸತ್ಯಾಂಶವಿರುವಂತಹ ಕೆಲವು ಅಂಶಗಳಿವೆ. ಅಂತಹವುಗಳನ್ನು ಕೂಡ ಆ ವಿಧೇಯಕದಿಂದ ತರುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇದು ಯಾರ ಪರವೂ ಅಲ್ಲ, ಯಾರ ವಿರುದ್ಧವೂ ಅಲ್ಲ. ಯಾವುದೇ ಹೆಸರಿನಲ್ಲಿ ಶೋಷಣೆ ಮಾಡತಕ್ಕಂತಹದ್ದಾಗಿದೆ. ಬಹುಶಃ ನೀವು ಅದನ್ನು ನೋಡಿದ್ದೀರಿ. ಅದು ಮಾನ್ಯ ಡಿ.ಎಸ್. ವೀರಯ್ಯನವರಿಗೆ, ಮಾನ್ಯ ಉಗ್ರಪ್ಪನವರಿಗೆ ಹಾಗು ನನಗೆ ಗೊತ್ತಿದೆ. ಕೆಳಸ್ತರದಲ್ಲಿರುವ ಜನರು ಯಾವರೀತಿ ಶೋಷಣೆಗೆ ಒಳಗಾಗುತ್ತಾರೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ದೇವರ ಹೆಸರಿನಲ್ಲಿ ಪ್ರಾರಂಭ ಮಾಡಿ ಆಮೇಲೆ ಶೋಷಣೆಗಳು ನಡೆಯುತ್ತವೆ. ಎಷ್ಟೋ ಜನರ ಮನೆಗಳು ವಾಮಾಚಾರದಿಂದ ಹಾಳಾಗಿ ಹೋಗಿವೆ. ನಾನು ಕೆಲವು ಕಡೆ ಹೋದಾಗ ಎಲ್ಲಾದರೂ ಒಂದು ಕಡೆ ಮಕ್ಕಳು ಕಾಣೆಯಾಗಿದ್ದಾರೆ ಎಂದು ಹೇಳಿದರೆ ಅವರು ಇದೇ ಉದ್ದೇಶಕ್ಕೋಸ್ಕರ ಕೊಲೆಯಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅದು ಇವತ್ತಿಗೂ ನಡೆಯುತ್ತಿದೆ. ಅದು ಎಲ್ಲಿ, ಏನು ಎನ್ನುವುದನ್ನು ನೋಡಿದಾಗ ನನ್ನ ಮನಸ್ಸು ಕೂಡ ನೊಂದಿದೆ. ಅಂತಹ ಸಂದರ್ಭಗಳಲ್ಲಿ ಒಂದು ಭಯ ಬರಲು ಸಾಧ್ಯವಾಗುತ್ತದೆ. ಇದು ನಡೆಯುತ್ತಿರುವುದು ಕೆಳ ಹಂತದಲ್ಲಿ ಹಳ್ಳಿಗಳ ಮಟ್ಟದಲ್ಲಿ ನಡೆಯುತ್ತಿದೆ. ಅದರಿಂದ ಶೋಷಣೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರುಗಳು ಕೊಟ್ಟಿರುವಂತಹ ಎಲ್ಲಾ ಸಲಹೆಗಳನ್ನೂ ಪರಿಶೀಲನೆ ಮಾಡುತ್ತೇವೆ ಮತ್ತು ಇದಕ್ಕೆ ಯಾವುದನ್ನು ಸೇರಿಸಬೇಕು, ಯಾವುದನ್ನು ಬಿಡಬೇಕು ಎನ್ನುವುದಕ್ಕೆ ಅವಕಾಶವಿರುವ ಎಲ್ಲಾ ಸಲಹೆಗಳನ್ನು ಸೇರಿಸುವಂತಹ ಕೆಲಸ ಮಾಡುತ್ತೇವೆ ಮತ್ತು ಅಧಿಸೂಚನೆಯನ್ನೂ ಹೊರಡಿಸಿ ವಿಧಾನಸಭೆಯ ಮುಂದೆ ಮಂಡಿಸುತ್ತೇನೆ. ಇದು ಪ್ರಾರಂಭ ಅಷ್ಟೇ, ಇದು ಇನ್ನೂ ಮುಂದುವರೆಯಬೇಕು. ಈ ಕಾನೂನಿಗೆ ಶಕ್ತಿ, ಬಲ ಬರಬೇಕು, ಮೌಢ್ಯದಿಂದ ಶೋಷಣೆಗೊಳಗಾಗಿರುವ ಜನರು ಮುಕ್ತರಾಗಬೇಕಾಗಿದೆ. ನನಗೆ ಎಲ್ಲೋ ಒಂದು ಕಡೆ ವಿಶ್ವಾಸವಿದೆ. ಇದಕ್ಕೆ ಬೆಳಕನ್ನು ಚೆಲ್ಲುವಂತಹ ಕೆಲಸವನ್ನು ಸಾಕಷ್ಟು ಸದಸ್ಯರು ಮಾಡಿದ್ದಾರೆ. ಈ ದಿನ ಸುಮಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರುವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ನನ್ನ ನಾಲ್ಕು ದಶಕಗಳ ಅವಧಿಯಲ್ಲಿ ಯಾವತ್ತು ಕೂಡ ಒಂದು ವಿಧೇಯಕದ ಮೇಲೆ 3-4 ಗಂಟೆಗಳ ಕಾಲ ಚರ್ಚೆಯಾಗಿದ್ದನ್ನು ನಾನು ನೋಡಿಲ್ಲ. ಇದಕ್ಕೆ ಒಳ್ಳೆಯ ಸಲಹೆಗಳು ಬಂದಿವೆ. ನಿಮ್ಮ ಅನುಭವದ ಮಾತುಗಳನ್ನು ನಾನು ಗ್ರಹಿಸಿದ್ದೇನೆ, ಅರ್ಥ ಮಾಡಿಕೊಂಡಿದ್ದೇನೆ. ಅದರಲ್ಲಿಯೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರ ಭಾವನೆಯಂತೂ ವಿಶೇಷವಾಗಿ ಅರ್ಥವಾಗಿದೆ. ಯಾರ ಮನಸ್ಸಿಗೂ ನೋವಾಗದೆ . .

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಿಕ್ಕ ಮಕ್ಕಳಿಗೆ ಸುನ್ನತಿ ಮಾಡುವುದಕ್ಕೆ ಆರೇಳು ವರ್ಷದ ಮಕ್ಕಳನ್ನು ಬಲಾತ್ಕಾರವಾಗಿ ಹಿಡಿದುಕೊಂಡು ಹೋಗಿ ಚರ್ಮವನ್ನು ತೆಗೆಯುವ ಕೆಲಸವಾಗುತ್ತದೆ. ಆ ಮಕ್ಕಳು ಹೆದರಿ ಓಡುತ್ತಿರುತ್ತಾರೆ ಅವರನ್ನು ಹಿಡಿದುಕೊಂಡು ಬಂದು ಮಾಡಿಸುತ್ತಾರೆ. ಅದರ ಬಗ್ಗೆ ನೀವು ಖಂಡಿತವಾಗಿಯೂ ನಿರ್ದಿಷ್ಟವಾಗಿ ನಮೂದಿಸಬೇಕು. ಮಕ್ಕಳಿಗೆ ನೋವು ಮಾಡುತ್ತಾರೆ.

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಹಿಂದುಗಳ ಮಕ್ಕಳಿಗೆ ಅದು ಆಗುವುದಿಲ್ಲವೇ? ಹಿಂದುಗಳ ಮಕ್ಕಳಿಗೂ ಅದನ್ನು ಆರೋಗ್ಯ ದೃಷ್ಟಿಯಿಂದ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ಪ್ರಾಣೇಶ್‌ರವರೇ . . .ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಇದು ಮಂಡನೆಯಾದ ಮೇಲೆ ಅನೇಕ ಮನವಿಗಳು ಬಂದಿವೆ. ಅವುಗಳನ್ನು ಪರಿಶೀಲನೆ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಗತಿಪರರು ಎಂದು ಹೇಳುವ ಒಂದೆರಡು ಜನರು ಪ್ರಗತಿಪರ ಚಿಂತನೆಗಳೆಂದು ಹಿಂದು ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆ?

**ಉಪ ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ದಯವಿಟ್ಟು ಕುಳಿತುಕೊಳ್ಳಿ.

ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 16 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 16ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 16 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

# 7.ಪ್ರಕಟಣೆಗಳು

**ಉಪ ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ;

(ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು **"ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ, 2017"ವನ್ನು** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು 2017ನೇ ಸಾಲಿನ **"ಕರ್ನಾಟಕ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಧನವಿನಿಯೋಗ (ಸಂಖ್ಯೆ.4) ವಿಧೇಯಕ”ವನ್ನು** ಅಂಗೀಕರಿಸಿತೆಂದು ತಿಳಿಸುತ್ತಿದ್ದೇನೆ. ಈ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರುತ್ತೇನೆ.

(ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು **“ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2017”ವನ್ನು** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು 2017ನೇ ಸಾಲಿನ **“ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ”ವನ್ನು** ಅಂಗೀಕರಿಸಿರುತ್ತದೆಂದು ತಿಳಿಸುತ್ತಿದ್ದೇನೆ. ಈ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರುತ್ತೇನೆ.

(ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು **“ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2017”ವನ್ನು** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 22.11.2017ರಂದು 2017ನೇ ಸಾಲಿನ **“ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ”ವನ್ನು** ಅಂಗೀಕರಿಸಿರುತ್ತದೆಂದು ತಿಳಿಸುತ್ತಿದ್ದೇನೆ. ಈ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರುತ್ತೇನೆ.

(ಮುಂದು . .

(1196)22-11-2017/7-20/ಕೆಹೆಚ್/ಎಕೆ

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕ, 2017**

**ಪಯಾಲೋಚನಾ ಪ್ರಸ್ತಾವ**

**ಶ್ರೀ ಮಂಜು.ಎ (ರೇಷ್ಮೆ ಮತ್ತು ಪಶುಸಂಗೋಪನೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಮಂಜು.ಎ (ರೇಷ್ಮೆ ಮತ್ತು ಪಶುಸಂಗೋಪನೆ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಳೆದ ಅಧಿವೇಶನದಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಟ್ಟಿದ್ದರು. ತದನಂತರ ಕೇಂದ್ರ ಸರ್ಕಾರದ ಗೃಹ ಸಚಿವರಿಂದ ವಾಪಸ್ಸು ಬಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಡಬೇಕೆಂದು ತಿಳಿಸಿದರು. ಈ ವಿಧೇಯಕವನ್ನು ವಾಪಸ್ಸು ಮಾಡಿದ ಮೇಲೆ, ಇದನ್ನು ವಾಪಸ್ಸು ಪಡೆದು, ಹೊಸದಾಗಿ ವಿಧೇಯಕವನ್ನು ಮಂಡಿಸಿದ್ದೆವು. ಇದರಲ್ಲಿ ಮಂಡಿಸುವಂತಹ ಅಂಶಗಳು ಏನಿದೆಯೆಂದರೆ, "ಕಂಬಳ" ಮತ್ತು "ಹೋರಿಗಳ ಓಟದ ಅಥವಾ ಎತ್ತಿನ ಗಾಡಿ ಓಟದ ಸ್ಪರ್ಧೆ" ನಡೆಸುವುದಕ್ಕೆ ಅನುಮತಿ ಎನ್ನುವುದು ಮಾತ್ರ ಇತ್ತು. ಅದನ್ನು ನೋಟಿಫಿಕೇಷನ್ ಮಾಡಿ ಎಂದು ಕೇಂದ್ರ ಸರ್ಕಾರದವರು ಕೆಲವು ನಿಬಂಧನೆಗಳನ್ನು ಹಾಕಿ ಕಳುಹಿಸಿಕೊಟ್ಟಿದ್ದರು. ಅದನ್ನು ವಾಪಸ್ಸು ಬಂದ ಮೇಲೆ ಅದರ ಪ್ರಕಾರ ಈಗ ನೋಟಿಫಿಕೇಷನ್ ಅನ್ನು ಮಾಡಿ, ಆ ನೋಟಿಫಿಕೇಷನ್ ಏನು ಹೇಳುತ್ತದೆ ಎಂದರೆ, "ಕಂಬಳ" ಯಾರು ನಡೆಸುತ್ತಾರೆ, ಇದನ್ನು ನಡೆಸುವಂತಹವರು ಯಾರು, ಅದನ್ನು ನಡೆಸುವಂತಹವರು ತಹಸೀಲ್ದಾರ್ ಮತ್ತು ಪೊಲೀಸ್ ಇಲಾಖೆ ರವರಿಂದ ಅನುಮತಿಯನ್ನು ಪಡೆದಿರಬೇಕು. ಅದು 37 ಡಿಗ್ರಿ ಉಷ್ಣಾಂಶ ತಾಪಮಾನದೊಳಗೆ ಇರುವಂತಹದ್ದರಲ್ಲಿ ಇದನ್ನು ಓಡಿಸಬೇಕು ಮತ್ತು ಪ್ರಾಣಿಗಳಿಗೆ ಚಾವಟಿಯಿಂದ ಹೊಡೆಯುವಂತಹ ಕೆಲಸವನ್ನು ನಿಲ್ಲಿಸಬೇಕು. ಆ ಪ್ರಾಣಿಗಳಿಗೆ ಯಾವುದೇ ರೀತಿಯ ಮದ್ಯವನ್ನು ಕುಡಿಸಬಾರದು ಎನ್ನುವ ನಿಬಂಧನೆಗಳನ್ನು ಮಾರ್ಪಾಡು ಮಾಡಿ ಎಂದು ಕೇಂದ್ರ ಸರ್ಕಾರದವರು ತಿಳಿಸಿದ್ದರೋ, ಅದನ್ನು ಮಾರ್ಪಾಡು ಮಾಡಿದ್ದೇವೆ. ಒಟ್ಟು ಹನ್ನೆರಡು ಬದಲಾವಣೆಗಳನ್ನು ಮಾಡಿ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಹೀಗಾಗಿ ಕಳೆದ ಬಾರಿಯ ವಿಧೇಯಕಕ್ಕೂ, ಈ ವಿಧೇಯಕಕ್ಕೂ ಯಾವುದೇ ರೀತಿಯ ವ್ಯತ್ಯಾಸಗಳು ಇಲ್ಲ. ನಿಜವಾಗಿಯೂ ಇದು ಆ ಭಾಗದ ಜನರ, ರೈತರ ಒಂದು ಗ್ರಾಮೀಣ ಕ್ರೀಡೆಯಾಗಿರುವುದರಿಂದ, ಅದು "ಕಂಬಳ" ಇರಬಹುದು, "ಹೋರಿಗಳ ಓಟದ ಅಥವಾ ಎತ್ತಿನ ಗಾಡಿ ಓಟದ ಸ್ಪರ್ಧೆ" ಇರಬಹುದು. ಇದನ್ನು ನಿಜವಾಗಿಯೂ ರೈತರು ತಮ್ಮ ಪರಂಪರೆಯಿಂದ ಮಾಡಿಕೊಂಡು ಬಂದಿರುವಂತಹ ಒಂದು ಸ್ಪರ್ಧೆಯಾಗಿದ್ದು, ಇದರಲ್ಲಿ ಬೇರೆ ಯಾವುದೇ ರೀತಿಯ ವ್ಯತ್ಯಾಸಗಳೇನಿಲ್ಲ. ಕಳೆದ ಬಾರಿ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಇದಕ್ಕೆ ದಯಮಾಡಿ ತಾವೆಲ್ಲ ಒಪ್ಪಿಗೆಯನ್ನು ಸೂಚಿಸಿ, ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಡಬೇಕೆಂದು ಹೇಳ ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾಂತ್ರಿಕವಾಗಿ ಸ್ವಾಗತವನ್ನು ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ರಾಷ್ಟ್ರಪತಿಯವರ ಅಂಗೀಕಾರ ಸಹ ದೊರೆತಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಬಹಳ ದಿನಗಳಿಂದ ಇದರ ಬಗ್ಗೆ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಕರಾವಳಿ ಭಾಗದಲ್ಲಿಯೂ ಸಹ "ಕಂಬಳ" ವನ್ನು ಎಳೆಯುವಂತಹ ಒಂದು ಜಾನಪದ ಕ್ರೀಡೆ ಇದ್ದು, ಇದರಿಂದ ಲಕ್ಷಾಂತರ ಜನರು ಖುಷಿ ಪಡುತ್ತಾರೆ. "ಕಂಬಳ"ದ ಕೋಣಗಳನ್ನು ಸಾಕುವಂತಹ ಒಂದು ಪದ್ಧತಿ ಇದ್ದು, ಆ ಕೋಣಗಳನ್ನು ಮನೆಯ ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಸಾಕುತ್ತಾರೆ. ಎಲ್ಲೋ ಯಾರಿಗೋ ಒಂದು ತಪ್ಪು ಕಲ್ಪನೆ ಬಂದು, 'ಜಲ್ಲಿಕಟ್ಟು' ಕ್ರೀಡೆಗೆ ಇದನ್ನು ಹೋಲಿಸಿಕೊಂಡು, ಅದಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದು ಅಧ್ವಾನ ಮಾಡಿದರು. ಹಾಗಾಗಿ ಕರಾವಳಿ ಕರ್ನಾಟಕದ ಎಲ್ಲಾ "ಕಂಬಳ" ಪ್ರಿಯರ ಪರವಾಗಿ, ಇವತ್ತಿನ ದಿವಸ ಕೇಂದ್ರ ಸರ್ಕಾರವು "ಕಂಬಳ" ಕ್ರೀಡೆಗೆ ಪ್ರೋತ್ಸಾಹ ಕೊಡುವಂತಹ ನಿಟ್ಟಿನಲ್ಲಿ ಮತ್ತು ಯಾವುದೇ ರೀತಿಯ ತೊಂದರೆಯಾಗದೇ ನಡೆದುಕೊಂಡು ಬರುವ ರೀತಿಯಲ್ಲಿ ನೋಡಿಕೊಳ್ಳಬೇಕು. "ಹೋರಿಗಳ ಓಟದ ಅಥವಾ ಎತ್ತಿನ ಗಾಡಿ ಓಟದ ಸ್ಪರ್ಧೆ" ಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರದ ನಿರ್ದೇಶನದಂತೆ ಇವತ್ತಿನ ದಿವಸ ಇರುವಂತಹ ವಿಧೇಯಕಕ್ಕೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅದನ್ನು ಅತ್ಯಂತ ಪ್ರೀತಿಯಿಂದ ಸ್ವಾಗತ ಮಾಡುತ್ತಾ, ತಾವೆಲ್ಲ ಮುಂದಿನ ದಿನಗಳಲ್ಲಿ, ಈಗಾಗಲೇ ನಮ್ಮ ಊರುಗಳಲ್ಲಿ "ಕಂಬಳ" ಕ್ರೀಡೆ ಪ್ರಾರಂಭವಾಗಿದೆ. ತಾವೆಲ್ಲರೂ ಬಂದು ಈ

ಕ್ರೀಡೆಯಲ್ಲಿ ಭಾಗವಹಿಸಬೇಕೆಂದು ಆಮಂತ್ರಣವನ್ನು ಕೊಟ್ಟು, ಈ ವಿಧೇಯಕವನ್ನು ತಂದಿರುವುದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ತಿಳಿಸಿ, ಇದನ್ನು ಸ್ವಾಗತ ಮಾಡುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಈಗಾಗಲೇ “ಕಂಬಳ” ಕ್ರೀಡೆ ಪ್ರಾರಂಭವಾಗಿದೆ. ಹಾಗಾಗಿ ಈ ವಿಧೇಯಕವನ್ನು ಆಧ್ಯಾದೇಶ ಮುಖಾಂತರ ತಂದಿದ್ದಾರೆ. ಇದನ್ನು ಸ್ವಾಗತ ಮಾಡುತ್ತೇನೆ ಮತ್ತು ನನ್ನದೊಂದು ವಿನಂತಿಯೇನೆಂದರೆ, “ಕಂಬಳ” ಕ್ಕೆ ತಾವೆಲ್ಲರೂ ಬಂದು ನೋಡಬೇಕು. ತಮಗೆಲ್ಲರಿಗೂ  ಆಹ್ವಾನವನ್ನು ಕೊಟ್ಟು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷವು ಈ ವಿಧೇಯಕವನ್ನು ತುಂಬು ಹೃದಯದಿಂದ ಸ್ವಾಗತವನ್ನು ಮಾಡುತ್ತದೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕಾಯಿದೆಯಲ್ಲಿ ಕಲಂ 3ರ (2) (1)ನೇ ಉಪಪ್ರಕರಣದಲ್ಲಿ ಸರ್ಕಾರವು ಕೊಟ್ಟಿರುವಂತಹ ಸ್ಪಷ್ಟೀಕರಣ ಸಮಂಜಸವಾಗಿಲ್ಲ. ಅದರಲ್ಲಿ ಏನಿದೆಯೆಂದರೆ, “ಕಲಂ 3ರ (2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, “ಕಂಬಳ” ಅಥವಾ ಸಂದರ್ಭಾನುಸಾರವಾಗಿ “ಹೋರಿಗಳ ಓಟದ ಅಥವಾ ಎತ್ತಿನ ಗಾಡಿ ಓಟದ ಸ್ಪರ್ಧೆ” ನಡೆಸುವುದಕ್ಕೆ ಬಳಸುವ ಪ್ರಾಣಿಗಳ ಉಸ್ತುವಾರಿ ಹೊಂದಿರುವ ವ್ಯಕ್ತಿಯು ಆ ಪ್ರಾಣಿಗಳಿಗೆ ಅನಗತ್ಯ ನೋವು ಅಥವಾ ಸಂಕಟವನ್ನು ಉಂಟು ಮಾಡುವುದಿಲ್ಲವೆಂಬ ಷರತ್ತಿಗೆ ಒಳಪಟ್ಟು ಎಂದು ಇದೆ. ಇದು ಹೇಗಾಗುತ್ತದೆ? ಒಂದು ಚಾವಟಿ ಏಟು ಕೊಟ್ಟರೂ ಸಹ ಅವನ ಮೇಲೆ ಪ್ರಕರಣ ದಾಖಲಾಗುತ್ತದೆ. ಜೋರಾಗಿ ಎತ್ತನ್ನು ತೀವಿದರೂ ಸಹ ಅವನ ಮೇಲೆ ಪ್ರಕರಣ ದಾಖಲಾಗುತ್ತದೆ. ಇದರ ಬಗ್ಗೆ parameters ಏನು ಎಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಇದರಿಂದ ದುರುಪಯೋಗ ಪಡಿಸಿಕೊಳ್ಳುವಂತಹ ಅವಕಾಶಗಳು ಜಾಸ್ತಿ ಇರುತ್ತದೆ ಎಂಬ ಅಂಶವು ಪ್ರಮುಖವಾಗಿದೆ.

ಎರಡನೆಯದು, ಬಹುತೇಕವಾಗಿ ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನೆ ಸಚಿವರಿಗೆಲ್ಲ ಇದರ ಬಗ್ಗೆ ತಿಳಿದಿದೆ. “ಕಂಬಳ” ಮತ್ತು “ಹೋರಿಗಳ ಓಟದ ಅಥವಾ ಎತ್ತಿನ ಗಾಡಿ ಓಟದ ಸ್ಪರ್ಧೆ” ಇದರ ಜೊತೆಗೆ “ಹಾಲು ಕರೆಯುವ ಸ್ಪರ್ಧೆ” ಈ ರೀತಿಯ ಇನ್ನೊಂದು ಪ್ರಕರಣವನ್ನು ನೋಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ಸ್ಪರ್ಧೆಗೆ ರಾಜ್ಯ ಮಟ್ಟದ ಪ್ರಶಸ್ತಿ ಕೊಡುತ್ತಾರೆ. ಇವರೇ ಪ್ರಶಸ್ತಿಗಳನ್ನು ಕೊಡುತ್ತಾರೆ. “ಹಾಲು ಕರೆಯುವ ಸ್ಪರ್ಧೆ”ಗೆ ಏನು ಮಾಡುತ್ತಾರೆಂದರೆ, ಮಾನ್ಯ ಸದಸ್ಯರೊಬ್ಬರು ಹೋರಿಗಳಿಗೆ ಮದ್ಯಪಾನವನ್ನು ಮಾಡಿಸುತ್ತಾರೆಂದು ಹೇಳಿದರು. ಈ ಪ್ರಕರಣದಲ್ಲೂ ಸಹ ಹಾಲನ್ನು ಜಾಸ್ತಿ ಕರೆಯಬೇಕೆಂದು ಹೇಳಿ, ಅವುಗಳಿಗೆ ಇಂಜೆಕ್ಟ್ ಮಾಡಿ 20 ರಿಂದ 22 ಲೀಟರ್ ಹಾಲನ್ನು ಕರೆದು, ಅವುಗಳಿಗೆ ಹಿಂಸೆ ಕೊಟ್ಟು ಮಾಡುವಂತಹ ಸ್ಪರ್ಧೆಯನ್ನು ನೋಡಿದ್ದೇವೆ. ಬಹುತೇಕ ಸಂದರ್ಭಗಳಲ್ಲಿ “ಹಾಲು ಕರೆಯುವ ಸ್ಪರ್ಧೆ” ಯಲ್ಲಿ ಹಸುಗಳಿಗೆ ಹೆಚ್ಚು ಒತ್ತಡವನ್ನು ಹಾಕಿದ್ದಾರೆ ಮತ್ತು ಅವುಗಳ ಕೆಚ್ಚಲಿಗೆ pressure mould ಮಾಡಿ ಹಾಲನ್ನು ಕರೆಯುತ್ತಾರೆ. ಈ ರೀತಿ ಮಾಡುವುದರಿಂದ ಎಷ್ಟೋ ಬಾರಿ ಹಾಲು ಕರೆಯುವಂತಹ ಸಂದರ್ಭದಲ್ಲಿ ಕೆಚ್ಚಲ ಮೇಲೆ ಹೆಚ್ಚು ಒತ್ತಡ ಉಂಟಾಗಿ ರಕ್ತ ಬರುತ್ತದೆ. ಈ ರೀತಿಯಾಗುವಂತಹದ್ದನ್ನು ಸಹ ತಡೆಯಬೇಕಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ 'ತರಿ ಬಿಡುವುದು' ಎಂದು ಹೇಳುತ್ತಾರೆ. ಕೆಲವು ಆಕಳುಗಳು ಸರಿಯಾಗಿ ಹಾಲನ್ನು ಕರೆಯುವಾಗ ತರಿ ಬಿಡಬೇಕೆಂದು ಈ ರೀತಿ ಮಾಡುತ್ತಾರೆ. ಆದರೆ ಅದರಿಂದ ಆಕಳಿಗೆ ತೊಂದರೆ ಇಲ್ಲ. ಎಷ್ಟು ಹಾಲು ಬರಬೇಕೋ, ಅಷ್ಟು ಬರುತ್ತದೆ. ಇದರಿಂದ ರಕ್ತ ಏನು ಬರುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಮೇಶ್ ಬಾಬು**:- ಮಾನ್ಯ ಸದಸ್ಯರೇ ತಾವು ಹೇಳುತ್ತಿರುವುದು ಬೇರೆ ವಿಷಯ. ನೀವು ಸ್ವಾಭಾವಿಕವಾಗಿ ಹಸುಗಳ ಸಾಕಾಣಿಕೆಯನ್ನು ಮಾಡಿದ್ದೀರಿ, ನೀವು ಆ ರೀತಿ ಏನು ಮಾಡುವುದಿಲ್ಲ. ರಾಜ್ಯ ಮಟ್ಟದಲ್ಲಿ "ಹಾಲು ಕರೆಯುವ ಸ್ಪರ್ಧೆ"ಯನ್ನು ಮಾಡುತ್ತಾರೆ. ಇದು ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಮೈಸೂರು ಕಾಂಗ್ರೆಸ್ ಪಕ್ಷದ ಮುಖಾಂತರ ಮೈಸೂರಿನ ಮಾಜಿ ಮೇಯರ್‌ರೊಬ್ಬರು ನಿರಂತರವಾಗಿ 3-4 ಬಾರಿ ಪ್ರಶಸ್ತಿಯನ್ನು ತೆಗೆದುಕೊಂಡಿದ್ದಾರೆ. ಮೈಸೂರಿನಲ್ಲಿ ಈ ರೀತಿಯಾಗಿರುವಂತಹದ್ದು, ಒಂದೇ ಸಲಕ್ಕೆ 20 ಲೀಟರ್, 22 ಲೀಟರ್ ಹಾಲನ್ನು ಕರೆದಿದ್ದಾರೆ, ಈ ವಿಷಯ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರಿಗೂ ತಿಳಿಸಿದೆ. ಇಂತಹ ಸಂದರ್ಭಗಳಲ್ಲಿ ಆಕಳುಗಳಿಗೆ ಹಿಂಸೆಯಾಗುತ್ತದೆಯಲ್ಲವೇ. ಆದ್ದರಿಂದ ಅದನ್ನು ತಡೆಯುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆ ಕಾಯಿದೆಯಲ್ಲಿ ಇದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸಿ, ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಈ "ಕಂಬಳ" ದಲ್ಲಿ ಮೊದಲು ಒಂದು ರೀತಿಯ ವಾತಾವರಣವಿತ್ತು. ಓಡುವ ಕೋಣಗಳಿಗೆ ಹೊಡೆಯುವುದು, ಆ ಮೂಲಕ ಕೋಣಗಳನ್ನು ಗಟ್ಟಿ ಮಾಡಿಸುವ ಒಂದು ಪದ್ಧತಿ ಇತ್ತು. ಈ 'ಪೇಟಾ' ಎನ್ನುವ ಸಾರ್ವಜನಿಕ ಹಿತಾಸಕ್ತಿಯ ಸಂಸ್ಥೆಯು ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಲಯದಲ್ಲಿ ದಾವೆ ಹೂಡಿ, ಇದರ ಬಗ್ಗೆ ಒಂದಿಷ್ಟು ನಿಬಂಧನೆಗಳನ್ನು ಹಾಕಿ, ತಹಸೀಲ್ದಾರ್ ಸಮಕ್ಷಮದಲ್ಲಿ ಕೋಣಗಳನ್ನು ಓಡಿಸಬೇಕೆಂದು ಹೇಳಿ ನಿಯಮಗಳನ್ನು ತಂದರು, ಇಷ್ಟಾದರೂ ಕೂಡ ಈ *P.E.T.A. (People for the Ethical Treatment of Animals)* ದವರು *High Court, Supreme Court* ಗೆ ಹೋಗಿದ್ದಾರೆ, ಅದಕ್ಕೋಸ್ಕರ ಕೇಂದ್ರ ಸರ್ಕಾರದವರು ಕೆಲವೊಂದು ಷರತ್ತುಗಳನ್ನು ಹಾಕಿ, ನಿಯಮಗಳನ್ನು ಮಾಡಿದೆ, ಈಗಿರುವಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ನಡೆಯುವಂತಹ "ಕಂಬಳ" ದಲ್ಲಿ ಯಾರು ಸಹ ಹೊಡೆಯುವುದಿಲ್ಲ. ಆ ಕೋಣಕ್ಕೆ ಕೋಲನ್ನು ತೋರಿಸುವುದನ್ನು ಬಿಟ್ಟರೆ ಹೊಡೆಯುವುದಿಲ್ಲ. ಅಷ್ಟೊಂದು ಅಹಿಂಸಾತ್ಮಕವಾಗಿ ನಡೆಯುತ್ತದೆ. ಹಾಗಾಗಿ ವ್ಯವಸ್ಥೆಗಳೇನಿವೆ, ನೀವು ಏನಾದರೂ ಹೊಡೆಯಬಾರದು, ನಿಯಮಗಳನ್ನು ಬದಲಾವಣೆ ಮಾಡಬೇಕೆಂದು ಹೇಳಿದರೆ, ಇನ್ನು ಹೆಚ್ಚು ಗೊಂದಲಗಳು ಉಂಟಾಗುವುದಕ್ಕಿಂತ ಕಾನೂನಿನ ಜೊತೆಯಲ್ಲಿ ಏನು ನಿಬಂಧನೆಗಳನ್ನು ತಂದಿದ್ದಾರೆ, ಅದನ್ನು ಯಥಾವತ್ತಾಗಿ ಒಪ್ಪಿ ಅನುಮೋದನೆ ಕೊಡುವುದು ಸರಿ ಎಂದು ನನಗನಿಸುತ್ತದೆ.

**ಶ್ರೀ ಮಂಜು.ಎ**:- ಮಾನ್ಯ ಸಭಾಪತಿಯವರೇ, ಕಲಂ 3 (2) ಪ್ರಕರಣದ (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಬಾಬು ರವರು ಏನು ಓದಿದರು. ಮೊದಲು ಹಳೆಯ ವಿಧೇಯಕದಲ್ಲಿ ಸೂಚಿಸಿರಲಿಲ್ಲ. ಅದನ್ನು ನಿರ್ದಿಷ್ಟವಾಗಿ ಕೇಂದ್ರ ಸರ್ಕಾರದವರು ಈ "ಕಂಬಳ" ವನ್ನು ಯಾರು ನಡೆಸುತ್ತಾರೆ ಎನ್ನುವುದನ್ನು ನೋಟಿಫೈ ಮಾಡಬೇಕು ಮತ್ತು ಖಾತರಿಪಡಿಸಿಕೊಳ್ಳಬೇಕೆಂದು ಹೇಳಿದರು. ಆದ್ದರಿಂದ ಅದನ್ನು ಮಾಡದೇ ಇದ್ದರೆ ಕೊಡುವುದಿಲ್ಲವೆಂದು ಹೇಳಿದ್ದರು. ಈಗಾಗಲೇ ತಮಗೆ ಗೊತ್ತಿರುವ ಹಾಗೆ 12 ಷರತ್ತುಗಳನ್ನು ಹಾಕಿ, ಯಾವುದೇ ರೀತಿಯ ತೊಂದರೆಯಾಗದೇ ಇರುವಂತಹ ರೀತಿಯಲ್ಲಿ ಮಾಡಿದ್ದೇವೆ. ಬಹುಶಃ ಕೇಂದ್ರ ಸರ್ಕಾರದವರು ಕೊಟ್ಟಂತಹ ನಿರ್ದೇಶನವನ್ನು ಪಾಲನೆ ಮಾಡದೇ ಇದ್ದರೆ, ಆ ಪೇಟಾದವರು ಯಾರು ಸಹ ಎತ್ತುಗಳನ್ನೂ ಸಾಕಿಲ್ಲ, ದನಗಳನ್ನೂ ಸಾಕಿಲ್ಲ, ಹೋರಿಗಳನ್ನೂ ಸಾಕಿಲ್ಲ. ಕಲಗಚ್ಚು ಕುಡಿಸಿಲ್ಲ, ಅವರಿಗೆ ಏನೂ ಗೊತ್ತಿಲ್ಲ. ಆ ಕಷ್ಟ ಗೊತ್ತಿರುವುದು ನಮಗೆ ಮಾತ್ರ. ಆದರೆ, ಅವರು ರಕ್ಷಣೆ ಮಾಡಿ ಹಾಲನ್ನು ಕುಡಿಯುತ್ತಿದ್ದಾರೆ, ಕಂಬಳ ಕ್ರೀಡೆಯನ್ನು ನೋಡಿ ಅವರು ಮಜಾ ತೆಗೆದುಕೊಳ್ಳುತ್ತಿದ್ದಾರೆ. ಬಹುಶಃ ಈ ಕ್ರೀಡೆಯು ನಮ್ಮ ದೇಶಕ್ಕೆ ಬಂದಿರುವಂತಹದ್ದು, ಈಗ "ಹಾಲು ಕರೆಯುವ ಸ್ಪರ್ಧೆ" ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು, ಅದಕ್ಕೂ-ಇದಕ್ಕೂ ಸಂಬಂಧ ಕಲ್ಪಿಸಬಾರದು, ಬಹುಶಃ ಅವರು ನಮ್ಮ ಇಲಾಖೆಗೆ ಸಂಬಂಧಪಟ್ಟ ವಿಷಯಗಳನ್ನೇ ಹೇಳಿದ್ದಾರೆ, ಇದರ ಬಗ್ಗೆ ಪರಿಶೀಲಿಸುತ್ತೇನೆ. ಬಹುಶಃ ಈ ವಿಧೇಯಕವನ್ನು ಈಗ ತಿದ್ದುಪಡಿ ಮಾಡಿರುವುದರಿಂದ ನಿಜವಾಗಿಯೂ ಕೂಡ ಇದನ್ನು

ನಡೆಸುವಂತಹವರಿಗೆ ಪೂರಕವಾಗಿ ಅನುಕೂಲವಾಗುತ್ತದೆ. ಅದಕ್ಕಾಗಿ ಈ ವಿಧೇಯಕಕ್ಕೆ ಅನುಮೋದನೆ ದೊರಕಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಮುಂದು)

(1197)22-11-2017/7:30/ಎಸ್‌ಪಿಆರ್/ಆರ್‌ಎನ್

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**
**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 8 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 8 ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**
**(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**
(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎ.ಮಂಜು (ಪಶುಸಂಗೋಪನಾ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ವಿಧೇಯಕ, 2017 ಅನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ದಯಮಾಡಿ ನಾಳೆ ಬೆಳಗ್ಗೆ ವಿಧೇಯಕವನ್ನು ತೆಗೆದುಕೊಳ್ಳಿ, ಈಗ ಬೇಡ. ಈಗ ಆಗುವುದೇ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಬೇಕು. ಲಕ್ಷಾನು ಸಂಖ್ಯೆಯ ಸರ್ಕಾರಿ ನೌಕರರ ಜೀವನ್ಮರಣದ ಪ್ರಶ್ನೆಯಾಗಿದೆ. ತರಾತುರಿಯಲ್ಲಿ ಪ್ರಸ್ತುತ ವಿಧೇಯಕವನ್ನು ನಾವುಗಳು ಅಂಗೀಕಾರ ಮಾಡುವುದಿಲ್ಲ. ನಾಳೆಯ ದಿನ ಈ ವಿಧೇಯಕವನ್ನು ತೆಗೆದುಕೊಳ್ಳಿ. ಈ ಬಗ್ಗೆ ಚರ್ಚೆಯನ್ನು ಮಾಡಲು ಸಮಯಾವಕಾಶವನ್ನು ನೀಡಿ.

**(ಗೊಂದಲ)**

ಚರ್ಚೆಯನ್ನು ಮಾಡಲು ಸಮಯ ಬೇಕು. ನಾಳೆಯ ಬೆಳಗ್ಗೆ ಇದನ್ನು ತೆಗೆದುಕೊಳ್ಳಿ. ನಾವು ಇದನ್ನು ಒಪ್ಪುವುದಿಲ್ಲ. ಈ ವಿಚಾರದಲ್ಲಿ ನಾವು ಚರ್ಚೆಯನ್ನು ಮಾಡಬೇಕು. ನೋಡಿ ಜಯಚಂದ್ರರವರೇ..

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕವನ್ನು ನಾಳೆಗೆ ತೆಗೆದುಕೊಳ್ಳಿ.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕವನ್ನು ನಾಳೆಗೆ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ನಂತರದಲ್ಲಿ ಈ ವಿಧೇಯಕವನ್ನು ತೆಗೆದುಕೊಳ್ಳೋಣ. ಈಗ ಬೇಡಿ

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಜಯಚಂದ್ರ ರವರೇ ಪ್ರಸ್ತುತ ವಿಧೇಯಕವನ್ನು ನಾಳೆ ಬೆಳಗ್ಗೆ ತೆಗೆದುಕೊಳ್ಳಿ. ಈಗ ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕವನ್ನು ನಾಳೆ ಬೆಳಗ್ಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರವು ಒಪ್ಪಿಕೊಂಡಿದೆ.

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ನಾಳೆ ಪ್ರಸ್ತುತ ವಿಧೇಯಕವನ್ನು ತೆಗೆದುಕೊಳ್ಳಲು ನಮ್ಮ ಸಹಮತ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ನಾಳೆ ಬೆಳಗ್ಗೆ ಪ್ರಸ್ತುತ ವಿಧೇಯಕವನ್ನು ಮೊದಲಿಗೆ ತೆಗೆದುಕೊಳ್ಳಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಅಧಿವೇಶನದಲ್ಲಿ ಅನೇಕ ವಿಷಯಗಳನ್ನು ನಿಯಮ 330 ರಡಿ ಮತ್ತು ಗಮನ ಸೆಳೆಯುವ ಸೂಚನೆಗಳಡಿ ಕಳುಹಿಸಲಾಗಿದೆ. ಆ ಪೈಕಿ ಒಂದು ವಿಷಯವು 10 ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಿದ್ದಾಗಿದೆ. ನಾನು ಕಳುಹಿಸಿರುವ ಒಂದೇ ಒಂದು ವಿಷಯವೂ ಸಹ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರಲಿಲ್ಲ ಎಂದರೆ ಹೇಗೆ? ನಾವು ಏನು ಮಾಡಬೇಕು. ಬಹಳ ಪ್ರಮುಖವಾದಂತಹ 10 ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ವಿಷಯಗಳು ಬರುವುದಿಲ್ಲ ಎಂದರೆ, ನಾವು ಏನು ಹೇಳಬೇಕು. ರಾಜ್ಯದ ಹಿತದೃಷ್ಟಿಯಿಂದ ನಾವು ವಿಷಯಗಳನ್ನು ಕಳುಹಿಸಿದ್ದೇವೆ ಹೊರತು ವೈಯಕ್ತಿಕ ದ್ವೇಷದಿಂದಲ್ಲ. ಅದು ಯಾವ ಕಾಲಕ್ಕೆ ಸಂಬಂಧಪಟ್ಟಿದ್ದಾಗಿದೆ ಎಂಬುದನ್ನು ಆಮೇಲೆ ಹೇಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ನಾಲ್ಕಾರು ಸೂಚನೆಗಳನ್ನು ಕೊಟ್ಟಿದ್ದೇವೆ. ನಮ್ಮ ಶಿಕ್ಷಕರ ವೇತನ, ಸಂಬಳವನ್ನು ಹಾಗೂ ನಿವೃತ್ತಿಯ ವೇತನವನ್ನೂ ಸಹ ಕಡಿತಗೊಳಿಸುತ್ತಿದ್ದಾರೆ. ಕಾಲಮಿತಿ ಸೌಲಭ್ಯಗಳ ಕುರಿತಾದ ಸಮಸ್ಯೆಗಳಿಂದ ರಾಜ್ಯದ ಶಿಕ್ಷಕರು ನಲುಗಿ ಹೋಗುತ್ತಿದ್ದಾರೆ. ಆದ್ದರಿಂದ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಆದ್ದರಿಂದ ಅದರ ಬಗ್ಗೆ ತತಕ್ಷಣ ಸದನದಲ್ಲಿ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶವನ್ನು ನೀಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿ ಸಲ್ಲಿಸಿರುವ ಪ್ರಸ್ತಾವನೆಗಳ ವಿಚಾರ ಹೀಗಾದರೆ, ನಾನು ಕೇಳಿರುವ 22 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ ಕೇವಲ 6 ಕ್ಕೆ ಮಾತ್ರವೇ ಉತ್ತರ ದೊರೆತಿದೆ. ಪರಿಸ್ಥಿತಿ ಹೀಗಾದರೆ, ನಾನು ಏನು ಮಾಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರದ್ದೂ ಅದೇ ಕಥೆಯಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳಾದ ಸೋಮಣ್ಣ, ಶ್ರೀ ಕೋಟ ಶ್ರೀನಿವಾಸ ಪೂಜಾರಿ ಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನೀವು ಮಂತ್ರಿಗಳಿಗೆ ಚಾಟಿಯನ್ನು ಬೀಸಬೇಕು. ಯಾವ ಕಾರಣಕ್ಕಾಗಿ ಅವರುಗಳು ಉತ್ತರಗಳನ್ನು ಕೊಡುವುದಿಲ್ಲ. ನಾವು ಏತಕ್ಕಾಗಿ ಸದನಕ್ಕೆ ಬರಬೇಕು?

**ಸಭಾಪತಿಯವರು:-** ಮಾನ್ಯ ಶರವಣರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾವು ಯಾವ ಕಾರಣಕ್ಕಾಗಿ ಪ್ರಶ್ನೆಗಳನ್ನು ಕೇಳುತ್ತೇವೆ. ಪರಿಸ್ಥಿತಿ ಹೀಗೆಯೇ ಮುಂದುವರೆಯುತ್ತಿದ್ದರೆ, ನೀವು ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಮನವಿ ಏನೆಂದರೆ ನಾನು ಪ್ರಸ್ತಾಪಿಸಿರುವ 10 ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ವಿಷಯ ನಾಳೆಯ ಕಾರ್ಯಕಲಾಪದಲ್ಲಿ ಬರುವ ಹಾಗೆ ಮಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ ಮತ್ತು ಮಾನ್ಯ ಪ್ರತಾಪಚಂದ್ರ ಶೆಟ್ಟಿ ಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನ್ನ ವಿಶೇಷ ಪ್ರಶ್ನೆ ಏನೆಂದರೆ, . .

**ಸಭಾಪತಿಯವರು:–** ತಾವು ದಯವಿಟ್ಟು ಕುಳಿತುಕೊಳ್ಳಿ ನಾನು ನಿಮ್ಮನ್ನು ಕೇಳುತ್ತೇನೆ. ಸ್ವಲ್ಪ ತಾಳಿ.

**(ಗೊಂದಲ)**

ಮಾನ್ಯ ಉಗ್ರಪ್ಪನವರೇ, ತಮಗೆ ಗೊತ್ತಿರುವಂತೆ ಪ್ರಸ್ತುತ ಅಧಿವೇಶನದಲ್ಲಿ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಎಲ್ಲಾ ಪಕ್ಷಗಳ ಸಭಾನಾಯಕರುಗಳ ಜೊತೆ ಸಭೆಯನ್ನು ಮಾಡಿ ಯಾವ ರೀತಿಯಲ್ಲಿ ದಿನನಿತ್ಯದ ಕಾರ್ಯಕಲಾಪಗಳನ್ನು ನಡೆಸಬೇಕೆನ್ನುವಂತಹ ವಿಚಾರಗಳನ್ನು ತಿಳಿಸಲಾಗಿದೆ. ಅ ಪ್ರಕಾರದಲ್ಲಿಯೇ ನಾವು ಸದನವನ್ನು ನಡೆಸಿಕೊಂಡು ಬಂದಿದ್ದೇವೆ. ಲಭ್ಯವಿರುವಂತಹ ಸಮಯದಲ್ಲಿ ಎಷ್ಟು ಸದಸ್ಯರಿಗೆ ಯಾವ ಯಾವ ವಿಷಯಕ್ಕೆ ಮಾತನಾಡಲು ಅವಕಾಶವನ್ನು ಕೊಡಬೇಕು ಅದೆಲ್ಲವನ್ನೂ ಕೊಡುತ್ತಾ ಬಂದಿದ್ದೇವೆ. ಇನ್ನು ಲಭ್ಯವಿರುವ ಎರಡು ದಿನಗಳ ಕಾಲಾವಕಾಶದಲ್ಲಿ ಯಾವ ವಿಷಯವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ ಅದನ್ನು ನಾವು ಮಾಡುತ್ತೇವೆ. ಆದರೆ ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳ ಸಹಕಾರ ಬಹಳ ಮುಖ್ಯವಾದುದು. ನನ್ನ ಮಾತನ್ನು ದಯವಿಟ್ಟು ಕೇಳಿ. ಇವತ್ತಿನ ದಿವಸ ಒಂದು ವಿಧೇಯಕಕ್ಕೆ ಸಂಬಂಧಪಟ್ಟಂತೆ ನಾಲ್ಕು ಗಂಟೆಗಳ ಅವಧಿಯವರೆಗೆ ಚರ್ಚೆಯನ್ನು ನಾವು ಮಾಡಿದ್ದೇವೆ. ಅದು ಸರಿಯಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ, ಒಂದು ವಿಷಯದ ಬಗ್ಗೆ ನಾಲ್ಕು ಗಂಟೆಗಳ ಅವಧಿಯವರೆಗೆ ಚರ್ಚೆಯನ್ನು ಮಾಡಿದ್ದೇವೆ. ಇದು ಬಹಳ ಮಹತ್ವವುಳ್ಳ ಕಾಯ್ದೆಯಾಗಿದೆ. ಇದರ ಬಗ್ಗೆ ಮಾತನಾಡಲು ಎಲ್ಲಾ ಸದಸ್ಯರುಗಳಿಗೆ ಅವಕಾಶವನ್ನು ನೀಡಬೇಕು, ಎಲ್ಲರ ಅಭಿಪ್ರಾಯ ಇಲ್ಲಿ ಸ್ಪಷ್ಟವಾಗಬೇಕು ಎನ್ನುವ ದೃಷ್ಟಿಯಿಂದ ನಾನು ಅವಕಾಶವನ್ನು ನೀಡಿದ್ದೇನೆ. ನಿನ್ನೆಯ ದಿವಸ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಯ ವಿಷಯವಾಗಿ ಚರ್ಚೆಯನ್ನು ಮಾಡಬೇಕು ಎನ್ನುವ ಪ್ರಸ್ತಾವ ಬಂದಾಗ ಸುಮಾರು ಮೂರು ಗಂಟೆಗಳ ಕಾಲ ಅವಕಾಶವನ್ನು ನೀಡೋಣ ಎಂದುಕೊಂಡಿದ್ದೆವು. ಆದರೆ ಅದೇ ವಿಷಯದ ಬಗ್ಗೆ 5 ಗಂಟೆ 45 ನಿಮಿಷಗಳ ಕಾಲ ಚರ್ಚೆಗೆ ಅವಕಾಶವನ್ನು ನೀಡಲಾಗಿದೆ. ಆದರೂ ಸಹ ಈ ವಿಷಯದ ಮೇಲಿನ ಚರ್ಚೆಯು ಇನ್ನೂ ಪೂರ್ಣಗೊಂಡಿರುವುದಿಲ್ಲ. ಈಗ ಅದಕ್ಕೂ ಸಹ ಅವಕಾಶವನ್ನು ಕೊಡಬೇಕು. ಆದ್ದರಿಂದ ತಾವು ಸದಸ್ಯರುಗಳೆಲ್ಲರೂ ತಮ್ಮ ಸಹಕಾರವನ್ನು ನೀಡಿದರೆ ಸದರಿ ವಿಷಯದ ಬಗ್ಗೆ ಚರ್ಚೆಯನ್ನು ನಾವು ಮುಂದುವರೆಸಬಹುದು. ಒಂಭತ್ತು ಗಂಟೆಯವರೆಗೆ ಚರ್ಚೆಯನ್ನು ಮಾಡೋಣ. ದಯವಿಟ್ಟು ಸದರಿ ವಿಷಯದ ಮೇಲಿನ ಚರ್ಚೆಯನ್ನು ಪೂರ್ಣಗೊಳಿಸೋಣ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಹೇಳುತ್ತಿರುವ ವಿಷಯಕ್ಕೆ ನನ್ನ ಸಹಮತವಿದೆ. ಆದರೆ ನನ್ನ ಪ್ರಶ್ನೆ ಏನೆಂದರೆ, ಪ್ರಶ್ನೆಗಳು ಬಂದಾಗ ಅದಕ್ಕೆ ಸರ್ಕಾರವು ಉತ್ತರವನ್ನು ಕೊಡಬೇಕು. ಇದು ಮೊದಲನೆ ವಿಚಾರ. ನನ್ನ ಎರಡನೇ ವಿಚಾರವೇನೆಂದರೆ, ನಿಯಮ 330 ರ ಅಡಿಯಲ್ಲಿ ಬೇರೆ ಸದಸ್ಯರುಗಳು ಸಲ್ಲಿಸಿರುವ ಪ್ರಸ್ತಾಪಗಳು ಕೂಡ ಚರ್ಚೆಗೆ ಬರುತ್ತವೆ. ಆದರೆ ನಾನು ಸಲ್ಲಿಸಿರುವಂತಹ ಪ್ರಸ್ತಾವನೆಯಲ್ಲಿ ರಾಜ್ಯಕ್ಕೆ 10 ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ವಿಷಯದಲ್ಲಿ ನಷ್ಟವಾಗಿದೆ ಎಂದು ಪ್ರತಿಪಾದಿಸಿದ್ದೇನೆ. ಇಂತಹ ದೊಡ್ಡ ವಿಷಯವು ಏಕೆ ಚರ್ಚೆಗೆ ಬರುತ್ತಿಲ್ಲ. ಇದರಲ್ಲಿ ಯಾವ ರೀತಿಯ ಸಮಸ್ಯೆಯಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಮಾನ್ಯ ಸದಸ್ಯರು. . .

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಪ್ರಸ್ತಾಪಿಸಿರುವ ವಿಷಯವನ್ನು ನಾಳೆಯದ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅಳವಡಿಸಿ. ಹೋಗಲಿ ಬಿಡಿ, ಅದರ ಬಗ್ಗೆ ಚರ್ಚೆಯನ್ನು ಮಾಡಲಿ.

**ಸಭಾಪತಿಯವರು:-** ಏನು ಇದು?

**ಶ್ರೀ ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಹಾಕಿಕೊಟ್ಟಿರುವ ವಿಷಯಗಳಿಗೆ ವ್ಯವಸ್ಥೆ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿ ರವರೇ ದಯವಿಟ್ಟು ಕುಳಿತುಕೊಳ್ಳಿ. ರಾತ್ರಿ 9 ಗಂಟೆಯವರೆಗೆ ಉತ್ತರ ಕರ್ನಾಟಕದ ಅಭಿವೃದ್ಧಿ ವಿಷಯದ ಚರ್ಚೆಯನ್ನು ಮುಂದುವರೆಸೋಣ. ದಯಮಾಡಿ ಸದಸ್ಯರುಗಳೆಲ್ಲರೂ ಸಹಕಾರವನ್ನು ನೀಡಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಸದನದ ಕಲಾಪವನ್ನು ನಾಳೆ ಬೆಳಗ್ಗೆ 9 ಅಥವಾ 10 ಗಂಟೆಗೆ ಪ್ರಾರಂಭಿಸಿ.

**ಸಭಾಪತಿಯವರು:-** ಬೆಳಗಾವಿ ಅಧಿವೇಶನದಲ್ಲಿ ಬೆಳಗ್ಗೆ 9 ಅಥವಾ 10 ಗಂಟೆಗೆ ಅಧಿವೇಶವನವನ್ನು ಕರೆಯುವುದಕ್ಕೆ ಆಗುವುದಿಲ್ಲ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯ ಸದನವನ್ನು ಬೆಳಗ್ಗೆ 10 ಗಂಟೆಗೆ ಪ್ರಾರಂಭಿಸುತ್ತಾರೆ. ಅದೇ ರೀತಿಯಾಗಿ ನೀವೂ ಸಹ ನಮ್ಮ ಸದನವನ್ನು ಬೆಳಗ್ಗೆ 10 ಗಂಟೆಗೆ ಪ್ರಾರಂಭಿಸಿ.

**ಸಭಾಪತಿಯವರು:-** ದಯವಿಟ್ಟು ರಾತ್ರಿ 9 ಗಂಟೆಯವರೆಗೆ ಸದನವನ್ನು ನಡೆಸೋಣ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಇನ್ನೂ ಒಂದು ವಾರ ಅಧಿವೇಶನವನ್ನು ವಿಸ್ತರಿಸಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ನಾವು ಸದಸ್ಯರುಗಳೆಲ್ಲರೂ ಮಾತನಾಡಿದ್ದೇವೆ, ಈ ಬಗ್ಗೆ ನಾಳೆ ಮಧ್ಯಾಹ್ನದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ಹಾಗೂ ಧನವಿನಿಯೋಗ ವಿಧೇಯಕವನ್ನು ಅವರು ಮಂಡಿಸಲಿದ್ದಾರೆ. ಹೀಗಾಗಿ ಇವತ್ತಿನ ದಿವಸವೇ ಉತ್ತರ ಕರ್ನಾಟಕದ ಬಗೆಗಿನ ಚರ್ಚೆಯನ್ನು ನಾವು ಪೂರ್ಣಗೊಳಿಸ ಬೇಕಾಗಿದೆ. ನಾಳೆ ಬೆಳಗ್ಗೆ ವಿಧೇಯಕವನ್ನು ತೆಗೆದುಕೊಳ್ಳಬೇಕಾಗಿದೆ. ಇದಲ್ಲದೇ ಇನ್ನೂ ಮೂರು ವಿಧೇಯಕಗಳು ಬಂದಿವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ಕಾರದ ಮುಖ್ಯ ಸಚೇತಕರು ತಿಳಿಸಿರುವಂತೆ ವಿಧೇಯಕಗಳನ್ನು ಮುಗಿಸಿಕೊಡೋಣ. ಆದರೆ ನನ್ನ ಪ್ರಶ್ನೆ ಅದಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳೆಲ್ಲರೂ ದಯಮಾಡಿ ಸಹಕರಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷದ ಅವಕಾಶವನ್ನು ನೀಡಿ. ಈ ದೇಶದ ನಿಯಮಾವಳಿಗಳ ಪ್ರಕಾರ ಒಂದು ದಿನದಲ್ಲಿ ಆರು ಗಂಟೆಗಳ ಕಾಲ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸವನ್ನು ಮಾಡಬೇಕು. ನಾವು ನಿನ್ನೆಯ ದಿವಸ ಮೂರು ಗಂಟೆಗಳ ಹೆಚ್ಚಿನ ಅವಧಿ ಕೆಲಸವನ್ನು 9 ಗಂಟೆಯವರೆಗೂ ಮಾಡಿದ್ದೇವೆ. ಇವತ್ತಿನ ದಿವಸ ಈಗಾಗಲೇ 1½ ಗಂಟೆಯ ಹೆಚ್ಚಿನ ಅವಧಿಯ ಕೆಲಸವನ್ನು ಮಾಡಿದ್ದೇವೆ. ಪತ್ರಿಕೆಯವರು ಸದನದಲ್ಲಿ ಸದಸ್ಯರುಗಳು ಕುಳಿತುಕೊಳ್ಳುತ್ತಾರೆ ಹೊರತು ಚರ್ಚೆಯನ್ನು ಮಾಡುವುದಿಲ್ಲ ಎಂದು ಬರೆಯುತ್ತಾರೆ. ನಾವುಗಳು ಮೂರು ಗಂಟೆಗಳ ಹಾಗೂ ಒಂದೂವರೆ ಗಂಟೆಗಳ ಹೆಚ್ಚಿನ ಅವಧಿಯವರೆಗೆ ಸದನದಲ್ಲಿ ಕುಳಿತುಕೊಂಡಿರುವ ಬಗ್ಗೆ ಮಾಧ್ಯಮದವರು ಬರೆಯುತ್ತಾರೆಯೇ?

(ಮುಂದು)

(1198) 7.40/22-11-2017/ಸಿಎಸ್/ಆರ್‌ಎನ್

ಶ್ರೀ ಕೆ.ಟಿ.ಶ್ರೀಕಂಠೇಗೌಡ:-ಮಾನ್ಯ ಸಭಾಪತಿಯವರೇ, ಈ ದೇಶದ ನಿಯಮಾವಳಿಗಳ ಪ್ರಕಾರ ಒಂದು ದಿವಸದಲ್ಲಿ 6 ಗಂಟೆಗಳ ಕಾಲ ಕೆಲಸವನ್ನು ಮಾಡಬೇಕು. ನಿನ್ನೆಯ ದಿವಸ ನಾವು 3 ಗಂಟೆಗಳ ಕಾಲ ಹೆಚ್ಚು ಹೊತ್ತು ಅಂದರೆ 9 ಗಂಟೆಯ ತನಕ ಸದನದಲ್ಲಿದ್ದೆವು. ಇವತ್ತು ಈಗಾಗಲೇ ಒಂದೂವರೆ ತಾಸು ಹೆಚ್ಚಿಗೆ ಕೆಲಸವನ್ನು ಮಾಡಿದ್ದೇವೆ. ಆದರೆ ಮಾಧ್ಯಮದವರು ಸದಸ್ಯರು ಸದನದಲ್ಲಿ ಇರುವುದೇ ಇಲ್ಲ, ಚರ್ಚೆಯಲ್ಲಿ ಭಾಗವಹಿಸುವುದೇ ಇಲ್ಲ. ಆದರೆ ನಿನ್ನೆಯ ದಿವಸ ಇಂದು ಹೆಚ್ಚು ಹೊತ್ತು ಕುಳಿತು ಕೆಲಸ ಮಾಡುವುದನ್ನು ಅವರು ಬರೆಯುವರೇ? ಇದಕ್ಕಾಗಿ ನಾವು Human Rights Commission ಗೆ ಹೋಗಬೇಕೇ? ನಾವು ನಿಯತ್ತಾಗಿ ಸದನಕ್ಕೆ ಬರುವುದೇ ತಪ್ಪಾ? ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ, ಕೇಳಿಸಿಕೊಳ್ಳುವುದಕ್ಕೆ ತಯಾರಿದ್ದೇವೆ, ಮಾಧ್ಯಮದವರಿಗೆ ಇದು ತಿಳಿಯಲಿ ಎಂದು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಉಪ ಸಭಾಪತಿಯವರು:- ಇಂದು ಸದನವನ್ನು ರಾತ್ರಿ 9 ಗಂಟೆಗೆ ತನಕ ಮುಂದೆವರಸಿ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಿ ಇಂದೇ ಈ ವಿಚಾರದ ಬಗ್ಗೆ ಚರ್ಚೆಯನ್ನು ಮುಗಿಸೋಣ. ದಯಮಾಡಿ ಎಲ್ಲರೂ ಸಹಕರಿಸಬೇಕು. ಎಲ್ಲರಿಗೂ ನಿನ್ನೆ ಅವಕಾಶ ಸಿಕ್ಕಿಲ್ಲದ ಕಾರಣ ಇಂದು ಎಲ್ಲರಿಗೂ ಹತ್ತತ್ತು ನಿಮಿಷಗಳ ಕಾಲ ಮಾತಮಾಡಿ.

ಶ್ರೀ ಡಿ.ಎಸ್.ವೀರಯ್ಯ(ವಿಧಾನ ಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಬಡ್ತಿ ಮೀಸಲಾತಿ ವಿಧೇಯಕವನ್ನು ವಿಧಾನಸಭೆಯಲ್ಲಿ ಅಂಗೀಕೃತಗೊಂಡು ಮೂರು ದಿವಸಗಳಾಗಿದೆ. ಈ ಸದನಕ್ಕೆ ಬಂದು ಸಹ ಎರಡು ದಿವಸಗಳಾಗಿವೆ. ಜನರು ಈ ವಿಧೇಯಕವನ್ನು ಎದುರು ನೋಡುತ್ತಿರುವುದರಿಂದ, ಇದು ಕೂಡ ಬಹಳ ಪ್ರಮುಖವಾದ ವಿಧೇಯಕ. ಸದನವನ್ನು 9 ಗಂಟೆಯ ತನಕ ನಡೆಸುವುದಾದರೆ ಈ ವಿಧೇಯಕವನ್ನು ತೆಗೆದುಕೊಳ್ಳಬಹುದು.

ಉಪ ಸಭಾಪತಿಯವರು:- ಸರ್ಕಾರ ಒಪ್ಪಿಕೊಂಡಿರುವ ರೀತ್ಯಾ ಈ ವಿಧೇಯಕವನ್ನು ನಾಳೆ ತೆಗೆದುಕೊಳ್ಳಲಾಗುವುದು.

**9. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮುಂದುವರೆದ ಚರ್ಚೆ**

**ಶ್ರೀ ಮಾನೆ ಶ್ರೀನಿವಾಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆಮಾಡಲು ಅವಕಾಶ ನೀಡಿದ್ದಾಕ್ಕಾಗಿ ಮೊದಲಿಗೆ ತಮಗೆ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ. ಈಗಾಗಲೇ ಅನೇಕ ಹಿರಿಯ ಸದಸ್ಯರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಯಾವ್ಯಾವ ಯೋಜನೆಗಳು ಅನುಷ್ಠಾನಗೊಳ್ಳುವುದರಲ್ಲಿ ಹಿನ್ನಡೆಯನ್ನು ಕಂಡಿವೆ, ಉತ್ತರ ಕರ್ನಾಟಕದ ಅಭಿವೃದ್ಧಿಗೆ ಯಾವ ರೀತಿಯ ಅನ್ಯಾಯ ಆಗಿದೆ ಎನ್ನುವ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಆಯವ್ಯಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಪ್ರತಿ ಜಿಲ್ಲೆಗೆ ಹಾಗೂ ಪ್ರತಿ ಭಾಗಕ್ಕೆ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಅನುದಾನಗಳು ಆಯಾ ಭಾಗಗಳಿಗೆ ಹಂಚಿಕೆಯಾಗುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದನ್ನು ನಾವೆಲ್ಲರೂ ನೋಡಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಳಷ್ಟು ಕ್ರಾಂತಿಕಾರಕ ಬದಲಾವಣೆಗಳನ್ನು ತರುವುದರ ಮೂಲಕ ರಾಜ್ಯದ ಅಭಿವೃದ್ಧಿಗೆ ಒಂದು ದೊಡ್ಡ ಶಕ್ತಿಯನ್ನು ನೀಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯನ್ನು ನೋಡಿದರೆ ಬಯಲು ಬಹಿರ್ದೆಸೆ ಮುಕ್ತ ಮಾಡುವುದಕ್ಕೆ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ, ಶೌಚಾಲಯಗಳನ್ನು ಕಟ್ಟಿಸುವ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿ ಆಗಿದೆ ಎಂದರೆ ಅದು ತಪ್ಪಾಗುವುದಿಲ್ಲ. ಆರೋಗ್ಯದ ದೃಷ್ಟಿಯಿಂದ ಹಾಗೂ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಈ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ.

ಇನ್ನು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೊಡುವುದರ ಮೂಲಕ ಸರ್ಕಾರ ಒಂದು ಕ್ರಾಂತಿಕಾರಿ ಬೆಳವಣಿಗೆ ಕಂಡಿದೆ ಎನ್ನುವುದನ್ನು ಕೂಡ ಹೇಳಬಯಸುತ್ತೇನೆ. ನಮ್ಮ ಧಾರವಾಡ, ಹಾವೇರಿ ಮತ್ತು ಗದಗ ಭಾಗದ ಪ್ರಧೇಶಗಳು ಬಹಳಷ್ಟು ಮಳೆಯನ್ನೇ ನಂಬಿ ಕೃಷಿ ಚಟುವಟಿಕೆಗಳನ್ನು ನಡೆಸುವಂತಹ ಪ್ರದೇಶಗಳು. ಕೃಷಿ ಇಲಾಖೆಯಿಂದ ಕೃಷಿ ಹೊಂಡಗಳಿಗೆ ಪ್ರೋತ್ಸಾಹವನ್ನು ನೀಡುವುದರ ಮೂಲಕ ಈ ಭಾಗದಲ್ಲಿ ಕೃಷಿಯ ಅಭಿವೃದ್ಧಿಯನ್ನು ಮಾಡಿ, ಈ ಮೂಲಕ ರೈತರ ಅಭಿವೃದ್ಧಿ ಆಗಿದೆ ಹಾಗೂ ಕೃಷಿ ಚಟುವಟಿಕೆಗಳು ಏರಿಕೆ ಆಗಿವೆ ಎನ್ನುವುದು ನನ್ನ ಅನಿಸಿಕೆ.

ಈ ಭಾಗದಲ್ಲಿರುವ ನೀರಾವರಿ ವಿಚಾರದ ಬಗ್ಗೆ ಬಹಳಷ್ಟು ಹಿರಿಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಈ ಸರ್ಕಾರ ಕಳೆದ ನಾಲ್ಕೂವರೆ ವರ್ಷಗಳಲ್ಲಿ ೫೦,೦೦೦ ಕೋಟಿಗೂ ಹೆಚ್ಚು ಹಣವನ್ನು ಕೊಡುವುದರ ಮೂಲಕ ಈ ಭಾಗಕ್ಕೆ ಒಂದು ದೊಡ್ಡ ಶಕ್ತಿಯನ್ನು ನೀಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಎರಡು ಇಲಾಖೆಗಳಲ್ಲಿ ಪ್ರಗತಿ ಆಗಿದ್ದರೂ ಸಹ ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಗತಿ ಕಾಣಬೇಕಾದ ಅವಶ್ಯಕತೆ ಇದೆ. ಇವತ್ತು ನಮ್ಮ ಧಾರವಾಡ ಜಿಲ್ಲೆಯನ್ನು ಶಿಕ್ಷಣ ಕಾಶಿ ಎಂದು ಕರೆಯುತ್ತೇವೆ. ಬಹಳಷ್ಟು ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ಭಾಗದಲ್ಲಿ ಬಹಳ ಉನ್ನತ ಮಟ್ಟದಲ್ಲಿ ಶಿಕ್ಷಣ ಕೊಡಿಸುವ ಮೂಲಕ ಈ ರಾಜ್ಯಕ್ಕೆ ದೊಡ್ಡ ಕೊಡುಗೆಯನ್ನು ನೀಡಿವೆ ಎನ್ನುವ ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ನಮ್ಮ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳು ಅಪಾರ ಪ್ರಮಾಣದಲ್ಲಿ ಇದ್ದರೂ ಕೂಡ, ಮಹಿಳೆಯರ ಶಿಕ್ಷಣ ಮಟ್ಟವನ್ನು ನೋಡಿದಾಗ ಅದು ಬಹಳ ಕಡಿಮೆ ಇದೆ. ಅದರ ಮಟ್ಟ ಇನ್ನು ಹೆಚ್ಚಾಗಬೇಕು. ನಮ್ಮ ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ನಗರಪ್ರದೇಶಗಳಿಗೆ ಬಂದು ಕೋ-ಎಜುಕೇಷನ್ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಸ್ವಲ್ಪ ಹಿಂಜರಿಯುತ್ತಿದ್ದಾರೆ. ನಮ್ಮ ಭಾಗದಲ್ಲಿ ಮಹಿಳಾ ಶಿಕ್ಷಣ ಸಂಸ್ಥೆಗಳು ಬಹಳ ಕಡಿಮೆ ಪ್ರಮಾಣದಲ್ಲಿವೆ. ಹಾಗಾಗಿ ಸರ್ಕಾರ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ, ಮಹಿಳಾ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಹಿಳಾ ಶಿಕ್ಷಣ ಸಂಸ್ಥೆಗಳನ್ನು ತೆರೆಯುವಂತಹ ಕೆಲಸ ಮಾಡಿದರೆ ಬಹುಶಃ ಮಹಿಳೆಯರಿಗೆ ಶಿಕ್ಷಣ ನೀಡುವುದರ ಮೂಲಕ ಅವರ literacy percentage ಹೆಚ್ಚಿಗೆ ಮಾಡಿದಲ್ಲಿ ಬಹುಶಃ ಈ ಭಾಗದ ಅಭಿವೃದ್ಧಿಯ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಬಹುದು ಎನ್ನುವ ನನ್ನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ.

ಇನ್ನು ಕೈಗಾರಿಕೆಗಳ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಮ್ಮ ಭಾಗಕ್ಕೆ ದೊಡ್ಡ ದೊಡ್ಡ ಕೈಗಾರಿಕೆಗಳು ಬರಬೇಕು, ಅದರಿಂದ ಉದ್ಯೋಗ ಸೃಷ್ಟಿಯಾಗಬೇಕು, ಆಗ ಮಾತ್ರ ನಾವು ಆರ್ಥಿಕವಾಗಿ ಸಬಲರಾಗುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳು ನಮ್ಮ ಭಾಗಕ್ಕೆ ಬರಬೇಕೆನ್ನುವುದು ವಾಸ್ತವ. ಆದರೆ ನನ್ನ ಅಭಿಪ್ರಾಯ ಏನೆಂದರೆ ಮೊದಲಿಗೆ ಇರುವ ಸ್ಥಳೀಯ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ, ಅವರು ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಯಾವ ರೀತಿಯಲ್ಲಿ ಅವರಿಗೆ ಶಕ್ತಿ ನೀಡಬಹುದು, ಯಾವ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೀತಿಯಲ್ಲಿ ಅವರಿಗೆ ಪ್ರೋತ್ಸಾಹ ನೀಡಬಹುದು ಎನ್ನುವುದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಏಕೆಂದರೆ ಈ ವಿಚಾರಗಳ ಬಗ್ಗೆ ಕೈಗಾರಿಕಾ ಇಲಾಖೆಯಾಗಲೀ ಅಥವಾ ಅವರು ನೇಮಿಸಿರುವ ಏಜೆನ್ಸಿಗಳಾಗಲೇ ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಇವತ್ತು ಸ್ಥಳೀಯ ಕೈಗಾರಿಕೆಗಳು ಮುಚ್ಚಬೇಕಾದರೆ KIADB, Finance institutions, KSFC ಇವುಗಳೇ ಅವರ ಬೆನ್ನು ಮುರಿದಿರುವುದು. ಸ್ಥಳೀಯ ಕೈಗಾರಿಕೆ ನಡೆಸುವವರನ್ನು ಅಡ್ಡಾಡಿಸಿ-ಅಡ್ಡಾಡಿಸಿ, ಅವರ ಕೆಲಸ ಆಗದೇ ಇದ್ದಾಗ ಅವರಾಗಿಯೇ ತಮ್ಮ ತಮ್ಮ ಕೈಗಾರಿಕೆಗಳನ್ನು ಮುಚ್ಚುವ ಪರಿಸ್ಥಿತಿಗೆ ಬರುವ ಪರಿಸ್ಥಿತಿ ನಿರ್ಮಾಣ ಆಗಿರುವುದನ್ನು ನಾವು ನೋಡಿದ್ದೇವೆ. ನಮ್ಮಲ್ಲಿ ಸಾಮರ್ಥ್ಯ ಇರುವ ಎಷ್ಟೋ ಕೈಗಾರಿಕೆಗಳಿವೆ, ಅವರು ಮನವಿಗಳನ್ನು ಸಲ್ಲಿಸಿದಾಗ ಮಾತ್ರ ಕೆಲಸಗಳು ಆಗುತ್ತಿವೆ. ಈ ಬಗ್ಗೆ ಕೈಗಾರಿಕಾ ಇಲಾಖೆಯವರು ಒಂದು ತಜ್ಞರ ಏಜೆನ್ಸಿಯನ್ನು ಮಾಡಿ ಯಾವ್ಯಾವ ಪದ್ಧತಿಗಳಲ್ಲಿ ಯಾವ್ಯಾವ ಕೈಗಾರಿಕೆಗಳನ್ನು ಬೆಳವಣಿಗೆ ಮಾಡಬಹುದು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬಹುದು, ಕೈಗಾರಿಕೆಗಳ ಉತ್ಪನ್ನಗಳಿಗೆ ಎಲ್ಲಿ ಮಾರುಕಟ್ಟೆ ಇದೆ, ಇನ್ನು ಹೆಚ್ಚು ancillary ಮಾಡಬಹುದೇ? ಎನ್ನುವ ವಿಚಾರಗಳನ್ನು ಅಧ್ಯಯನ ಮಾಡಬಹುದು.

ಇವತ್ತು ಖೇಧ ತರುವ ವಿಚಾರ ಏನೆಂದರೆ ಇವತ್ತು ಬಿ.ಇ ಮಾಡಿದಂತಹವರು ಸೆಕ್ಯೂರಿಟಿ ಗಾರ್ಡ್ ಕೆಲಸವನ್ನು ಮಾಡುತ್ತಿದ್ದಾರೆ. ಯಾರು ಒಬ್ಬ ಪ್ರತಿಭಾವಂತ ಬಿಇ ಮಾಡಿದ್ದಾನೆ, ಆತ ಉತ್ತರ ಕರ್ನಾಟಕ ಬಿಟ್ಟು ಬೆಂಗಳೂರು, ಬಾಂಬೆ ಮತ್ತು ಪುಣೆಗೆ ಅಥವಾ ಬೇರೆ ದೊಡ್ಡ-ದೊಡ್ಡ ನಗರಗಳಿಗೆ ಹೋಗಿ ಕೆಲಸ ಮಾಡಲು ಬಯಸುತ್ತಾರೆ, ಅವರು ಅಲ್ಲಿಗೆ ಹೋಗಿ ಕೆಲಸ ಮಾಡುತ್ತಾರೆ. ಆದರೆ ನಮ್ಮ ಗ್ರಾಮೀಣ ಭಾಗದವರು ಹುಬ್ಬಳ್ಳಿ, ಧಾರವಾಡ ಅಥವಾ ಬೆಳಗಾವಿಯಲ್ಲಿ ಕೆಲಸ ಸಿಗುತ್ತದೆ ಎಂದುಕೊಂಡು ಬರುತ್ತಾರೆ. ಅವರಿಗೆ ಇಲ್ಲಿ ಕೈಗಾರಿಕೆಗಳ ಪ್ರಮಾಣ ದೊಡ್ಡ ಮಟ್ಟದಲ್ಲಿ ಇಲ್ಲದ ಕಾರಣ ಕೆಲಸ ಸಿಗದೇ ಸೆಕ್ಯೂರಿಟಿ ಗಾರ್ಡ್‌ಗಳಾಗಿ, ಫ್ಯಾಕ್ಟರಿಗಳಲ್ಲಿ ಹೆಲ್ಪರ್‌ಗಳಾಗಿ, BE graduates, Mechanic ಗಳಾಗಲಿ, Industrial things factory ಗಳಲ್ಲಿ, automobiles ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡು ಇಂಜಿನಿಯರಿಂಗ್ ಪದವೀಧರರಿಗೆ ಸ್ವಂತ ಉದ್ಯೋಗಗಳನ್ನು ಅಥವಾ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಸರ್ಕಾರ ಅವರಿಗೆ ಯಾವುದೇ ರೀತಿಯ ಸೆಕ್ಯೂರಿಟಿ ಇಲ್ಲದೇ ಸಾಲ ಕೊಡಿಸುವ ವ್ಯವಸ್ಥೆಯನ್ನು ಮಾಡಿ, ಒಂದು lathe machine ಅಥವಾ 2 lathe machine ಗಳನ್ನು ಹಾಕುವ ಮೂಲಕ ಪ್ರೋತ್ಸಾಹವನ್ನು ನೀಡಬೇಕಾಗುತ್ತದೆ.

ಸ್ಥಳೀಯ ಕೈಗಾರಿಕೆಗಳಲ್ಲಿ ಸ್ಟೈಫಂಡ್ ನೀಡುವ ಮೂಲಕ apprenticeship ತರಬೇತಿ ನೀಡಲಾಗುವುದು. Apprenticeship ಎಂದರೆ ಇದರಲ್ಲಿ 5-6 ತಿಂಗಳ ಕಾಲ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಾರೆ, ಸರ್ಕಾರ ಅವರಿಗೆ ಸಂಬಳ ಭರಿಸುತ್ತದೆ. ಅದರ ಬದಲಿಗೆ ಯಾರು ಇಂಜಿನಿಯರಿಂಗ್ ಪದವಿಗಳನ್ನು ಮುಗಿಸುತ್ತಾರೆ, ಅವರಿಗೆ startup ಮಾಡುವುದಕ್ಕೆ ಸರ್ಕಾರ ಪ್ರೋತ್ಸಾಹವನ್ನು ನೀಡಬಾರದು? ಇವತ್ತು KSSIDC ಶೆಡ್‌ಗಳು, KIADB ಶೆಡ್‌ಗಳು, ಸಾಕಷ್ಟು ಖಾಲಿಯಿವೆ. ಅಂತಹ ಶೆಡ್‌ಗಳನ್ನು ಬಾಡಿಗೆ ನೀಡುವುದರ ಮೂಲಕ ಹಾಗೆಯೇ ಪದವೀಧರರಿಗೆ ಯಾವುದೇ ಸೆಕ್ಯೂರಿಟಿ ಇಲ್ಲದೇ ಸಾಲ ಕೊಡುವ ಮೂಲಕ lathe machine ಗಳನ್ನು ಕೊಡಿಸಿ, ಅವರಿಗೆ ಅಲ್ಲಿನ ಸ್ಥಳೀಯ ಕೈಗಾರಿಕೋದ್ಯಮಿಗಳ ಜೊತೆಯಲ್ಲಿ ಟೈ-ಅಪ್ ಮಾಡಿಸಿ, ಅವರಿಗೆ ಕೆಲಸವನ್ನು ಕೊಡಿಸಿದರೆ ಉದ್ಯೋಗ ಕ್ಷೇತ್ರದಲ್ಲಿಯೂ ಸಹ ನಮ್ಮ ಭಾಗ ಮುಂದೆ ಬರುತ್ತದೆ. ಇದರಿಂದ ಮುಂದೆ ನಮ್ಮ ಮಕ್ಕಳ ಭವಿಷ್ಯವನ್ನು ಸಹ ಗಟ್ಟಿಗೊಳಿಸುವುಕ್ಕೆ ಸಾಧ್ಯವಾಗುತ್ತದೆ. ಆಗ ಮಾತ್ರ ನಿಜವಾಗಿ ಈ ಭಾಗದ ಅಭಿವೃದ್ಧಿಯನ್ನು ಕಾಣಬಹುದು ಎಂದು ನಾನು ಅಂದುಕೊಂಡಿದ್ದೇನೆ. ಹಾಗಾಗಿ ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಅದರ ಜೊತೆಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಥಳೀಯ ಕೈಗಾರಿಕೆಗಳಿಗೂ ಕೂಡ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು. ಇವತ್ತು ನಮ್ಮ ಭಾಗದಲ್ಲಿಯೂ ಕೂಡ ಟಾಟಾ ಅವರ ದೊಡ್ಡ ಫ್ಯಾಕ್ಟರಿ ಬಂದಿದೆ. ಆದರೆ ನಮ್ಮ ಭಾಗದಲ್ಲಿರುವ ಪದವೀಧರರಿಗೆ ಅಲ್ಲಿ ಕೆಲಸ ಸಿಕ್ಕಿಲ್ಲ ಎನ್ನುವುದು ನನಗೆ ಅನುಮಾನ

(ಮುಂದು)

(1199)/22-11-2017/7-50/ಎಲ್ಎಂ/ವಿಕೆ

**ಶ್ರೀ ಶ್ರೀನಿವಾಸ್ ಮಾನೆ(ಮುಂದು):-** ಅಲ್ಲಿಯ HR Department ನಲ್ಲಿ ಉತ್ತರ ಭಾರತದವರು ಬಂದು ಕೂಡುತ್ತಾರೆ. ಅವರು ದೊಡ್ಡ-ದೊಡ್ಡ ಸ್ಥಾನಗಳಿಗೆ ನಮ್ಮ ಹುಡುಗನ್ನು select ಮಾಡುವುದೆ ಇಲ್ಲ. ಅವರು ಓರಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ ಈ ರಾಜ್ಯಗಳಿಂದ ಹುಡುಗರನ್ನು ತಂದು ನೇಮಕ ಮಾಡುತ್ತಾರೆ. ನಮ್ಮ ಹುಡುಗರು ಬರಿ peon ಕೆಲಸಕ್ಕೆ, helper ಕೆಲಸಕ್ಕೆ ಮಾತ್ರ ತೆಗೆದುಕೊಳ್ಳುತ್ತಾರೆ. ಸ್ಥಳೀಯ ಕೈಗಾರಿಕಾ ಉದ್ಯಮಗಳಿಗೆ ಪ್ರೋತ್ಸಾಹವನ್ನು ಕೊಡಬೇಕು. ಇವತ್ತು ನಮ್ಮ ಮಕ್ಕಳು ವಿದ್ಯಾಭ್ಯಾಸವನ್ನು ಮುಗಿಸಿ ಹೊರಗೆ ಬರುತ್ತಾರೆ ಅವರಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿಕೊಳ್ಳುವಂತಹ ವಾತಾವರಣವನ್ನು ಸರ್ಕಾರ ನಿರ್ಮಾಣ ಮಾಡಬೇಕಾಗಿದೆ. ಇದರ ಜೊತೆಗೆ ಬಹಳ ವಿಶೇಷವಾಗಿ ಹೇಳಬೇಕು ಎಂದರೆ, ಸುಮಾರು ಎರಡುವರೆ ವರ್ಷದಿಂದ ನಮ್ಮ ಭಾಗದಲ್ಲಿ ಮಹದಾಯಿ-ಕಳಸಾ ಬಂಡೂರಿ ಯೋಜನೆಗಾಗಿ ದೊಡ್ಡ ಪ್ರಮಾಣದ ಹೋರಾಟ ನಡೆಯುತ್ತಿದೆ. ರೈತರು ಬಹಳ ತಾಳ್ಮೆಯಿಂದ ಈ ವ್ಯವಸ್ಥೆಯ ಮೇಲೆ ಭರವಸೆ ಇಟ್ಟುಕೊಂಡು ಇವತ್ತಿಲ್ಲಾ ನಾಳೆಯಾದರೂ ಈ ಭಾಗದ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಈ ಸಮಸ್ಯೆಯನ್ನು ಬಗೆಹರಿಸಿ ರೈತರ ಬಾಳನಲ್ಲಿ ಬೆಳಕನ್ನು ತರುತ್ತಾರೆ ಎನ್ನುವ ಭರವಸೆಯಲ್ಲಿ ಕುಳಿತ್ತಿದ್ದಾರೆ. ಆದರೆ ಇವತ್ತು ಇದರ ಬಗ್ಗೆ ಮಾತನಾಡುತ್ತಾ ರಾಜಕಾರಣಕ್ಕೆ ಸಿಮೀತ ಮಾಡುವಂತಹ ಕೆಲಸವಾಗುತ್ತಿದೆ. ಕಳೆದ ಸರ್ವ ಪಕ್ಷಗಳ ಸಭೆಯಲ್ಲಿ ನಡೆದಿರುವುದನ್ನು ಇಲ್ಲಿ ಉಲ್ಲೇಖಿಸಲು ಇಚ್ಛೆಪಡುತ್ತೇನೆ. ಅಲ್ಲಿ ನಿರ್ಣಯವಾಗಿರುವುದು, ಕೆಳಮನೆ ವಿರೋಧ ಪಕ್ಷದ ನಾಯಕರು ಮತ್ತು ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಗೋವಾ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಪ್ರಧಾನ ಮಂತ್ರಿಗಳ ಬಳಿ ನಿಯೋಗ ಹೋಗಿ ಇದಕ್ಕೆ ಒಂದು ರೂಪ ಕೊಡಲು ನಾವು ಬದ್ಧರಾಗಿದ್ದೇವೆ, ಆ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವ ನಿರ್ಣಯವಾಯಿತು. ಈಗಾಗಲೇ ಮೂರು ತಿಂಗಳು ಕಳೆದು ಹೋಗಿದೆ. ಇವರು ಗೋವಾ ರಾಜ್ಯದ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದರಾ, ಅಲ್ಲಿಂದ ಏನು ಸ್ವಂಧನೆ ಬಂತು ಎನ್ನುವ ಮಾಹಿತಿ ಇಲ್ಲ. ಬಿಜೆಪಿಯ ಕರ್ನಾಟಕದ ಅಧ್ಯಕ್ಷರು ಡಿಸೆಂಬರ್ 15ರೊಳಗೆ ಇದನ್ನು ಪರಿಹರಿಸುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ನಾವು ಯಾವುದೆ ಪಕ್ಷದವರಾಗಿರಬಹುದು, ಇವತ್ತು ಬಿಜೆಪಿ ರಾಜಾಧ್ಯಕ್ಷರಿಗೆ ಶುಭ ಕೋರುತ್ತೇನೆ. ಅವರು ಈ ಸಮಸ್ಯೆಯನ್ನು ಬಗೆಹರಿಸಿಕೊಟ್ಟರೆ ಸಾಕು. ಸಮಸ್ಯೆ ಬಗೆಹರಿಸಿ ಅವರು Hero ಆಗಲಿ ನಾವು Zero ಆದರೂ ಪರವಾಗಿಲ್ಲ. ನಮ್ಮ ಭಾಗದ ಜನರ ಸಮಸ್ಯೆ ಇವತ್ತು ಪರಿಹಾರವಾಗಬೇಕು. ಇದರಿಂದ ನಮ್ಮ ರೈತರಿಗೆ ಅನುಕೂಲವಾಗಬೇಕು. ನಮ್ಮ ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು ಎನ್ನುವ ಘೋಷಣೆ ನಮ್ಮದಾಗಿರುವುದರಿಂದ ರಾಜಕಾರಣ ಮಾಡದೆ ಪಕ್ಷಾತೀತವಾಗಿ ಏನು ನಿರ್ಣಯಗಳಾಗಿವೆ, ಏನು ಮಾತುಗಳನ್ನು ಕೊಟ್ಟಿದ್ದಾರೆ, ಏನು ಘೋಷಣೆಗಳು ಆಗಿವೆ ಅದಕ್ಕೆ ಅವರು ಬದ್ಧರಾಗಿ ತಕ್ಷಣ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ತಮ್ಮಲ್ಲಿ ಕೇಳಿಕೊಂಡು ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಉಪಸಭಾಪತಿಯವರು:-** ಧನ್ಯವಾದಗಳು, ಈಗ ಮಾನ್ಯ ಅಮರನಾಥ್ ಪಾಟೀಲ್‌ರವರು ಮಾತನಾಡಬೇಕು. ಅಮರನಾಥ್ ಪಾಟೀಲ್‌ರವರೆ ಮಾನ್ಯ ಮಾನೆಯವರು 9 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು, ತಾವೂ ಕೂಡಾ ಆದಷ್ಟು ಬೇಗ ಮುಕ್ತಾಗೊಳಿಸಿ.

**ಶ್ರೀ ಅಮರನಾಥ್ ಪಾಟೀಲ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಾನು detail ಆಗಿ general ಮಾತನಾಡಲು ಹೋಗುವುದಿಲ್ಲ. Policy matters ಬಗ್ಗೆಯು ಮಾತನಾಡುವುದಿಲ್ಲ. ನಿಯಮ ಕಾನೂನುಗಳಲ್ಲಿ ಹೈದ್ರಾಬಾದ್ ಕರ್ನಾಟಕ ಏರಿಯಾದ ಬಗ್ಗೆ ಏನು ಹೇಳಿದ್ದಾರೆ ಅದರಲ್ಲಿ ಇವರು ನ್ಯೂನ್ಯತೆಗಳ ಬಗ್ಗೆ ಮಾತನಾಡುತ್ತೇವೆ. ಎಷ್ಟಾದರೂ ಆಗಲಿ ಸಮಯವನ್ನು ಕೊಡಿ ಸರ್. ನಾನೇನು ದೊಡ್ಡದಾಗಿ ಭಾಷಣ ಮಾಡಲು ಹೋಗುವುದಿಲ್ಲ. ಎಲ್ಲರಿಗೂ ಗೊತ್ತಿರುವ ಹಾಗೆ ಭಾರತಕ್ಕೆ ಸ್ವಾತಂತ್ರ ಸಿಕ್ಕಿರುವುದು 15ನೇ ಆಗಷ್ಟ್ 1947ರಲ್ಲಿ. ಆ ಸಂದರ್ಭದಲ್ಲಿ ನಮ್ಮ ಹೈದ್ರಾಬಾದ್ ಕರ್ನಾಟಕ ಪ್ರದೇಶ ಹೈದ್ರಾಬಾದ್ ಆಡಳಿತಕ್ಕೆ ಒಳಪಟ್ಟಿತು. ಭಾರತಕ್ಕೆ ಸ್ವಾತಂತ್ರ ಸಿಕ್ಕ ಮೇಲೆ ಒಂದು ವರ್ಷ ಒಂದು ತಿಂಗಳು ಎರಡು ದಿನಗಳಾದ ಮೇಲೆ ನಮಗೆ ವಿಮೋಚನೆ ಸಿಕ್ಕಿದೆ. ಇವತ್ತಿನ ದಿವಸ ನಾವು ಉಕ್ಕಿನ ಮನುಷ್ಯ ಸರ್ದಾರ್ ಪಟೇಲ್‌ರವರನ್ನು ನೆನೆಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಆ ಮನುಷ್ಯ ಇರದೇ ಇದ್ದರೆ, ಆ police action ಆಗದೆ ಇದ್ದರೆ ಬಹುಷ: ನಾವು ಬೇರೆ ರಾಜ್ಯವಲ್ಲ ಬೇರೆ ರಾಷ್ಟ್ರದಲ್ಲಿ ಇರುತ್ತಿದ್ದೇವು ಎನ್ನುವುದು ಇತಿಹಾಸ ನೋಡಿದಾಗ ತಿಳಿಯುತ್ತದೆ. ಪ್ರಾದೇಶಿಕ ಭಾಷಾವಾರು ಪ್ರದೇಶಗಳು ರಚನೆಯಾದ ಮೇಲೆ, 1956ರಲ್ಲಿ States Reorganisation *Commission headed by* Sri Fazal Ali ರಚನೆ ಆದ ಮೇಲೆ ಮೈಸೂರು ರಾಜ್ಯದ ಉದಯವಾಯಿತು. ಆ ಸಂದರ್ಭದಲ್ಲಿ ಹೈದ್ರಾಬಾದ್ ರಾಜ್ಯದ ಎಂಟು ಜಿಲ್ಲೆಗಳು ಆಂಧ್ರಪ್ರದೇಶಕ್ಕೆ ಸೇರಿದವು. ಐದು ಜಿಲ್ಲೆಗಳು ಮಹಾರಾಷ್ಟ್ರಕ್ಕೆ ಮತ್ತು ಮೂರು ಜಿಲ್ಲೆಗಳು ಅಂದಿನ ಮೈಸೂರು ರಾಜ್ಯ ಇಂದಿನ ಕರ್ನಾಟಕ ರಾಜ್ಯಕ್ಕೆ ಸೇರಿಸಲಾಯಿತು. ಕಳೆದ ಬಾರಿಯು ನಾನು ಪ್ರಸ್ತಾಪ ಮಾಡಿದ್ದೇನೆ, States Reorganisation ಸಂದರ್ಭದಲ್ಲಿ ಹೈದ್ರಾಬಾದ್ ರಾಜ್ಯದ ಈ ಮೂರು ಜಿಲ್ಲೆಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಲು ಆಗ ವಿರೋಧವು ವ್ಯಕ್ತವಾಯಿತು ಎನ್ನುವ ವಿಚಾರವನ್ನು ನಿನ್ನೆ ಒಬ್ಬರು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಇದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಹಿಂದಿನ ಮೈಸೂರು ರಾಜ್ಯ ಇಂದಿನ ಕರ್ನಾಟಕ ರಾಜ್ಯವಾದ ಮೇಲೆ ಹಲವಾರು ತಜ್ಞರ ಸಮಿತಿಗಳು ಸ್ಥಿತಿ-ಗತಿಗಳ ಬಗ್ಗೆ, ಪ್ರಾದೇಶಿಕ ಅಸಮತೋಲನೆಯ ಬಗ್ಗೆ, ಹಿಂದುಳಿದಿರುವ ಬಗ್ಗೆ ಹಲವಾರು ಸಂದರ್ಭಗಳಲ್ಲಿ ವರದಿಯನ್ನು ನೀಡಿದ್ದಾರೆ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, Karnataka is the most progressive State. 'It hosts the Silicon Valley of India, Bangalore ಬೆಂಗಳೂರು ಎಂದು ಹೇಳಿದ್ದಾರೆ. It also hosts Gulbarga, where every second person lives under the poverty line' ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ನಿಟ್ಟಿನಲ್ಲಿ ಪ್ರಾದೇಶಿಕ ಅಸಮತೋಲನೆ ಮತ್ತು ಹಿಂದುಳಿಯುವಿಕೆ ಆಧಾರಿಸಿ ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟ ಜಿಲ್ಲೆಗಳು ಮರಾಠಾವಾಡಕ್ಕೆ ಹೋದವು, ಅಲ್ಲಿ 371(2) ಮತ್ತು ಮತ್ತು ತೆಲಂಗಾಣಕ್ಕೆ ಹೋದ ಜಿಲ್ಲೆಗಳಿಗೆ 371(ಡಿ) ಅಲ್ಲಿ ಶಿಕ್ಷಣಕ್ಕೆ ಮೀಸಲಾತಿ ಮತ್ತು ಅಭಿವೃದ್ಧಿ ಮಂಡಳಿ ಎನ್ನುವುದು ರಚನೆಯಾಯಿತು. ಇವತ್ತು ಎಲ್ಲರೂ ಉತ್ತರ ಕರ್ನಾಟಕ ಎಂದು ಹೇಳುತ್ತಾರೆ, ಆದರೆ ಬೆಂಗಳೂರಿನಲ್ಲಿ ನಿಂತು ಉತ್ತರ ಕರ್ನಾಟಕ ಎಲ್ಲಿ ಇದೆ ಎಂದರೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗದಗ ಎಂದು ದಿಕ್ಕನ್ನು ತೋರಿಸುತ್ತಾರೆ. ಆದರೆ ಅದೇ ಪ್ರಮಾಣದಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟ ಪ್ರದೇಶ ಯಾವುದಾದರೂ ಇದ್ದರೆ ಅದು ಹೈದ್ರಾಬಾದ ಕರ್ನಾಟಕದ ಕಲ್ಬುರ್ಗಿ ವಿಭಾಗ ಎಂದು ನಾನು ಹೇಳಬಯಸುತ್ತೇನೆ. ಬೀದರ್, ಯಾದಗಿರಿ, ರಾಯಚೂರ, ಕೊಪ್ಪಳ, ಬಳ್ಳಾರಿ, ಕಲ್ಬುರ್ಗಿ ಇವು ಉತ್ತರ ಕರ್ನಾಟಕದ ಭಾಗಗಳು ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಮರಾಠಾವಾಡದಲ್ಲಿ 371(2) ಮತ್ತು ತೆಲಂಗಾಣದಲ್ಲಿ 371(ಡಿ) ಸಿಕ್ಕರೂ ಅಲ್ಲಿ ಏನು ವಿಶೇಷವಾದ ಬದಲಾವಣೆಗಳಾಗಿಲ್ಲ. ಅಲ್ಲಿ ವಿಶೇಷ ರಾಜ್ಯದ ಬೇಡಿಕೆ ಬಂದು, ಹೊಸ ರಾಜ್ಯದ ಉದಯವಾಗಿರುವುದನ್ನು ನಾವು ಕಾಣುತ್ತೇವೆ. ಅದೇ ರೀತಿ ಮರಾಠಾವಾಡದಲ್ಲಿಯು ಪ್ರತ್ಯೇಕ ರಾಜ್ಯದ ಕೂಗನ್ನು ಕೇಳುತ್ತಿದ್ದೇವೆ. ಮುಂದೆ ಏನಾಗುತ್ತದೊ ಗೊತ್ತಿಲ್ಲ ಈ ಸರ್ಕಾರದ ಧೋರಣೆಗಳು ಇದೇ ರೀತಿ ಇದ್ದರೆ ಈ ಭಾಗದಲ್ಲಿಯು ಏನು ಆಗುತ್ತದೆಯೇ ಗೊತ್ತಿಲ್ಲ, ಈಗಾಗಲೆ ಈ ಭಾಗದಿಂದ ಆ ಕೂಗು ಕೇಳಿ ಬರುತ್ತಿದೆ. ಎಲ್ಲರ ಪರಿಶ್ರಮದಿಂದ ನಮ್ಮ ಭಾಗಕ್ಕೂ

ಸಂವಿಧಾನದ ತಿದ್ದುಪಡಿ ತಂದು 371(ಜೆ) ಜಾರಿ ಮಾಡಿ ಅದರಲ್ಲಿ ಅಭಿವೃದ್ಧಿ ಮಂಡಳಿಯು ರಚನೆಯಾಯಿತು. ಮತ್ತು ನೇಮಕಾತಿಗಳಲ್ಲಿ ಮತ್ತು Professional Colleges ಗಳಲ್ಲಿ ಮೀಸಲಾತಿ ಸಿಗುವಂತೆ ಮಾಡಿ ಎರಡು ಲಾಭಗಳು ಈ ಭಾಗಕ್ಕೆ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಇವತ್ತು 371(ಜೆ) ಜಾರಿಗೆ ಬಂದಿದೆ. 34% ಎಸ್‌ಟಿ ಜನಾಂಗದವರಿದ್ದಾರೆ, 24% ಎಸ್‌ಸಿ ಜಾತಿಯವರಿದ್ದಾರೆ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಹೆಚ್ಚಾಗಿರುವಂತಹ ಈ ಪ್ರದೇಶ ನಿಜವಾಗಿಯು ಅಭಿವೃದ್ಧಿಯನ್ನು ಕಂಡಿದೆಯೇ ಎಂದು ನೋಡಿದಾಗ ನಿನ್ನೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ ಎಲ್ಲರ ಅಭಿಪ್ರಾಯದಲ್ಲಿ ಇನ್ನೂ ಕೂಡಾ ಈ ಭಾಗ ಅಭಿವೃದ್ಧಿಯನ್ನು ಕಾಣಲಿಲ್ಲ. ಉದಾಹರಣೆಗೆ ಕಿತ್ತೂರ ಕರ್ನಾಟಕ ಇರಬಹುದು, ಕಲ್ಯಾಣ ಕರ್ನಾಟಕ ಇರಬಹುದು ಈ ಭಾಗಗಳು ಅಭಿವೃದ್ಧಿ ಕಾಣಲಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಎನ್ನುವುದನ್ನು ತಪ್ಪಿಸಲು ಏನಾದರೂ ವಿಚಾರ ಮಾಡಬೇಕಾಗಿದೆ. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರ ಕರ್ನಾಟಕ ಎಂದು ಕರೆಯಬೇಕು ಎಂದು ಬಹಳ ಜನರು ಹೇಳಿದ್ದಾರೆ. ನಾವು ಮಾತನಾಡುವಾಗ ಸಾಮಾನ್ಯವಾಗಿ ಹೈದ್ರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಎನ್ನುವುದು ಬಂದುಬಿಡುತ್ತದೆ. ಇದಕ್ಕೆ ಏನಾದರೂ ತಿದ್ದುಪಡಿ ತಂದು ಬದಲಾವಣೆ ತರುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಯಾವಾಗಲೂ ನಾವು ಬೆಳಗಾವಿ ವಿಭಾಗ, ಗುಲ್ಬರ್ಗಾ ವಿಭಾಗ ಎಂದು ಮಾತನಾಡುತ್ತೇವೆ. 1724 ರಿಂದ 1948 ರಲ್ಲಿ ನಮ್ಮ ಎಂಟು ಜಿಲ್ಲೆಗಳು ತೆಲಂಗಾಣಕ್ಕೆ ಮತ್ತು ಮಹಾರಾಷ್ಟ್ರಕ್ಕೆ ಸೇರಿಸಲಾಯಿತು. ಲಾತೂರು ಇತ್ಯಾದಿ ಜಿಲ್ಲೆಗಳು ಮಹಾರಾಷ್ಟ್ರಕ್ಕೆ ಹೋಗಿವೆ. ಆದ್ದರಿಂದ ಬರುವಂತಹ ದಿನಗಳಲ್ಲಿ ಸರ್ಕಾರ ಇದರ ಬಗ್ಗೆ ಏನಾದರೂ ತಿದ್ದುಪಡಿ ತಂದು ಸರಿ ಮಾಡಬೇಕೆಂದು ಹೇಳಬಯಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಸರ್ಕಾರಕ್ಕೆ ಈ ವಿಚಾರವನ್ನು ತಿಳಿಸಬೇಕು.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಗಳೆ, ಇಲ್ಲಿ ನಾನು ಒಂದು ವಿಚಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಾನು ಮತ್ತು ಮಾನ್ಯ ಚಿದಾನಂದ ಮೂರ್ತಿಯವರು ಸೇರಿ ದೊಡ್ಡ ತಂಡದೊಂದಿಗೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ವಿಚಾರವಾಗಿ ಸುಮಾರು ಹೊತ್ತು ಮಾತನಾಡಿದ್ದೇವೆ. ಬಜೆಟ್ ಮಂಡನೆ ಮಾಡುವುದಕ್ಕಿಂತ ಮುಂಚಿತವಾಗಿ ಹೈದ್ರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕವೆಂದು, ಮತ್ತು ಬಾಂಬೆ ಕರ್ನಾಟಕ ಎನ್ನುವುದನ್ನು ಕಿತ್ತೂರ ಕರ್ನಾಟಕ ಎಂದು ನಾಮಕರಣ ಮಾಡಬೇಕೆಂದು ಹೇಳಿದ್ದೇವೆ. ಯಾವುದೆ ಆಗಲಿ ಕರ್ನಾಟಕ ಎನ್ನುವ ಹೆಸರು ಬರಲಿ, ಬಾಂಬೆ ಮತ್ತು ಹೈದ್ರಾಬಾದ್ ಕರ್ನಾಟಕ ಎನ್ನುವುದು ಬೇಡ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ಅವತ್ತು ಸಾಧ್ಯವಾದರೆ ಈ ಸಾರಿಯ ಬಜೆಟ್‌ನಲ್ಲಿ ಇದನ್ನು ಸೇರಿಸುತ್ತೇನೆ ಎಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇನ್ನು ಎಷ್ಟು ವರ್ಷ ಬ್ರಿಟಿಷರ್ ಕಾಲದಲ್ಲಿಯೇ, ನಿಜಾಮರ ಕಾಲದಲ್ಲಿಯೇ ಇರಬೇಕು ಎನ್ನುವುದಕ್ಕಿಂತ ವಿಪರ್ಯಾಸ ಇನ್ನೊಂದಿಲ್ಲ.

(ಮುಂದು)

(1200)22-11-2017(08-00)ಬಿಎಸ್‌ಡಿ/ವಿಕೆ

ಶ್ರೀ ವಿ. ಸೋಮಣ್ಣ (ಮುಂದು)

ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹೇಳಿದಂತೆ ಮಾನ್ಯ ಉಪಸಭಾಪತಿಯವರ ಹಾಜರಾತಿಯಲ್ಲಿ ನಡೆಯುವ ಈ ಸಭೆಗೆ ನಿಜವಾಗಿಯೂ ಔಚಿತ್ಯ ಇದೆ. ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಕೆಲಸವನ್ನು ತಮ್ಮ ಮುಖೇನ ಮಾಡಬೇಕೆಂದು ವಿನಂತಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಈ ಬಗ್ಗೆ ಹೇಳಬೇಕು ಮತ್ತು ಬರುವ ಬಜೆಟ್ ಮಂಡನೆ ಮಾಡುವಾಗ ಈ ಕೆಲಸ ಮಾಡಬೇಕು. ಏಕೆಂದರೆ 1724ರಿಂದ 1948ರವರೆಗೆ ನಾಂದೇಡ, ಬೀಡ, ಔರಂಗಬಾದ್, ಉಸ್ಮನಾಬಾದ್, ಲಾಥೂರ, ಜಲನಾ, ಪರಭಾನಿ, ಹಿಂಗೋಲಿ ಪ್ರದೇಶಗಳು ಹೊರಟು ಹೋಗಿವೆ. ಅವರು ಹೇಳಿದಂತೆ ಕೆಲವು ಪ್ರದೇಶಗಳು ಮಾತ್ರ ಕರ್ನಾಟಕದಲ್ಲಿ ಉಳಿದಿವೆ. ಪದೇ ಪದೇ ಹೈದರಬಾದ್-ಕರ್ನಾಟಕ, ಮುಂಬೈ-ಕರ್ನಾಟಕ ಎನ್ನುವುದು ಬೇಡ. ಅದಕ್ಕೆ ನಾವೇ move ಮಾಡಿ ಎಂದರೆ move ಮಾಡುತ್ತೇವೆ. ತಾವು ಸಲಹೆ ಕೊಡುವಂತೆ ಮಾಡುತ್ತೇವೆ. ಬರುವ ದಿನಮಾನಗಳಲ್ಲಿ ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಎನ್ನುವ ಬಗ್ಗೆ ಬಜೆಟ್‌ನಲ್ಲಿ ಹಾಕಿಕೊಂಡರೆ ಸೂಕ್ತ ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಉಪಸಭಾಪತಿಯವರುಃ- ಒಳ್ಳೆಯ ಸಲಹೆ. ಹೈದರಬಾದ್-ಕರ್ನಾಟಕ, ಮುಂಬೈ-ಕರ್ನಾಟಕ ಎನ್ನುವ ಬದಲು 'ಕಲ್ಯಾಣ ಕರ್ನಾಟಕ' ಮತ್ತು 'ಕಿತ್ತೂರು ಕರ್ನಾಟಕ' ಎಂದು ಕರೆಯುವುದು ಸೂಕ್ತ.

ಶ್ರೀ ವಿ.ಸೋಮಣ್ಣಃ- ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಚಿದಾನಂದಮೂರ್ತಿಯವರೂ ಸೇರಿದಂತೆ ಒಂದು ದೊಡ್ಡ ತಂಡದ ಜೊತೆ ಮಾನ್ಯ ಮುಖ್ಯಮಂತ್ರಿಗಳಿಗೆ ಕೃಷ್ಣಾದಲ್ಲಿ ಮನವಿಯನ್ನು ಕೊಟ್ಟೆವು. ಮಾನ್ಯ ಮುಖ್ಯಮಂತ್ರಿಯವರು ಈ ಬಾರಿ ಬಜೆಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರು. ಅದಾದ ನಂತವೂ ಒಂದೆರಡು ಬಾರಿ ನಾನು ಭೇಟಿ ಮಾಡಿ ಅವರ ಗಮನಕ್ಕೆ ತಂದೆ. ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಆಗುತ್ತಿದ್ದು, ಸುಮಾರು ವರ್ಷದ ಈ ಸೂಕ್ಷ್ಮವಾದ ವಿಚಾರವನ್ನು ಗಾಂಭೀರ್ಯವಾಗಿ ತೆಗೆದುಕೊಳ್ಳುವ ಕೆಲಸ ಎಷ್ಟರಮಟ್ಟಿಗೆ ಸರಿ ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಬಗ್ಗೆ ನಾವು ಮಾತನಾಡುತ್ತೇವೆ. ಹೈದರಬಾದ್-ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಎಂದು ಹೇಳುತ್ತೇವೆ. ಇದನ್ನು ಬಹಳ ಬಾರಿ ಹೇಳಬೇಕೆಂದು ಯೋಚನೆ ಇತ್ತು. ಪ್ರಾಸಂಗಿಕವಾಗಿ ಮಾನ್ಯ ಅಮರನಾಥ ಪಾಟೀಲರು ಮಾತನಾಡುತ್ತಿರುವಾಗ ನೆನಪಾಯಿತು. ಈ ಸಭೆಯ ಭಾವನೆಯನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸಬೇಕು. ಸಾಧ್ಯವಾದರೆ ನಾಳೆ ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಾಗ ಪ್ರಸ್ತಾಪ ಮಾಡುತ್ತೇವೆ. ಇದಕ್ಕೆ ಪರಿಹಾರ ಹುಡುಕಲು ಬೇಕಾದರೆ ಒಂದು resolution ತರೋಣ. ಒಟ್ಟಿನಲ್ಲಿ ಬರುವ ಬಜೆಟ್‌ನಲ್ಲಿ ಗುಲ್ಬರ್ಗ ಭಾಗಗಳಿಗೆ ಕಲ್ಯಾಣ ಕರ್ನಾಟಕ ಮತ್ತು ಬೆಳಗಾವಿ ಭಾಗಕ್ಕೆ ಕಿತ್ತೂರು ಕರ್ನಾಟಕ ಎಂದು ಮಾಡಬೇಕೆಂದು ವಿನಂತಿ.

**ಶ್ರೀ ಶರಣಪ್ಪ ಮಟ್ಟೂರ** (ಶಿಕ್ಷಕರ ಕ್ಷೇತ್ರ)ಃ- ಮಾನ್ಯ ಸಭಾಪತಿಯವರೇ, ಮಾನ್ಯ ಅಮರನಾಥ ಪಾಟೀಲ್‌ರವರಿಗೆ ತಿಳಿದಂತೆ ಒಂದು ಬಾರಿ ಶ್ರೀ ಬಸವರಾಜ ಪಾಟೀಲ್ ಸೇಡಂ ರವರು ಕಲ್ಯಾಣ ಕರ್ನಾಟಕ ಎಂದು ಘೋಷಣೆ ಮಾಡಿಬಿಟ್ಟರು. ಮಾನ್ಯ ಹೊರಟ್ಟಿಯವರು ಹೇಳುವುದರಲ್ಲಿ ಬಹಳ ಅರ್ಥವಿದೆ. ನಮ್ಮಲ್ಲಿ ಇನ್ನೂ ಏನೋ ಒಂದು ಭಾವನೆ ಇಟ್ಟುಕೊಂಡಿದ್ದೇವೆ. ಬಾಂಬೆ ಕರ್ನಾಟಕ, ಹೈದರಬಾದ್ ಕರ್ನಾಟಕ, ದಕ್ಷಿಣ ಕರ್ನಾಟಕ ಎನ್ನುತ್ತೇವೆ. ಆದರೆ ಮಾತನಾಡುವಾಗ ಅಖಂಡ ಕರ್ನಾಟಕ ಎಂದು ಮಾತನಾಡುತ್ತೇವೆ. ನಿನ್ನೆ ಮಾನ್ಯ ಸೋಮಣ್ಣನವರು ಬಹಳ ಚೆನ್ನಾಗಿ ಹೇಳಿದರು. ಉತ್ತರ ಕರ್ನಾಟಕದ ಭಾಗಗಳಿಗೆ ಏನೂ ಕೊಟ್ಟಿಲ್ಲವೇನೋ? ಡಾ॥ ಡಿ.ಎಂ. ನಂಜುಂಡಪ್ಪನವರು 176 ತಾಲ್ಲೂಕುಗಳಲ್ಲಿ 114 ಬಹಳ ಹಿಂದುಳಿದ ತಾಲ್ಲೂಕುಗಳೆಂದು ವಿಸ್ತಾರವಾದ ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಹೆಚ್ಚಿನ ಭಾಗಗಳು ಈ ಕಡೆ ಬರುತ್ತವೆ. 1947ರಿಂದ ಒಂದು ರೀತಿಯಿಂದ ನಡೆದು ಬಂದಿದ್ದರೆ, 2000ನೇ ಇಸವಿಯಲ್ಲಿ ಮಾನ್ಯ ನಂಜುಂಡಪ್ಪನವರ ವರದಿ ಬಂದ ಮೇಲೆ ವಿಶೇಷವಾಗಿ ರೂ.2,000/- ಕೋಟಿಗಳನ್ನು ಕೊಟ್ಟಿರುವುದಲ್ಲದೇ, ಪ್ರತಿವರ್ಷ ಮಾನ್ಯ ಮುಖ್ಯಮಂತ್ರಿಗಳು ರೂ.3,000/- ಕೋಟಿಗಳನ್ನು ವರದಿಯನ್ವಯ ಈ ಭಾಗಕ್ಕೆ ಕೊಟ್ಟರೂ ಆ ಹಣ ಎಲ್ಲಿ ಹೋಗುತ್ತಿದೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಹೊರಟ್ಟಿಯವರ ನೇತೃತ್ವದಲ್ಲಿ ಭರವಸೆ ಸಮಿತಿಯು ಆ ಭಾಗಗಳಿಗೆ ಭೇಟಿ ನೀಡಿದಾಗ ಕೆಲವು ಡ್ಯಾಂಗಳಿಗೆ ಭೇಟಿ ಕೊಟ್ಟೆವು. ನಿನ್ನೆ ದಿವಸವೆಲ್ಲ ಮಾತನಾಡಿದ್ದೇವೆ, ತಾವು ಅದಕ್ಕೆ ಸಾಕ್ಷಿಯಾಗಿದ್ದೀರಿ!. ನಾವೆಲ್ಲರೂ ಪ್ರೆಸ್‌ನವರಿಗೆ ಹೇಳಿದ್ದೇವೆಯೇ? ಅಧಿಕಾರಿಗಳಿಗೆ ಹೇಳಿದ್ದೇವೆಯೇ? ನಮಗೆ ಸುಮಾರು 3 ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ.

ಉಪಸಭಾಪತಿಯವರುಃ- ಮೂರು ಗಂಟೆಯಲ್ಲ, ಐದು ಗಂಟೆ ನಲವತ್ತೈದು ನಿಮಿಷಗಳ ಕಾಲ ಆ ಚರ್ಚೆಗೆ ನೀಡಲಾಗಿದೆ.

ಶ್ರೀ ಶರಣಪ್ಪ ಮಟ್ಟೂರಃ- ಮಾನ್ಯ ಸಭಾಪತಿಯವರೇ, ಆ ಹಣ ಎಲ್ಲಿ ಹೋಯಿತು? ಅಲ್ಲಿ ಅಭಿವೃದ್ಧಿ ಮಾಡಬೇಕು ಎಂದು ಯಾರಿಗೆ ಹೇಳುವುದು? ಜನ ನಮ್ಮನ್ನು ಆರಿಸಿರುವುದು ಏಕೆ? ಶಾಸಕರು ಎಲ್ಲಿ ಹೋದರು? ಎಂ.ಪಿ, ಮತ್ತು ಎಂ.ಎಲ್.ಸಿ ಗಳು ಎಲ್ಲಿ? ಶಾಸನ ಮಾಡುವುದನ್ನು ಮಾಡಿ, 1968ರಲ್ಲಿ ರೂ.8 ಕೋಟಿ ಕೊಟ್ಟಿರುವುದನ್ನು ಇವತ್ತು ರೂ.700 ಕೋಟಿಗಳನ್ನು ಕೊಡಲಾಗುತ್ತಿದೆ. ಅದು ಅಮರ್ಜಾ ಡ್ಯಾಂ ಇರಬಹುದು, ಬೆಣ್ಣೆತೊರಾ ಡ್ಯಾಂ ಇರಬಹುದು, ಮುಲ್ಲಾಮಾರಿ ಅಥವಾ ಕಾರಂಜಾ ಡ್ಯಾಂಗಳು ಇರಬಹುದು, ಬೀದರ್‌ನಲ್ಲಿರುವ ಡ್ಯಾಂಗಳು ಇರಬಹುದು. ಇಷ್ಟೆಲ್ಲಾ ಆದಮೇಲೆ ಒಂದೊಂದು ಡ್ಯಾಂಗೆ ರೂ.7.50 ಕೋಟಿಗಳಿಂದ ರೂ.750 ಕೋಟಿಗಳವರೆಗೂ ಕೊಟ್ಟಿದ್ದೇವೆ. ಅಲ್ಲಿನ ರೈತನಿಗೆ ಡ್ಯಾಂನಿಂದ ಒಂದೊಂದು ಗ್ಲಾಸ್ ಕುಡಿಯುವ ನೀರು ಬಿಟ್ಟರೆ ಬೇರೆ ಸಿಗುವುದಿಲ್ಲ. ಅಂದು 1968ರಿಂದ 1972ರವರೆಗೆ ಕೊಟ್ಟಿರುವ ರೂ.7.5 ಕೋಟಿಗಳಿಗೆ ಒಂದು ಅಣೇಕಟ್ಟಿನ ರಿಡಿಝೈನ ಮಾಡಿ, ಇವತ್ತು ರೂ.750 ಕೋಟಿ ಆಗಿದೆಯಲ್ಲಾ!. ಅದೇ ರೀತಿ ಆಳಂದ ತಾಲ್ಲೂಕಿನ ಅಮರ್ಜಾಗೆ ರೂ.5 ಕೋಟಿ ಇದ್ದದ್ದು, ಇವತ್ತು ರೂ.550 ಕೋಟಿ ಆಗಿದೆ. ಇಷ್ಟು ಕೊಟ್ಟ ಮೇಲೂ ಡ್ಯಾಂನಲ್ಲಿ ಕುಡಿಯುವುದಕ್ಕೆ ಒಂದು ಗ್ಲಾಸ್ ನೀರು ಬಿಟ್ಟರೆ ಕಾಲುವೆಯಲ್ಲಿ ಒಂದು ಗ್ಲಾಸ್ ನೀರು ಬಂದಿಲ್ಲ. ಹಾಗಾದರೆ ಇದಕ್ಕಾಗಿ ಖರ್ಚು ಮಾಡಿದ ಹಣ ಎಲ್ಲಿ ಹೋಯಿತು? ಇವತ್ತು ನಾವೆಲ್ಲರೂ ಬಾಂಬೆ-ಕರ್ನಾಟಕ, ಹೈದರಬಾದ್-ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ವಾದ ಮಾಡುತ್ತಿದ್ದೇವೆ, ಇಷ್ಟು ದೊಡ್ಡ ಮೊತ್ತದ ಹಣ ಕೊಟ್ಟಿರುವ ಸಂದರ್ಭದಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ದಳದವರು ಇರಲಿಲ್ಲವೇ? ಐದು ವರ್ಷಗಳ ಕಾಲ ಮಾನ್ಯ ಮುಖ್ಯಮಂತ್ರಿಗಳು ರೂ.300 ಕೋಟಿಗಳಂತೆ ರೂ.15,000 ಕೋಟಿಗಳನ್ನು ಕೊಟ್ಟಿದ್ದಾರೆ. Where is that money? Who is going to take the responsibility of this amount which has been spent towards the development of that area? ಈಗ ಮಾತನಾಡಲು ಹೋದರೆ ಈ ವಿಚಾರವು ಬಹಳ ಗಂಭೀರವಾಗಿದೆ. ನಾವೆಲ್ಲರೂ ಅಂದರೆ, ಬಿಜೆಪಿ, ಕಾಂಗ್ರೆಸ್, ದಳ ಎಲ್ಲರೂ ಜವಾಬ್ದಾರಿಯಾಗಿದ್ದೇವೆ. At the same time bureaucrats ಕೂಡ ಜವಾಬ್ದಾರಿಯನ್ನು ಹೊಂದಿದ್ದಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜಕೀಯ ಪಕ್ಷಗಳಿಗೆ ಹೇಳುತ್ತಿದ್ದಾರೆ, ಆದರೆ ಅಧಿಕಾರಿಗಳು ಏನು ಮಾಡುತ್ತಿದ್ದರು? ಟೆಂಡರ್ ಕರೆದ ದಿನ ಬೆಂಗಳೂರಿನಿಂದ ಅಧಿಕಾರಿಗಳು ಬಂದು ಹಾಗೆಯೇ ತೆಗೆದುಕೊಂಡು ಹೋಗಿಬಿಡುತ್ತಾರೆ. ಅಧಿಕಾರಿಗಳು ಶೇಕಡ 60 ರಷ್ಟು ಭ್ರಷ್ಟಾಚಾರ ಮಾಡಿದ್ದಾರೆ, ವರದಿ ಕೊಟ್ಟಿದ್ದಾರೆ. ಒಂದು ಸಾವಿರದಲ್ಲಿ ಆರುನೂರು ರೂಪಾಯಿಗಳಷ್ಟು ಭ್ರಷ್ಟಾಚಾರವಾಗಿದೆ. ಆ ಭಾಗದ ಜಮೀನುಗಳಿಗಿಂತ ಡ್ಯಾಂ ಕೆಳಭಾಗದಲ್ಲಿದೆ. 20-30 ವರ್ಷಗಳಿಂದ ಹಾಗೆ ಇದೆ, ದಯವಿಟ್ಟು ವಿಸಿಟ್ ಮಾಡಿ ನೋಡಬಹುದು. ಶೇಕಡ 60 ರಷ್ಟು ಹಣ ದುರುಪಯೋಗ ಪಡಿಸಿಕೊಳ್ಳುತ್ತಾರೆ. ಅಲ್ಲಿ ಒಬ್ಬ ಅಧಿಕಾರಿಯೂ ಇರುವುದಿಲ್ಲ. ಇವತ್ತಿನವರೆಗೂ ಸುಧಾರಣೆಯಾಗಿಲ್ಲ. ಮಾನ್ಯ ಸದಸ್ಯರು ರಾಜಕಾರಣಿಗಳ ಬಗ್ಗೆ ಅಲ್ಲ, ಅಧಿಕಾರಿಗಳು ಏನು ಭ್ರಷ್ಟಾಚಾರ ಮಾಡಿದ್ದಾರೆ ಎಂಬುದನ್ನು ಹೇಳಬೇಕು. ಯಾವುದೋ ನೀರನ್ನು ತಂದು ಯಾರಿಗೋ ಕೊಡುತ್ತಾರೆ. ಆದರೆ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ ವಿನಃ ಬೇರೆ ಯಾರೂ ಮಾಡಿಲ್ಲ. ಮಾನ್ಯ ಸದಸ್ಯರು ರೂ.15,000/- ಕೋಟಿ ಎಂದು ಪ್ರಸ್ತಾಪಿಸಿದ್ದು, ಅದರಲ್ಲಿ ರೂ.10,000 ಕೋಟಿಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶರಣಪ್ಪ ಮಟ್ಟೂರ್‌ಃ- ಮಾನ್ಯ ಸಭಾಪತಿಯವರೇ, ಇದಕ್ಕೆಲ್ಲಾ ಕಾರಣ ಏನೆಂದರೆ, ಭ್ರಷ್ಟಾಚಾರ. Concern, Commitment, Corruption; Very frankly I am telling you, we should answer to these questions. Concern ಇಲ್ಲ, Commitment ಇಲ್ಲ, ಆದರೆ Corruption EzÉ. Then how do we expect the development in Northern Karnataka? ನನಗೆ 10 ನಿಮಿಷದಲ್ಲಿ ಎಲ್ಲವನ್ನೂ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಎಂದು ಮಾಡಿದರೆ ಕನಿಷ್ಟ ಒಳ್ಳೆಯ ಹೆಸರನ್ನು ಕೊಟ್ಟಂತೆ ಆಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಧನ್ಯವಾದಗಳು.

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)ಃ- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ವಿಶೇಷವಾಗಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಗಳನ್ನು ಅವರ ಗಮನಕ್ಕೆ ತಂದಿದ್ದೇನೆ, ಈಗಲೂ ಸಹ ಅವರಿಗೆ ಕಳುಹಿಸುತ್ತೇನೆ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರಿಸುತ್ತಿದ್ದಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- 'ಕಿತ್ತೂರು ಕರ್ನಾಟಕ' ಮತ್ತು 'ಕಲ್ಯಾಣ ಕರ್ನಾಟಕ' ಗಳ ಬಗ್ಗೆ note down ಮಾಡಿ ಕೊಡಿ.

ಶ್ರೀ ಎಂ.ಆರ್. ಸೀತಾರಾಂಃ- ನಾನು note ಮಾಡಿ ಕೊಟ್ಟಿದ್ದೇನೆ.

(ಮುಂದು)

(1201)22.11.2017/8.10/ಹೆಚ್‌ವಿಃಬಿಎನ್‌ಎಸ್

**ಶ್ರೀ ಎಂ.ಆರ್.ಸೀತಾರಾಂ(ಮುಂದುವರೆದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಮರನಾಥ್ ಪಾಟೀಲ್‌ರವರು ಮಾತನಾಡುತ್ತಿದ್ದಾಗ ಒಂದು ಅಂಶವನ್ನು ಉಲ್ಲೇಖ ಮಾಡಿದ್ದರು, ಆಗ ನಾನು ಸದನದ ಹೊರಗಡೆ ಇದ್ದೆ, ಅದನ್ನು ಕೇಳಿಸಿಕೊಂಡೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು Special Development Plan (SDP) ಯಿಂದ ಸುಮಾರು 15 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ನಾಲ್ಕು ವರ್ಷಗಳಲ್ಲಿ ಸುಮಾರು 4,430 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದೇವೆ. ಮಾನ್ಯ ಸದಸ್ಯರುಗಳ ಸಲಹೆಗಳನ್ನು ತೆಗೆದುಕೊಂಡು, ಮುಂದೆ ಯಾವ ರೀತಿಯ ಅಭಿವೃದ್ಧಿ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಗಮನಹರಿಸಲಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ-** ಸನ್ಮಾನ್ಯ ಸಭಾಪತಿಯವರೇ, ಹಣವನ್ನು ಬಿಡುಗಡೆ ಮಾಡುವುದು ಮಾತ್ರವಲ್ಲ ಆ ಹಣ ಸದುಪಯೋಗವಾಗಿದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಸಮಿತಿ ಗುಲ್ಬರ್ಗಾ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಜನರು ಸಮಿತಿಯ ಮುಂದೆ ಕಣ್ಣೀರು ಹಾಕಿದ್ದಾರೆ. ಗಟಾರದಲ್ಲಿ ಹರಿಯುವ ನೀರನ್ನು ಕುಡಿಯುವುದಕ್ಕಾಗಿ ಬಳಸುತ್ತಿದ್ದಾರೆ. ಗಟಾರದಲ್ಲಿ ಹರಿಯುವ ನೀರನ್ನು ಪೌಡರ್ ಹಾಕದೇ ಹಾಗೆಯೇ ಸರಬರಾಜು ಮಾಡುತ್ತಿದ್ದಾರೆ. ಸಮಿತಿಯು ಅದರ ಬಗ್ಗೆ ವರದಿ ಕೊಟ್ಟರೆ ಇಲ್ಲಿಯವರೆವಿಗೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ.

**ಶ್ರೀ ಎಂ.ಆರ್.ಸೀತಾರಾಂಃ-** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಮಾನ್ಯ ಸದಸ್ಯರುಗಳು ನಿನ್ನೆ ದಿನ ವ್ಯಕ್ತಪಡಿಸಿರುವ ಭಾವನೆಗಳನ್ನು ಮತ್ತು ಸಲಹೆಗಳನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ತಾವು ಕೇಳಿರುವಂತಹ ಎಲ್ಲ ಅಂಶಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಳೆ ಉತ್ತರವನ್ನು ಹೇಳುತ್ತಾರೆ. 'ಕಲ್ಯಾಣ ಕರ್ನಾಟಕ' ಮತ್ತು 'ಕಿತ್ತೂರು ಕರ್ನಾಟಕ'ದ ಬಗ್ಗೆ ಈ ದಿನವೇ ನಾನು ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರಃ-** ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 3 ಸಾವಿರ ಕೋಟಿ ರೂಪಾಯಿಗಳಲ್ಲದೇ, ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವ ಘೋಷಣೆಯನ್ನು ನಮ್ಮ ಸರ್ಕಾರ ಮಾಡಿತ್ತು ಹಾಗೂ ಇದರ ಜೊತೆಗೆ ಐದು ನೂರು ಕೋಟಿ ರೂಪಾಯಿಗಳನ್ನು ಸಹ ಹೆಚ್ಚುವರಿಯಾಗಿ ಕೊಟ್ಟಿದೆ.

**ಶ್ರೀ ಅಮರನಾಥ ಪಾಟೀಲ್(ಪದವೀಧರರ ಕ್ಷೇತ್ರ)ಃ-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇಧ 371(ಜೆ)ರ ಪ್ರಕಾರ ನಮ್ಮ ಭಾಗದ ಅಭಿವೃದ್ಧಿಗಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚನೆ ಮಾಡಲಾಯಿತು. ಆದರೆ, ಅದರ ಸ್ಥಿತಿಗತಿ ಯಾವ ರೀತಿಯಲ್ಲಿದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸಭಾ ನಾಯಕರು ಯೋಜನಾ ಮಂತ್ರಿಗಳಾಗಿ ಅದರ ಬಗ್ಗೆ ಗಮನಹರಿಸಿದ್ದಾರೆ. ಆದರೆ, ಕಳೆದ ಅಧಿವೇಶನದಲ್ಲಿ ನಾನು ಕೇಳಿದಂತಹ ಪ್ರಶ್ನೆಗೆ ನೀಡಿದಂತಹ ಉತ್ತರ ಬಹಳಷ್ಟು ಗೊಂದಲವನ್ನುಂಟು ಮಾಡಿದೆ. 2017-18ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಕೆಲವು ಉತ್ತರಗಳಲ್ಲಿ ಅದು 1000 ಕೋಟಿ ರೂಪಾಯಿಗಳಾಗಿವೆ.

**ಶ್ರೀ ಶರಣಪ್ಪ ಮಟ್ಟೂರಃ-** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳುತ್ತಿರುವುದು ತಪ್ಪು. 2017-18ನೇ ಸಾಲಿನಲ್ಲಿ 1500 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ.

**ಶ್ರೀ ಅಮರನಾಥ ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಆ ರೀತಿ ಕೊಟ್ಟಿರುವುದರಿಂದ ನಾನು ಕೇಳುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂಃ-** ಸನ್ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ನೀಡಿರುವ ಅಂಕಿಅಂಶಗಳು ತಪ್ಪಾಗಿರಬಹುದು ಆದರೆ, ಈ ವರ್ಷ ನಾವು 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

**ಶ್ರೀ ಅಮರನಾಥ ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಲಿಖಿತ ಉತ್ತರದಲ್ಲಿ ಕೊಟ್ಟಿರುವುದನ್ನು ನಾನು ಹೇಳುತ್ತಿದ್ದೇನೆ. ಆದರೆ, ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುವ ಸಂದರ್ಭದಲ್ಲಿ ಈ ವರ್ಷ 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿಬಿಟ್ಟರೆ ಮುಗಿಯಿತು. 2017-18ನೇ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎನ್ನುವ ಪ್ರಶ್ನೆಗೆ, '1000 ಕೋಟಿ ರೂಪಾಯಿಗಳನ್ನು ಮೀಸಲಾಗಿಡಲಾಗಿದೆ' ಎನ್ನುವ ಉತ್ತರವನ್ನು ನೀಡಲಾಗಿದೆ. ಆಯವ್ಯಯದಲ್ಲಿ 1500 ಕೋಟಿ ರೂಪಾಯಿಗಳನ್ನು ನೀಡಲಾಗುತ್ತದೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಇದರಲ್ಲಿ ಯಾವುದು ನಿಜ ಎನ್ನುವುದನ್ನು ನಾಳೆ ಸರ್ಕಾರ ಉತ್ತರ ನೀಡುವ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

**ಶ್ರೀ ಎನ್.ಎಸ್.ಬೋಸ್‌ರಾಜುಃ-** ಸನ್ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನ ಆಯವ್ಯಯದಲ್ಲಿ 1500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

**ಶ್ರೀ ಅಮರನಾಥ ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ನಾಳೆ ಮುಖ್ಯಮಂತ್ರಿಗಳು ಉತ್ತರ ನೀಡುವ ಸಂದರ್ಭದಲ್ಲಿ ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಲಿ. 5 ವರ್ಷಗಳ ಅವಧಿಯಲ್ಲಿ 4500 ಕೋಟಿ ರೂಪಾಯಿಗಳನ್ನು ನೀಡುವ ಘೋಷಣೆ ಮಾಡಲಾಗಿದೆ. ನನ್ನ ಬಳಿ ಇರುವಂತಹ ಅಧಿಕೃತ ಮಾಹಿತಿಯ ಪ್ರಕಾರ ಕೇವಲ 2080 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ.

**ಶ್ರೀ ಎನ್.ಎಸ್.ಬೋಸ್‌ರಾಜುಃ-** ಸನ್ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತೆ 1500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

**ಶ್ರೀ ಅಮರನಾಥ ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬೋಸ್‌ರಾಜ್‌ರವರು ನನಗೆ ಮಾತನಾಡಲು ಪ್ರೋತ್ಸಾಹ ನೀಡಬೇಕು. ಅದನ್ನು ಬಿಟ್ಟು ನಾನು ಮಾತನಾಡುವಾಗ ಮಧ್ಯೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಧ್ಯೆ ಮಾತನಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಾಗಲೀ ಅಥವಾ ಸಚಿವರಾಗಲೀ ನಾನು ಹೇಳುತ್ತಿರುವುದು ತಪ್ಪು ಎಂದು ಹೇಳಲಿ.

**ಶ್ರೀ ಎಂ.ಆರ್.ಸೀತಾರಾಂಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಮರನಾಥ ಪಾಟೀಲ್‌ರವರು ಮಾತನಾಡಲಿ ನಾಳೆ ನಾವು ಉತ್ತರ ಕೊಡುವ ಸಂದರ್ಭದಲ್ಲಿ ಸ್ಪಷ್ಟೀಕರಣವನ್ನು ನೀಡುತ್ತೇವೆ. ಆದರೆ, '2080 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿರುವುದು' ಎನ್ನುವ ಮಾಹಿತಿ ಸರಿಯಿಲ್ಲ.

**ಶ್ರೀ ಅಮರನಾಥ ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ನನ್ನ ಬಳಿ ಇರುವಂತಹ ಮಾಹಿತಿಯನ್ನು ಹೇಳುತ್ತಿದ್ದೇನೆ. ಅದರಲ್ಲಿ ಏನಾದರೂ ತಿದ್ದುಪಡಿ ಇದ್ದರೆ ಅವರು ತಿದ್ದುಪಡಿ ಮಾಡಲಿ. 4512 ಕೋಟಿ ರೂಪಾಯಿಗಳಲ್ಲಿ 2080 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಅದರಲ್ಲಿ 1684 ಕೋಟಿ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಲಾಗಿದೆ. ಇದು ಐದು ವರ್ಷಗಳ ಅಂಕಿಅಂಶಗಳನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ. ನಾನು ಹೇಳುತ್ತಿರುವ ಅಂಕಿಅಂಶಗಳಲ್ಲಿ ತಪ್ಪಿದ್ದರೆ ಅವರು ನಂತರ ತಿದ್ದುಪಡಿ ಮಾಡಲಿ. ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಯಾವ ಆಶಯದ ಮೇಲೆ ರಚನೆ ಮಾಡಲಾಗಿತ್ತು, ಆ ಆಶಯ ಇಲ್ಲಿಯವರೆಗೆ ಈಡೇರಿಲ್ಲ ಎನ್ನುವ ನೋವು ನನಗಿದೆ. ಕಳೆದ 5 ವರ್ಷಗಳಲ್ಲಿ 12,421 ಕಾಮಗಾರಿಗಳಿಗೆ ಮಂಜೂರಾತಿ ದೊರಕಿದೆ. ಅವುಗಳಲ್ಲಿ ಕೇವಲ 3956 ಕಾಮಗಾರಿಗಳು ಪೂರ್ಣಗೊಂಡಿವೆ. ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ 3097, ಪ್ರಾರಂಭವಾಗದೇ ಇರುವ ಕಾಮಗಾರಿಗಳ ಸಂಖ್ಯೆ 5477 ಆಗಿದೆ. Hyderabad Karnataka Region Development Board (HKRDB) ಯನ್ನು ಯಾವ ಆಶಯದ ಹಿನ್ನೆಲೆಯಲ್ಲಿ ಸ್ಥಾಪನೆ ಮಾಡಲಾಗಿತ್ತು ಆ ಆಶಯ ಈಡೇರುವುದರ ಜೊತೆಗೆ ಕಾಮಗಾರಿಗಳು ಶೀಘ್ರವಾಗಿ ಪೂರ್ಣಗೊಂಡು ಅದರ ಪ್ರತಿಫಲ ಜನರಿಗೆ ಮುಟ್ಟಲಿ ಎನ್ನುವುದು ನನ್ನ ಮಾತಿನ ಉದ್ದೇಶವಾಗಿದೆ. ಬೇರೆಯವರ ಮೇಲೆ ದೋಷಾರೋಪಣೆ ಮಾಡುವ ಉದ್ದೇಶ ನನಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಬಹಳ ಮುತುವರ್ಜಿ ವಹಿಸಿ regular review ಮಾಡುತ್ತಿದ್ದಾರೆ. ಎಲ್ಲೋ procedure ನಲ್ಲಿ ಅಥವಾ ಕಾಮಗಾರಿಗಳಲ್ಲಿ ಬಹಳಷ್ಟು ವಿಳಂಬವಾಗುತ್ತಿದೆ. ಸರ್ಕಾರದಿಂದ ದುಡ್ಡು ಬರುತ್ತಿಲ್ಲವೆಂದು ಹೇಳುತ್ತಿಲ್ಲ. ಆದರೆ, execution ಮತ್ತು completion ನಲ್ಲಿ ಬಹಳಷ್ಟು ತಡವಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಕಾರಣವೇನೆಂದರೇ, ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಕರೆದು ತಮ್ಮ ವಿವೇಚನಾ ನಿಧಿಯಿಂದ ನಮಗೆ ಅನುದಾನವನ್ನು ಕೊಟ್ಟರು. ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿ ಹಂಚಿಕೆಯ ಪಟ್ಟಿ ಬಂದಿತ್ತು. ಅದರಲ್ಲಿ ಕೆಲವು ತಾರತಮ್ಯ ಕಂಡು ಬಂದಿದೆ. ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಈ ಭಾಗದ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಲಾಯಿತು. ಸಮುದಾಯ ಭವನಗಳು ಮತ್ತು ರಸ್ತೆಗಳು ಉತ್ತಮ ರೀತಿಯಲ್ಲಿ ನಿರ್ಮಾಣಗೊಳ್ಳುತ್ತಿವೆ. ಆದರೆ, ಈ ಭಾಗ ಸಂಪೂರ್ಣವಾಗಿ in all aspects completely ಅಭಿವೃದ್ಧಿಗೊಳ್ಳಬೇಕಾದರೆ, ಈ ಭಾಗದಲ್ಲಿ ಶಿಕ್ಷಣದ ಅಭಿವೃದ್ಧಿಯಾಗಬೇಕಾಗಿದೆ. ಮಾನವ ಸಂಪನ್ಮೂಲದ ಅಭಿವೃದ್ಧಿಯಾಗದೇ ಹೋದರೆ, ಯಾವುದೇ ಪ್ರದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಖಾಸಗಿ ಆಡಳಿತ ಮಂಡಳಿ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅವುಗಳ ಮೂಲಸೌಲಭ್ಯಗಳ ಅಭಿವೃದ್ಧಿಗೆ ಅನುದಾನವನ್ನು ಒದಗಿಸಿಕೊಡಬೇಕೆನ್ನುವ ನಿಯಮಗಳಿವೆ. ಈ ಬಗ್ಗೆ ನಾನು ಸಾಕಷ್ಟು ಬಾರಿ ಸಚಿವರಲ್ಲಿ ಮತ್ತು ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿರುವ ಮಾನ್ಯ ಹೆಚ್.ಕೆ.ಪಾಟೀಲ್‌ರವರನ್ನು

ಭೇಟಿ ಮಾಡಿ ಮನವಿಯನ್ನು ಸಹ ಸಲ್ಲಿಸಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಮೂಲಭೂತ ಸೌಕರ್ಯಗಳು ಎಂದರೆ, ಶಾಲಾ ಕೊಠಡಿಗಳು ಇರಬಹುದು, ಬೆಂಚ್ ಮತ್ತು ಡೆಸ್ಕ್ ಇರಬಹುದು, ಶೌಚಾಲಯ ಇರಬಹುದು ಇವುಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇದರ ಜೊತೆಗೆ ಮಧ್ಯಾಹ್ನದ ಬಿಸಿಯೂಟ ಸಮವಸ್ತ್ರಗಳು ಮತ್ತು ಶೂ ಹಾಗೂ ಕಾಲುಚೀಲ ಹೀಗೆ ಏನೇನು ಕೊಡುವುದಕ್ಕೆ ಸಾಧ್ಯವಿದೆಯೋ ಅವುಗಳನ್ನು ಕೊಡಬೇಕಾಗುತ್ತದೆ. ಇದು ಬೋರ್ಡ್‌ನ ನಿಯಮಗಳಲ್ಲಿ ಇದೆ. ನಾನು ನಿಯಮಗಳನ್ನು ಬಿಟ್ಟು ಮಾತನಾಡುತ್ತಿಲ್ಲ. ನಿಯಮಗಳನ್ನು ಪಾಲನೆ ಮಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವಂತಹ ಕೆಲಸವಾಗಬೇಕಾಗಿದೆ ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಭಾಗದಲ್ಲಿ ಶೇಕಡಾ 34ರಷ್ಟು ಪರಿಶಿಷ್ಟ ಪಂಗಡದವರು. ಶೇಕಡಾ 24ರಷ್ಟು ಪರಿಶಿಷ್ಟ ಜಾತಿಯವರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ವಾಸವಿರುವಂತಹ ಈ ಪ್ರದೇಶ ಬಡವರ ಪ್ರದೇಶವಾಗಿದೆ. ಈ ಪ್ರದೇಶದಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಜನರು ಗುಳೆ ಹೋಗುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಬಹಳ ದೊಡ್ಡ ಪ್ರಮಾಣದಲ್ಲಿ ಖಾಲಿ ಹುದ್ದೆಗಳಿವೆ. ದಿನಾಂಕಃ24.11.2014ರಂದು ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ನಡೆಸಲಾಯಿತು. ಆ ಸಭೆಯಲ್ಲಿ 'ಸುಮಾರು 50,301 ಹುದ್ದೆಗಳು ಖಾಲಿಯಿವೆ. ಅವುಗಳನ್ನು ಜೂನ್ 2015ರೊಳಗೆ ವೃಂದವಾರು, ಹುದ್ದೆವಾರು ಹುದ್ದೆಗಳನ್ನು ಗುರುತಿಸಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೇವೆ' ಎನ್ನುವ ನಿರ್ಣಯವನ್ನು ಮಾಡಲಾಗಿತ್ತು.

**ಶ್ರೀ ಎಂ.ಆರ್.ಸೀತಾರಾಂಃ–** ಸನ್ಮಾನ್ಯ ಸಭಾಪತಿಯವರೇ, ಹುದ್ದೆಗಳನ್ನು ಭರ್ತಿ ಮಾಡಿರುವ ಮಾಹಿತಿಯನ್ನು ಬೇಕಾದರೆ ನಾನು ಅವರಿಗೆ ನೀಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಉಲ್ಲೇಖ ಮಾಡಿರುವ ಅಂಶಗಳಿಗೆ ಸರ್ಕಾರ ಉತ್ತರ ನೀಡುವ ಸಂದರ್ಭದಲ್ಲಿ ಅಂಕಿಅಂಶಗಳ ಮೂಲಕ ಸ್ಪಷ್ಟೀಕರಣವನ್ನು ನೀಡಲಿ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದರು ಆದರೆ, ಇಲ್ಲಿಯವರೆಗೆ ಆ ಕೆಲಸ ಆಗಿಲ್ಲ. ಕಳೆದ ಬಾರಿ ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ನಡೆದಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚರ್ಚೆಯನ್ನು ನಡೆಸಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದ್ದರು. ಕಳೆದ ನಾಲ್ಕು ವರ್ಷಗಳಿಂದ ನಮ್ಮ ಭಾಗದ 6 ಜಿಲ್ಲೆಗಳಲ್ಲಿ ಖಾಲಿ ಇರುವಂತಹ ಹುದ್ದೆಗಳ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. ಮೊನ್ನೆ ಕೂಡ ಒಂದು ಪ್ರಶ್ನೆಯನ್ನು ಕೇಳಿದ್ದೆ, ಆಗಲೂ ಸಹ ಖಾಲಿ ಹುದ್ದೆಗಳ ಭರ್ತಿ ಬಗ್ಗೆ ನಿಖರವಾದ ಉತ್ತರ ದೊರೆಯಲಿಲ್ಲ. ಕಾರಣವೇನೆಂದು ನನಗೆ ಅರ್ಥವಾಗುತ್ತಿಲ್ಲ. ತಾವು ಕೂಡ ಉತ್ತರವನ್ನು ಕೊಡಿಸುವಂತಹ ಪ್ರಯತ್ನವನ್ನು ಮಾಡಲಿಲ್ಲವೆಂದು ಬಹಳ ಖೇದದಿಂದ ಹೇಳುತ್ತಿದ್ದೇನೆ. ಕಳೆದ ಬಾರಿ ಬೆಳಗಾವಿ ಅಧಿವೇಶನದಲ್ಲಿ ಈ ವಿಚಾರವಾಗಿ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಅಧಿಕೃತವಾಗಿ ಲಿಖಿತ ರೂಪದಲ್ಲಿ ಸರ್ಕಾರ ನೀಡಿರುವ ಉತ್ತರದಲ್ಲಿ 9501 ಹುದ್ದೆಗಳನ್ನು ನಾವು ನೇಮಕಾತಿ ಮಾಡಿದ್ದೇವೆ ಎಂದು ಕೊಟ್ಟಿದ್ದಾರೆ. ಪಟ್ಟಿಯನ್ನು ನೋಡಿದರೆ, ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಇದೆ.

(ಮುಂದುವರಿದಿದೆ)

(1202)22.11.2017-8.20-ಪಿಕೆ-ಬಿಎಸ್‌ಎಸ್

**ಶ್ರೀ ಅಮರನಾಥ ಪಾಟೀಲ**(ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಸುಮಾರು 3000 ಹುದ್ದೆಗಳಿಗೆ ಅಷ್ಟೇ ಆದೇಶ ನೀಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಅದಾದ ನಂತರ ಏನು ಬೆಳವಣಿಗೆಯಾಯಿತು ಎನ್ನುವುದು ಗೊತ್ತಿಲ್ಲ. ಅದನ್ನು ಉತ್ತರ ಕೊಡುವಾಗ ತಿಳಿಸಬೇಕು. ನಮ್ಮಲ್ಲಿ ಆರ್ಟಿಕಲ್ 371(ಜೆ) ಕೋಶ ಎಂದಿದೆ. ಆ ಕೋಶದ ಮಾಹಿತಿ ಪ್ರಕಾರ ಸುಮಾರು 232 ವಿವಿಧ ಹುದ್ದೆಗಳಿವೆ. ಈ ಹುದ್ದೆಗಳ ರಚನೆ ಆಗಿದೆಯೇ ಎಂದು ಸರ್ಕಾರ ಮಾಹಿತಿ ಕೇಳಿದಾಗ, ಅದರಲ್ಲಿ 126 ಹುದ್ದೆಗಳನ್ನು ರಚಿಸಲಾಗಿದೆ, 106 ಹುದ್ದೆಗಳನ್ನು ರಚಿಸಲಾಗಿಲ್ಲ ಎಂದು ಹೇಳಿದ್ದಾರೆ. 108ಕ್ಕೆ ಮಾಹಿತಿ ನೀಡಿದೆ, 124ಕ್ಕೆ ಮಾಹಿತಿಯೇ ನೀಡಿಲ್ಲ. ಹೀಗಾಗಿ ವಿಶ್ವವಿದ್ಯಾಲಯ ಮತ್ತು 105 ವಿವಿಧ ಬೋರ್ಡ್, ಕಾರ್ಪೋರೇಷನ್‌ಗಳಲ್ಲಿ ಅಂದರೆ ಅರೆ ಸರ್ಕಾರಿ ಸಂಸ್ಥೆಗಳಲ್ಲಿ 88ರಲ್ಲಿ ವೃಂದ ರಚನೆಯಾಗಿದೆ, 17ರಲ್ಲಿ ಆಗಿಲ್ಲ. 67 ರಲ್ಲಿ ಮಾಹಿತಿ ನೀಡಿದೆ, 38ರಲ್ಲಿ ಮಾಹಿತಿ ನೀಡಿಲ್ಲ ಎಂದಿದೆ. ಇದು ಇತ್ತೀಚಿಗೆ ನೀಡಿರುವ ಮಾಹಿತಿಯಾಗಿದೆ. ಕನಿಷ್ಠ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ವೃಂದವಾರು, ಹುದ್ದೆವಾರು, Categories-A, B, C ಗಳಲ್ಲಿಎಷ್ಟು ಮೀಸಲಾತಿ ಕೊಟ್ಟಿದ್ದೀರಿ ಎನ್ನುವುದನ್ನು ನಿಖರವಾಗಿ ತಿಳಿಸಬೇಕು. 6 ಜಿಲ್ಲೆಗಳ ಇಲಾಖಾವಾರು ಮಾಹಿತಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, 371(ಜೆ) ನೇಮಕಾತಿಯಲ್ಲಿ 13(ಬಿ) ಪ್ರಕಾರ, ಆ ಭಾಗದ ಯುವಕರಿಗೆ, ಪದವೀಧರರಿಗೆ ಕೃಪಾಂಕ ಹಾಗೂ weightage ಕೊಡಬೇಕು ಎಂದಿದೆ. ಇದುವರೆಗೂ ವಯೋಮಿತಿ ಸಡಿಲಿಕೆ ಕೊಡಬೇಕು ಎಂಬುದೂ ಕೂಡ ಆಗಿಲ್ಲ. 13(ಸಿ) ಪ್ರಕಾರ ಗುತ್ತಿಗೆ ಆಧಾರದ ಮೇಲೆ 5-10 ವರ್ಷದಿಂದ ಯಾರು ಸೇವೆ ಸಲ್ಲಿಸುತ್ತಿದ್ದಾರೋ ಅಂಥವರನ್ನು ಖಾಯಂ ಮಾಡಬೇಕು, regularize ಮಾಡಬೇಕು ಎನ್ನುವ provision ಇದೆ. ಅದೂ ಕೂಡ ಆಗುತ್ತಿಲ್ಲ. ಈ ನಿಯಮಗಳಲ್ಲಿ ಏನೇನು ಅಡಕವಾಗಿದೆಯೋ ಅದನ್ನು ಚಾಚು ತಪ್ಪದೇ ಕಾರ್ಯರೂಪಕ್ಕೆ ತರಬೇಕು. ಆ ಭಾಗದ ಪದವೀಧರರಿಗೆ ಹೆಚ್ಚಿನ ಅವಕಾಶ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ನೇಮಕಾತಿಯಲ್ಲಿ ನಮ್ಮ ಭಾಗದ ಅರ್ಹ ಪದವೀಧರರಿಗೆ ಪ್ರತಿಯೊಂದು ಹಂತದಲ್ಲಿ ಅಡೆತಡೆಗಳು ಬರುತ್ತಿವೆ. ಹೈಕೋರ್ಟ್‌ನಲ್ಲಿ ಕೇಸ್‌ಗಳಿವೆ, Karnataka Administrative Tribunal (KAT) ನಲ್ಲಿ ಕೇಸ್‌ಗಳಿವೆ. 2014ರಲ್ಲಿ KAT ಯಿಂದ stay order ಬಂತು. 17.8.2017 ರಂದು stay vacate ಆಗಿದೆ. ಇವತ್ತು ಸಚಿವಾಲಯದಲ್ಲಿ ನೋಡಿದಾಗ ನಮ್ಮ ಹೈದರಾಬಾದ್-ಕರ್ನಾಟಕದವರು 1 ಪರ್ಸೆಂಟ್‌ನಷ್ಟಿದ್ದಾರೆ. ಅಲ್ಲಿ 8 ಪರ್ಸೆಂಟ್ ಮೀಸಲಾತಿ ಕೊಡಬೇಕು. Retrospective ಆಗಿ 2014ರಿಂದ ಅವರಿಗೆ ಮುಂಬಡ್ತಿ ಕೊಡಬೇಕು. ಇದರಲ್ಲಿ 100 ಹುದ್ದೆಗಳಿಗೆ ಸಂಬಂಧಪಟ್ಟಂತೆ ನೇಮಕಾತಿಗಾಗಿ Department of Personnel and Administrative Reforms ನಿಂದ Finance Department ಗೆ ಅನುಮತಿಗೆಂದು ಹೋಗಿದೆ. ಈ ಪ್ರಕ್ರಿಯೆ ಕೂಡ ಬಹಳ ನಿಧಾನ ಗತಿಯಿಂದ ನಡೆಯುತ್ತಿದೆ. 8 ಪರ್ಸೆಂಟ್ ಮೀಸಲಾತಿ ಪ್ರಕಾರ ಏನು ಆಗಬೇಕೋ ಆ ನಿಟ್ಟಿನಲ್ಲಿ ಕೂಡ ಕ್ರಮ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆ ಭಾಗದ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರುಗಳು ಸಾಕಷ್ಟು ಮಾತನಾಡಿದ್ದಾರೆ. ಬಳ್ಳಾರಿಯಲ್ಲಿ Iron Ore, Iron Industry, Cement Industryಗಳು ಏನಿವೆ ಇಲ್ಲೂ ಕೂಡ ಸ್ಥಳೀಯ ರೈತರಿಗೆ, ಯಾರು ಭೂಮಿ ಕಳೆದುಕೊಂಡಿದ್ದಾರೋ ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಸಿಗುತ್ತಿಲ್ಲ. ಡಾ: ಸರೋಜಿನಿ ಮಹಿಷಿ ವರದಿ ಪ್ರಕಾರ ಕೆಲಸ ಆಗುತ್ತಿಲ್ಲ. ಇಂಥದ್ದರ ಬಗ್ಗೆ ಸರ್ಕಾರ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ ಆ ಕೈಗಾರಿಕೆಗಳವರು ನಮ್ಮ ರಾಜ್ಯ ಸರ್ಕಾರದ ಮಾತಿಗೆ ಗೌರವ ಕೊಡುತ್ತಾರೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ಇವರ ಮಾತನ್ನು ಅವರು ಕೇಳುತ್ತಿಲ್ಲ.

ಮಾನ್ಯ ಸಭಾಪತಿಯವರೇ, ನಮ್ಮ ಭಾಗವನ್ನು ತೊಗರಿಯ ಕಣಜ ಎಂದು ಕರೆಯುತ್ತಾರೆ. ಇವತ್ತಿನ ದಿವಸ ತೊಗರಿ ಬೆಳೆಯುವ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆ ರೈತರಿಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತಿಲ್ಲ. ಅವರಿಗೆ ಆಗಿರುವ ಬೆಳೆ ಹಾನಿಯನ್ನು ಸರಿದೂಗಿಸಲು ಬೆಳೆ ವಿಮೆ ಕೊಡುವುದರಲ್ಲಿ ಬಹಳ ದೊಡ್ಡ ಪ್ರಮಾಣದ ತಾರತಮ್ಯ ಆಗುತ್ತಿದೆ ಎಂದು ಆ ರೈತರು ಹೇಳುತ್ತಿದ್ದಾರೆ. Agro based Industries ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ದಾಲ್ ಮಿಲ್‌ಗಳು ಬಹಳ ದೊಡ್ಡ ಪ್ರಮಾಣದಲ್ಲಿವೆ. ಸುಮಾರು 250-300 ದಾಲ್ ಮಿಲ್‌ಗಳು ಸಂಪೂರ್ಣವಾಗಿ ಮುಚ್ಚುವಂತಹ ಸ್ಥಿತಿಯಲ್ಲಿರುವುದನ್ನು ಕಾಣುತ್ತಿದ್ದೇವೆ. ಅವರನ್ನೂ ಮತ್ತು Chamber of Commerce ರವರನ್ನು ಕರೆಸಿ ಸರ್ಕಾರ ಚರ್ಚೆ ಮಾಡಬೇಕು. ದಾಲ್ ಮಿಲ್‌ಗಳು ಅಭಿವೃದ್ಧಿಯಾಗಲು ಸೂಕ್ತ ಪ್ಯಾಕೇಜ್ ಕೊಡುವ ನಿಟ್ಟಿನಲ್ಲಿ ಮುಂದಾಗಬೇಕು. ಆ ಕೈಗಾರಿಕೆಗಳು ಉಳಿದರೆ ಅಲ್ಲಿ ಆರ್ಥಿಕ ಚಟುವಟಿಕೆ ಉತ್ತಮವಾಗಿ ನಡೆಯುತ್ತವೆ ಎಂದು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, 'ತೊಗರಿ ಪಾರ್ಕ್' ಮತ್ತು ಗಂಗಾವತಿಯಲ್ಲಿ 'ರೈಸ್ ಪಾರ್ಕ್' ಸ್ಥಾಪಿಸುವುದು ಬಾಕಿ ಇದೆ. ಸರ್ಕಾರ ಈ ದಿಸೆಯಲ್ಲಿ ಮುಂದಾಗಬೇಕು. ಹಲವಾರು ಕಾರ್ಯಾಲಯಗಳು ಆ ಭಾಗದಲ್ಲಿ ಆಗಬೇಕಿದೆ. KAT ಪೀಠ ಮಾಡುತ್ತೇವೆ ಎಂದು ಸರ್ಕಾರದವರು ಘೋಷಣೆ ಮಾಡಿದರು, ಆದರೆ ಅದು ಇದುವರೆಗೂ ಆಗಿಲ್ಲ. ಆರ್ಟಿಕಲ್ 371(ಜೆ) ಅಡಿಯಲ್ಲಿ ಬರುವ ಎಲ್ಲಾ disputes ತೀರ್ಮಾನಿಸಲು ಈ ಭಾಗದಲ್ಲಿ ವಿಶೇಷವಾದ KAT ಪೀಠ ಸ್ಥಾಪನೆ ಮಾಡಬೇಕು. ಇದರ ಮೇಲೆ ಸರ್ಕಾರದ ಕಡೆಯಿಂದ ಏನೂ ಕೆಲಸವಾಗಿಲ್ಲ. ಮಾನ್ಯ ಸಭಾಪತಿಯವರೇ, ಸರ್ಕಾರ Police Commissionerate ಕಾರ್ಯಾಲಯ ಮಾಡುವುದರ ಬಗ್ಗೆ ಕೂಡ ಹೇಳಿದ್ದರು. ಅದು ಆಗಿಲ್ಲ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರೇ ನಿಮ್ಮ ಸಮಯ ಮುಗಿದಿದೆ. ದಯವಿಟ್ಟು ಕುಳಿತುಕೊಳ್ಳಿ. ಈ ಭಾಗದಿಂದ ಕೊನೆಯದಾಗಿ ಮಾನ್ಯ ಸಂಕನೂರರವರು ಮಾತನಾಡುತ್ತಾರೆ ಅಷ್ಟೆ. ಆ ಭಾಗದಿಂದ ಮಾನ್ಯ ಉಗ್ರಪ್ಪನವರು, ಮಾನ್ಯ ಲಕ್ಷ್ಮೀನಾರಾಯಣರವರು, ಮಾನ್ಯ ಪ್ರಸನ್ನ ಕುಮಾರ್‌ರವರು ಮಾತನಾಡುತ್ತಾರೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರುಗಳು ಸಮಗ್ರವಾಗಿ ಉತ್ತರ ಕರ್ನಾಟಕದ ಕೊರತೆ, ಬೇಡಿಕೆಗಳು ಮತ್ತು ಅಭಿವೃದ್ಧಿಯ ಬಗ್ಗೆ ಉತ್ತಮವಾದ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ನನ್ನ ಮತ ಕ್ಷೇತ್ರಕ್ಕೆ ಸೀಮಿತವಾಗಿ, ಧಾರವಾಡ, ಹಾವೇರಿ, ಗದಗ ಮತ್ತು ಕಾರವಾರ ಭಾಗದ ಶೈಕ್ಷಣಿಕ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲಿನ ಕೊರತೆಗಳೇನಿವೆ, ಏನು ಆಗಬೇಕು ಎನ್ನುವುದರ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಹಾವೇರಿ ಜಿಲ್ಲೆಯಲ್ಲಿ 7 ತಾಲ್ಲೂಕುಗಳಿವೆ. ಆ ಪೈಕಿ ರಾಣೇಬೆನ್ನೂರು ತಾಲ್ಲೂಕು ಬಿಟ್ಟು ಉಳಿದೆಲ್ಲಾ ತಾಲ್ಲೂಕುಗಳು backward and most backward. ಆರೋಗ್ಯ, ರಸ್ತೆಗಳು, ಶಿಕ್ಷಣ, ಕುಡಿಯುವ ನೀರು ಇತ್ಯಾದಿಗಳನ್ನೊಳಗೊಂಡ ಸುಮಾರು 24 ಕ್ಕಿಂತ ಹೆಚ್ಚು criteria ಗಳನ್ನು ಪರಿಗಣಿಸಿ ಈ ತಾಲ್ಲೂಕುಗಳು backward and most backward ಎಂದು ನಂಜುಂಡಪ್ಪ ವರದಿಯಲ್ಲಿ ಗುರುತಿಸಿದ್ದಾರೆ. ಈ 7 ತಾಲ್ಲೂಕುಗಳ ಪೈಕಿ 6 ತಾಲ್ಲೂಕುಗಳು

backward and most backward ಆಗಿರುವುದರಿಂದ ಸರ್ಕಾರ ಅವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಕೊಠಡಿಗಳು ದುಸ್ಥಿತಿಗೆ ತಲುಪಿವೆ. ಈ ವಿಚಾರ ಪತ್ರಿಕೆಗಳಲ್ಲಿ ಬರುವುದನ್ನು ನೋಡುತ್ತಿದ್ದೇವೆ. ಪಾಲಕರು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿಲ್ಲ. ಅನುದಾನಿತ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಹಾವೇರಿ ಜಿಲ್ಲೆಯಲ್ಲಿನ ಹಲವು ಶಾಲೆಗಳ ಕೊಠಡಿಗಳು ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಇವತ್ತೋ ನಾಳೆಯೋ ಬೀಳುವಂತಹ ಸ್ಥಿತಿಯಲ್ಲಿವೆ. ಅಂತಹ ಕೊಠಡಿಗಳ ಸಂಖ್ಯೆ: 1215. ದುರಸ್ತಿ ಮಾಡಬೇಕಾಗಿರುವ ಕೊಠಡಿಗಳ ಸಂಖ್ಯೆ 905. ಇದರ ಅರ್ಥ 2120 ಕೊಠಡಿಗಳು ಇವತ್ತೋ ನಾಳೆಯೋ ಬೀಳುವ ಸ್ಥಿತಿಯಲ್ಲಿವೆ. ಇದಲ್ಲದೇ, ಹಾವೇರಿ ಜಿಲ್ಲೆಯಲ್ಲಿರುವ ಶಾಲೆಗಳಿಗೆ ಹೆಚ್ಚುವರಿಯಾಗಿ ಬೇಕಾಗಿರುವ ಕೊಠಡಿಗಳು ಸಂಖ್ಯೆ 676. ಇಷ್ಟು ಕೆಟ್ಟ ಪರಿಸ್ಥಿತಿ ಇದೆ.

ಮಾನ್ಯ ಸಭಾಪತಿಯವರೇ, ಕಾರವಾರ ಜಿಲ್ಲೆಯನ್ನು ಶೈಕ್ಷಣಿಕವಾಗಿ ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಶಿರಸಿ ಶೈಕ್ಷಣಿಕ ವಿಭಾಗದಲ್ಲಿ 247 ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿವೆ, ಇವತ್ತೋ ನಾಳೆಯೋ ಬೀಳುವ ಸ್ಥಿತಿಯಲ್ಲಿವೆ. ಅಲ್ಲಿನ 300 ಪ್ರೌಢ ಶಾಲೆಗಳಿಗೆ ಕಾಂಪೌಂಡ್‌ಗಳಿಲ್ಲ. ಕಾರವಾರ ಶೈಕ್ಷಣಿಕ ವಿಭಾಗದ ಅಂಕೋಲ ಮತ್ತು ಬಟ್ಕಳ ಪ್ರದೇಶಗಳು ಹಿಂದುಳಿದವು ಎಂದು ಪರಿಗಣಿಸಿದ್ದಾರೆ. ಶಿರಸಿ ಶೈಕ್ಷಣಿಕ ವಿಭಾಗದ ಜೋಯಿಡಾ ಮತ್ತು ಸಿದ್ಧಾಪುರ ಪ್ರದೇಶಗಳನ್ನು ಹಿಂದುಳಿದ ಪ್ರದೇಶಗಳೆಂದು ನಂಜುಂಡಪ್ಪ ವರದಿಯಲ್ಲಿ ನಮೂದು ಮಾಡಲಾಗಿದೆ. ಕಾರವಾರ ಶೈಕ್ಷಣಿಕ ವಿಭಾಗದಲ್ಲಿ 272 ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿವೆ. ಶಿಕ್ಷಣದ ಕಾಶಿ ಎಂದು ಕರೆಯುವ ಧಾರವಾಡ ಜಿಲ್ಲೆಯಲ್ಲಿ ಸುಮಾರು 125 ಕೊಠಡಿಗಳು ಸಂಪೂರ್ಣವಾಗಿ ಶಿಥಿಲಗೊಂಡಿವೆ. ಗದಗ ಜಿಲ್ಲೆಯಲ್ಲಿ ಸುಮಾರು 345 ಕೊಠಡಿಗಳು ಶಿಥಿಲಗೊಂಡಿವೆ. 37 ಶಾಲೆಗಳಿಗೆ ಕಾಂಪೌಂಡ್ ಇಲ್ಲ. 110 ಶೌಚಾಲಯಗಳು ದುರಸ್ತಿಗೆ ಒಳಪಡಬೇಕಾದ ಸ್ಥಿತಿಯಲ್ಲಿವೆ.

(ಮುಂದು . . .)

(1203)22-11-2017 8.30 ಡಿಎಸ್-ಕೆಎಸ್

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):-**

ಮಾನ್ಯ ಸಭಾಪತಿಯವರೇ, ತಮಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಕೇವಲ ನಾಲ್ಕು ಜಿಲ್ಲೆಗಳಲ್ಲಿ ಮಾತ್ರವಲ್ಲ. ಇಲ್ಲಿರುವಂತಹ ಎಲ್ಲಾ ಸದಸ್ಯರುಗಳಿಗೂ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಬಹಳಷ್ಟು ಪ್ರಾಥಮಿಕ ಶಾಲೆಗಳಿವೆ. ಅವುಗಳಲ್ಲಿ ಬಹಳಷ್ಟು ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಶಿಥಿಲಗೊಂಡಿವೆ. ನಾನು ಮುಂದುವರೆದು ಹೇಳಬೇಕಾಗುತ್ತದೆ. ಬಹುಶಃ ನನಗನಿಸುವುದೇನೆಂದರೆ, ಸ್ವತಂತ್ರ ಸಿಕ್ಕಿದ ಮೇಲೆ ನಾವು ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ಕಟ್ಟಿರುವುದೇ ನೋಡಿಲ್ಲ. ದುರಸ್ತಿಗಾಗಿ ಸರ್ಕಾರ ಹಣ ಬಿಡುಗಡೆಯೇ ಮಾಡಿಲ್ಲ. ನಾವು ಈ ಸಂದರ್ಭದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಸರ್ವ ಶಿಕ್ಷಣ ಅಭಿಯಾನದ ಮೂಲಕ ಹಣವನ್ನು ಬಿಡುಗಡೆ ಮಾಡಿದರು. ಆಗ ಎಲ್ಲಾ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳಿಗೆ ಸುಣ್ಣಬಣ್ಣ, ದುರಸ್ತಿ, ಕಾಪೌಂಡ್, ಇವೆಲ್ಲಾ ಆಗಿವೆ. ನಾನು ಸರ್ಕಾರವನ್ನು ತಮ್ಮ ಮುಖಾಂತರ ಆಗ್ರಹಿಸುವುದೇನೆಂದರೆ, ದಯವಿಟ್ಟು ಈ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳು ಸಂಪೂರ್ಣವಾಗಿ ಏನು ಶಿಥಿಲಗೊಂಡಿವೆ ಅವುಗಳ ದುರಸ್ತಿ ಕಾಮಗಾರಿಗೆ ಆದಷ್ಟು ಬೇಗನೇ ಮುತುರ್ವಜಿ ವಹಿಸಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಇದರ ಜೊತೆಗೆ ತಮಗೆಲ್ಲಾ ಗೊತ್ತಿರುವಂತೆ ಕಲಿಸುವ ಶಿಕ್ಷಕರ ಕೊರತೆಯೂ ಕೂಡ ಬಹಳಷ್ಟು ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವತ್ತು ಸರ್ಕಾರ ಎಲ್ಲಾ ಸೌಲಭ್ಯಗಳನ್ನು ಕೊಡಲು ಘೋಷಣೆಯನ್ನು ಮಾಡಿದೆ, ಗುಣಮಟ್ಟದ ಶಿಕ್ಷಣವನ್ನು ಕೊಡಬೇಕು, ಒಂದು ಕಡೆ ಕೊಠಡಿಗಳಿಲ್ಲ, ಕಲಿಸುವ ಶಿಕ್ಷಕರ ಕೊರತೆ ಇದೆ. ನಮ್ಮ ಹಾವೇರಿ ಜಿಲ್ಲೆಯಲ್ಲಿ ಸುಮಾರು 388 ಪ್ರಾಥಮಿಕ ಶಿಕ್ಷಕರು ಬೇಕಾಗಿದ್ದಾರೆ. ಪ್ರೌಢಶಾಲೆಗಳಲ್ಲಿ 59 ಶಿಕ್ಷಕರು ಬೇಕಾಗಿದ್ದಾರೆ. ಅದೇ ರೀತಿ ಇವತ್ತು ಶಿರಸಿ ಜಿಲ್ಲೆಯಲ್ಲಿ 400 ಖಾಲಿ ಹುದ್ದೆಗಳಿವೆ. ಸೆಕೆಂಡರಿಯಲ್ಲಿ 62 ಖಾಲಿ ಹುದ್ದೆಗಳಿವೆ. ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ 62 ಪ್ರಾಥಮಿಕ ಶಾಲಾ ಶಿಕ್ಷಕರು ಹುದ್ದೆಗಳು ಹಾಗೂ 15 ಪ್ರೌಢಶಾಲೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಧಾರವಾಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ 113, ಪ್ರೌಢಶಾಲೆಯಲ್ಲಿ 333 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಗದಗ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 161 ಖಾಲಿ ಹುದ್ದೆಗಳಿವೆ. ಸೆಕೆಂಡರಿಯಲ್ಲಿ 67 ಹುದ್ದೆಗಳು ಖಾಲಿ ಇವೆ. ನಾನು ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಸರ್ಕಾರ ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನು ನೇಮಕ ಮಾಡುತ್ತೇವೆಂದು ಘೋಷಣೆಯನ್ನು ಮಾಡಿದೆ. ಆದರೆ ನನ್ನ ಅನುಭವದಲ್ಲಿ ಹೇಳುವುದಾದರೆ, ನಾನು ಎಂಎಲ್‌ಸಿ ಆಗಿ ಸುಮಾರು ಮೂರೂವರೆ ವರ್ಷಗಳಾಯಿತು. ಹಿಂದಿನ ಶಿಕ್ಷಣ ಸಚಿವರಾಗಿದ್ದ ಮಾನ್ಯ ಕಿಮ್ಮನೆ ರತ್ನಾಕರರವರು ಇದ್ದಾಗ ಪಿ.ಯು.ಕಾಲೇಜಿಗೆ ಸಾವಿರಕ್ಕಿಂತ ಹೆಚ್ಚು ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕಾಲ್‌ಫರ್ ಮಾಡಿದರು. ಈಗ ಮೂರ್ನಾಲ್ಕು ವರ್ಷಗಳಾಯಿತು. ಇನ್ನು ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಆ notification ಅನ್ನು ರದ್ದು ಮಾಡಿದರು. ಮತ್ತೊಮ್ಮೆ ರದ್ದು ಮಾಡಿದರು. ಇವತ್ತು ಬಹಳಷ್ಟು ವಿಳಂಬ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಇದರಿಂದ ಶಿಕ್ಷಣದ ಗುಣಮಟ್ಟದ ಮೇಲೆ ಬಹಳ ಹೊಡೆತ ಬೀಳುತ್ತದೆ. ಕೇವಲ ಈ ನಾಲ್ಕು ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಶಿಕ್ಷಕರ ನೇಮಕಾತಿಯನ್ನು ಆದ್ಯತೆ ಮೇಲೆ ಮಾಡಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಹಾವೇರಿ ಜಿಲ್ಲೆಯಲ್ಲಿ ಬಹಳಷ್ಟು ಬೇಡಿಕೆಗಳಿವೆ. ಹಾವೇರಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಬಹಳ ವರ್ಷಗಳ ಹಿಂದೆ ನಿರ್ಣಯ ಕೈಗೊಂಡರು. ಗದಗ್‌ನಲ್ಲಿ, ಕೊಪ್ಪಳದಲ್ಲಿ ಆಯಿತು. ಇವತ್ತು ಹಾವೇರಿ ಜಿಲ್ಲೆಯು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಅತೀ ಹಿಂದುಳಿದ ಜಿಲ್ಲೆಯಾಗಿದೆ. ಅಲ್ಲಿ ವೈದ್ಯಕೀಯ ಕಾಲೇಜು ಬಹಳ ಅವಶ್ಯಕತೆ ಇದೆ. ನಾನು ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ, ಮಾನ್ಯ ಮುಖ್ಯಮಂತ್ರಿಯವರಿಗೆ ಆಗ್ರಹಿಸುವುದೇನೆಂದರೆ, ಇವತ್ತೇನು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ನಡೆದಿದೆ ಅದು ಸಫಲವಾಗಬೇಕಾದರೆ, ಸಾರ್ಥಕವಾಗಬೇಕಾದರೆ ಉತ್ತರ ಕರ್ನಾಟಕಕ್ಕೆ ಏನೇನು ಆಗಬೇಕಾಗಿದೆ ಅವುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಘೋಷಣೆ ಮಾಡಬೇಕು ಮತ್ತು ಮುಂದಿನ ವರ್ಷ ಹಾವೇರಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಮಾನ್ಯ ಸೀತಾರಾಂರವರು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ನೆನಪು ಮಾಡಿಕೊಳ್ಳುತ್ತೇನೆ. ಅವರು ಹಿಂದೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿದ್ದಾಗ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಕೈಗೊಂಡರು. ಅವರು ಮಂತ್ರಿಗಳಾಗಿದ್ದಾಗ ಸಾಕಷ್ಟು ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಿದರು, ಹಣವನ್ನು ಬಿಡುಗಡೆ ಮಾಡಿದರು. ಸುಮಾರು 10-12 ವರ್ಷ ಆಯಿತು, ಹಾವೇರಿ ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಅಲ್ಲಿನ KDP (Karnataka Development Programme) ಸಭೆಗೆ ನಾನು, ಮಾನ್ಯ ಬಸವರಾಜ ಹೊರಟ್ಟಿಯವರು ಹೋಗಿದ್ದೇವೆ. KDP ಸಭೆಯಲ್ಲಿ ನಾವು ಬಹಳಷ್ಟು ಒತ್ತಾಯ ಮಾಡಿರುತ್ತೇವೆ, ಹೇಳುತ್ತಿರುತ್ತೇವೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಇದ್ದರು, ನಾನು ಅವರಿಗೆ ಕೈಮುಗಿದು ಕೇಳಿಕೊಂಡೆ, ಸರ್ ನನ್ನ ಕ್ಷೇತ್ರದಲ್ಲಿ ಬಹಳ ಅವಶ್ಯಕತೆ ಇರುವುದರಿಂದ ದಯವಿಟ್ಟು ವಿಜ್ಞಾನ ಕೇಂದ್ರವನ್ನು ಮಾಡಬೇಕು ಎಂದು ಕೇಳಿದೆ. ಇವತ್ತು ಗದಗ ಜಿಲ್ಲೆಯಲೂ ವಿಜ್ಞಾನ ಕೇಂದ್ರ ಇಲ್ಲ. ಆದರೆ, ನಾನು ಮಾನ್ಯ ಸೀತಾರಾಂರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಗದಗ್‌ನಲ್ಲಿ ವಿಜ್ಞಾನ ಕೇಂದ್ರವನ್ನು ಮಾಡುವುದಕ್ಕೆ ಇವತ್ತು ಅನುಮತಿಯನ್ನು ಕೊಟ್ಟಿದ್ದಾರೆ. ನನ್ನ ವಿನಂತಿ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೆಂದರೆ, 12 ವರ್ಷಗಳ ಹಿಂದೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಅದಕ್ಕೆ ಬಡ್ಡಿ ಎಲ್ಲಾ ಸೇರಿ ಸುಮಾರು ಎರಡು ಕೋಟಿ ರೂಪಾಯಿಗಳಾಗಿದೆ. ನಾನು ಮಾನ್ಯ ಸೀತಾರಾಂರವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ತಾವು ಹಾವೇರಿ ಜಿಲ್ಲೆಗೆ ಬರಬೇಕು. ಹೊಸದಾಗಿ ಹಣ ಬಿಡುಗಡೆ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಸ್ಥಳವನ್ನು ಗುರುತಿಸಿದ್ದಾರೆ. ಈ ಅಧಿವೇಶನ ಮುಗಿದ ತಕ್ಷಣ ನೀವು ಹಾವೇರಿ ಜಿಲ್ಲೆ, ಗದಗ ಜಿಲ್ಲೆಗೆ ಬಂದು ವಿಜ್ಞಾನ ಕೇಂದ್ರದ ಸ್ಥಾಪನೆಗೆ ಅಡಿಗಲ್ಲನ್ನು ಹಾಕಬೇಕೆಂದು ನಾನು ಕಳಕಳಿಯ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ವಿಜ್ಞಾನದ ಬಗ್ಗೆ ಕೇವಲ ಪಾಠ ಮಾಡಿದರೆ ಆಗುವುದಿಲ್ಲ. ಇವತ್ತು ಪ್ರಯೋಗಗಳ ಮೂಲಕ ಪಾಠ ಮಾಡಿದರೆ ಪರಿಣಾಮಕಾರಿಯಾಗುತ್ತದೆ. ಇವತ್ತು ಯಾವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ Science Lab ಗಳಿವೆ? ಒಂದೂ ಶಾಲೆಯಲ್ಲೂ ಇಲ್ಲ. ಆ ದಿಸೆಯಲ್ಲಿ ದಯವಿಟ್ಟು ನನ್ನ ಕಳಕಳಿಯ ಪ್ರಾರ್ಥನೆ ಏನೆಂದರೆ, ನೀವು ಎಲ್ಲಾ ಜಿಲ್ಲೆಗಳಲ್ಲೂ ಆದ್ಯತೆ ಮೇರೆಗೆ ಎಲ್ಲೆಲ್ಲಿ ವಿಜ್ಞಾನ ಲ್ಯಾಬ್‌ಗಳಿಲ್ಲ ಅಲ್ಲಿ ವಿಜ್ಞಾನ ಲ್ಯಾಬ್‌ಗಳನ್ನು ಸ್ಥಾಪಿಸಬೇಕು, ಆ ದಿಸೆಯಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇದರ ಜೊತೆಗೆ, ಹಾವೇರಿ ಜಿಲ್ಲೆಯಲ್ಲಿ ಕೈಗಾರಿಕೆಗಳಿಲ್ಲ. ಇವತ್ತು ಅಲ್ಲಿ ನಿರುದ್ಯೋಗಿಗಳ ಸಮಸ್ಯೆ ಬಹಳಷ್ಟು ಇವೆ. ಆ ಭಾಗದಲ್ಲಿ ಹೊಸ ಕೈಗಾರಿಕೆಗಳು ಕೂಡ ಪ್ರಾರಂಭ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ವಿಶೇಷವಾಗಿ ಕಾರವಾರ ಜಿಲ್ಲೆಯ ಬಗ್ಗೆ ತಮಗೆ ಗೊತ್ತಿದೆ, 'Western Ghats is recognized as the Biodiversity Hotspots'. ನಮ್ಮ ದೇಶದಲ್ಲಿ Western Ghats and Eastern Himalayas ಎಂದು ಎರಡು Hotspots ಇವೆ. Hotspots ಎಂದು ಏಕೆ ಹೇಳುತ್ತಾರೆಂದರೆ, ಜಗತ್ತಿನಲ್ಲಿ ಎಲ್ಲಿಯೂ ಸಿಗಲಾರದ ಸಸ್ಯಗಳು, ಪ್ರಾಣಿಗಳು Western Ghats ನಲ್ಲಿವೆ. ಹೀಗಾಗಿ ಸಸ್ಯ ಪ್ರಭೇದಗಳನ್ನು ರಕ್ಷಣೆ ಮಾಡುವುದು ಬಹಳ ಅವಶ್ಯಕತೆ ಇದೆ. 'Western Ghats is rich in Biodiversity', ಆ ದಿಸೆಯಲ್ಲಿ ನಾನು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಿಗೆ ವಿನಂತಿ ಮಾಡುತ್ತೇನೆ, ಅಲ್ಲಿರತಕ್ಕಂಥ ಪ್ರಾಣಿ ಸಂಪತ್ತು ಇರಬಹುದು, ಸಸ್ಯ ಸಂಪತ್ತು ಇರಬಹುದು, ವಿಶೇಷವಾಗಿ ಕೆಲವು ಪ್ರಭೇದಗಳು ಜಗತ್ತಿನಲ್ಲಿ ಎಲ್ಲಿ ಸಿಗದಿದ್ದರೂ ಅಲ್ಲಿ ಸಿಗುತ್ತವೆ. ಆ ದಿಸೆಯಲ್ಲಿ ದಯವಿಟ್ಟು Western Ghats ನ biodiversity ಏನಿದೆ ಅದನ್ನು ರಕ್ಷಣೆ ಮಾಡುವಂತಹ ಯೋಜನೆಯನ್ನು ರೂಪಿಸಿಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿದ್ದಾಗ, ನಮ್ಮ ಜೊತೆಯಲ್ಲಿ ಹಿರಿಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಇದ್ದಾಗ ನಾವು ಬಹಳಷ್ಟು ಪ್ರಯತ್ನ ಮಾಡಿ ಕುಲಪತಿಗಳಿಗೆ ಒತ್ತಾಯ ಮಾಡಿ ಒಂದು ಪಿ.ಜಿ.ಸೆಂಟರ್‌ನ್ನು ತೆಗೆದುಕೊಂಡೆವು. ಗದಗ್ ಜೊತೆಯಲ್ಲಿ ಹಾವೇರಿಗೂ ಆಯಿತು. ನಾವು ಇವತ್ತು ಎಲ್ಲಿದ್ದೇವೆಂದರೆ, ಈಗ ಮಾನ್ಯ ಎಚ್.ಕೆ.ಪಾಟೀಲ್‌ರವರು ಸದನದಲ್ಲಿ ಇರಬೇಕಾಗಿತ್ತು. ಅವರು ಏಕೆ ನಿರಾಸಕ್ತಿಯನ್ನು ಹೊಂದಿದ್ದಾರೆಯೋ ಗೊತ್ತಿಲ್ಲ. ಅವರು ಗ್ರಾಮೀಣ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದರು. ನಮಗೂ ಖುಷಿ ಇದೆ, ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ಈ ಪಿ.ಜಿ.ಸೆಂಟರ್‌ನ್ನು ಅವರು ಏಕೆ ನಿರ್ಲಕ್ಷ್ಯ ಮಾಡಿದರು? ನಿನ್ನೆ ಅವರು ಸದನದಲ್ಲಿದ್ದರು. ನಿನ್ನೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ನಾನು ನೇರವಾಗಿಯೇ ಅವರಿಗೆ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೆ. ಇವತ್ತು 14 ವರ್ಷಗಳಾಯಿತು, ಸರ್ಕಾರ ಸ್ಥಳವನ್ನು ತೆಗೆದುಕೊಂಡಿದೆ. ಮಾನ್ಯ ಎಸ್.ಎಂ.ಕೃಷ್ಣರವರನ್ನು ಇವತ್ತು ನಾನು ನೆನಪು ಮಾಡಿಕೊಳ್ಳುತ್ತೇನೆ. ಮಾನ್ಯ ಎಸ್.ಎಂ.ಕೃಷ್ಣರವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಅವರು ಗದಗ್‌ಗೆ ಬಂದಾಗ ನಾನೇ ಗದಗ್‌ಗೆ ಪಿ.ಜಿ.ಸೆಂಟರ್ ಬೇಕೆಂದು ಬೇಡಿಕೆ ಇಟ್ಟಾಗ ಅವರು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ

ಮಾಡಿದರು. 45 ಎಕರೆ ಜಮೀನನ್ನು ಖರೀದಿ ಮಾಡಲಾಗಿದೆ. ಇವತ್ತು ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಬಸವರಾಜ ರಾಯರೆಡ್ಡಿಯವರಿಗೆ ಎರಡು ಸಲ ಮನವಿ ಕೊಟ್ಟಿದ್ದೇವೆ. ಅವರು ಹಣ ಬಿಡುಗಡೆ ಮಾಡುತ್ತೇನೆಂದು ಹೇಳುತ್ತಾರೆ, ನಿನ್ನೆ ನನಗೆ ಉತ್ತರ ಕೊಟ್ಟಿದ್ದಾರೆ, ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಮಾಡಿ, ನಾವು ಅಲ್ಲಿ ಅಡಿಗಲ್ಲು ಹಾಕಿಸುತ್ತೇವೆಂದು ಹೇಳಿದ್ದಾರೆ. ನಾನು ಮೂರು ವರ್ಷಗಳಿಂದ ಬಡಿದಾಡುತ್ತಿದ್ದೇನೆ. ನಾನು ಮಾನ್ಯ ಎಚ್.ಕೆ.ಪಾಟೀಲ್‌ರವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಹಾವೇರಿ ಜಿಲ್ಲೆಯಲ್ಲಿ ನಮ್ಮ ಗದಗ್ ಜೊತೆಯಲ್ಲೇ ಆರಂಭವಾಗಿದೆ. ಅಲ್ಲಿ ಇವತ್ತು ಪಿ.ಜಿ.ಸೆಂಟರ್ campus ಆಗಿದೆ. ಅಲ್ಲಿ 14 ವಿಷಯಗಳು ನಡೆಯುತ್ತಿವೆ. ಗದಗ್ ಜಿಲ್ಲೆಯನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಅಲ್ಲಿ ನಾಲ್ಕೇ ವಿಷಯಗಳು ನಡೆಯುತ್ತಿವೆ. ಅದಕ್ಕೆ ನಾನು ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಗದಗ್‌ಗೆ ಪಿ.ಜಿ.ಸೆಂಟರ್, administrative board, ಶೈಕ್ಷಣಿಕ ಕಟ್ಟಡ ಇದೆ ಅದರ ಶಂಕು ಸ್ಥಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳ ಕೈಯಿಂದ ಮಾಡಿಸಬೇಕೆಂದು ನಾನು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಗದಗ ಜಿಲ್ಲೆಯ ಬೆಟಗೇರಿಯಲ್ಲಿ ಬಹಳಷ್ಟು ನೇಕಾರರು ಇದ್ದಾರೆ. ಬಹಳ ವರ್ಷಗಳಿಂದ ಅಲ್ಲಿ ಜವಳಿ ಪಾರ್ಕ್ ಆಗಬೇಕೆಂದು ನೇಕಾರರ ಬೇಡಿಕೆ ಇದೆ. ನಾನು ಅದರ ಬಗ್ಗೆ ಪ್ರಶ್ನೆ ಹಾಕಿದ್ದೆ ಅದು ಚುಕ್ಕೆ ರಹಿತ ಪ್ರಶ್ನೆಯಾಗಿದೆ. ಇವತ್ತು ಮಾನ್ಯ ಸಚಿವರು ಸದನದಲ್ಲಿಲ್ಲ. ಅವರು ನನಗೆ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಅಂತರರಾಷ್ಟ್ರೀಯ ಮಾದರಿಯ ಒಂದು ಜವಳಿ ಪಾರ್ಕ್‌ನ್ನು ಗದಗ್‌ಗೆ ಮಂಜೂರು ಮಾಡುವುದಕ್ಕೆ ನಾವು ಪರಿಶೀಲನೆ ಮಾಡುತ್ತಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ಈಗೇನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜವಳಿ ಪಾರ್ಕ್‌ನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆ ಎಂದು ಹೇಳಿದ್ದಾರೆ ಅದನ್ನು ಮಂಜೂರು ಮಾಡಬೇಕೆಂದು ನಾನು ಕಳಕಳಿಯ ವಿನಂತಿ ಮಾಡುತ್ತಿದ್ದೇನೆ. ಇವತ್ತು ಉತ್ತರ ಕರ್ನಾಟಕದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದೇವೆ. ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆ ಸುಮಾರು 6 ಗಂಟೆಗಳ ಕಾಲ, ಇವತ್ತು ಕೂಡ ಸುಮಾರು 4-5 ಗಂಟೆಗಳ ಸಮಯ ಕೊಟ್ಟಿದ್ದೀರಿ. ಆದರೆ ಇಷ್ಟೆಲ್ಲಾ ಚರ್ಚೆಗೆ ಸಾರ್ಥಕವಾಗ ಬೇಕಾದರೆ ಯಾವ್ಯಾವ ಜಿಲ್ಲೆಗಳಲ್ಲಿ ಏನೇನು ಪ್ರಮುಖ ಬೇಡಿಕೆಗಳಿವೆ ಅದನ್ನು ಮಾನ್ಯ ಮುಖ್ಯಮಂತ್ರಿಯವರಿಂದ ಘೋಷಣೆಯನ್ನು ಮಾಡಿಸಿ. ಇಲ್ಲದಿದ್ದರೆ ಈ ಚರ್ಚೆ ಮಾಡಿರುವುದು ವ್ಯರ್ಥವಾಗುತ್ತದೆ. ಬೆಳಗಾವಿಯಲ್ಲಿ ಅಧಿವೇಶನ ನಡೆದಾಗ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗುತ್ತದೆಯೇ ಹೊರತು, ಏನೂ ಕೆಲಸಗಳಾಗುವುದಿಲ್ಲ. ಆ ರೀತಿಯಾಗಬಾರದು. ಕೆಲವೊಂದು ಮಹತ್ವದ ಘೋಷಣೆಗಳನ್ನು ಮಾಡಬೇಕು. ಹಾವೇರಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭವಾಗಬೇಕು. ಗದಗ್‌ನಲ್ಲಿ ಪಿ.ಜಿ.ಸೆಂಟರ್‌ನ್ನು ಪ್ರಾರಂಭ ಮಾಡಬೇಕು. ಮಾನ್ಯ ಸಭಾನಾಯಕರು ಬಂದು ಹಾವೇರಿ, ಗದಗ್‌ನಲ್ಲಿ ವಿಜ್ಞಾನ ಕೇಂದ್ರಕ್ಕೆ ಅಡಿಗಲ್ಲನ್ನು ಹಾಕಬೇಕು. ಇದನ್ನೆಲ್ಲಾ ಮಾಡಿದರೆ ಈ ಚರ್ಚೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)....

1204/22-11-2017/8-40/ಬಿಕೆಪಿ-ಕೆಎಸ್

**ಶ್ರೀ ಸೋಮಣ್ಣ ಮ. ಬೇವಿನಮರದ(ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ತಾವು 10 ನಿಮಿಷಗಳಲ್ಲಿ ಮುಗಿಸಬೇಕೆಂದು ಹೇಳಿದ್ದೀರಿ. ನಾನು ಆ ಸಮಯದೊಳಗಡೆಯೇ ಮುಗಿಸುತ್ತೇನೆ. ಈ ವಿಚಾರದಲ್ಲಿ ಆತಂಕ ಬೇಡ. ಈಗಾಗಲೇ ಮಾತನಾಡಿರುವಂತಹ ಅನೇಕ ಹಿರಿಯ ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ರಾಜಕೀಯ ಪಕ್ಷಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚುನಾವಣೆಯ ಸಂದರ್ಭದಲ್ಲಿ ಇಡೀ ರಾಜ್ಯವನ್ನು ಸುತ್ತಿ ಆಯಾಯ ಪ್ರದೇಶದಲ್ಲಿ ಸ್ಥಳೀಯ ಬೇಡಿಕೆಗಳನ್ನು ತೆಗೆದುಕೊಂಡು, ಒಂದು ರಾಜಕೀಯ ಪಕ್ಷವಾಗಿ ಚುನಾವಣಾ ಪ್ರಣಾಳಿಕೆಯನ್ನು ಬಿಡಗಡೆ ಮಾಡುತ್ತಾರೆ. ಅದೇ ರೀತಿಯಲ್ಲಿ ಐದು ವರ್ಷಗಳ ಹಿಂದೆ ಆಡಳಿತಕ್ಕೆ ಬರುತ್ತೇವೆಂದು ಹೇಳಿ, ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಹೋದಂತಹ ಸಂದರ್ಭದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆಂದು ಜನರಿಗೆ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದು ಇನ್ನೇನು 3 ತಿಂಗಳ ಅವರ ಅಧಿಕಾರದ ಅವಧಿ ಮುಗಿಯುವ ಹಂತದಲ್ಲಿ ಇದೆ. ಅಧಿಕಾರ ಉಳಿಸಿಕೊಳ್ಳುವುದು, ಬಿಡುವುದು ಅವರು ಮಾಡತಕ್ಕಂತಹ ಕೆಲಸದ ಮೇಲೆ ನಿರ್ಣಯವಾಗುತ್ತದೆ.

**ಸನ್ಮಾನ್ಯ ಸಭಾಪತಿಯವರೇ,** ಹಿರಿಯ ಸದಸ್ಯರಾದಂತಹ ಸನ್ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಾ, ಬಾಂಬೆ ಕರ್ನಾಟಕ, ಇನ್ನಿತರ ಪ್ರದೇಶಗಳ ಅಭಿವೃದ್ಧಿಯ ವಿಚಾರವಾಗಿ ಹೇಳಿದ್ದಾರೆ. ನಾನು ಮತ್ತೆ, ಆ ವಿಚಾರಕ್ಕೆ ಹೋಗುವುದಿಲ್ಲ. ಒಟ್ಟು ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವಂತಹ ಪೂರ್ವದಲ್ಲಿ ಉತ್ತರ ಕರ್ನಾಟಕದ ಕೆಲವೊಂದು ಭಾಗಗಳಿಗೆ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಹೇಳಿ ತಮ್ಮ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಲಾಗಿದೆ. ಅದನ್ನು ನಾನು ತಮಗೆ ನೆನಪು ಮಾಡುತ್ತಿದ್ದೇನೆ. ತಾವು ಪರಿಶೀಲನೆ ಮಾಡಿ ನಾಳೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ನಾವು ಕೊಟ್ಟಿದ್ದು ಸರಿ ಇದೆ, ಅದರಲ್ಲಿ ಎಷ್ಟು ಮಾಡಿದ್ದೇವೆ, ಇನ್ನೇನು ಮಾಡಬೇಕಾಗಿದೆ, ಯಾವಾಗ ಮಾಡುತ್ತೇವೆ ಎನ್ನುವಂತಹ ಉತ್ತರವನ್ನು ಕೊಟ್ಟರೆ ಸಾಕು ಎನ್ನುವಂತಹ ನಿರೀಕ್ಷೆಯಲ್ಲಿ ನಾನಿದ್ದೇನೆ.

**ಸನ್ಮಾನ್ಯ ಸಭಾಪತಿಯವರೇ,** ಕಾಂಗ್ರೆಸ್ ಪಕ್ಷ 2013 ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಬೀದರ್ ಚಾಮರಾಜನಗರ ಮಧ್ಯ ಅಷ್ಟಪಥ ರಸ್ತೆ, ಕೈಗಾರಿಕಾ ಪಾರ್ಕ್, ಟೌನ್‌ಶಿಫ್ ಮಾಡುವುದರ ಮೂಲಕ 50 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿ ಮಾಡುವಂತಹ ವಾಗ್ದಾನವನ್ನು ಮಾಡಿತ್ತು. ನಾನು ತಮ್ಮಲ್ಲಿ ಒಂದು ಮಾತನ್ನು ಕೇಳಲಿಕ್ಕೆ ಬಯಸುತ್ತೇನೆ. ಅಂದು ಮಾಡಿದಂತಹ ಚುನಾವಣಾ ಪ್ರಣಾಳಿಕೆಯ ಪ್ರತಿಯೊಂದು ವಿಚಾರವೂ ನನ್ನ ಕಡೆ ಇದೆ. ಅವರು ವಿಶೇಷವಾಗಿ ಗಾರ್ಮೆಂಟ್ಸ್, ಲಘು ಇಂಜಿನೀಯರಿಂಗ್, ಆಟೋಮೊಬೈಲ್, ಕೈಮಗ್ಗ, ಆಗ್ರೋ ಉದ್ಯಮ, ಎಲೆಕ್ಟ್ರೀಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಗೆ ಉತ್ತೇಜನವನ್ನು ಕಾರಿಡಾರ್ ಮೂಲಕ ಸಮರ್ಪಕವಾಗಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಅಂದಿನ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೀರಿ. ಇವತ್ತು ತಾವು ಎಷ್ಟು ಉದ್ದಿಮೆಗಳನ್ನು ಪ್ರಾರಂಭ ಮಾಡಿದ್ದೀರಿ, ಉತ್ತರ ಕರ್ನಾಟಕದ ಈ ಭಾಗದ ಜನರು ತಮ್ಮ ಮೇಲೆ ವಿಶ್ವಾಸವನ್ನಿಟ್ಟು ಮತವನ್ನು ಹಾಕಿದ್ದಕ್ಕೆ ಎಷ್ಟು ನಿರದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆನ್ನುವುದು ಒಂದು ವಿಚಾರ.

ಅದರ ಜೊತೆಗೆ, ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿ ಹಾಗೂ ಜಿಲ್ಲೆಯ ಸುಧಾರಣೆಗಾಗಿ ಬಂಡವಾಳ ಹೂಡಿಕೆಯ ಭರವಸೆಯನ್ನು ನಿರೀಕ್ಷಿತವಾಗಿ ಕೊಡುತ್ತೇವೆಂದು ಹೇಳಿದ್ದು, ಅದನ್ನು ಇಲ್ಲಿಯವರೆಗೂ ಕೊಟ್ಟಿಲ್ಲ. ನಾನು ಕೃಷಿ ಮನೆತನದಿಂದ ಬಂದವನಾಗಿದ್ದೇನೆ. ತಾವು ಅಂದು ಏನು ಹೇಳಿದ್ದೀರಿ ಎಂದರೆ, ಪ್ರತಿ ಹಳ್ಳಿಗೆ ಕೃಷಿ ಉತ್ಪನ್ನಗಳ ಕೊಯ್ಲು ಮತ್ತು ಒಣಗಿಸುವ ಪಾರ್ಕ್, ಕಣ ನಿರ್ಮಾಣದ ಭರವಸೆಯನ್ನು ಕೊಟ್ಟಿದ್ದ ತಾವುಗಳು ಕೆಲವೇ ಗ್ರಾಮಗಳಿಗೆ ಮಾತ್ರ ಕೊಟ್ಟಿದ್ದೀರಿ. ಎಲ್ಲಾ ಗ್ರಾಮಗಳಿಗೆ ಕೊಡುತ್ತೇವೆ ಎನ್ನುವಂತಹ ಮಾತನ್ನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೀರಿ. ಇಡೀ ಕರ್ನಾಟಕ ರಾಜ್ಯದಲ್ಲಿರುವಂತಹ, ಅದರಲ್ಲೂ ಉತ್ತರ ಕರ್ನಾಟಕದ ಭಾಗದಲ್ಲಿ ಇರುವಂತಹ ಎಷ್ಟು ಹಳ್ಳಿಗಳಿಗೆ ಈ ಒಂದು ಅನುಕೂಲತೆಯನ್ನು ಮಾಡಿಕೊಟ್ಟಿದ್ದೀರಿ ಎನ್ನುವುದನ್ನು ಹೇಳಬೇಕು. ಅದರ ಜೊತೆಗೆ ತಾವು ಬಹಳ ಆಶಾದಾಯಕವಾಗಿ ಒಂದು ಮಾತನ್ನು ಹೇಳಿದ್ದೀರಿ. ಈ ಭಾಗದ ನಮ್ಮ ಜನ ನಂಬಿ ನಿಮಗೆ vote ಹಾಕಿದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಪಶು ಆಸ್ಪತ್ರೆ ಆರಂಭಿಸುವುದಾಗಿ ಅಂದು ಕಾಂಗ್ರೆಸ್ ಪಕ್ಷ ತಿಳಿಸಿತ್ತು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಇಂದಿಗೂ, 5 ವರ್ಷಗಳಾದರೂ ಸಹ ಅದು ಸಾಧ್ಯವಾಗಿಲ್ಲ, ಏತಕ್ಕೆ? ಪಶು ಆಸ್ಪತ್ರೆಗಳ ವೈದ್ಯರು ಇವತ್ತಿನವರೆಗೂ ಸಿಕ್ಕುತ್ತಿಲ್ಲ. ಸಿಬ್ಬಂದಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಕೊಡುತ್ತೇವೆ ಎನ್ನುವಂತಹ ತಮ್ಮ ಭರವಸೆಯನ್ನು ಇವತ್ತಿನವರೆಗೂ ತಮ್ಮ ಸರ್ಕಾರದಿಂದ ಈಡೇರಿಸಿಲ್ಲ.

ಮೇಲಾಗಿ, ಜಾನುವಾರುಗಳನ್ನು ಸಾಕುವಂತಹ ರೈತರುಗಳಿಗೆ ಬಂದಂತಹ ಪರಿಸ್ಥಿತಿ ಏನು ಎನ್ನುವುದನ್ನು ತಾವು ಅರಿತುಕೊಂಡಿಲ್ಲ. ಎಲ್ಲೋ ಒಂದು ಕಡೆ ರೈತರು ಅವನ ಜೀವಾಳವಾದಂತಹ ಎತ್ತುಗಳು, ದನಕರುಗಳು, ಹಾಗೂ ಆಕಳುಗಳನ್ನು ಸಾಕುವುದರ ಸಲುವಾಗಿ ನಿಮ್ಮ ಮೇಲೆ ಭರವಸೆಯನ್ನಿಟ್ಟುಕೊಂಡು ನಿಮಗೆ ಮತವನ್ನು ಹಾಕಿದ್ದರು. ಎಲ್ಲಿ, ನೀವು ಎಷ್ಟು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ. ರಾಜ್ಯದಲ್ಲಿ 6 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳಿವೆ. ಅದರ ಪೈಕಿ ಉತ್ತರ ಕರ್ನಾಟಕದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿವೆ, ಅದರಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಪಶು ಆಸ್ಪತ್ರೆಯನ್ನು ಮಾಡಿದ್ದೀರಿ ಎನ್ನುವುದನ್ನು ನಾಳೆ ತಮ್ಮ ಉತ್ತರದಲ್ಲಿ ದಯಮಾಡಿ ತಿಳಿಸಬೇಕು. ಏಕೆಂದರೆ, ಜನರಿಗೆ ಭರವಸೆಯನ್ನು ಕೊಟ್ಟಾಗ, ಅದಕ್ಕೆ ಮರುಳಾದಂತಹ ಜನ, ಉತ್ತರ ಕರ್ನಾಟಕದವರು. ಎಲ್ಲಿಯೋ ಒಂದು ಕಡೆ ಅವರು ನಂಬಿಬಿಡುತ್ತಾರೆ. ನಂಬಿ vote ಹಾಕಿದ್ದಕ್ಕೆ ದ್ರೋಹ ಮಾಡಬಾರದು ಎನ್ನುವಂತಹ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾನು ಕೇಳಲಿಕ್ಕೆ ಬಯಸುತ್ತೇನೆ.

ಇನ್ನು, ಎಲ್ಲಾ ಹಳ್ಳಿಗಳಿಗೆ, ನಗರಗಳಿಗೆ 5 ವರ್ಷಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಾವು ಪ್ರಾರಂಭ ಮಾಡುತ್ತೇವೆ ಎನ್ನುವಂತಹ ಮಾತನ್ನು ಅಂದಿನ ಪ್ರಣಾಳಿಕೆಯಲ್ಲಿ ಹೇಳಿದ್ದರು. ಮೊನ್ನೆ ನಮ್ಮ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆಚಿತ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 9,677 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೊಟ್ಟಿದ್ದಾರೆಂದು ಹೇಳಲಾಗಿದೆ. ಅದರಲ್ಲಿ ಸುಮಾರು 800-900 ಶುದ್ಧ ಕುಡಿಯುವ ನೀರಿನ ಘಟಕಗಳು ಬಂದ್ ಆಗಿರಬಹುದು, ಅಥವಾ 50% ಬಂದ್ ಆಗಿರಬಹುದು. ಆದರೆ, ಕರ್ನಾಟಕ ರಾಜ್ಯದಲ್ಲಿ ಇರುವಂತಹ ಒಟ್ಟು ಹಳ್ಳಿಗಳ ಸಂಖ್ಯೆ ಎಷ್ಟು, ಪ್ರತಿ ಹಳ್ಳಿಗೆ ಕುಡಿಯುವ ನೀರನ್ನು ಕೊಡಲಿಕ್ಕೆ 10 ಸಾವಿರ ಜನಸಂಖ್ಯೆ ಇದ್ದವರಿಗೆ ಒಂದು ಶುದ್ಧ ಕುಡಿಯುವ ನೀರಿನ ಘಟಕ, 5 ಸಾವಿರ ಜನಸಂಖ್ಯೆ, ಇದ್ದವರಿಗೆ ಒಂದು ಶುದ್ಧ ಕುಡಿಯುವ ನೀರಿನ ಘಟಕ, 100 ಜನಸಂಖ್ಯೆ ಇದ್ದವರಿಗೂ ಒಂದು ಶುದ್ಧ ಕುಡಿಯುವ ನೀರಿನ ಘಟಕದಂತೆ ಪ್ರತಿ ಹಳ್ಳಿಗೆ ಕೊಡುತ್ತೇವೆಂದು ಅಂದು ತಾವು ವಾಗ್ದಾನ ಮಾಡಿದ್ದೀರಿ. ಅದರಲ್ಲಿ ಕೇವಲ 9,677 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ, ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ಹಳ್ಳಿಗಳೆಷ್ಟು, ಅದರ ಪೈಕಿ ಉತ್ತರ ಕರ್ನಾಟಕದಲ್ಲಿ ಇರುವಂತಹ ಹಳ್ಳಿಗಳೆಷ್ಟು, ಮತ್ತು ಅದಕ್ಕೆ ಕೊಟ್ಟಂತಹ ಶುದ್ಧ ಕುಡಿಯುವ ನೀರಿನ ಘಟಕಗಳೆಷ್ಟು? ಕೊಟ್ಟ ಮಾತಿನಂತೆ ನಾವು ನಡೆಯುತ್ತಿದ್ದೇವೆಂದು ಕೈ ಎತ್ತಿಕೊಂಡು ಬಹಳಷ್ಟು ಬಾರಿ ತಾವು ಭಾಷಣವನ್ನು ಮಾಡುತ್ತಿದ್ದೀರಿ. ನುಡಿದಂತೆ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಬಸವಣ್ಣನರು ಹಾಕಿ ಕೊಟ್ಟಂತೆ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಶ್ರೀಮಾನ್ ಎಸ್.ಆರ್.ಪಾಟೀಲ್‌ರವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಹೇಳುತ್ತಿದ್ದರು. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಎಸ್.ಆರ್.ಪಾಟೀಲ್‌ರವರು ಈಗ ಸದನದಲ್ಲಿ ಇರಬೇಕಾಗಿತ್ತು. 12ನೇ ಶತಮಾನದ ಬಸವಣ್ಣನವರ ವಚನಗಳನ್ನು ಬಾಯಿ ಪಾಠ ಮಾಡಿಕೊಂಡು, 'ನುಡಿ ಮುತ್ತು' ಉದುರುವ ಹಾಗೆ ಮಾತನಾಡುತ್ತಿದ್ದರು. ಆದರೆ, ಕೆಲಸಗಳು ಆಗಬೇಕಲ್ಲವೇ? ಕೊಟ್ಟ ಮಾತಿನಂತೆ ತಾವು ಉಳಿದುಕೊಳ್ಳಬೇಕೆನ್ನುವುದಾಗಿದೆ. ಈಗ ನಮ್ಮ ಸ್ನೇಹಿತರಾದಂತಹ ಶ್ರೀ ಎಸ್.ವ್ಹಿ. ಸಂಕನೂರ ರವರು ಮಾತನಾಡುತ್ತಾ, ಗದಗಿನ ಕುಡಿಯುವ ನೀರಿನ ವಿಚಾರವನ್ನು ಹೇಳಿದರು. ಅಲ್ಲಿ ಎಷ್ಟು ದಿವಸಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುತ್ತಾರೆನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. 30 ದಿವಸಗಳಿಗೊಮ್ಮೆ ನೀರು ಕೊಡುತ್ತಿರುಬಹುದು. ಎಷ್ಟು ದಿವಸಗಳಿಗೊಮ್ಮೆ ನೀರು ಕೊಡುತ್ತಿದ್ದಾರೆಂದು ಶ್ರೀಮಾನ್ ಎಸ್.ವ್ಹಿ.ಸಂಕನೂರ ರವರು ಮತ್ತೊಮ್ಮೆ ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಈಗ ನೀರನ್ನು ಸರಿಯಾಗಿ ಕೊಡುತ್ತಿದ್ದಾರೆ.

**ಶ್ರೀ ಸೋಮಣ್ಣ. ಮ.ಬೇವಿನಮರದ:-** ಆಯಿತು, ನಾನು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಶ್ರೀಮಾನ್ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಈ ವಿಚಾರವಾಗಿ ಏನೂ ಗೊತ್ತಿಲ್ಲ. ಈ ವಿಚಾರವನ್ನು ಶ್ರೀಯುತ ಎಸ್.ವ್ಹಿ. ಸಂಕನೂರ ರವರು ಹೇಳಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** 4-5 ದಿನಗಳಿಗೊಮ್ಮೆ ಈಗ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ಹಿಂದೆ, 28 ದಿನಗಳಿಗೊಮ್ಮೆ ಕೊಡುತ್ತಿದ್ದರು.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಆಯಿತು, ಧನ್ಯವಾದಗಳು. ಇವತ್ತಿನವರೆಗೂ ಕರ್ನಾಟಕ ರಾಜ್ಯದಲ್ಲಿರುವಂತಹ ಅದರಲ್ಲೂ ಈ ಭಾಗದಲ್ಲಿರುವಂತಹ ಹಳ್ಳಿಗಳಿಗೆ ಕುಡಿಯುವ ನೀರಿಗೆ ಎಂತಹ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದನ್ನು ತಮಗೆ ತೋರಿಸುತ್ತೇನೆ. ಈ ವಿಚಾರವಾಗಿ ನಿನ್ನೆಯೋ, ಮೊನ್ನೆಯೋ ಪತ್ರಿಕೆಯಲ್ಲಿ ಬಂದಿದೆ, ಜೊತೆಗೆ ಸ್ವತಃ ನಾನು ನನ್ನ ಕಣ್ಣಾರೆ ಕಂಡಿದ್ದೇನೆ. ಕೆಡಿಪಿ ಮೀಟಿಂಗ್‌ನಲ್ಲಿ ಈ ವಿಚಾರವಾಗಿ ನಾನು ಕೇಳಿದ್ದೇನೆ. ಎಷ್ಟೋ ಹಳ್ಳಿಗಳಿಗೆ ಈ ಚಳಿಗಾಲದಲ್ಲಿ ಸಹ tanker ಮೂಲಕ ನೀರನ್ನು ಕೊಡುವಂತಹ ವ್ಯವಸ್ಥೆ ಇವತ್ತು ಆಗಿದೆ. ಪ್ರತಿ ಹಳ್ಳಿಗೆ ಕುಡಿಯುವ ನೀರಿನ . . .

**ಶ್ರೀ ಶರಣಪ್ಪ ಮಟ್ಟೂರ :-** ಮಾನ್ಯ ಸಭಾಪತಿಯವರೇ, ..

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದರಿಂದ ಮಾನ್ಯ ಶ್ರೀ ಶರಣಪ್ಪ ಮಟ್ಟೂರ ರವರು ಕುಳಿತುಕೊಳ್ಳಬೇಕು. ಶ್ರೀಯುತರು ಜಾಣರು ಮತ್ತು ವಕೀಲರಿದ್ದು, ಬಹಳವಾಗಿ ಹೇಳುತ್ತಾರೆ. ನಾನು ಹೇಳುವುದನ್ನೂ ಸಹ ಕೇಳಬೇಕು.

ಆದ್ದರಿಂದ, ನನಗೆ ಬೇಕಾಗಿರುವುದು ಏನೆಂದರೆ, ತಿಂಗಳಿಗೊಮ್ಮೆ ನೀರು ಕೊಡುತ್ತೀರೋ, 25 ದಿವಸಕ್ಕೊಮ್ಮೆ ನೀರು ಕೊಡುತ್ತೀರೋ ಮತ್ತೆ ಹೇಗೆ ನೀರು ಕೊಡುತ್ತೀರೋ ನನಗೆ ಗೊತ್ತಿಲ್ಲ. ಶುದ್ಧ ಕುಡಿಯುವ ನೀರಿನ ಘಟಕವನ್ನು ಅಲ್ಲಿ ಸ್ಥಾಪಿಸಿ, ಅದರ ಮೂಲಕ ನೀರು ಕೊಡುವಂತಹ ವ್ಯವಸ್ಥೆ ಆಗಬೇಕೆಂದು ವಿನಂತಿ ಇದ್ದು, ಇದರ ಬಗ್ಗೆ ನಾಳೆ ಉತ್ತರದಲ್ಲಿ ಹೇಳಬೇಕು.

ನಾನು ಬಹಳ ಆಶಾದಾಯಕವಾದಂತಹ ಮನುಷ್ಯನಾಗಿದ್ದೇನೆ. ಏಕೆಂದರೆ, ಬಹಳ ವಿಶ್ವಾಸವನ್ನಿಟ್ಟು, ದೇವರ ಮೇಲೆ ಮತ್ತು ಭೂಮಿ ತಾಯಿಯ ಮೇಲೆ ಮತ್ತು ಮಳೆರಾಯನ ಮೇಲೆ ವಿಶ್ವಾಸವನ್ನಿಟ್ಟು, ನಮ್ಮಲ್ಲಿ ಒಡವೆಗಳನ್ನೆಲ್ಲಾ ಅಡವಿಟ್ಟು, ಬಡ್ಡಿ ಸಮೇತ ಹಣವನ್ನು ತಂದು ಬೀಜ ಬಿತ್ತುವಂತಹ ಕೆಲಸ ಕಾರ್ಯಗಳಲ್ಲಿ ನಮ್ಮ ರೈತರು ಮತ್ತು ನಾವುಗಳಿದ್ದೇವೆ. ಆದರೆ, ನಾನು ಒಂದು ಮಾತನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ಶಾಶ್ವತವಾಗಿ ನೀರಾವರಿ ಯೋಜನೆಗಳನ್ನು ಮಾಡುವಲ್ಲಿ ಎಲ್ಲಾ ಕೆರೆಗಳನ್ನು ತುಂಬಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಆದರೆ, ಇವತ್ತು ಉತ್ತರ ಕರ್ನಾಟಕದಲ್ಲಿ ಇರುವಂತಹ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಹಳ್ಳಿಗಳು ಬರುತ್ತವೆ, ಅದರಲ್ಲಿ ಎಷ್ಟು ಕೆರೆಗಳಿವೆ, ನೀರಾವರಿ ಕೆರೆಗಳೆಷ್ಟು, ಸಣ್ಣ ನೀರಾವರಿ ಕೆರೆಗಳೆಷ್ಟು, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳೆಷ್ಟು, ಎಷ್ಟು ಕೆರೆಗಳಿಗೆ ನೀವು ನೀರು ತುಂಬಿಸಿದ್ದೀರಿ ಎನ್ನುವುದನ್ನು ದಯಮಾಡಿ ನಾಳಿನ ತಮ್ಮ ಉತ್ತರದಲ್ಲಿ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ತಾವು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಇನ್ನು ಬಹಳಷ್ಟು ವಿಚಾರಗಳನ್ನು ತಾವು ಹೇಳಿದ್ದೀರಿ. ಚುನಾವಣೆಯ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಜನಸಂಖ್ಯೆಯಿರುವ 22 ಪಟ್ಟಣಗಳಿಗೆ, Hi-tech ಮೂಲಭೂತ ಸೌಲಭ್ಯ ನೀಡುವುದಾಗಿ ಕಾಂಗ್ರೆಸ್ ಪಕ್ಷದವರು ಹೇಳಿದ್ದರು. ಅದಕ್ಕೆ ನಾನು ಕೇಳುವುದೇನೆಂದರೆ, ಅನೇಕ ನಗರಗಳಿಗೆ ಕನಿಷ್ಟ ಸೌಲಭ್ಯ ಕೊಡುವಂತಹ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ 22 ನಗರಗಳು ಯಾವ್ಯಾವು? Hi-tech ಮೂಲಭೂತ ಸೌಲಭ್ಯ ಕೊಡುವಂತಹ ನಗರಗಳು ಯಾವ್ಯಾವು ಎನ್ನುವುದನ್ನು ದಯಮಾಡಿ ತಮ್ಮ ಉತ್ತರದಲ್ಲಿ ಕೊಡಬೇಕು. ಇನ್ನು ಪ್ರತಿ ಹಳ್ಳಿಗೆ ಎಂದರೆ ನಾನು ಇಡೀ ಕರ್ನಾಟಕದ ವಿಷಯವಾಗಿ ಹೇಳುತ್ತಿದ್ದೇನೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಪ್ರತಿ ಜಿಲ್ಲೆಗೊಂದು ವಸತಿ ಸಹಿತ ಮಹಿಳಾ ಕಾಲೇಜು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಎಷ್ಟು ಜಿಲ್ಲೆಗಳಿಗೆ ಈ ಕಾಲೇಜನ್ನು ಕೊಟ್ಟಿದ್ದೀರಿ? ತಮ್ಮ ಮಾತಿನ ಪ್ರಕಾರ ಈಗಾಗಲೇ ಐದು ವರ್ಷಗಳು ಮುಗಿಯುತ್ತಾ ಬಂತು. ಎಷ್ಟು ಜಿಲ್ಲೆಗೆ ಕೊಟ್ಟಿದ್ದೀರಿ ಎನ್ನುವುದನ್ನು ತಾವು ಅಕ್ಷರಶಃ ನಾಳೆ ಉತ್ತರವನ್ನು ಕೊಡಬೇಕು.

ಮುಂದು..

(1205)22.11.2017/08.50/ಎಸ್‌ವಿ-ಜಿಆರ್

ಶ್ರೀ ಸೋಮಣ್ಣ ಮ.ಬೇವಿನಮರದ(ಮುಂದು):- ಪ್ರತಿ ತಾಲ್ಲೂಕಿನಲ್ಲಿ ಚುನಾವಣೆಯ ಸಂದರ್ಭದಲ್ಲಿ ಎನ್.ಜಿ.ಓ., ಸಹಾಯದೊಂದಿಗೆ 24X7 ಯುವ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಿ ಶಿಕ್ಷಣ ಮತ್ತು ಉದ್ಯೋಗ ಮಾಹಿತಿ ನೀಡಿಕೆ ಕಾರ್ಯ ಪ್ರಾರಂಭಿಸುವುದಾಗಿ ಹೇಳಲಾಗಿತ್ತು. ಉತ್ತರ ಕರ್ನಾಟಕದ ಜನತೆ ಇಂದಿಗೂ ಆ ಕೊರಗಿನಲ್ಲಿಯೇ ಸಾಯುತ್ತಿದ್ದಾರೆ. ಅದನ್ನು ನೀಗಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ನಾನು ಶಿಕ್ಷಣದ ಬಗ್ಗೆ, ವೈದ್ಯಕೀಯ ಕಾಲೇಜುಗಳ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ.

ಉತ್ತರ ಕರ್ನಾಟಕ ಭಾಗದ ಜನ ಎದೆ ತಟ್ಟಿ ಹೇಳಿಕೊಳ್ಳುವಂತಹ ವೀರ ರಾಣಿ ಕಿತ್ತೂರು ಚೆನ್ನಮ್ಮನ ಹೆಸರಿನಲ್ಲಿ ಮಹಿಳಾ ಸಬಲೀಕರಣದ ಸಲುವಾಗಿ ಅಪೆಕ್ಸ್ ಬ್ಯಾಂಕ್ ಅನ್ನು ಪ್ರಾರಂಭಿಸಬೇಕು ಹಾಗೂ ಪ್ರತಿ ಜಿಲ್ಲೆಯಲ್ಲಿ ಇದರ ಶಾಖಾ ಬ್ಯಾಂಕುಗಳನ್ನು ಪ್ರಾರಂಭಿಸಲು 200 ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ಹೇಳಲಾಗಿತ್ತು. ಇದರಲ್ಲಿ ಶೇ.51 ರಾಜ್ಯ ಸರ್ಕಾರದ ಹೂಡಿಕೆಯಾಗಿದ್ದು, ಶೇ.49 ಜನರಿಂದ ಸಂಗ್ರಹಣೆ ಮಾಡಲಾಗುವುದು ಎಂದು ಹೇಳಲಾಗಿತ್ತು. ಇದನ್ನು ಮಾಡಲಾಗಿದೆಯೇ? ಎಷ್ಟು ಕಡೆಗಳಲ್ಲಿ ಮಾಡಲಾಗಿದೆ? ಎಲ್ಲಿ ಮಾಡಲಾಗಿದೆ? ವೀರರಾಣಿ ಕಿತ್ತೂರು ಚೆನ್ನಮ್ಮನ ಬಗ್ಗೆ ನಮಗೆ ಇರುವ ಅಭಿಮಾನವನ್ನು ವ್ಯಕ್ತಪಡಿಸುವ ಸಲುವಾಗಿ ಕಿತ್ತೂರನ್ನು ಭಾರತದ ಭೂಪಟದಲ್ಲಿ ಗುರುತಿಸುವಂತೆ ಏನಾದರೂ ಕೆಲಸ ಕಾರ್ಯಗಳನ್ನು ಕಾಂಗ್ರೆಸ್ ಸರ್ಕಾರ ಮಾಡಿದೆಯೇ ಎಂಬುದನ್ನು ಸರ್ಕಾರದ ಉತ್ತರದಲ್ಲಿ ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ನೇಕಾರರ ಬಗ್ಗೆ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ 40,000 ಜನ ನೇಕಾರರಿದ್ದಾರೆ. ಅದರ ಜೊತೆಗೆ ಶಿರಹಟ್ಟಿ, ಲಕ್ಷ್ಮೇಶ್ವರ ಮತ್ತು ಶಿಗ್ಲಿಯೊಳಗೆ ಇಡೀ ಕರ್ನಾಟಕದಲ್ಲಿ ಒಳ್ಳೆಯ ಸೀರೆಗಳನ್ನು ನೇಯತಕ್ಕಂಥವರು ಇದ್ದಾರೆ. ಒಳ್ಳೆಯ ಕುಬುಸ (ಈಗ ಜಂಪರ್ ಪೀಸ್ ಎಂದು ಕರೆಯುತ್ತಾರೆ)ವನ್ನು ರಾಜ್ಯಕ್ಕೆ ಕೊಡತಕ್ಕಂಥ ಶಿಗ್ಲಿಯೊಳಗೆ ನೇಕಾರರ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿದೆ. ಇಂತಹವರ ಪರಿಸ್ಥಿತಿಯನ್ನು ಸುಧಾರಿಸಲಾಗುವುದು ಎಂದು ಹೇಳಲಾಗಿತ್ತು. ಆದ್ದರಿಂದ ದಯಮಾಡಿ ಅದನ್ನು ಮಾಡಬೇಕೆಂದು ಕೋರುತ್ತೇನೆ.

ಇನ್ನು ಈಶಾನ್ಯ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಕುರಿತು ಉತ್ತರವನ್ನು ಕೇಳಿದಾಗ ಅವು ನಷ್ಟದಲ್ಲಿದೆ, ಅವುಗಳ ಆರ್ಥಿಕ ಪರಿಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿತ್ತು. ರಾಜ್ಯ ಸರ್ಕಾರ ಈಶಾನ್ಯ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಐದು ವರ್ಷಕ್ಕೆ ತಲಾ 300 ಕೋಟಿ ರೂಪಾಯಿಗಳ ವಿನಾಯ್ತಿಯನ್ನು ನೀಡುತ್ತಾ ಬಂದಿತ್ತು. ಇದನ್ನು 2017ರಲ್ಲಿ ಬಂದ್ ಮಾಡಲಾಗಿದೆ. ಈ ಭಾಗದ ಜನತೆಗೆ ಕೊಟ್ಟಂತಹ ಮಾತು ಸರ್ಕಾರಕ್ಕೆ ನೆನಪಿರಲಿಲ್ಲವೇ? ಬಂದ್ ಮಾಡಿರುವ ಈ ಎರಡೂ ಸಂಸ್ಥೆಗಳನ್ನು ಪುನರಾರಂಭಿಸಬೇಕು. ಅವುಗಳನ್ನು ಏಕೆ ಬಂದ್ ಮಾಡಲಾಯಿತು ಎಂಬ ಉತ್ತರವನ್ನೂ ಸರ್ಕಾರ ನೀಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂದು ಬಹಳಷ್ಟು ಜನ ರೈತರು ಬೆಳೆದಂತಹ ಪೀಕು ಹಾಳಾಗುತ್ತಿದೆ. ರೈತರ ಎತ್ತು ಚಕ್ಕಡಿ ತೇಲಿ ಹೋಗುತ್ತಿವೆ. ರೈತರ ಜೀವನವೇ ಹಾಳಾಗುವಂತಹ ಒಂದು ಪರಿಸ್ಥಿತಿಯು ಬೆಣ್ಣೆಹಳ್ಳ ಪ್ರದೇಶದಲ್ಲಿದೆ ಎಂಬುದು ತಮಗೆ ತಿಳಿದಿದೆ. ಬೆಣ್ಣೆಹಳ್ಳ ನನ್ನ ಕ್ಷೇತ್ರವಾದ ಶಿಗ್ಗಾಂವಿ ತಾಲ್ಲೂಕಿನ ಹೊಸೂರು ಗ್ರಾಮದ ಸಣ್ಣ ತಿಪ್ಪೆಯೊಂದರಲ್ಲಿ ಹುಟ್ಟಿ ದೊಡ್ಡ ಪ್ರಮಾಣದಲ್ಲಿ ಹೋಗಿದ್ದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ಡಾ: ಪರಮಶಿವಯ್ಯನವರು ನೀಡಿದ ವರದಿಯು ಇಂದಿನವರೆವಿಗೂ ಜಾರಿಯಾಗಿರುವುದಿಲ್ಲ.

ಮಾನ್ಯ ಕೃಷಿ ಸಚಿವರೇ ನೀಡಿದಂತಹ ಅಂಕಿ ಅಂಶಗಳ ಪ್ರಕಾರ ಹಾವೇರಿ ಜಿಲ್ಲೆಯು ಇಡೀ ಕರ್ನಾಟಕ ರಾಜ್ಯದಲ್ಲಿ ಗೋವಿನ ಜೋಳ ಹಾಗೂ ಹತ್ತಿ ಬೆಳೆಯುವುದರಲ್ಲಿ ಪ್ರಥಮಸ್ಥಾನದಲ್ಲಿದೆ. ಒಂದು ಕ್ವಿಂಟಾಲ್ ಹತ್ತಿಗೆ ರೂ.6,000/- ಇತ್ತು. ಇಂದು ರೂ.3,600/-, ರೂ.3,500/- ಈ ರೀತಿ ಇದೆ. ಇಂದು ರೈತರ ಪೀಕು ಬರುತ್ತಿದೆ. ಶೇಂಗಾ ಬೆಳೆ ಪ್ರತಿ ಕ್ವಿಂಟಾಲ್‌ಗೆ ರೂ.6,500-7,000 ಇತ್ತು. ಇಂದು ರೂ.3,200/-, 3,700/- ಈ ರೀತಿ ಇದೆ. ಗೋವಿನ ಜೋಳ ರೂ.16,600/- ರೂ.16,700/- ಗಳಿಗೆ ಜನವರಿಯಲ್ಲಿ ಸಿಗುತ್ತಿತ್ತು. ಆದರೆ ರೈತರ ಪೀಕು ಬಂದಾಗ 1,125/-, 1,190/- ರೂಪಾಯಿಗಳ ಬೆಲೆ ಇತ್ತು. ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಬೆಳೆಯತಕ್ಕಂತಹ ಗೋವಿನ ಜೋಳ ಹಾಗೂ ಹತ್ತಿಯನ್ನು ಶೇಖರಿಸಿಕೊಳ್ಳಲು ದೊಡ್ಡ ಪ್ರಮಾಣದ ಗೋದಾಮನ್ನು ಕಟ್ಟಿಸುವ ವ್ಯವಸ್ಥೆಯನ್ನು ಮಾಡಬೇಕು. ಅಂದರೆ ಬೆಳೆದಂತಹ ಫಸಲನ್ನು ಗೋದಾಮುಗಳಲ್ಲಿ ಶೇಖರಿಸಿಕೊಂಡು ಉತ್ತಮ ದರ ಬಂದಾಗ ಮಾರುವಂತಹ ವ್ಯವಸ್ಥೆಯನ್ನು ಸರ್ಕಾರ ರೈತರಿಗೆ ಮಾಡಿಕೊಡಬೇಕು. ಇದನ್ನು ಮಾಡುತ್ತೇವೆಂದು ಸರ್ಕಾರ ತಮ್ಮ ಪ್ರಣಾಳಿಕೆಯಲ್ಲಿ ಹೇಳಿರುವುದಿಲ್ಲ. ಆದರೆ ನನ್ನ ಸ್ವಾರ್ಥ ಆಶಯದಂತೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಏನಾದರೊಂದು ಕೊಡಬಹುದು ಎಂಬ ಉದ್ದೇಶದಿಂದ ಕೇಳುತ್ತಿದ್ದೇನೆ. ರೈತರು ಬೆಳೆದಂತಹ ದಾಸ್ತಾನನ್ನು ಇಟ್ಟುಕೊಳ್ಳುವ ಸಲುವಾಗಿ ಗೋದಾಮುಗಳನ್ನು ಕಟ್ಟಿಸಿ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅವರಿಗೆ ನಾವು ಚಿರಋಣಿಗಳಾಗಿರುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸರ್ಕಾರ ನೀರಾವರಿಗೆ ಬಹಳಷ್ಟು ಒತ್ತನ್ನು ಕೊಡುತ್ತಿದೆ ಎಂದು ಹೇಳುತ್ತದೆ. ಹಾವೇರಿ ಜಿಲ್ಲೆಯಲ್ಲಿ ಬಹಳಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ತುಂಗಾ ಮೇಲ್ದಂಡೆ ಯೋಜನೆಯಿರಬಹುದು, ತಿಳುವಳ್ಳಿ ಏತ ನೀರಾವರಿ ಯೋಜನೆಯಿರಬಹುದು, ಸವಣೂರಿನ ಏತ ನೀರಾವರಿ ಯೋಜನೆಯಿರಬಹುದು, ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯಿರಬಹುದು, ಇವುಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಬೇಕು. ಇಂದು ನೂರು ರೂಪಾಯಿ ಇದ್ದದ್ದು, ನಾಳೆ ಎರಡು ನೂರು ರೂಪಾಯಿ ಆಗಿರುತ್ತದೆ. ಈ ಯೋಜನೆಗಳ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ಅದನ್ನು ಸ್ವಲ್ಪ ವೇಗವಾಗಿ ಮಾಡಿ ಬೇಸಿಗೆ ಕಾಲಕ್ಕೆ ಒಂದಷ್ಟು ನೀರು ಬರುವಂತೆ ಮಾಡಿಕೊಟ್ಟರೆ ಪ್ರಣಾಳಿಕೆಯಲ್ಲಿ ಹೇಳಿದುದಕ್ಕೆ ಸಾರ್ಥಕವಾಗುತ್ತದೆ ಎಂಬ ಮಾತನ್ನು ಹೇಳಿ ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ಇಷ್ಟೊಂದು ಜನ ಪ್ರಭಾವಿ ನಾಯಕರಿದ್ದರೂ ಸಹ ಉತ್ತರ ಕರ್ನಾಟಕ ಭಾಗವು ಹೆಚ್ಚು ಅಭಿವೃದ್ಧಿಯನ್ನು ಕಂಡಿಲ್ಲವೆಂದರೆ ನನಗೆ ಆಶ್ಚರ್ಯವಾಗುತ್ತದೆ.

**ಉಪ ಸಭಾಪತಿಯವರು**:- ಮಾನ್ಯ ಡಿ'ಸೋಜಾರವರೇ, ದಯಮಾಡಿ ಕುಳಿತುಕೊಳ್ಳಿ. ಮುಂದಿನ ಸರದಿ ಶ್ರೀ ವಿ.ಎಸ್.ಉಗ್ರಪ್ಪನವರದು. ಮಾನ್ಯ ಉಗ್ರಪ್ಪನವರೇ, ಸಮಯದ ಕೊರತೆಯಿಂದ ದಯಮಾಡಿ ಸಹಕರಿಸಬೇಕು. ಮತ್ತೊಂದು ಪ್ರಮುಖವಾದ ವಿಚಾರ ಏನೆಂದರೆ ನಿನ್ನೆ ರಾತ್ರಿ 09.00 ಗಂಟೆಗೆ ಸದನವನ್ನು ಮುಕ್ತಾಯಗೊಳಿಸಿದೆವು. ಆದರೆ ಇಲ್ಲಿ ಕೆಲಸ ಮಾಡುತ್ತಿದ್ದಂತಹ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಊಟ ದೊರೆಯಲಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿತು. ಆದ್ದರಿಂದ ದಯಮಾಡಿ ಸಮಯದ ಮಿತಿಯನ್ನಿಟ್ಟುಕೊಂಡು ತಮ್ಮ ಮಾತನ್ನು ಮುಗಿಸಬೇಕು. ತಮ್ಮದೇ ಕೊನೆಯ ಮಾತು.

ತಮಗೆ ಹೆಚ್ಚಿನದೇನೂ ಹೇಳಬೇಕಾಗಿಲ್ಲ. ಇಡೀ ದೇಶದ ವಿಚಾರವನ್ನು ಐದು ನಿಮಿಷದಲ್ಲಿ ಮಂಡನೆ ಮಾಡುವ ಸಾಮರ್ಥ್ಯ ತಮಗೆ ಇದೆ.

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ:-** ಮಾನ್ಯ ಸಭಾಪತಿಯವರೇ, ನನಗೂ ಅವಕಾಶವನ್ನು ಮಾಡಿಕೊಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಲಕ್ಷ್ಮಿನಾರಾಯಣರವರೇ, ಆಗುವುದಿಲ್ಲ. ದಯಮಾಡಿ ನಿಮ್ಮನ್ನು ಹಾಗೂ ಮಾನ್ಯ ಪ್ರಸನ್ನ ಕುಮಾರ್‌ರವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾವುದೇ ರಾಷ್ಟ್ರ ಅಭಿವೃದ್ಧಿಯಾಗಬೇಕಿದೆ ಎಂದು ಹೇಳಬೇಕಾದರೆ ಆ ರಾಷ್ಟ್ರಲ್ಲಿರತಕ್ಕಂಥ ಎಲ್ಲಾ ರಾಜ್ಯಗಳು ಅಭಿವೃದ್ಧಿಯಾಗಬೇಕು. ಯಾವುದೇ ರಾಜ್ಯ ಅಭಿವೃದ್ಧಿಯಾಗಬೇಕಾಗಿದೆ ಎಂದು ಹೇಳಬೇಕಾದರೆ ಆ ರಾಜ್ಯದಲ್ಲಿರತಕ್ಕಂಥ ಎಲ್ಲಾ ಜಿಲ್ಲೆಗಳು ಮತ್ತು ಎಲ್ಲಾ ತಾಲ್ಲೂಕುಗಳು ಅಭಿವೃದ್ಧಿಯಾಗಬೇಕು. ನಮಗೆ ಸ್ವಾತಂತ್ರ್ಯ ಬಂದು ಸುಮಾರು 70 ವರ್ಷಗಳಾಯಿತು. ಅಂದಿನಿಂದ ಇಂದಿನವರೆವಿಗೂ ರಾಜ್ಯ ರಾಜ್ಯಗಳ ಮಧ್ಯೆ ತಾರತಮ್ಯವನ್ನು ನೋಡುತ್ತಿದ್ದೇವೆ. ಜಿಲ್ಲೆ ಜಿಲ್ಲೆಗಳ ಮಧ್ಯೆ ತಾರತಮ್ಯವನ್ನು ನೋಡುತ್ತಿದ್ದೇವೆ. ತಾಲ್ಲೂಕು ತಾಲ್ಲೂಕುಗಳ ಮಧ್ಯೆ ತಾರತಮ್ಯವನ್ನು ನೋಡುತ್ತಿದ್ದೇವೆ. ಬಹುಶಃ ಹೀಗೆ ಹಿಂದುಳಿದಿರತಕ್ಕಂಥ ವಿಚಾರಗಳ ಹಿನ್ನೆಲೆಯಲ್ಲಿ ಎಲ್ಲೋ ಒಂದು ಕಡೆ ಸಮತೋಲನವನ್ನು ತರಬೇಕೆನ್ನುವ ದೃಷ್ಟಿಯಿಂದ ಡಾ:ಡಿ.ಎಂ.ನಂಜುಂಡಪ್ಪ ಸಮಿತಿಯು ನೇಮಕವಾದ ನಂತರ ಅವರು 2002ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಹಾಗೆ ಇದ್ದಂತಹ 175 ತಾಲ್ಲೂಕುಗಳ ಪೈಕಿ ಸುಮಾರು 114 ತಾಲ್ಲೂಕುಗಳು ಹಿಂದುಳಿದಿರತಕ್ಕಂಥ ತಾಲ್ಲೂಕುಗಳೆಂದು ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ. ಆ 114 ತಾಲ್ಲೂಕುಗಳಲ್ಲಿ 39 ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳು, 40 ತಾಲ್ಲೂಕುಗಳು ಅತಿ ಹಿಂದುಳಿದ ತಾಲ್ಲೂಕುಗಳು, 35 ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು ಹಾಗೂ ಇನ್ನುಳಿದ ತಾಲ್ಲೂಕುಗಳು ಭಾಗಶಃ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಎಂದು ಹೇಳಲಾಗಿದೆ. ಇದನ್ನು ಈ ರೀತಿ ವಿಂಗಡಿಸಲಾಗಿದ್ದರೆ, ಕಲಬುರಗಿ ವಿಭಾಗದಲ್ಲಿ ಒಟ್ಟಾರೆ ಹಿಂದುಳಿದಿರತಕ್ಕಂಥ ತಾಲ್ಲೂಕುಗಳು 28, ಬೆಳಗಾವಿ ವಿಭಾಗದಲ್ಲಿ ಒಟ್ಟಾರೆ ಹಿಂದುಳಿದಿರತಕ್ಕಂಥ ತಾಲ್ಲೂಕುಗಳು 31, ಬೆಂಗಳೂರು ವಿಭಾಗದಲ್ಲಿ ಒಟ್ಟಾರೆ ಹಿಂದುಳಿದಿರತಕ್ಕಂಥ ತಾಲ್ಲೂಕುಗಳು 33, ಮೈಸೂರು ವಿಭಾಗದಲ್ಲಿ ಒಟ್ಟಾರೆ ಹಿಂದುಳಿದಿರತಕ್ಕಂಥ ತಾಲ್ಲೂಕುಗಳು 22 ಎಂದು ವಿಂಗಡಿಸಲಾಗಿದೆ. ಒಟ್ಟಾರೆಯಾಗಿ ತೆಗೆದುಕೊಂಡರೆ ಕಲಬುರಗಿ ಹಾಗೂ ಬೆಳಗಾವಿ ವಿಭಾಗಗಳಲ್ಲಿ 59 ತಾಲ್ಲೂಕುಗಳು ಹಿಂದುಳಿದಿವೆ. ಅದೇ ರೀತಿಯಲ್ಲಿ ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ ತೆಗೆದುಕೊಂಡರೆ 55 ತಾಲ್ಲೂಕುಗಳು ಹಿಂದುಳಿದಿವೆ. ಇಲ್ಲಿ ಹೆಚ್ಚಿನ ವ್ಯತ್ಯಾಸ ಇರತಕ್ಕಂಥದ್ದು ಕೇವಲ ನಾಲ್ಕು ತಾಲ್ಲೂಕುಗಳು ಮಾತ್ರ ಆಗಿರುತ್ತವೆ.

(...ಮುಂದು)

(1206)22.11.2017/9.00.ಕೆಜಿ-ಜಿಆರ್

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು..):-** ಇಲ್ಲಿ 59 ತಾಲ್ಲೂಕುಗಳು, ಅಲ್ಲಿ 55 ತಾಲ್ಲೂಕುಗಳು ಇರುವುವಂಥದ್ದು, ಬಹುಶಃ ಈ ಹಿನ್ನೆಲೆಯಲ್ಲಿ ಡಾ||ನಂಜುಂಡಪ್ಪನವರು 2003 ರಿಂದ 2010ರೊಳಗೆ 16 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಈ ತಾರತಮ್ಯವನ್ನು ಹೋಗಲಾಡಿಸಿ ಅಭಿವೃದ್ಧಿಯ ಪಥದತ್ತ ಸಮಾನಂತರವಾಗಿ ಅಭಿವೃದ್ಧಿಯಾಗಬೇಕೆಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರು. ಈ 16 ಸಾವಿರ ಕೋಟಿ ರೂಪಾಯಿಗಳಲ್ಲಿ, ಗುಲ್ಬರ್ಗಾ ಮತ್ತು ಬೆಳಗಾಂ division ಗೆ ಸುಮಾರು 9,600 ಕೋಟಿ ರೂಪಾಯಿಗಳನ್ನು ಹಾಗೂ ಮೈಸೂರು ಮತ್ತು ಬೆಂಗಳೂರು division ಗೆ 6,400 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಅದಕ್ಕೆ ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು, ಗಾಮೀಣಾಭಿವೃದ್ಧಿ, ನೀರಾವರಿ, ವಿದ್ಯುತ್, ಕೈಗಾರಿಕೆ ಮತ್ತು ಖನಿಜಗಳು, ಸಾರಿಗೆ,

ವಿಜ್ಞಾನ ಮತ್ತು ತಂತ್ರಜ್ಞಾನ, ಆರ್ಥಿಕ ಸೇವೆಗಳು, ಸಾಮಾಜಿಕ ಸೇವೆಗಳು, ಹೀಗೆ ಒಟ್ಟು 16 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ಸರ್ಕಾರಕ್ಕೆ ವರದಿಯನ್ನು ಕೊಟ್ಟು ಇದನ್ನು 2010 ರೊಳಗೆ ಮುಕ್ತಾಯಮಾಡಬೇಕೆಂದು ಹೇಳಿದ್ದರು. 2010 ನೇ ಇಸವಿ ಮುಗಿದು, ಈಗ 2017 ನೇ ಸಾಲಿಗೆ ಬಂದಿದ್ದೇವೆ. 16 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ಬದಲಾಗಿ, ಬಹುಶಃ ಇದಕ್ಕಿಂತ 10 ಪಟ್ಟಕ್ಕೂ ಹೆಚ್ಚು ಹಣವನ್ನು ವೆಚ್ಚ ಮಾಡಲಾಗಿದೆ. ಈಗ ಕಳೆದ ವರ್ಷ ನಮ್ಮ ಬಜೆಟ್ 1,82,000 ಕೋಟಿ ರೂಪಾಯಿಗಳು. 2003 ರಿಂದ 2010 ರೊಳಗೆ 16 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೆ, ಈ ರಾಜ್ಯದ 175 ತಾಲ್ಲೂಕುಗಳು ಅಭಿವೃದ್ಧಿಯಾಗುತ್ತವೆಂದು ಹೇಳಿ ಮಾನ್ಯ ನಂಜುಂಡಪ್ಪನವರ ವರದಿ ಮತ್ತು ಆ ವರದಿಯಲ್ಲಿನ ಶಿಫಾರಸ್ಸುಗಳು ಇರುವಂಥದ್ದು. ಆದರೆ, ಅದಕ್ಕಿಂತ ಹೆಚ್ಚು ಹಣವನ್ನ ಖರ್ಚು ಮಾಡಿದ್ದೇವೆ. ಆದಾದ ಮೇಲೆ 7 ವರ್ಷಗಳು ಮುಂದೆ ಸಾಗಿದ್ದೇವೆ. ಆದರೆ, ಇವತ್ತಿಗೂ ಸಹ, ಗುಲ್ಬರ್ಗಾದಲ್ಲಿ ಕೇಳಿ, ನಾವು ಹಿಂದುಳಿದ್ದೇವೆ, ಹೈದರಾಬಾದ್ ಕರ್ನಾಟಕದಲ್ಲಿ ಕೇಳಿ ನಾವು ಹಿಂದುಳಿದ್ದೇವೆ, ಬೆಂಗಳೂರು division ನಲ್ಲಿ ಕೇಳಿ ನಾವು ಹಿಂದುಳಿದ್ದೇವೆ. ಮೈಸೂರು division ನಲ್ಲಿ ಕೇಳಿ ನಾವು ಹಿಂದುಳಿದ್ದೇವೆ ಎಂದು ಹೇಳುತ್ತಾರೆ. ಬಹುಶಃ ಈ ಹಿಂದುಳಿದ ಹಿನ್ನೆಲೆಯಲ್ಲಿ capita income ಅನ್ನು ತೆಗೆದುಕೊಂಡು ನೋಡಿದಾಗ ಅಥವಾ ಅಲ್ಲಿರುವಂತಹ education rate ನ್ನು ನೋಡಿದರೆ, ಅಲ್ಲಿರುವಂತಹ infrastructure ಅನ್ನು ನೋಡಿದರೆ, ಅಲ್ಲಿರುವಂತಹ ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ನೋಡಿದಂತಹ ಸಂದರ್ಭದಲ್ಲಿ ನನಗೆ ಅನಿಸುವಂಥದ್ದು, ಬಹು ದೊಡ್ಡ ಅಭಿವೃದ್ಧಿ ಈ ಕಡೆಯಾಗಲಿ ಅಥವಾ ಆ ಕಡೆಯಾಗಲಿ ಆಗಿದೆ ಎಂದು ಮಾನ್ಯ ನಂಜುಂಡಪ್ಪ ವರದಿಯ ಆಧಾರದ ಹಿನ್ನೆಲೆಯಲ್ಲಿ ನೋಡಿದಾಗ ಬಹುದೊಡ್ಡ ಬದಲಾವಣೆಗಳು ಆಗಿದೆ ಎಂದು ನನಗಂತೂ ಅನಿಸುವುದಿಲ್ಲ. ಇಷ್ಟೆಲ್ಲಾ ವೆಚ್ಚ ಮಾಡಿದರು ಸಹ, ಏಕೆ ಅಭಿವೃದ್ಧಿಯಾಗಿಲ್ಲ? ಬಹುಶಃ ನನಗೆ ಅನಿಸುವಂಥದ್ದು, ಈ ಅಭಿವೃದ್ಧಿಗೆ ಏನು ವೆಚ್ಚ ಮಾಡುತ್ತಿದ್ದೇವೆ, ಆ ವೆಚ್ಚದ ಹಣ ಎಷ್ಟರಮಟ್ಟಿಗೆ 2003 ರಿಂದ 2017ರೊಳಗೆ ಸದ್ಬಳಕೆಯಾಗಿದೆ ಎನ್ನುವಂತಹ ಪ್ರಶ್ನೆ ಹಾಕಿಕೊಂಡಾಗ ನನ್ನಂಥವನಿಗೆ ಸಿಗುವಂಥದ್ದು ಅತ್ಯಂತ ನಿರಾಶಾದಾಯಕವಾಗಿರುವಂಥದ್ದು. ಬಹುಶಃ ಈ ತಾರತಮ್ಯ 2010 ನೇ ಇಸವಿಗೆ ಮುಗಿಯಬೇಕಾಗಿತ್ತು. 2010 ನೇ ಇಸವಿ ಕಳೆದರೂ ಆಗಲಿಲ್ಲ. 2017ನೇ ಇಸವಿ ಬಂದರೂ ಆಗಲಿಲ್ಲವೆಂದರೆ, ನನಗೆ ಅನಿಸುವಂಥದ್ದು, ಈ allocation ಹಣ ಏನಿದೆ ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಸೋರಿಕೆಯಾಗದಂತಹ ರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಮುಂದಾದಾಗ ಮಾತ್ರ ಅಭಿವೃದ್ಧಿಯಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವು ಇರುತ್ತದೆ. ಜನಪ್ರತಿನಿಧಿಗಳಾದ ಎಂ.ಪಿ, ಎಂ.ಎಲ್.ಎ, ಎಂ.ಎಲ್.ಸಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕ್ ಪಂಚಾಯಿತಿ, ಪಂಚಾಯಿತಿ, Municipalities ವರೆಗೂ ಸಹ ಇರುವಂತಹವರ ನಮ್ಮೆಲ್ಲರ ಜವಾಬ್ದಾರಿ ಇದೆ. ನಾವು ಈ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ವಿಫಲವಾಗಿ ಎಲ್ಲಾ ಸಂದರ್ಭಗಳಲ್ಲಿಯೂ ಇಂತಿಂಥ ಕೊರತೆಗಳು ಇವೆಯೆಂದು ಕೆಲವನೆಲ್ಲ ಚರ್ಚೆ ಮಾಡುತ್ತಿದ್ದೇವೆ. ಒಂದು ಕಡೆ Article 243 ಪ್ರಕಾರ, ಇನ್ನೊಂದು ಕಡೆ ಬೇಲೂರು ಘೋಷಣೆಯ ಪ್ರಕಾರ, ಕೆಲವು ಇಲಾಖೆಗಳನ್ನು local self Government ಗೆ ಕೊಟ್ಟಿರುವಂಥದ್ದು, ಬಹುಶಃ local self Government ಅನ್ನು ನಾವು ಅದನ್ನು ಸರ್ಕಾರಗಳೇ ಅಲ್ಲವೆನ್ನುವಂಥ ರೀತಿಯಲ್ಲಿ ಭಾವನೆ ಮಾಡಿಕೊಂಡಿರುವಂಥದ್ದು, ಅಭಿವೃದ್ಧಿಗೆ ಪೂರಕವಾಗಿ ಶಕ್ತಿ ತುಂಬುವಂತಹ ಕೆಲಸಗಳು ಅನೇಕ ಸಂದರ್ಭದಲ್ಲಿ ಕುಂಠಿತವಾಗಿರುವಂಥದ್ದು ಇದೆ. ಬಹುಶಃ ನನಗೆ ಅನಿಸುವಂಥದ್ದು, ಈಗ ಇಡೀ ರಾಜ್ಯದ ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ರಾಜ್ಯದ 176 ತಾಲ್ಲೂಕುಗಳು ಮತ್ತು ಈಗ ಏನು 50 ತಾಲ್ಲೂಕುಗಳು ಸೇರ್ಪಡೆಯಾಗುತ್ತಿವೆ ಈ ಎಲ್ಲದರ ಸಮಗ್ರವಾಗಿರುವಂಥ ಅಭಿವೃದ್ಧಿಯನ್ನು ಮಾಡುವುದಕ್ಕೆ ಸರ್ಕಾರದ ಜನಪ್ರತಿನಿಧಿಗಳು ಚಿಂತನೆ ಮಾಡುವುದಕ್ಕೆ ಮುಂದಾಗಬೇಕೆಂಬ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ನಾನು ಎಲ್ಲವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಇವತ್ತು sex ratio ಎಷ್ಟರ ಮಟ್ಟಿಗೆ ಎಂದು ಹೇಳಿದರೆ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಈ ಭಾಗಗಳಲ್ಲಿ ಒಂದು ಹಂತದಲ್ಲಿ 2001 ನೇ ಸಾಲಿನಲ್ಲಿ 1000 ಗಂಡು ಮಕ್ಕಳ ಜನನವಾದರೆ, 1019, 1020 ವರೆಗೂ ಹೆಣ್ಣು ಮಕ್ಕಳ ಜನನವಾಗುತ್ತಿತ್ತು. ಆದರೆ, ಈಗ 1000 ಗಂಡು ಮಕ್ಕಳ ಜನನವಾದರೆ, ಹೆಣ್ಣು ಮಕ್ಕಳ ಜನನ 943 ರಿಂದ 946 ಈ ratio ದಲ್ಲಿ ಬಂದಿದೆ. ಬಹುಶಃ ಇದರ ಪರಿಸ್ಥಿತಿ ಅತ್ಯಂತ ತೀವ್ರತರವಾಗಿರುವಂಥದ್ದು ಬೆಳಗಾಂ division ಮತ್ತು ಗುಲ್ಬರ್ಗಾ division ದ್ದು. ನಾನು ಗುಲ್ಬಾರ್ಗಾ division ನಲ್ಲಿ ಒಂದು ಬಾರಿ ಈ ಬಗ್ಗೆ ವಿಚಾರ ಮಾಡಿದೆ. ಒಂದು ಕಡೆ, ಈ sex ratio ಬಹಳ ಅತ್ಯಂತ ಗಂಭೀರ ಸ್ಥಿತಿಗೆ ಹೋಗುವಂಥದ್ದು ಇದೆ. ಇದರ ಬಗ್ಗೆ ನಾವು ಏನಾದರೂ ಈಗ ಒತ್ತು ಕೊಡದಿದ್ದರೆ, ಅದರಲ್ಲೂ ವಿಶೇಷವಾಗಿ ಈ ಭಾಗದ್ದು, ಅದೇ ರೀತಿ ಈ ಭಾಗದಲ್ಲಿ HIV ಮತ್ತು AIDS ಕೆಲವು ಭಾಗಗಳಲ್ಲಿ ಅಂದರೆ, ಬಿಜಾಪುರ ಇರಬಹುದು, ಬಾಗಲಕೋಟೆ ಇರಬಹುದು, ಗದಗ ಇರಬಹುದು ಅಥವಾ ಬೆಳಗಾಂ ಇರಬಹುದು, ಆ ಕಡೆ ಅಂದರೆ, ಗುಲ್ಬರ್ಗಾ, ರಾಯಚೂರು, ಬೀದರ್ ಮತ್ತು ಬಳ್ಳಾರಿ ಈ ಭಾಗಗಳಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಕ್ಕೆ ಹೋಲಿಕೆ ಮಾಡಿಕೊಂಡರೆ, ಈ ಭಾಗದಲ್ಲಿ ಹೆಚ್ಚು ಇವತ್ತು ಒಂದು ಕಡೆ sex ratio decrease ಆಗುತ್ತಿದೆ. ಇನ್ನೊಂದು ಕಡೆ ಮಾರಕ ರೋಗಗಳಾದ HIV, AIDS ಈ ತರಹದ ರೋಗಗಳು ಇವತ್ತಿನ ದಿವಸ ಹೆಚ್ಚಿಗೆ ಆಗುವಂಥದ್ದು ಇದೆ. ಇದರ ಜೊತೆಗೆ poverty line ಕೆಳಗೆ ಇರುವಂಥ ಹೆಣ್ಣು ಮಕ್ಕಳ ಮಾರಾಟ ಆಗುತ್ತಿದೆ. ಇದರ ಜೊತೆಗೆ ದೇವದಾಸಿ ಪದ್ಧತಿಯನ್ನು ನಾವು ನಿರ್ಮೂಲನ ಮಾಡಿದ್ದೇವೆಂದು ಹೇಳಿದ್ದರೂ ಸಹ, ಇವತ್ತಿಗೂ ಜೀವಂತವಾಗಿ ಆ ಪದ್ಧತಿ ಇದೆ. ನಾವು ಇವತ್ತು ಬೆಳಗಾವಿಯಲ್ಲಿ ಅಧಿವೇಶನವನ್ನು ನಡೆಸುತ್ತಿದ್ದೇವೆ. ಈ ಜಿಲ್ಲೆಯಲ್ಲಿರುವ ಸವದತ್ತಿ ಯಲ್ಲಮ್ಮನ ದೇವಸ್ಥಾನದ ಸುತ್ತಮುತ್ತಲೂ ಇವತ್ತಿಗೂ ದೇವಸ್ಥಾನದ ಗರ್ಭಗುಡಿಯಲ್ಲಿ ಅಥವಾ ದೇವಸ್ಥಾನದ ಆವರಣದಲ್ಲಿ ಈ ಪದ್ಧತಿ ನಡೆಯದೇ ಇರಬಹುದು. ಆದರೆ, ಆ ಕಡೆ, ಈ ಕಡೆ ನಡೆಯುವಂಥದ್ದು ಇವತ್ತಿಗೂ ಸಹ ಇದೆ. ನನಗೆ ಅನಿಸುವಂಥದ್ದು ಆ efficiency ಅನ್ನು ತೋರುವುದರ ಮೂಲಕ ಜನಸಾಮಾನ್ಯನಿಗೆ ಬೇಕಾಗಿರುವಂತಹ ಮೂಲಭೂತ ಸೌಲಭ್ಯಗಳನ್ನು ಕೊಡುವಂತಹ ದಿಕ್ಕಿನಲ್ಲಿ ಅಥವಾ ಅವರಿಗೆ ಬೇಕಾಗಿರುವಂತಹ ಸೌಲಭ್ಯಗಳನ್ನು ಕೊಡುವುದರ ಮೂಲಕ ಅವರ ಬದುಕನ್ನು ಹಸನು ಮಾಡುವುದಕ್ಕೆ ಪ್ರಯತ್ನ ಸಾಗಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಇಂದು ಬೆಳಗ್ಗೆ ನಾನು ಹುಬ್ಬಳ್ಳಿಯಿಂದ ಧಾರವಾಡದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತಿದ್ದೆ. ಬಹುಶಃ ಇಡೀ ದೇಶದಲ್ಲಿ six ways ಇಲ್ಲದೇ ಇರುವಂತಹ National Highways ಬಹಳ ಕಡಿಮೆ ಇದೆ, ಇದು ಬಹಳ ಹಳೆಯ National Highway - N.H.4. ಹುಬ್ಬಳ್ಳಿ ಯಿಂದ ಧಾರವಾಡ ಅಲ್ಲಿ two ways ಮಾತ್ರ ಇದೆ. ವರ್ಷದಲ್ಲಿ ನೂರಾರು ಜನ ಅಲ್ಲಿ ಅಪಘಾತಗಳಿಂದ ಸಾಯುತ್ತಿದ್ದಾರೆ. ಪ್ರತಿ ವರ್ಷ ಇಲ್ಲಿ ನಾವು ಅಧಿವೇಶನಕ್ಕೆ ಬರುತ್ತೇವೆ. ಇಲ್ಲಿ ನೂರಾರು ಜನರು ಸಾಯುತ್ತಿದ್ದಾರೆ. ಹುಬ್ಬಳ್ಳಿಯಿಂದ ಧಾರವಾಡ ಇರುವ ರಸ್ತೆಯನ್ನು six ways ಮಾಡಿಸಿ ದಿನನಿತ್ಯ ಅಪಘಾತಗಳಿಂದ ಜನರು ಸಾಯುವುದನ್ನು ತಪ್ಪಿಸುವುದಕ್ಕೆ ಏಕೆ ಆಗುತ್ತಿಲ್ಲ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿಂದೆ ಇದನ್ನು raise ಮಾಡಿದಾಗ ಸರ್ಕಾರ M/s.Nandi Highway Developers ಇವರು ನ್ಯಾಯಾಲಯಕ್ಕೆ ಹೋಗಿದ್ದಾರೆಂದು ಹೇಳಿದರು. ಹೀಗಾಗಿ, ಮಾನ್ಯ ಉಗ್ರಪ್ಪನವರು ಹೇಳಿದಂತೆ, 2015-2016ನೇ ಸಾಲಿನಲ್ಲಿ 248 ಜನರು ಅಪಘಾತದಿಂದ ಅಲ್ಲಿ ಸತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ವರ್ಷಕ್ಕೆ 240 ಜನ ಅಪಘಾತದಿಂದ ಸತ್ತಿದ್ದಾರೆಂದರೆ, ಒಂದು ದಿವಸಕ್ಕೆ on an average ಒಂದು ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟುಕೊಳ್ಳಬಹುದು. ನಾನು ಇದನ್ನು ಏಕೆ ಹೇಳಿದೆ ಎಂದರೆ, bottlenecks ಅಭಿವೃದ್ಧಿ ಹಿನ್ನೆಲೆಯಲ್ಲಿ ಇದಕ್ಕೆ ಬಹುಶಃ ಈ ಭಾಗಕ್ಕೆ ಬರುವುದಂಥಕ್ಕೆ ನನ್ನ ದೃಷ್ಟಿಯಲ್ಲಿ ಅದನ್ನು improve ಮಾಡದೇ ಇದ್ದರೆ, 245 ರಿಂದ 250 ಜನರು ಒಂದು ವರ್ಷದಲ್ಲಿ ಸತ್ತಿದ್ದಾರೆಂದರೆ, ಕಳೆದ 10 ವರ್ಷಗಳಿಂದ ಎಷ್ಟು ಜನರು ಸತ್ತಿರಬಹುದು? ಬಹುಶಃ ನನಗೆ ಅನಿಸುವಂಥದ್ದು, ಇದು ಒಂದು ಕಡೆಯಾದರೆ, ನಾವು ಇದನ್ನು ಹೇಳುತ್ತಲೇ ಬರುತ್ತಿದ್ದೇವೆ. ಕಳಾಸ ಬಂಡೂರಿ ಯೋಜನೆ ಮೂಲಕ 1996 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಕುಡಿಯುವ ನೀರು fundamental right ಎಂದು declare ಮಾಡಿತು.

(ಮುಂದು...)

(1207)22.11.2017-9.10-ಎಂವಿ-ಎಂಡಿ

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು...):-**

ಕಳಸ-ಬಂಡೂರಿ ಯೋಜನೆಯ ಮೂಲಕ ‘ಕುಡಿಯುವ ನೀರು ಮೂಲಭೂತ ಹಕ್ಕು’ ಎಂದು 1996ರಲ್ಲಿ ಸುಪ್ರೀಂ ಕೋರ್ಟ್ ಘೋಷಿಸಿತು. ನಮ್ಮ ರಾಜ್ಯದಲ್ಲಿ Krishna Basin ಇರಬಹುದು, Cauvery Basin ಇರಬಹುದು, Godavari Basin ಇರಬಹುದು ಮತ್ತು Western Ghats ಇರಬಹುದು. ಈ ಎಲ್ಲವನ್ನು ತೆಗೆದುಕೊಂಡರೆ, ನಮ್ಮ ರಾಜ್ಯದಲ್ಲಿ ಸುಮಾರು ನಾಲ್ಕು ಸಾವಿರ ಟಿ.ಎಂ.ಸಿ. ನೀರು ಬೇರೆ ಬೇರೆ ಮೂಲಗಳಿಂದ ಲಭ್ಯವಾಗುತ್ತಿದೆ. ಆದರೆ ಇಲ್ಲಿಯವರೆವಿಗೂ ಸ್ವಾತಂತ್ರ್ಯ ಬಂದು 70 ವರ್ಷಗಳಾದರೂ ಸುಮಾರು ಎರಡು ಸಾವಿರ ಟಿ.ಎಂ.ಸಿ. ನೀರನ್ನು ಮಾತ್ರ ಬಳಕೆ ಮಾಡಿಕೊಂಡಿದ್ದೇವೆ. ಚೆನ್ನೈಗೆ ನೀರು ಎಲ್ಲಿಂದ ಹೋಗುತ್ತದೆ. ನಮ್ಮ ರಾಜ್ಯದ ತುಂಗಭದ್ರಾ ನದಿಯಿಂದ ಚೆನ್ನೈಗೆ ಕುಡಿಯುವುದಕ್ಕಾಗಿ ಸುಮಾರು ಐದು ಟಿ.ಎಂ.ಸಿ. ನೀರನ್ನು ಕೊಡುತ್ತೇವೆ. ಆಂಧ್ರಪ್ರದೇಶ ರಾಜ್ಯದವರು ಐದು ಟಿ.ಎಂ.ಸಿ. ನೀರು ಕೊಡುತ್ತಾರೆ ಹಾಗೂ ಮಹಾರಾಷ್ಟ್ರ ರಾಜ್ಯದವರು ಹದಿನೈದು ಟಿ.ಎಂ.ಸಿ. ಕುಡಿಯುವ ನೀರನ್ನು ಕೊಡುತ್ತಾರೆ. ಆದರೆ, ಇಲ್ಲಿರುವಂತಹ ಕಳಸ- ಬಂಡೂರಿ ಏಳೂವರೆ ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗೋಸ್ಕರ ಬಳಸಿಕೊಳ್ಳುವುದಕ್ಕೆ ದಶಕಗಳಿಂದ ವ್ಯಾಜ್ಯ ಇದೆ. ನಾವು ಒಂದು ಕಡೆ, ವಿರೋಧ ಪಕ್ಷದವರನ್ನು ಒಪ್ಪಿಸಿಕೊಂಡು ಬನ್ನಿ ಮತ್ತೊಂದು ಕಡೆ ನೀವು ಆಡಳಿತ ಪಕ್ಷದವರನ್ನು ಒಪ್ಪಿಸಿಕೊಂಡು ಬನ್ನಿ ಎಂದು ಹೇಳುತ್ತೇವೆ. ಈ ವಾದದ ಹಿನ್ನೆಲೆಯಲ್ಲಿ ಎಲ್ಲೋ ಒಂದು ಕಡೆ ಈ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವಂಥದ್ದರಲ್ಲಿ ನಾನು ರಾಜಕಾರಣವನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಹೇಗೆ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲಿ ಆ ‘ತೆಲುಗು ಗಂಗಾ ಯೋಜನೆ’ ಮೂಲಕ negotiations ಅನ್ನು ಮಾಡಿ, ಚೆನ್ನೈಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದರೋ, ಆ statesmanship ಅನ್ನು ದಯಮಾಡಿ ನಿಮ್ಮ ಮೂಲಕ ವಿನಂತಿ ಮಾಡುವುದಕ್ಕೆ ಬಯಸುತ್ತೇನೆ. ಈ ದೇಶದ ಪ್ರಧಾನ ಮಂತ್ರಿಗಳು ಆ statesmanship ಅನ್ನು ತೋರಿ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯದವರಿಗೆ ನಿರ್ದೇಶನ ನೀಡಬೇಕು. ನೀರಾವರಿಗೋ, ಮೀನುಗಾರಿಕೆಗೋ ಮತ್ತೊಂದಕ್ಕೋ, ಮಗದೊಂದಕ್ಕೊ ಅದು secondary. ನಮ್ಮ ರಾಷ್ಟ್ರದ National Water Policy ಯ ಪ್ರಕಾರ priority has to be given for drinking water ಎನ್ನುವಂಥದ್ದು. ಈಗಾಗಲೇ ‘Water Policy’ ಇದೆ. 2001 ರ ‘Water Policy’ ಇರಬಹುದು ಮತ್ತು 2011 ರ ‘Water Policy’ ಇರಬಹುದು. ಈ ಹಿನ್ನೆಲೆಯಲ್ಲಿ ಕಳಸ-ಬಂಡೂರಿಯ issue ಅನ್ನು statesmanship ನ attitude ನಲ್ಲಿ ಇದನ್ನು ಪರಿಹಾರ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡುವುದಕ್ಕೆ ಮನಸ್ಸು ಮಾಡದೆ ಇದ್ದರೆ, ಮುಂದಿನ ಪೀಳಿಗೆಯು ಇವತ್ತಿನ ದಿವಸ ಇರುವ ಎಲ್ಲಾ ರಾಜಕೀಯ ಪಕ್ಷ ಮತ್ತು ಎಲ್ಲಾ ರಾಜಕೀಯ ಮುಖಂಡರುಗಳನ್ನು ಕ್ಷಮಿಸುವುದಿಲ್ಲ ಎನ್ನುವಂತಹ ಎಚ್ಚರಿಕೆಯ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಏಕೆ ನೀರಿನ ಸಮಸ್ಯೆ ಉದ್ಭವಿಸುತ್ತಿದೆ ಎಂದರೆ, ಅಂತಿಮವಾಗಿ ಪರಿಸರ ನಾಶವಾಗುತ್ತಿದೆ. ಒಂದು ಕಡೆ ಬೆಟ್ಟಗುಡ್ಡಗಳನ್ನು minerals ತೆಗೆಯುವುದಕ್ಕೆ, ಬೇರೆನೋ ತೆಗೆಯುವುದಕ್ಕೆ ಗುಡ್ಡಗಳನ್ನು ಕರಗಿಸುತ್ತಿದ್ದೇವೆ. ಇನ್ನೊಂದು ಕಡೆ ಏನು ಕಾಡು ಇತ್ತು, ಆ ಕಾಡನ್ನು ನಾವು ನಾಶ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿ ಏನಾದರೂ ದೇಶದ ಸಮತೋಲನವನ್ನು ಕಾಪಾಡಬೇಕು ಎನ್ನುವ ಹಾಗಿದ್ದರೆ, ಒಟ್ಟಾರೆ ಇರತಕ್ಕಂಥ ಜಮೀನಿನಲ್ಲಿ, ಶೇಕಡ 33ರಷ್ಟು ಕನಿಷ್ಠ ಅರಣ್ಯ ಪ್ರದೇಶ ಇರಬೇಕು. ಆದರೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ಇದೆ? ಸರ್ಕಾರ ಹೇಳಿರುವಂತಹ ಪ್ರಕಾರ ಕೇವಲ ಶೇಕಡ 21 ರಷ್ಟು ಅರಣ್ಯ ಪ್ರದೇಶ ಇದೆ ಎಂದು ಹೇಳುತ್ತಾರೆ. In reality ಇರುವಂಥದ್ದು ಶೇಕಡ 16 ರಿಂದ 17 ರಷ್ಟು ಪ್ರದೇಶ ಮಾತ್ರ. ಶೇಕಡ 16 ರಿಂದ 17 ರಷ್ಟು ಇರುವಂಥದ್ದರಲ್ಲಿ, ಏನು ಹಳೆ ಮರಗಳು ಇದೆ, ಒಂದು ಹಂತದಲ್ಲಿ ಕರ್ನಾಟಕದ ಶ್ರೀಗಂಧದ ಮರ ಎಂದು ಹೇಳಿದರೆ, ಇಡೀ ಪ್ರಪಂಚದಲ್ಲಿ ಬಹಳ ಬೇಡಿಕೆ ಇತ್ತು. ಆದರೆ ಇವತ್ತಿನ ದಿವಸ ನಾವು ಎಲ್ಲಿ ಶ್ರೀಗಂಧದ ಮರಗಳನ್ನು ನೋಡುತ್ತೇವೆ. ನಾವು ಎಲ್ಲಿ ಕರ್ನಾಟಕದ Teak Wood ಅನ್ನು ನೋಡುತ್ತೇವೆ? ನಮ್ಮ ರಾಜ್ಯ ಎಲ್ಲಾ ರೀತಿಯಲ್ಲಿಯೂ ಅಭಿವೃದ್ಧಿಯಾಗಬೇಕು ಎನ್ನುವ ಹಾಗಿದ್ದರೆ, ನೀರನ್ನು ಪಡೆಯಬೇಕು, ಒಳ್ಳೆಯ ವಾತಾವರಣ ಇರಬೇಕು. ರೈತರ ಕೃಷಿಗೆ ಸಹಾಯವಾಗಬೇಕು ಎನ್ನುವುದಾದರೆ, ಅರಣ್ಯ ಮತ್ತು ಪರಿಸರವನ್ನು ಕಾಪಾಡುವಂಥದ್ದಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆದರೆ ಇವತ್ತಿನ ದಿವಸ ಏನಾಗಿದೆಂದರೆ, rightly or wrongly ಯಾರು ಅರಣ್ಯವನ್ನು ಅತಿಕ್ರಮಣ ಮಾಡಿರುತ್ತಾರೆ, ಯಾರು ಗೋಮಾಳವನ್ನು ಅತಿಕ್ರಮಣ ಮಾಡಿರುತ್ತಾರೆ, ಯಾರು ಗುಂಡು-ತೋಪುಗಳನ್ನು ಅತಿಕ್ರಮಣ ಮಾಡಿರುತ್ತಾರೆ ಅಥವಾ ಯಾರು ಸರ್ಕಾರಿ ಜಮೀನುಗಳನ್ನು ಅತಿಕ್ರಮಣ ಮಾಡಿರುವಂಥದ್ದಕ್ಕೆ, ಒಂದಲ್ಲಾ ಒಂದು ಕಾರಣಗಳಿಗೆ ಅವುಗಳನ್ನು regularize ಮಾಡುವುದರ ಮೂಲಕ, ನಾವು ಈ ರೀತಿ ಮುಂದುವರೆದರೆ ಪರಿಸರ ನಾಶವಾಗುತ್ತದೆ. ರಾಜಸ್ತಾನಕ್ಕಿಂತ ಕೆಟ್ಟ ಸ್ಥಿತಿಗೆ ನಮ್ಮ ರಾಜ್ಯ ಹೋಗುವ ಸಾಧ್ಯತೆ ಇದೆ. ಹಾಗಾಗಿ ನಾನು ತಮ್ಮ ಮುಖಾಂತರ ಹೇಳುವುದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು, ಕಳೆದ ಬಾರಿ ಎಂಟು ಕೋಟಿ ಗಿಡಗಳನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ನೆಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದರು. ಈ ವರ್ಷವೂ ಸಹ ಘೋಷಣೆ ಮಾಡಿದ್ದಾರೆ. ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಈ ಎಲ್ಲಾ ಇಲಾಖೆಗಳು ಒಟ್ಟಾರೆಯಾಗಿ ಸೇರಿಕೊಂಡು, ಎಲ್ಲೆಲ್ಲಿ ಸಾಧ್ಯವಿದೆ ಅಂದರೆ ಶಾಲಾ-ಕಾಲೇಜುಗಳಿರಬಹುದು, ಸ್ಮಶಾನಗಳಿರಬಹುದು, ಗುಂಡು-ತೋಪುಗಳಿರಬಹುದು, ಗೋಮಾಳವಿರಬಹುದು ಅಥವಾ ಅರಣ್ಯ ಭೂಮಿ ಇರಬಹುದು. ಈ ಎಲ್ಲಾ ಪ್ರದೇಶಗಳಲ್ಲಿ war footing ನಲ್ಲಿ ಗಿಡ-ಮರಗಳನ್ನು ಬೆಳೆಸುವಂಥದ್ದು, ಕಾಡುಗಳನ್ನು ಬೆಳೆಸುವಂತಹ ಕೆಲಸವನ್ನು ನಾವು ಮಾಡದೆ ಇದ್ದರೆ. ಹೈದ್ರಾಬಾದ್-ಕರ್ನಾಟಕ, ಬಾಂಬೆ-ಕರ್ನಾಟಕ, ಗುಲ್ಬರ್ಗ ವಿಭಾಗ, ಬೆಳಗಾವಿ ವಿಭಾಗ ಅಥವಾ ಹಳೆ ಮೈಸೂರು ಅಭಿವೃದ್ಧಿ ಆಗಿಲ್ಲ ಎನ್ನುವಂತಹ ಕೂಗು ಹಾಗೆಯೇ ಮುಂದುವರೆಯುತ್ತದೆ. ಈ ಕೂಗಿನ ಜೊತೆಗೆ ಇನ್ನೊಂದನ್ನು ನಾನು ಹೇಳುವುದಕ್ಕೆ ಬಯಸುವುದೇನೆಂದರೆ. ಮಾತು ಎತ್ತಿದ್ದರೆ ನಾವು ಯಾರ ಬಗ್ಗೆ ಮಾತನಾಡುತ್ತೇವೆಂದರೆ, ಕಬ್ಬು ಬೆಳೆಯುವವರ ಬಗ್ಗೆ ನಾವು ಮಾತನಾಡುತ್ತೇವೆ. ಅದು ಬಿಟ್ಟರೆ ತೊಗರಿ ಬೆಳೆಯುವವರ ಬಗ್ಗೆ ಮಾತನಾಡುತ್ತೇವೆ. ಭತ್ತ ಮತ್ತು ದಾಳಿಂಬೆ ಬೆಳೆಯುವವರ ಬಗ್ಗೆ ಮಾತನಾಡುತ್ತೇವೆ. ಇರುವವರಲ್ಲಿ ಯಾರು ಉತ್ತಮರು, ಯಾರು ರಾಗಿಯನ್ನು ಬೆಳೆಯುತ್ತಾರೆ, ಯಾರು ನವಣೆಯನ್ನು ಬೆಳೆಯುತ್ತಾರೆ, ಯಾರು ಜೋಳವನ್ನು ಬೆಳೆಯುತ್ತಾರೆ, ಯಾರು ಆರ್ಕ ಬೆಳೆಯುತ್ತಾರೆ, ಯಾರು ಹುರುಳಿ ಕಾಳನ್ನು ಬೆಳೆಯುತ್ತಾರೆ, ಯಾರು ಅಲಸಂದೆ ಕಾಳನ್ನು ಬೆಳೆಯುತ್ತಾರೆ ಅಥವಾ ಇನ್ನಿತರ ಬೆಳೆಗಳನ್ನು ಬೆಳೆಯುತ್ತಾರೆ, ಅಂತಹ ರೈತರ ಬಗ್ಗೆ ನಾವು ಯಾರೂ ಸಹ ತಲೆಯನ್ನು ಕೆಡಿಸಿಕೊಳ್ಳುತ್ತಿಲ್ಲ. ನಾನು

ಹೇಳಿದಂತೆ ರಾಗಿ, ನವಣೆ, ಜೋಳ ಇವುಗಳು ಆರೋಗ್ಯಕ್ಕೆ ಒಳ್ಳೆಯವು. ಇಂತಹ ಬೆಳೆಗಳನ್ನು ಬೆಳೆಯುವುದಕ್ಕೆ ಕಡಿಮೆ ನೀರು ಸಾಕಾಗುತ್ತದೆ. ಅವುಗಳ ಬಗ್ಗೆ ಸರ್ಕಾರ ಹೆಚ್ಚು ಒತ್ತನ್ನು ಕೊಡದೆ ಇದ್ದರೆ, ಅದರ ಜೊತೆಗೆ ಹತ್ತಿ ಇರಬಹುದು, ಕಡಲೆಕಾಯಿ ಇರಬಹುದು ಅಥವಾ ನೆಲಗಡಲೆ ಇರಬಹುದು ಇನ್ನಿತರ ಬೆಳೆಗಳನ್ನು ಬೆಳೆಯುವುದಕ್ಕೆ ಒತ್ತನ್ನು ಕೊಟ್ಟು ಆ ರೈತರ ಹಿತವನ್ನು ಕಾಪಾಡುವಂತಹ ದಿಕ್ಕಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸಹಕಾರ ಸಂಘಗಳ ಸಾಲಗಳನ್ನು ಮನ್ನಾ ಮಾಡಿದ್ದಾರೆ. ಅದೇ ರೀತಿ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಇರತಕ್ಕಂಥ ಸಾಲಗಳನ್ನು ಹೇಗೆ ಡಾ:ಮನಮೋಹನ್ ಸಿಂಗ್ ರವರ ಅವಧಿಯಲ್ಲಿ 72 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರೋ, ಅದೇ ರೀತಿ ವಿಶೇಷವಾಗಿ ಕರ್ನಾಟಕ ರಾಜ್ಯದ ರೈತರ ಸಾಲವನ್ನು, ಮೊನ್ನೆ ಎರಡು ತಿಂಗಳುಗಳಲ್ಲಿ ಮಳೆ ಬಂದಿದೆ ಅದು ಬೇರೆ. ಈ ರಾಜ್ಯದ 165 ತಾಲ್ಲೂಕುಗಳು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಆ ಭಾಗದಲ್ಲಿರತಕ್ಕಂಥ ರೈತರ ಬದುಕು ಈಗಲೂ ಸಹ ದುಸ್ತರವಾಗಿದೆ, ಅವರ ಬದುಕು ಹಸನಾಗಬೇಕು ಎನ್ನುವುದಾದರೆ, ನನಗೆ ಅನಿಸುವಂಥದ್ದು ಆ ರೈತರ ಸಾಲವನ್ನು ಮನ್ನಾ ಮಾಡುವಂಥದ್ದು ಇರಬಹುದು, ಅದರ ಜೊತೆಗೆ ಆ ರೈತರಿಗೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಕಾಲ-ಕಾಲಕ್ಕೆ ಕೊಡತಕ್ಕಂಥ ದಿಕ್ಕಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಆಡಳಿತದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಇರುವಂತಹವರು ಕೆಲಸವನ್ನು ಮಾಡದೆ ಇದ್ದರೆ. ಇನ್ನೂ 70 ವರ್ಷವಾದರೂ ಇದೇ ರೀತಿಯ ಬೇಡಿಕೆಗಳು ಇರತಕ್ಕಂಥ ಸಾಧ್ಯತೆ ಇದೆ ಎನ್ನುವಂತಹ ಮಾತನ್ನು ಹೇಳುತ್ತಾ, ಈ ರೀತಿಯ ಏನು disparity ಇದೆ, ಅದನ್ನು ತಡೆಯಬೇಕು ಎನ್ನುವ ಹಾಗೆ ಇದ್ದರೆ, ಮೊದಲನೆಯದು ದಕ್ಷತೆ, ಎರಡನೆಯದು ಸೋರಿಕೆಯನ್ನು ತಡೆಯುವಂಥದ್ದು, ಮೂರನೆಯದು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಂಥದ್ದು, ನಾಲ್ಕನೆಯದು ರೈತರ ಹಿತವನ್ನು ಕಾಪಾಡುವಂಥದ್ದು, ಐದನೆಯದು ಶಿಕ್ಷಣಕ್ಕೆ ಒತ್ತನ್ನು ಕೊಡುವಂಥದ್ದು ಈ ದಿಕ್ಕಿನಲ್ಲಿ ಕೆಲಸ ಮಾಡಿದರೆ, ಸಮಗ್ರ ಕರ್ನಾಟಕ ಅಭಿವೃದ್ಧಿಯ ಪಥದತ್ತ ಮುನ್ನುಗ್ಗುವುದಕ್ಕೆ ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಯಾವ್ಯಾವ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಸಾಧ್ಯತೆಯಿದೆ, ಆ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸುತ್ತದೆ ಎನ್ನುವುದನ್ನು ಈ ಸದನದ ಮೂಲಕ ಜನತೆಯ ಮುಂದೆ ಇಡಬೇಕೆಂದು ಆಗ್ರಹಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ವಿಶೇಷವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಸಂಬಂಧವಾಗಿ, ಸುಮಾರು ಏಳೂವರೆ ಗಂಟೆ ಈ ಸದನದಲ್ಲಿ ಸದಸ್ಯರಿಂದ ಚರ್ಚೆಯಾಗಿ ಅದು ಮುಕ್ತಾಯಗೊಂಡಿದೆ. ನಾಳೆ ಸರ್ಕಾರದಿಂದ ಉತ್ತರ. ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ರಾತ್ರಿ 9 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 23ನೇ ನವೆಂಬರ್ ಮಾಹೆ 2017ರ ಗುರುವಾರದಂದು ಬೆಳಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು).**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"